ARS 38 APP 90-91

'ಜಯಂತಿ' ಮಾಸ ಪತ್ರಿಕೆ

ನವಂಬರ್ 1960 ಪುಟ 145

ರಿಂದ ಮುಂದುವರಿಸಲಾಗಿದೆ.

ARS 38 APP 90-91

'ಜಯಂತಿ' ಮಾಸ ಪತ್ರಿಕೆ

ನವಂಬಕ್ 1960 ಪುಟ 145

ರಿಂದ ಮುಂದುವರಿಸಲಾಗಿದೆ.

ಪ್ರಕಾಶನ ಮಂದಿರ, ಧಾರವಾಡ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಹೊಸಕಾಲಕ್ಕೆ ತಕ್ಕ

ಮುದ್ರಣ-ಬಂಧನಗಳ ಬೆಡಗಿನೊಂದಿಗೆ ಇದೀಗ ಬೆಳಕಿಗೆ ಬಂದಿದೆ.

ಐತಿಹಾಸಿಕ ಕಾದಂಬರಿಯೊಂದೆ, ಆ ಕಾಲದ ಜನಜೀವನದ ತಮ್ಮಿಷ ಚಿತ್ರಣವಾಗಿರಬೇಕು. ಸಾಹಿತ್ಯಕ್ಕೆ ತಾವು ಐತಿಹಾಸಿಕ ಕಾಲವಲ್ಲವೆಂಬ ಭಾವನೆ ಸಲ್ಲದು. ಇಷ್ಟೇ—ಎನಿಸಬೇಕು. ಸಾಹಿತ್ಯಗಳು ಐತಿಹಾಸಿಕವಾದರೂ, ತಾವಿನ ಕಾಲದ ಜೀವನವನ್ನು ಜನಾಂತ ವ್ಯಕ್ತಿಗಾಗಿ ವ್ಯಷ್ಟಿಯಲ್ಲಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇನ್ನೆಷ್ಟು ಗುಣಗಳೂ ಇವೆ.

ಎಂತಲೇ ಇದು ಹುಟ್ಟಿ ಎರಡೂವರೆ ವರ್ಷಗಳಾದರೂ, ಇದಕ್ಕೆ ಹೊಸ ಹೊಸವೇ ಎನಿಸುತ್ತವೆ.

ಕೃತಿಯೊಂದು ಸಾಹಿತ್ಯಮಂದಿರದಲ್ಲಿಯೂ ಇರಬೇಕೆಂದರೆ ಕಾದಂಬರಿಯಿದು.

ಕ್ರೌ. ಅ. ೧೪೦ ಪುಟಗಳು ಬೆಲೆ : ೨ ರೂ. ೨೫ ನಂಬೋಪೈಸೆ

ನಮ್ಮ ಮುಂದಿರುವ ಬೇರೆ ಪ್ರಕಟನೆಗಳು

ಮುಗಿಲ ಮುಂದಾಸೆ
(ಸಾಮಾಜಿಕ ಕಾದಂಬರಿ)
ಕ್ರೌ. ಅ. ೩೫೦ ಪುಟ * ಬೆಲೆ : ೪ ರೂ.

ಕಾರಮಾಣ್ಯಾಸೆ
(ಕನಸಾಕಲನ)
ಕ್ರೌ. ಅ. ೧೭೫ ಪುಟ * ಬೆಲೆ : ೨ ರೂ.

ಬೆಳಕಿನ ಮುಖವಾಡ
(ಮೂರಂಕ ನಾಟಕ)
ಕ್ರೌ. ಅ. ೧೭೫ ಪುಟ * ಬೆಲೆ : ೧.೫೦

ಬೆಂಬಲ ಪ್ರವಾಹ
(ಮೂರಂಕ ನಾಟಕ)
ಕ್ರೌ. ಅ. ೧೭೫ ಪುಟ * ಬೆಲೆ : ೧.೭೫

ನಲ್ಲಾಡುಗಳು

(ಗೀತ ಸಂಕಲನ)
ಕ್ರೌ. ಅ. ೭೨ ಪುಟ ಬೆಲೆ : ೧.೭೫

'ಆನಂದಕಂದ'ರ ಉಳಿದ ಪುಸ್ತಕಗಳು ನೀಕಾಯಿಡೂ ನಮಗೆ ಬರೆಯಿರಿ!

ಪ್ರಕಾಶನ ಮಂದಿರ, ಪುಸ್ತಕಾಲಯ, ಧಾರವಾಡ (ಬೆಳಗಾಂವ)

Printed by Basavaraj Horadi at Lalita Mudranalaya, Dharwar &
Published for the Proprietors Jayanti Publications by K. S. Betgeri at Jayanti Office, Dharwar.

ಜಯಂತಿ

ಜಯಂತಿಗೆ ಚಂದಾದಾರರಾಗಿರಿ!

[illegible]

ಜಯಂತಿಯಂತಹ ಪತ್ರಿಕೆಯನ್ನು ನಡೆಸುವುದಾಗಲಿ, ಪ್ರಕಾಶಕರಿಗೆ ಪತ್ರಗಳನ್ನು ಬರೆಯುವುದಾಗಲಿ ಕಷ್ಟದ ಕೆಲಸವೆಂದು ತಿಳಿದಿದ್ದೀರಾ?

* * * * *

ಕೆಲವು ಸಾಹಿತ್ಯಪ್ರಿಯರು ಸ್ನೇಹಿತರಿಂದ ಬಹುದಿವಸಗಳಿಂದ ಕೇಳಿಕೊಂಡಿದ್ದರಿಂದಲೂ, ನಾವೇ ಸ್ವತಃ ಅನುಭವಿಸಿದ್ದರಿಂದಲೂ ಜಯಂತಿಯನ್ನು ಬಹುಮಂದಿಗೆ ಉಚಿತವಾಗಿ ಕಳುಹಿಸಿಕೊಡಲು ಸಾಧ್ಯವಾಗಿರಲಿಲ್ಲ. ಆದರೆ ಕಳೆದ ಕೆಲವು ತಿಂಗಳುಗಳಿಂದ ಈ ವಿಷಯವಾಗಿ ಸರಕಾರದವರು ಕೊಟ್ಟಿರುವ ಉತ್ತೇಜನದಿಂದ ಜಯಂತಿಯನ್ನು ಉಚಿತವಾಗಿ ಕಳುಹಿಸಲು ಸಾಧ್ಯವಾಗಿದೆ.

ಮೈಸೂರು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್
ಆದೇಶ No. I. Dis. G. I. 4250-48-49 D. 3rd Aug. 1949 :

ಸೂಚನೆ

ಜಯಂತಿಯನ್ನು ರಾಜ್ಯದಲ್ಲಿರುವ ಎಲ್ಲ ಹೈಸ್ಕೂಲ್, ಮಿಡಲ್ ಸ್ಕೂಲ್
ಪ್ರೈಮರಿ ಸ್ಕೂಲ್‌ಗಳಿಗೆ ಕಳುಹಿಸಿಕೊಡಲಾಗುವುದು
ಮತ್ತು ಅಲ್ಲಿ ಪಾಠಕ್ಕೆ

[illegible] ಇದಕ್ಕಾಗಿ ಸರಕಾರದವರು ಈ ಸಂಸ್ಥೆಯನ್ನು ಆರಿಸಿಕೊಂಡಿದ್ದಾರೆ. ಈ ಕೆಲಸ ನಡೆಸಲು ಸಾಧ್ಯವಾಗುವಂತೆ ಪ್ರೋತ್ಸಾಹಿಸಿರುವ ಸರಕಾರಕ್ಕೆ ಜಯಂತಿಯ ಕೃತಜ್ಞತೆಗಳು.

[illegible] ಜಯಂತಿ.

JAYANTI

ಈ ಸಂಚಿಕೆಯಲ್ಲಿ

ಸೇರಲಿರುವ ಕನ್ನಡ ಸಾಹಿತ್ಯ ಸಮ್ಮೇಳನ (ಸಂಪಾದಕೀಯ)
ಸಂಪಾದಕರು ೧೫೨

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
ಕಾಲಭೈರವ ೧೫೯

ಕಲೆಯ ನಂದಾದೀಪ ಬೆಳಗುತಿಹುದು (ಕವನ)
ಪ್ರೀ. ಎಚ್. ಜೆ. ಉಪಾಧ್ಯಾಯ, ಎಂ. ಎ. ಹೈದಾಬಾದ್ ೧೬೮

ನಂಬಿದರೆ ನಂಬಿ, ಬಿಟ್ಟರೆ ಬಿಡಿ (ಸಣ್ಣಕಥೆ)
ಪ್ರೀ. ಕೆ. ಅಶ್ವತ್ಥನಾರಾಯಣರಾವ್, ಬನಾರಸ ೧೬೯

ಗಣಪತಿಯ ಅವತಾರ (ಸಂಶೋಧನಾತ್ಮಕ ವಿಶೇಷಣೆ)
ಪ್ರೊ. ಉಡುಪಿ ವೆಂಕಟಕೃಷ್ಣರಾವ ಎಂ. ಎ. ಮದ್ರಾಸ ೧೭೪

ಜ್ಯೋತಿರಾಜ (ಕವನ)
"ಗಂಗಾತನಯ" ರಾಕುಲ್ ೧೭೬

ಪ್ರತೀಕ್ಷೆ (ಸಣ್ಣಕಥೆ)
ಪ್ರೀ. ರಾಘವೇಂದ್ರ ಬಾಸರೀಪ ಎಂ. ಎ. ಡಿಪ್. ಲಿಬ್. ಪುಣೆ ೧೭೭

ದಶಾವತಾರ (ಕವನ)
"ರಂಜನ" ಭಟ್ಟ, ಮದ್ರಾಸು ೧೭೯

ವಿಕ್ಟರ ಮಾಯರ್ (ಜೀವನ ಪರಿಚಯ)
ನ್ಯಾ. ವೆಂಕೋಬಾಚಾರ್ಯ ಉಪಾಧ್ಯಾಯ, ಎಂ. ಎಸ್ ಸಿ., ಹೈದರಾಬಾದ್ ೧೮೧

ಒಲವಿನೋಲೆಗಳೆರಡು (ಕವನ)
"ವಿಪ್ರ". ಹೈದರಾಬಾದ ೧೮೨-೧೮೫

ಪ್ರತಿಫಲ (ಪೌರಾಣಿಕ ನಾಟಕ)
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೧೮೬

ಸಾಹಿತ್ಯ ವಿಮರ್ಶೆಯ ತಿಕ್ಷಣರಂಗ
ಪ್ರೀ. ಬಿ. ಆರ್. ನಾಡಿ, ಹುಬ್ಬಳ್ಳಿ ೧೮೯

ಕುಮಾರಿ, ಸಿ. ಎಚ್. ಲಕ್ಷ್ಮಿ, ನಾಡಿ ಮುಟ್ಟುತ್ತೋಡಿ ೧೯೮

ಸಾದರ ಸ್ವೀಕಾರ ೧೯೦

ಜಯಂತಿ

ಸಂಪುಟ ೭೩] [ಸಂಚಿಕೆ ೫

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿ ೫ ಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಚಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಸೇರಲಿರುವ ಕನ್ನಡ ಸಾಹಿತ್ಯಸಮ್ಮೇಳನ

ಅಂತೂ ಕುಸ್ತಿಯಾಟ ಮುಗಿಯಿತು. ಕಣಕ್ಕಿಳಿದ ಜಟ್ಟಿಗಳಲ್ಲಿ ಅನೇಕರು ವಿಜಯದ ಉಬ್ಬಿನಿಂದ, ತೊಟ್ಟ ಚಡ್ಡಿಯನ್ನಿಳಿಸಿ ನಿತ್ಯದ ವೇಷ-ಭೂಷಣಗಳನ್ನು ತೊಡಕುತ್ತಿರಬಹುದು. ಹತ್ತು ಸಮಸ್ತರ ಕಾರ್ಯಗಳಲ್ಲಿ ಮತಭೇದಗಳು ಮಸಗತೊಡಗಿದಾಗ, ಪಟಕ್ಕೆ ಬೀಳದಿರುವುದೇ ಸಾಧನೇಕೆಯ ಲಕ್ಷಣ. ಒಳಗೆ ಏನೇನು ನಡೆಯಿತೆಂಬುದು ಹೊರಗಿನವರಿಗೆ ತಿಳಿಯದು; ಆದರೆ ನಡೆದುದು ಪರಿಣಾಮರಮಣೀಯವಾಯಿತೆಂಬುದು, ಸಮ್ಮೇಳನಾಧ್ಯಕ್ಷರ ಸರ್ವಾನುಮತದ ನಿರ್ಣಯದಿಂದ ವ್ಯಕ್ತವಾಗುತ್ತದೆ. ಪ್ರಜಾಪ್ರಭುತ್ವದ ಇಂದಿನ ದಿನಗಳಲ್ಲಿ ಮತಭೇದಗಳು ಹುಟ್ಟಿ ಬೆಳೆಯುವುದು ಅಸ್ವಾಭಾವಿಕವೇನೂ ಅಲ್ಲ; ಆದರೆ ಈ ಮತಸಂಘಸನದಿಂದ ಕಾಲಕೂಟ ಹೊರಡದೆ ಅಮೃತ ಹೊರಡುತ್ತಿವೆ, ಸಮಾಜದ ಪ್ರಗತಿಗೆ ಒಳ್ಳೆಯದು.

ಶ್ರೀಮಾನ್ ಅ. ನ. ಕೃಷ್ಣರಾಯರು ಸಮ್ಮೇಲನಾಧ್ಯಕ್ಷರೆಂದು ನಿರ್ಣೀತರಾದುದು ಬಹುಜನರಲ್ಲಿ ಸಮಾಧಾನವನ್ನುಂಟುಮಾಡಿದೆ ಉಡುಪಿಯ ಸ್ವಾಗತಸಭೆಯ ಸದಸ್ಯರ ಹೃದಯಸಾಗರದಲ್ಲಿದ್ದ ಬಿರುಗಾಳಿಯೂ ಈಗ ಕಡಿಮೆಯಾಗಿರಬಹುದು. ಉಪರೀಗ ಉತ್ಸಾಹಪೂರ್ಣರಾಗಿ ಸಮ್ಮೇಳನದ ಸಿದ್ಧತೆಯನ್ನು ನಡೆಸಿರಬಹುದು.

ಶ್ರೀಮಾನ್ ಅ. ನ. ಕೃಷ್ಣರಾಯರು ಬಹುಕಾಲದಿಂದಲೂ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಮುಡಿಯುತ್ತಿದ್ದು, ಸಮೃದ್ಧವಾದ ಬೆಳೆಯನ್ನು ಪಡೆದಿದ್ದಾರೆ. ಅಭಿರುಚಿ ವೈತ್ಯಾಸದ ಜನರಲ್ಲಿ ಶ್ರೀ. ಕೃಷ್ಣರಾಯರ ಕೃಷಿಫಲದ ಬಗೆಗೆ ಆಗಾಗ ಸಾಕಷ್ಟು ವಾದ-ಚರ್ಚೆಗಳು ನಡೆದಿವೆ: ಈಗಲೂ ನಡೆಯುತ್ತಿವೆ. ಹೀಗೆ ವಾದ-ಚರ್ಚೆಗಳು ನಡೆಯುತ್ತಿರುವಾಗಲೇ ಶ್ರೀ. ಕೃಷ್ಣರಾಯರ ಸಾಹಿತ್ಯಫಲಗಳು ಬಹುಜನರ ಮನಸ್ಸನ್ನು ಪೆಚ್ಚಿಸಿದುದೇನೂ ಸುಳ್ಳಲ್ಲ, ಈಗಿನ ಸಮ್ಮೇಳನಾಧ್ಯಕ್ಷತೆಯು ಅಯ್ಕೆಯು, ಅವರ ಬಹುಜನ ಮೆಚ್ಚಿಕೆಗೆ ಪ್ರತ್ಯಕ್ಷ ಪ್ರಮಾಣವಾಗಿದೆ.

ಶ್ರೀ ಅ. ನ. ಕೃಷ್ಣರಾಯರು ಸಾಹಿತ್ಯದ ವಿವಿಧ ಮುಖದ ಅಭ್ಯಾಸಿಗಳು ವಿದೇಶೀಯ ಸಾಹಿತ್ಯಾಭ್ಯಾಸದಿಂದ, ಬೇರೆ ಬೇರೆ ದೇಶದ ಸಂಸ್ಕೃತಿ-ಸಾಮಾಜಿಕ ಅಭಿರುಚಿಗಳನ್ನು ಅಂತರಿಸಿರುವುದರಿಂದಲೇ ತಮ್ಮ ಸಾಹಿತ್ಯನಿರ್ಮಿತಿಯಲ್ಲಿ ವಿವಿಧ ಪ್ರಯೋಗಗಳನ್ನು ಮಾಡಿದವರು. ಪ್ರಯೋಗಕಾಲದ ಕೆಲವೊಂದು ಫಲಗಳು ಪ್ರಯೋಗಗಳೇ ಎಂಬುವನ್ನು, ಇಂದಿನ ಪಣ್ಣಾದ ಹೃದಯ ಮನಗಳ ಕೃಷ್ಣರಾಯರು ತಾವೂ ಒಪ್ಪಿಕೊಳ್ಳಬಹುದು. ಆದರೆ ಅವರ ಪ್ರಯೋಗಧೈರ್ಯವು, ಸಾಹಿತ್ಯದ ಪ್ರಗತಿಯ ದೃಷ್ಟಿಯಿಂದ ಇಷ್ಟವಾದುದೇ ಸರಿ.

ಶ್ರೀ. ಕೃಷ್ಣರಾಯರು ಅಖಿಲಕರ್ನಾಟಕವನ್ನು ತಮ್ಮ ತಾರುಣ್ಯ ಪ್ರಾರಂಭದಿಂದಲೂ ನೋಡುತ್ತ ಬಂದವರಾಗಿದ್ದಾರೆ ಆದುದರಿಂದ ಬೇರೆಬೇರೆ ಪ್ರದೇಶಗಳಲ್ಲಿಯ ಕನ್ನಡಿಗರ ಗುಣಸ್ವಭಾವಗಳೂ ಅಭಿರುಚಿ-ಆಕಾಂಕ್ಷೆಗಳೂ ಯಾವ ಯಾವ ಬಗೆಯವಿರುವುವೆಂಬುದನ್ನು ಜಿನ್ನಾಗಿ ಕಂಡುಕೊಂಡವರಾಗಿದ್ದಾರೆ. ರಾಜಕೀಯ ದೃಷ್ಟಿಯಿಂದ ಕರ್ನಾಟಕ ಏಕೀಕೃತವಾಗಿದ್ದರೂ, ಜೀವನದ ಮಿಕ್ಕ ಆಕೆ ಅಭಿರುಚಿಗಳಲ್ಲಿ ಹಳೆಯ ಮೈಸೂರಿಗರಿಗೂ ಹೊರಬಂದ ಕೂಡಿದ ಕನ್ನಡಿ-

ಗರಿಗೂ ಇನ್ನೂ ಸರಿಹೊಂದದಾಗಿದೆ. ಇವರಲ್ಲಿ ಹೃದಯದ ಹೊಂದಿಕೆಯನ್ನು ಮಾಡಬೇಕೆಂದರೆ ಸ್ವಾರ್ಥದ ಮೇಲೆ ನಿಂತು ಮಾತನಾಡುವ ರಾಜಕೀಯ ಧುರೀಣರಿಂದ ಈ ಮಾತು ಸಾಧ್ಯವಾಗುವಂತಿಲ್ಲ. ಸಾಹಿತ್ಯ ಪರಿಷತ್ತಿನ ಉದಯವಾದುದು ಅಖಿಲಕರ್ನಾಟಕದಲ್ಲಿ ಸಾಂಸ್ಕೃತಿಕ ಏಕೀಕರಣವನ್ನು ಸಾಧಿಸಬೇಕೆಂಬ ಸುಹೋದ್ದೇಶದಿಂದಲೆ. ಆದರೆ ಇಂದಿನ ರಾಜಕೀಯ, ಸಾಹಿತ್ಯಪರಿಷತ್ತಿನ ಪ್ರಭಾವೀ ಶಕ್ತಿಯನ್ನು ಕಡಮೆಮಾಡಿ ಬಿಟ್ಟಿದೆ. ಅಖಿಲ ಕರ್ನಾಟಕವನಾಡಿಯನ್ನು ಅರಿತುಕೊಂಡ ಶ್ರೀಮಾನ್ ಆ. ನ. ಕೃಷ್ಣರಾಯರು, ತಮ್ಮ ಕರ್ತೃತ್ವದಿಂದ ಪರಿಷತ್ತಿನಲ್ಲಿ ಮತ್ತೆ ಸತ್ತ್ವ-ಶಕ್ತಿಗಳನ್ನು ತುಂಬಿ, ಅದು ಪ್ರಭಾವಶಾಲಿಯಾಗಿ ಕಾರ್ಯ ಮಾಡುವಂತೆ ಮಾಡಬೇಕೆಂದು ಕರ್ನಾಟಕದ ಅಭಿಮಾನಿಗಳು ಆಶಿಸಬಹುದಾಗಿದೆ. ಸ್ವಾರ್ಥವನ್ನು ಸುಟ್ಟವರಿಂದ ಹೊರತು ನಾಡಿಗರ ಹೃದಯ-ಹೃದಯಗಳನ್ನು ಬೆಸೆಯುವ ಕಾರ್ಯ ಅನ್ಯರಿಂದ ಸಿದ್ಧಿಸಲಾರದು. ಹೃದಯ-ಹೃದಯಗಳು ಹೊಂದಿದಂತಹ ಕರ್ನಾಟಕ, ನಾಡಿಗರಿಗೆ ಪೀಡಾಕಾರಿಯಾಗಿ ನಿಲ್ಲಬಲ್ಲದಲ್ಲದೆ ಕಲ್ಯಾಣಕಾರಿಯಾಗಿ ನಿಲ್ಲಲಾರದೆಂಬ ಮಾತು ಶ್ರೀ. ಅ. ನ. ಕೃ. ಅವರಿಗೂ ಮನವರಿಕೆಯಾಗಿರಬಹುದೆಂದು ನಮ್ಮ ಭಾವನೆ. ಮೊದಲು ನಾಡಿಗರ ಹೃದಯದ ರಂಗಭೂಮಿ ಸಜ್ಜುಗೊಳ್ಳಬೇಕು. ಅದರ ಮೇಲೆ ನಮ್ಮ ನಾಡಿನ ಸಾಹಿತ್ಯ ಸಂಗೀತ, ನೃತ್ಯ, ಚಿತ್ರ ಮೊದಲಾದ ಕುಶಲ ಕಲೆಗಳು ಕಾಲೋಚಿತ ಸೌಂದರ್ಯವನ್ನು ಪಡೆದು ತಾನೇ ನಲಿದಾಡತೊಡಗುವುವು.

ನಾಡಿಗರಲ್ಲಿ ಸಂಸ್ಕೃತಿ-ಲೋಕಾನುಭವ ಪರಿಜ್ಞಾನಗಳು ಬೆಳೆದಂತೆ, ರಾಜಕೀಯ ಸ್ವಾರ್ಥಿಗಳ ದಾಳಿಯ ಶಕ್ತಿ ತಾನೇ ಕಡಮೆಯಾಗುವುದು; ಇಪ್ಪಲ್ಲಿಯೇ ಅವರ ಸದ್ದು ಅಡಗತೊಡಗುವುದು. ಇಂತಹ ಸಂಸ್ಕೃತಿ-ಲೋಕಾನುಭವ ಪರಿಜ್ಞಾನಗಳನ್ನು ನಾಡಿಗರಲ್ಲಿ ಬೆಳೆಸುವಂತಹ ಸಾಧನವೆಂದರೆ-ತ್ರಿಕಾಲದಲ್ಲಿಯೂ-ಸಾಹಿತ್ಯ, ಒಂದೇ ಒಂದು ಸತ್ತ್ವಶಾಲಿಯಾದ ಸಾಹಿತ್ಯ, ಕಾಲೋಚಿತ ವಿಚಾರಕ್ರಾಂತಿಯನ್ನೂ ಮಾಡಬಲ್ಲದು. ಪ್ರಾಚೀನ ಭಾರತದಲ್ಲಿ ನಿರ್ಮಿತಿಗೆ ಕಾರಣವಾದುದು ಋಷಿ-ಮುನಿಗಳ ಸಾಹಿತ್ಯವೇ ಅದರಲ್ಲಿ ಕಾಲೋಚಿತ ಮಾರ್ಪಾಡನ್ನು ಮಾಡುತ್ತ ಬಂದುದೂ ಅವರ ಸಾಹಿತ್ಯವೇ! ಇಂದು ನಮ್ಮ ಸಮಾಜವೆಂಬುದೂ ಕ್ಷತ-ವಿಕ್ಷತವಾಗಿ ನರಳುತ್ತ ಬಿದ್ದುಕೊಂಡಿದೆ. ಅದರ ಗಾಯಕ್ಕೆ ಸರಿಯಾದ ಔಷಧಿಯಾಗಬಹುದಾದಂತಹ ಸಾಹಿತ್ಯಭಾಗ, ನಮ್ಮ ಸರಸ್ವತಿಯ ಭಾಂಡಾರದಲ್ಲಿ ಇಲ್ಲವೆಂತಲ್ಲ. ಇದ್ದುವುಗಳನ್ನು ಸಂಶೋಧಿಸಿ ಕಂಡುಹಿಡಿಯಬೇಕು; ಇಲ್ಲವೇ ಇಲ್ಲವೆಂದಾದುವುಗಳನ್ನು ಹೊಸತಾಗಿ ರಚಿಸಬೇಕು.

ವರುಷ-ವರುಷವೂ ಸೇರುತ್ತಿರುವ ನಮ್ಮ ಸಾಹಿತ್ಯ ಸಮ್ಮೇಳನಗಳಲ್ಲಿ ಈ ಬಗೆಯ ಸಾಹಿತ್ಯಕ ಸಂಶೋಧನ-ನಿರ್ಮಿತಿಗಳನ್ನು ಕುರಿತು ಸೂಕ್ತವಿಚಾರ ಚರ್ಚೆಗಳು ಅನಿವಾರ್ಯವಾಗಿ ನಡೆಯಬೇಕು. ಈ ವಿಚಾರ ಚರ್ಚೆಗಳು, ವ್ಯಕ್ತಿಗಳ ಅಹಂಕಾರ ಸಂವರ್ಧನೆಗೆ ಕಾರಣವಾಗದೆ, ಸಾಮಾಜಿಕ ಕಲ್ಯಾಣದ ದೃಷ್ಟಿಯು ಸಹಾನುಭೂತಿ-ಸಹಕಾರಗಳ ಅಭಿವೃದ್ಧಿಗೆ ಕಾರಣವಾಗಬೇಕು. ಸಾಮಾಜಿಕ ಹಿತಬುದ್ಧಿಯಿಂದಲೇ ಸಾಹಿತ್ಯಕರಲ್ಲಿ ವಿಚಾರದ ಬಿರುಗಾಳಿಗಳೇಳಬಹುದು; ಆಗ ವ್ಯಕ್ತಿ ಸ್ವಾಭಿಮಾನದ ಹಟಕ್ಕೆ ಬೀಳದೆ ಜನಹಿತದ ಕಡೆಗೆ ದೃಷ್ಟಿಯನ್ನಿರಿಸಿ ತಾಳ್ಮೆಯನ್ನು ವಹಿಸಬೇಕು.

ಕನ್ನಡ ನಾಡಿನಲ್ಲಿ ಹಿಂದೆ ಅರಳಿದ ಮತಧರ್ಮಗಳ ಮಲ್ಲಿಗೆಯರಳುಗಳೆಲ್ಲಿ ಇಂದು ರಾಜಕೀಯ ಧುರೀಣರ ಅಡಿಯಾಟಕ್ಕೆ ಸಿಲುಕಿ; ಸ್ವರೂಪ ಸೌಂದರ್ಯವನ್ನೇ ಕಳೆದುಕೊಂಡುಬಿಟ್ಟಿವೆ. ಆ ಶಾಶ್ವತ ಸುಮಸಗಳು, ಕನ್ನಡಿಗರ ಬುದ್ಧಿ-ಭಾವ-ಜ್ಞಾನಗಳ ಕುರುಹುಗಳಾಗಿ, ಅನಂತಕಾಲದ ವರೆಗೂ ಬದುಕಿಕೊಳ್ಳಬೇಕಾಗಿವೆ. ಅವು ಹೀಗೆ ಬದುಕುವಂತಹ ಅನುಕೂಲ ವಾತಾವರಣವನ್ನು ನಿರ್ಮಿಸುವ ಕಾರ್ಯವನ್ನೂ ನಮ್ಮ ಸಾಹಿತ್ಯಪರಿಷತ್ತು-ಸಮ್ಮೇಳನಗಳೇ ಮಾಡಬೇಕು.

ಈ ಸಲದ ಸಮ್ಮೇಳನಕ್ಕೆ ಅಧಿಷ್ಠಾನವಾಗಿರುವುದು ಉಡುಪಿಯ ನಗರ. ಈ ನಗರದಲ್ಲಿ ಸನಾತನ ಸಂಸ್ಕೃತಿಯು ಕ್ರಮುವರಿತು ಪೂಜೆಗೊಳ್ಳುತ್ತದೆ; ಜೊತೆಗೆ ಹೊಸ ಕಾಲದ ವೈಜ್ಞಾನಿಕ ಸಂಸ್ಕೃತಿಯೂ ಮುನ್ನಡೆಪಡೆಯುತ್ತಲಿದೆ. ಎರಡರ ಸುಂದರ ಸಮನ್ವಯದಿಂದ ಉಡುಪಿಯ ನಗರದ ಲೌಕಿಕದಲ್ಲಿಯೂ ಪರಮಾರ್ಥದಲ್ಲಿಯೂ ಒಂದು ಹೊಸ ಸ್ವರೂಪ ಎದ್ದು ನಿಲ್ಲುತ್ತಲಿದೆ. ಇಲ್ಲಿಯ ಸನಾತನಿಗಳೂ ಮಾನವತೆಯ ಬೆಲೆಯನ್ನು ಅರಿತುಕೊಂಡಿದ್ದಾರೆ; ಸುಧಾರಕರೂ ಆ ಬೆಲೆಯನ್ನು ಅರಿತುಕೊಂಡಿದ್ದಾರೆ; ಸುಧಾರಕ ಸನಾತನಿಗಳು ಅಲ್ಲಿ ಹಾವು ಮುಂಗುಸಿಗಳಾಗಿ ವರ್ತಿಸುತ್ತಿಲ್ಲ; ಬೆಕೆಗೆ ಮಳೆಯಾಗಿ ವರ್ತಿಸುತ್ತಲಿದ್ದಾರೆ. ಸಾಹಿತ್ಯ ಸಮ್ಮೇಳನವು ಏನು ಮಾಡಬೇಕೆಂಬುದನ್ನು ಅಲ್ಲಿಯವರು ಸರಿಯಾಗಿ ಅರಿತುಕೊಂಡಿರಬಹುದೆಂದು ನಮ್ಮ ನಂಬುಗೆ ಎಂತಲೇ ಉಡುಪಿಯಲ್ಲಿ ಶ್ರೀ. ಆ. ನ. ಕೃ. ಅವರ ಅಧ್ಯಕ್ಷತೆಯಲ್ಲಿ ಸೇರಲಿರುವ ಸಾ. ಸಮ್ಮೇಳನವು, ಒಂದು ಮಾದರಿಯದಾಗಬೇಕೆಂದು ನಾವು ಹಾರೈಸುವೆವು.

—ಸಂಪಾದಕರು

ಜಯಂತಿಯ ಓದುಗರಿಗೆ

ದೀಪಾವಳಿಯ

ಶುಭಾಶಯಗಳು

ನಾಡನಡೆ

ಭಾರತಕ್ಕೆ ಪ್ರೊ. ಥಿಯೋಡೋರ್ ಹ್ಯೂಸ್ ಅವರ ಭೇಟಿ, ಜರ್ಮನಿಯ ಫೆಡರಲ್ ಗಣರಾಜ್ಯದ ಅಧ್ಯಕ್ಷ

೧೯೪೯ ರಿಂದ ೧೯೫೯ ರವರೆಗೆ ಜರ್ಮನಿಯ ಫೆಡರಲ್ ಗಣರಾಜ್ಯದ ಅಧ್ಯಕ್ಷರಾಗಿದ್ದ ಪ್ರೊಫೆಸರ್ ಡಾಕ್ಟರ್ ಹ್ಯೂಸ್ ಅವರು, ಮುಂಬರುವ ಶರದೃತುವಿನಲ್ಲಿ, ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್ ಅವರ ಆಹ್ವಾನದ ಮೇರೆಗೆ, ಭಾರತಕ್ಕೆ ಭೇಟ್ಟಿ ಕೊಡಲಿದ್ದಾರೆ. ಅವರು ಮುಂದಿನ ನವ್ಹಂಬರ್ ಎರಡನೆಯ ತಾರೀಖು ದಿಲ್ಲಿಗೆ ಆಗಮಿಸುವ ನಿರೀಕ್ಷೆ ಇದೆ.

ರಾಜಧಾನಿಯಲ್ಲಿರುವಾಗ ಅವರು ದಿಲ್ಲಿ ವಿಶ್ವವಿದ್ಯಾನಿಲಯದಿಂದ ಡಿ. ಲಿಟ್. ಎಂಬ ಗೌರವ ಪ್ರಶಸ್ತಿಯನ್ನು ಸ್ವೀಕರಿಸುವರು; ಅನಂತರ ಅವರು ಭಾರತ ಪರ್ಯಟನಕ್ಕಾಗಿ ಪ್ರಯಾಣ ಹೊರಡುತ್ತಾರೆ. ಆಗ್ರಾ, ಜಯಪುರ, ಕಲ್ಕತ್ತಾ, ಜಂಷೇಡ್‌ಪುರ, ರೂರ್ಕೆಲಾ, ಬುಲಂದ್‌ಷಹಣ, ಪೂರಿ, ಮದ್ರಾಸ್, ಬೆಂಗಳೂರು ಮತ್ತು ಮುಂಬೈ ಈ ನಗರಗಳಿಗೆ ಬೆಟ್ಟಿ ಕೊಟ್ಟನಂತರ, ನವ್ಹಂಬರ್ ತೀಂಗಳ ೨೩ ನೇ ತಾರೀಖಿನ ಸುಮಾರಿಗೆ ಭಾರತದಿಂದ ಪ್ರಯಾಣ ಹೊರಡುತ್ತಾರೆ.

ಪ್ರೊ. ಹ್ಯೂಸ್ ಅವರು ೧೮೮೪ ನೆಯ ಜನವರಿ ೩೧ನೆಯ ತಾರೀಖು ಜನ್ಮವೆತ್ತಿದರು. ಅರ್ಥಶಾಸ್ತ್ರವನ್ನೂ, ಕಲೆಯ ಇತಿಹಾಸವನ್ನೂ ಅಧ್ಯಯನ ಮಾಡಿದ ನಂತರ, ಅವರು, ಪತ್ರಿಕೋದ್ಯಮಿಯಾಗಿ ಜೀವನ ವೃತ್ತಿಯನ್ನು ಪ್ರಾರಂಭಿಸಿದರು. ಮೊದಲನೆಯ ವಿಶ್ವಯುದ್ಧದ ನಂತರ ಅವರು ಬರ್ಲಿನ್ನಿನ "ಹೊಷ್ಯೂಲ್ ಫೂವರ್ ಪೊಲಿಟಿಕ್" ಎಂಬ ಸಂಸ್ಥೆಯಲ್ಲಿ ಪಾಠ ಹೇಳಿಕೊಡಲು ಆರಂಭಿಸಿದರು. ೧೯೨೪ ರಲ್ಲಿ ಜರ್ಮನ್ ಪಾರ್ಲಿಮೆಂಟ್ ಆಗಿದ್ದ ರೀಚ್‌ಸ್ಟಾಗಿಗೆ ವಾಮವಿಭಾಗದ ಉದಾರವಾದೀ ಜರ್ಮನ್ ಪ್ರಜಾ ಸತ್ತಾತ್ಮಕ ಪಕ್ಷದ ಪ್ರತಿನಿಧಿಯಾಗಿ ಚುನಾಯಿಸಲ್ಪಟ್ಟರು. ಹಿಟ್ಲರನು ೧೯೩೩ ರಲ್ಲಿ ಅಧಿಕಾರವನ್ನು ಕಸಿದುಕೊಂಡ ನಂತರ, ಪ್ರೊ. ಹ್ಯೂಸ್ ಅವರು, ಸಾರ್ವಜನಿಕ ಜೀವನದಿಂದ ಹಿಂದೆಗೆಯಬೇಕಾಗಿ ಬಂದಿತು. ಏಕೆಂದರೆ ಆ ಸರ್ವಾಧಿಕಾರಿಯು ಕ್ರಮೇಣ ಉನ್ನತಿಗೆ ಬರುತ್ತಿರುವುದರ ವಿರುದ್ಧ ಅವರು ಅನೇಕ ಬಾರಿ ತಮ್ಮ ಜನರಿಗೆ ಎಚ್ಚರಿಕೆ ನೀಡಿದ್ದರು. ಎರಡನೆಯ ವಿಶ್ವಯುದ್ಧದ ನಂತರ, ಆಗಿನ ನ್ಯೂರ್ಂಬರ್ಗ್-ಜೇಡನ್ ಸಂಸ್ಥಾನದಲ್ಲಿ ಪ್ರೊ. ಥಿಯೋಡೋರ್ ಹ್ಯೂಸ್ ಅವರು, ಅಲ್ಲಿಯ ಸರ್ಕಾರದ ಸಾಂಸ್ಕೃತಿಕ ವ್ಯವಹಾರಗಳ ಮಂತ್ರಿಯಾಗಿ ನೇಮಿಸಲ್ಪಟ್ಟರು. ಅನಂತರ ಉದಾರವಾದೀ ಪ್ರಜಾಸತ್ತಾತ್ಮಕ ಪಕ್ಷದ ಪ್ರತಿನಿಧಿಯಾಗಿ ರಾಜ್ಯಾಂಗ ರಚನಾ ಸಭೆಯ ಸದಸ್ಯರಾಗಿ ಚುನಾಯಿಸಲ್ಪಟ್ಟರು. ೧೯೪೯ ರಲ್ಲಿ ಉದಾರವಾದೀ ಹಾಗೂ ಕ್ರೈಸ್ತಿಯನ್ ಪ್ರಜಾಸತ್ತಾತ್ಮಕ ಪಕ್ಷಗಳ ಬೆಂಬಲದೊಡನೆ ಅವರು ಜರ್ಮನಿಯ ಫೆಡರೇಶನ ಗಣರಾಜ್ಯದ ಮೊಟ್ಟಮೊದಲನೆಯ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ೧೯೫೯ ರಲ್ಲಿ ಅವರು ಮತ್ತೊಮ್ಮೆ ರಾಷ್ಟ್ರದ ಅಧ್ಯಕ್ಷ ಸ್ಥಾನಕ್ಕೆ ಸರ್ವಾನುಮತದಿಂದ ಆರಿಸಲ್ಪಟ್ಟರು. ಮಗುದೊಮ್ಮೆ ಮೂರನೆಯ ಸಲವೂ, ಪ್ರೊ. ಹ್ಯೂಸ್ ಅವರೇ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯಲು ಸಾಧ್ಯವಾಗುವಂತೆ, ಜರ್ಮನ್ ರಾಜ್ಯಾಂಗ ಶಾಸನವನ್ನು ತಿದ್ದುಪಡಿ ಮಾಡುವ ಪ್ರಯತ್ನಗಳನ್ನು ಕೆಲವರು ನಡೆಸಿದರು. ಆದರೆ ಪ್ರೊ. ಹ್ಯೂಸ್ ಅವರೇ ಸ್ವತಃ ಅಂತಹ ಪ್ರಯತ್ನಗಳನ್ನೆಲ್ಲಾ ತಡೆಗಟ್ಟಿದರು.

ಪ್ರೊ. ಥಿಯೋಡೋರ್ ಹ್ಯೂಸ್ ಅವರು, ಜರ್ಮನಿಯಲ್ಲಿ ರಾಜಕೀಯ ಶಕ್ತಿಗಳ ಪ್ರತಿನಿಧಿಯಾಗಿರುವುದು ಮಾತ್ರವಲ್ಲದೇ, ಬೌದ್ಧಿಕ ಶಕ್ತಿಗಳ ಪ್ರತಿನಿಧಿಯೂ ಆಗಿದ್ದಾರೆ. ರಾಜಕೀಯ ತತ್ವಶಾಸ್ತ್ರ ಹಾಗೂ ಸಮಾಜಶಾಸ್ತ್ರ ಈ ವಿಷಯಗಳಲ್ಲಿ ಅವರಿಗೆ ತೀವ್ರವಾದ ಆಸಕ್ತಿ ಇರುವುದು ಮಾತ್ರವಲ್ಲದೇ, ಅವರು ಅವುಗಳಿಗೆ ತಮ್ಮ ಸಿದ್ಧಾಂತಗಳ ಮೂಲಕವೂ ಅಪಾರ ಸೇವೆ ಸಲ್ಲಿಸಿದ್ದಾರೆ. ಕಲಾ ಕ್ಷೇತ್ರದಲ್ಲಿ ಅವರ ಆಸಕ್ತಿಯು ಗಾಢವಾವದ್ದಾಗಿದೆ. ಅವರು ಸ್ವತಃ ಉತ್ತಮ ರೇಖಾ ಚಿತ್ರಕಾರರಾಗಿದ್ದಾರೆ. ಭಾರತೀಯ ಶಿಲ್ಪಕಲೆಯ ಐತಿಹಾಸಿಕ ಸ್ಮಾರಕಗಳ ಸೌಂದರ್ಯವನ್ನು ಆಸ್ವಾದಿಸಲು ಅವರು ತಮ್ಮ ಈ ರೇಖಾಚಿತ್ರಕಲೆಯನ್ನು ಬಳಸಿಕೊಳ್ಳುವುದನ್ನೇ ಎದುರು ನೋಡುತ್ತಿದ್ದಾರೆ. ಜರ್ಮನಿಯ ಫೆಡರಲ್ ಗಣರಾಜ್ಯದ ಅಧ್ಯಕ್ಷರಾಗಿದ್ದಾಗ, ಪ್ರೊ. ಹ್ಯೂಸ್ ಅವರು ಇತರ ರಾಜಕಾರಣಿಗಳೊಡನೆ, ಜರ್ಮನ್ ರಾಷ್ಟ್ರದಲ್ಲಿ ಪ್ರಪಂಚದ ವಿಶ್ವಾಸವನ್ನು ಮತ್ತೆ ಜಯಪ್ರದವಾಗಿ ಮಾಡಿಸಿದರು. ಜರ್ಮನಿಯ ಇಡೀ ಜನತೆಯು, ಹಿಂದಿನ ಸ್ವರೂಪದಲ್ಲಾಗಲೀ ಇಂದಿನ ಸ್ವರೂಪದಲ್ಲಾಗಲೀ ಸರ್ವಾಧಿಕಾರಿತ್ವವನ್ನು ಧಿಕ್ಕರಿಸುತ್ತಿದೆಯೆಂಬುದನ್ನು ಸಹ ಅವರು ತೋರಿಸಿಕೊಟ್ಟರು.

ಈಚಿನ ಕಾಲದಲ್ಲಿ ಜರ್ಮನರ ಪೈಕಿ ಪ್ರೊ. ಹ್ಯೂಸ್ ಅವರು ಅತ್ಯಂತ ಪ್ರಮುಖ ವಿದ್ವಾಂಸ-ರಾಜಕಾರಣಿಯೆಂದು ಹೆಸರು ಗಳಿಸಿದ್ದಾರೆ. ಅವರು ಹಲವಾರು ಸುಪ್ರಸಿದ್ಧ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳ ಪೈಕಿ ಕೆಲವು ಗ್ರಂಥಗಳ ಪೆಸರುಗಳನ್ನು ಇಲ್ಲಿ ಕೊಡಲಾಗಿದೆ:

ಫ್ರೆಡ್ರಿಕ್ ನಾಮನ್ (ಫ್ರೆಡ್ರಿಕ್ ನಾಮನ್ ಅವರ ಜೀವನ ಚರಿತ್ರೆ -- ಅವರ ಜೀವನ ಮತ್ತು ಕಾಲ).

ರಾಬರ್ಟ್ ಬಾಷ್ (ಸುಪ್ರಸಿದ್ಧ ಕೈಗಾರಿಕಾಕರ್ತನಾದ ರಾಬರ್ಟ್ ಬಾಷ್ ಅವರ ಜೀವನ ಚರಿತ್ರೆ).

ಡ್ಯೂಟ್ಷ್ಲೆಗೆಸ್ಚಾಲ್ಟೆನ್ (೧೯ ನೆಯ ಶತಮಾನದ ಅನೇಕ ರಾಜಕೀಯ ನಾಯಕರ ಜೀವನದ ಚರಿತ್ರೆಗಳು).

———

ಕಲೆಯು ನಂದಾದೀಪ ಬೆಳಗುತಿಹುದು

ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ.ಎ., ಹೈದರಾಬಾದು – ದಕ್ಷಿಣ.

ಉತ್ತುಂಗ ಕಲ್ಲೋಲ ಮತ್ತ ಕರಿಗಳನೇರಿ
ವಿಕ್ರಾಂತರೊಲು ಭಾರತ ಕರವಾಳಿಯು ತುಳಿದು
ಪರಕೀಯ ಸತ್ತೆಯಲಿ ಯಂತ್ರಘೂರ್ತರಪಿಡುಗು
ಉನ್ಮತ್ತ ಅಸುರರೊಲು ಪ್ರಾಣಳಿಯು ನೈದಿರಲು,

ನಿಜ್ಞಾನ ನಿರ್ಮಿಸಿದ ಯಂತ್ರವಾಲೆಯದಿಡುಗು
ನಿರುದ್ಯೋಗ ನರಜೈತ್ರ ಗರ್ಜಿಸಿದ ಹಿರಿಗುಡುಗು
ಪೇಟೆಯು ಕಾರ್ಮಿಕರ ಬಾಳಿಗೆರಗಿದ ಪಿಡುಗು
ಹೆಳ್ಳಿಗರ ಹಿಗ್ಗಿನೆಡೆಗಳಿಗೆ ಹಿಡಿಸಿತು ನಡುಗು.

ವಿತಶೋತ್ಪಾದಕರು ಹೊರಲಾರದಿಹ ಭಾರಗಳ
ಚಕ್ರಗಳು ತಿರುಗಿದವು ಭೀಮಬಲ ಸಾಹಸದಿ.
ಅದರ ಬಿರುಸಿಗೆ ಸಿಲುಕಿ ಕಾರ್ಮಿಕರ ಮನೆದೀಪ
ಆರಿದವು ಬರುಗಾಳಿ ಒಡಿದ ಹಣತೆಯ ತೆರದಿ.

ಯಂತ್ರ ಶೈತ್ಯನ ಮಹಾಮಾಂತ್ರಿಕತೆ ಮುಸುಗಿರಲು
ಗೃಹ ಕುಟೀರದ ಕಲೆಗೆ ಗ್ರಹಣ ಹಿಡಿದು,
ಕೆಲ ಕುಚೇಲರು ಕುಬೇರ ಪುತ್ರರಾಗಿರಲು
ಕುಶಲ ಕಾರ್ಮಿಕ ಕುಲದ ಸತ್ವಾಪಹರಣನಾದ್ಯೆದು.

ಕಾರ್ಮಿಕರ ಕುಲದಲ್ಲಿ ಕರ್ಮಯೋಗರ ವಾಸ
ನೇಕಾರರೋಣಿಯಲಿ ನಿರುದ್ಯೋಗದುಪವಾಸ
ಮಗ್ಗವಿದ್ದೆಡೆಗಳಲಿ ಜೇಡಬಲೆಗಳ ವಾಸ
ನೇಕಾರ ಮಕ್ಕಳಿಗೆ ನಗರದಲಿ ವನವಾಸ

ಹೊರಮನೆಯ ಬಸಿತೊಳೆಯೊ ಹೊರದ ಭಾರವನೆಳೆದೊ
ನಡೆದಿರಲು ಬದುಕಿನ ಮಹಾಸಾಹಸ.
ಮನುಜನಿರ್ಮಿತ ಯಂತ್ರ ಪ್ರಗತಿಗಿಂತಲು ಹಿರಿದು
ದೇವಯೋಜಿತ ಕಾಲಚಕ್ರಗತಿಯು—

ಸ್ವಾಧೀನ ಭಾರತದಿ ಮತ್ತೆ ಕಾರ್ಮಿಕ ಜನತೆ
ಮರಳಿ ಪಡೆದಿತು ತನ್ನ ಪೂರ್ವ ಭಾಗ್ಯಸ್ಥಿತಿಯ—
ಬಿದ್ದ ಮಗ್ಗಗಳದ್ದು ಮತ್ತೆ ಧುಮುತಲಿಹವು
ನೆಯ್ಗೆ ಪಟವಲ್ಲಿ ಬಾಳ ಪೊಡುತಿಹವು.

ಅಚ್ಚರಿಪ ಹೊಚ್ಚಹೊಸ ಪಡಿಯಚ್ಚುಗಳ ಸಾಲು
ಪೇಟೆ ಮುಂಗಡೆಯಲ್ಲಿ ಮೆರೆದಾಡುತಿಹವು.
ಗರತಿಯರು ಹೆಚ್ಚಿಹರು ಗದ್ದಾಲ ಸೀರೆಯನು
ಯುವತಿಯರು ಪೆಡಗಳ್ಳ ಚೀಟುಗಳನು,

ಲುಂಗ ಕೊಳ್ಳ ತಲಿಹರು ಕೈಯು ಕಟ್ಟಾದವರು
ರಂಗು ರಂಗಿನ ಪರದೆ ಕೈ ನಡೆಯುವವರು.
ವ್ಯಂಜನವಿಲ್ಲದ ಭಂದೆವ್ಯವಹಾರವೆಲ್ಲಿಹವು ?
ಮಂದಿ ಇಲ್ಲದ ಬರಿಯ ತೇಜಿ ಎಲ್ಲಿಹುದು ?

ವಿಜ್ಞಾನದಿಂದಿನೀ ನಿರ್ವಂದ್ಯ ಸಾಹಸಕು
ಕಲೆಯ ನಂದಾದೀಪ ಬೆಳಗುತಿಹುದು.

———

'ನಂಬಿದರೆ ನಂಬಿ, ಬಿಟ್ಟರೆ ಬಿಡಿ'

[ಸಣ್ಣಕಥೆ*]

ಶ್ರೀ. ಕೆ. ಅರ್ಜುನ್ಮನಾರಾಯಣರಾವ್, ಬನಾರಪ

ಇದೊಂದು ಮನೋಧರ್ಮದ ಗೂಢಸಮಸ್ಯೆಯನ್ನು ಚಿತ್ರಿಸಿದ ಕಥೆ. ಏಣಾಂಗುಲಿಗ ಬೀರುವಿನ ಮರಣಕ್ಕೆ ಯಾವುದು ಕಾರಣ? ವಿಧಿಯ ಕಚ್ಚುವಿಕೆಯೊ? ಹಾವು ಕಚ್ಚಿತೆಂಬ ತಿಳಿವಳಿಕೆಯೊ?

"ನಂಬಿದರೆ ನಂಬಿ, ಬಿಟ್ಟರೆ ಬಿಡಿ!"

ಇದೇ ಪೀಠಿಕೆಯಿಂದ ಬಂಗಾಳದ ಸೇನ್‌ಗುಪ್ತರು, "ನಮ್ಮ 'ಅಮ್ರಿತೋ ಬಾಜಾರ್' ದಲ್ಲಿ 'ಕಾಂಗ್‌ಡೊ' ಹಿಡಿಯೋನು ಒಬ್ಬನ ಸಂಗತಿ ಬಂದಿತ್ತು. ಎಷ್ಟು 'ಬಿಜಿತ್ರೊ' ಅಂಕೀರಿ 'ಮೋಷಾಯ್!'" ಎನ್ನುತ್ತಿದ್ದಂತೆಯೇ ಮುಖರ್ಜಿಯವರು ನಡುನೆ ಬಾಯಿಹಾಕಿ ಬೋಳು ತಲೆಯನ್ನು ತೂಗುತ್ತ, ದೊಡ್ಡ ಕನ್ನಡಕದ ಹಿಂದಿನ ಗುಡ್ಡೆಗಣ್ಣುಗಳನ್ನು ಅರಳಿಸುತ್ತ, ಕೈಬಾಯಿಗಳನ್ನಾಡಿಸುತ್ತ, "'ಹ್ಯಾಂ, ಬಿಷೇಷ್ ಬಿಚಿತ್ರೊ, ಬಿಷೇಷ್ ಬಿಚಿತ್ರೊ! ' ಹಾಗೂ ಆಗುತ್ತೇ ಅನ್ನಿಸುತ್ತೆ. ಆದರೆ ನಿಜ, ನಡೆದದ್ದು. ಅಮೂ ನಮ್ಮೂರು 'ಉಲ್ಟೋಡಾಂಗೋ' ದಲ್ಲೇ ನಡೆದದ್ದು. ಅಲ್ಲಿ ಬರ್ತಾನಲ್ಲಾ ಆ ಬೀರೂ, ಅವನ 'ಪರಿ ಚೋಯ್' ನಂಗೆ ಚೆನ್ನಾಗಿತ್ತು," ಎಂದರು.

'ಹಾಗಾದರೆ ದಾದಾ, ನೀವೇ ಹೇಳಿ. ನೀವಾದರೆ ಸ್ವಾರಸ್ಯವಾಗಿ ಹೇಳ್ತೀರಿ,' ನಾನು ಪ್ರೋತ್ಸಾಹಿಸಿದೆ. "ಹೆಸ್ಸೆಷ್ಟೇ!" ಮುಖರ್ಜಿಯವರು ಸುಪ್ರೀತರಾಗಿ ಗಟ್ಟಿಯಾಗಿ ನಕ್ಕರು. ದಪ್ಪ ಹೊಟ್ಟೆಸ್ತನಗಳು ಕಪ್ಪೆ ಕುರ್ಚಿಯಲ್ಲಿ ಕುಣಿದಾಡಿದವು. ಕತ್ತಾ-ಹೊಗೆಸೊಪ್ಪಿನ ವೀಳಯವನ್ನು ಮೂರು ಹೊತ್ತೂ ತಿಗಿದು ಕಪ್ಪಾದ ಹಲ್ಲುಗಳ ಪೈಕಿ ಹಲವಿನಾರು ಕಾಣಿಸಿಕೊಂಡುವು. ದಾದಾ ಹಸುಳೆಯ ಸ್ವಭಾವದವರು, ಬಡಪರಸಿ, ನಮಗೆಲ್ಲ ಪ್ರಿಯರಾದವರು. ನಮ್ಮ ಗುಂಪಿನ ಸುದ್ದಿಗಾರರು. ಅವರ ಕಥನಭೋಜನದಲ್ಲಿ ಒಕಾರ ಷಕಾರಗಳು ವ್ಯಂಜನಗಳು.

"'ಉಲ್ಟೋಡಾಂಗೋ' ಇರೋದು 'ಸಿಯೋಳ್ದಾ' ಕ್ಕೆ ನೂರು 'ನೋಯ್‌ಲ್' ದೂರದಲ್ಲಿ ಅಂತ ಗೊತ್ತಲ್ಲ?...."

ಹೌದೆಂದು ನಾನು ತಲೆಯಾಡಿಸಿದೆ.

"ನಮ್ಮ ಊರಹೊರಗೆ ನಮ್ಮ ಮನೆಗೆ ಕೊಂಚ ದೂರದಲ್ಲಿ, ಬೀರೂನ ಗುಡಿಸಲು. ಆಗಾಗ ನಮ್ಮ ಮನೆಗೆ ಬಂದು ಜಗಲಿ ಬಳಿ ಕೂತು ಮಾತುಕತೆ ಆಡ್ತಾ ಇದ್ದ. ಅವನ ಎರಡನೇ ಹೆಂಡತಿ—ಮೋನಿ ಅಂತ. ಇಬ್ಬರು ಗಂಡುಮಕ್ಕಳು. ಹಿರಿಯ 'ಬಿಷಾಷ್'ಗೆ ಇಪ್ಪತ್ತು ಇಪ್ಪತ್ತೆರಡು ವರ್ಷ, ಕಿರಿಯ 'ಬೋಂಕೀಮ್' ಗೆ ಐದಾರು. ಇವರ ಮಧ್ಯದಲ್ಲಿ ಒಂದು ಹುಡುಗಿ 'ಚೋಬಿ' ಅಂತ; ಮದುವೆ ಆಗಿ ಗಂಡನ ಮನೆಗೆ ಹೋಗಿದ್ದಳು; ಒಂದು ಮಗೂನ ತಾಯಿ.

"ಗುಡಿಸಲಿನಲ್ಲಿದ್ದ ಅಂದಮೇಲೆ, ಬಡತನದ ಸಂಸಾರ ಅಂತ ಹೇಳಲೇಬೇಕಾಗಿಲ್ಲ. ಜಮೀನು ಸಮೀನು ಏನೂ ಇರಲಿಲ್ಲ. ಕೂಲಿನಾಲಿ ಸಿಕ್ಕೋದೂ ಸುಲಭವಾಗಿರಲಿಲ್ಲ: ಆಗಲೋ ಈಗಲೋ! ಅಲ್ಲದೆ ಬೀರೂ ಆಗಲೇ ಮುದುಕನಾಗಿದ್ದ. ಶರೀರ ನವೆದಿತ್ತು. ಮುಖ ಸುಕ್ಕುಬಿದ್ದಿತ್ತು. ಕೆಳಗಿನ ಹಲ್ಲುಗಳಲ್ಲಿ ಒಂದೆರಡು ಮಾತ್ರ ಕಾಣ್ತಾ ಇದ್ದವು. ತಲೆ ಗಡ್ಡ ಎಲ್ಲ ಬಿಡಿಸಿದ ಪತ್ತಿಯ ಹಾಗೆ. ಇಂಥ ವಯಸು ಕೂಲಿ ಏನು ಮಾಡಬಲ್ಲ? ಬಾ ಅಂತ ಯಾರು ಕರೀತಾರೆ? ನಾವು ಇಷ್ಟೊಂದು ದೋಡ್, ಮೊಯೋನ್, ಮೊಳಲೀ, ತೊತ್ತೀ, ಫೋಲ್, ತರ್ಕಾರೀ, ಬೈಟೊಮಿನ್ ಗೋಲೀ' ಅಂತ ತಿಂದರೂ ನನುಗೆ ದಿನ ಬೆಳಗಾದರೆ ಸುಸ್ತು ಸಂಕಟ, ಆ ಬೇನೆ ಈ ಬೇನೆ ಔಷಧಿ ಪಥ್ಯ, ಅಂತ ಇದ್ದೇ ಇರುತ್ತೆ. ಹತ್ತು ವರ್ಷ ವಯಸ್ಸು ಹೆಚ್ಚಾದ ಹಾಗೆ ಕಾಣ್ತೇವಿ....."

"ಮೋಷಾಯ್," ಸೇನ್‌ಗುಪ್ತರು ಅಡ್ಡ ಬಂದರು. "ಸುಮ್ಮನೆ ತಿಂದರೆ ಏನು ಬಂತು ಭಾಗ್ಯ? ಆರೋಗ್ಯ 'ತೋಕ್ತೆ' ಇರೋದೆಲ್ಲ ತಿಂದ ಸ್ವಲ್ಪಾನೇ ಅರಗಿಸಿಕೊಳ್ಳೋದರಲ್ಲಿ. ಅದಕ್ಕೇ ಬಡಬಗ್ಗರು ನಮುಗಿಂತ ಗಟ್ಟಿಯಾಗಿರೋದು."

"'ಠತ್ಯೊ ಠತ್ಯೊ,'" ಮುಖರ್ಜಿಯವರು ತಲೆಯಾಡಿಸಿದರು. "ಆದರೆ 'ಕೇಜೊಲ್ ಭೋತ್ ದೋಲ್,' ವರ್ಷದಲ್ಲಿ ಎಲ್ಲೋ ಒಂದೆರಡು ಸಾರಿ ಒಂದು 'ಮೊಳಲೀ'....."

*ಇದರಲ್ಲಿ ಕಥೆಹೇಳುವ ಮುಖರ್ಜಿ ಮಹಾಶಯ ಬಂಗಾಲಿ ಮನುಷ್ಯ. ಕನ್ನಡವನ್ನು ಅರಿತವನಾದರೂ ಬಂಗಾಲಿಗಳ ಉಚ್ಚಾರ ಪದ್ಧತಿಯಲ್ಲಿಯೆ ಕನ್ನಡ ಮಾತನಾಡುವನು. ನಡುನಡುವೆ ಬಂಗಾಲಿ ಶಬ್ದಗಳನ್ನೂ ಸೇರಿಸುವನು.

ಸಂ. ಜ.

'ಅಂತೂ ಬೀರು ಕೈಯಲ್ಲಿ ಕೂಲಿ ಮಾಡೋದು ಆಗ್ತಾ ಇರ
ಲ್ಲ, ಅಲ್ಲವೆ?' ನನಗೆ ಸಂಗತಿ ಬೇಕಾಗಿತ್ತು, ವಾಗ್ವಾದವಲ್ಲ.

"'ಹ್ಯಾಂ.....ನಿಷ್ಟೊಯ್, ನಿಷ್ಟೊಯ್' ಅದೇ ಮುಖ್ಯ
ನ್ನಿ. ಆಗ ಈಗ ಸಿಕ್ತಾಗ 'ಬಿಷಾಷ್' ಮಾತ್ರ ಕೂಲಿ ಮಾಡ್ತಾ
ಇದ್ದೆ. ಆದರೆ ಇದರಿಂದ ಸಂಸಾರದ ರಥ ನಡೆಯುತ್ತೇ? ನೋಸಿ
ಪಮ್ಮ ಮನೆ, 'ಷರೊತ್' ಬಾಬು ಮನೇಲಿ ಝಾಡೂ ಕೋರೋನ್
ಎತೋನ್ ಷಾಫ್ ಕೊರೂನ್,' 'ಭದ್ರೊ ಲೋಗ್' ಮನೆಗಳಲ್ಲಿ
ಎಸರಿ, ಬಾಣಂತಿ, ಕಾಹಿಲೆ ಹೆಂಗಸರಿಗೆ 'ತೇಲ್ ಮೋಲೀಷ್
ಕೋರೂನ್' ನಾಲ್ಕೆಂಟು 'ಟೋಕಾ' ಗಳನ್ನು ಸಂಪಾದಿಸುತ್ತಿದ್ದಳು.
ಸಣ್ಣ 'ಬೋಂಕೇಂ' ಮನೆಯಲ್ಲಿಪ್ಪ ಮೂರು ಆಡನ್ನು ಮೇಯಿಸಿ
ಕೊಂಡು ಬರ್ತಾ ಇದ್ದ, ಹಾಲಿನ ಮಾರಾಟದಿಂದ ಐದಾರು 'ಟೋಕಾ'
ಬರುತ್ತಿತ್ತು. ಆಡು ಮರಿ ಹಾಕಿದಾಗ 'ಭಿಷಾಷ್' ಮರಿಗಳನ್ನು
'ಕೋಲ್‌ಕ್ಯಾಟಾ'ದ 'ಕೋಲಿಘೋಟ್'ಗೆ ಹೋಗಿ 'ಕೋಲಿಮೋಯಿ'
ಮೊಂದಿರ'ಕ್ಕೆ ಬಲಿಗಾಗಿ ಮಾರಿ ಬರುತ್ತಿದ್ದ. ಹೀಗೆಂದರೆ ಬೀರೂ
ಸುಮ್ಮನೆ ಕಾಲು ಜಾಚಿಕೊಂಡು ಕುಳಿತಿರ್ತಾ ಇದ್ದ ಜಂತಲ್ಲ. ಅದು
ಅವನ ಪ್ರಕೃತಿಯೇ ಅಲ್ಲ. ಅದರೆ ಇಷ್ಟು ಆದಾಯ ತಾನೇ ಹೇಗೆ
ಸಾಕು—ಅಷ್ಟು ಜನರ ಹೊಟ್ಟೆಬಟ್ಟೆಗೆ?

"ಹೀಗಿದ್ದು ಬೀರು ಸುತ್ತಮುತ್ತಣ 'ಫ್ಲೊಟೋರ್' ಗಳಲ್ಲಿ
'ಮೊಛಲೀ' ಹಿಡಿಯುತ್ತಿದ್ದ. ಅಲ್ಲಲ್ಲೀ ಹೊಟೆರೆಗಳಲ್ಲಿಪ್ಪ 'ಕಾಂಗ್‌ಡೊ'
ತರುತ್ತಿದ್ದ....ಹ್ಯಾಂ, 'ಫ್ಲೊಕೋರ್' ಗಳಲ್ಲಿ ಮೀನು ಹಿಡಿಯೋದು
'ಫೊಮುದ್ರೊ' ದಲ್ಲಿ 'ನೋವ್' ದ ಮೇಲೆ ಹೋಗಿ ಬಲೆ ಬೀಸಿ
ಬುಟ್ಟಗಟ್ಟಲೆ ಹಿಡಿಯೋದಾಗಲ್ಲ. ದಡದಮೇಲೆ ಕೂತು ಗಾಳ ಹಾಕಿ
ಬೆಳಿಗ್ಗೆಯೆಲ್ಲ ಕಾಯ್ತಾ ಇರೋದು; ಕಚ್ಚಿದರೆ ನಾಲ್ಕು ಕಚ್ಚಿತು; ಇಲ್ಲ
ದಿದ್ದರೆ ಅದೂ ಇಲ್ಲ. ಹೀಗಿದ್ದು ಬೀರೂ ಇಷ್ಟಿಷ್ಟು ಸೊತ್ತು ಗಾಳದ ಬಳಿ
ಕೂತಿದ್ದು ಅಪ್ಯಷ್ಟವಿಲ್ಲದಿದ್ದರೆ ಕೋಲಿಗೆ ದಾರವನ್ನು ಸುತ್ತಿಟ್ಟು
'ಕಾಂಗ್‌ಡೊ' ಹುಡುಕುತ್ತಿದ್ದ.

'ಕಾಂಗ್‌ಡಾ ಅಂದ್ರೆ ಏನು?' ನಾನು ಅನುಮಾನಿಸಿದೆ.

"ನಿಮಗೆ ಗೊತ್ತಿಲ್ಲವೆ ಸೋಷಾಯ್?" ನಿಮ್ಮ ಕಡೆ ಇಲ್ಲವೆ?
ಪೊಟರೆಯಲ್ಲಿರೋದು, ನಾಲ್ಕೆಂಟು ಕಾಲು.....

"ಓ ಗೊತ್ತಾಯ್ತು. ನಾವು ಅವನ್ನು ಏಡಿ ಅಂತೀವಿ—ಕರ್ಕಟ"

"'ಹ್ಯಾಂ! ಕೊಕ್ಕೋಟೋ, ಕೊಕ್ಕೋಟೋ' ಅವನ್ನು ಹಿಡಿ
ಯೋದೇನು ಸುಲಭ ಅಂದುಕೋಬೇಡಿ. ಬಹಳ ಚಾತುರ್ಯ ಬೇಕು.
ಪೊಟರೆಯಲ್ಲಿ ಅವರ ಸುಳಿವು ಕಂಡರೆ ಪುಟ್ಟಾರಾಗಿ ಬೆರಳು ಹಾಕಿ
ಕಚ್ಚಿಸಿಕೊಳ್ಳದಂತೆ ಹಿಡಿದು ಹೊರಗೆ ಎಳೀಬೇಕು. ಮುಂಡೇವು, ಕಚ್ಚಿ
ದರೇನು ಸಾಮಾನ್ಯನಲ್ಲ. ಗಾಯವಾಗಿ ರಕ್ತನೇ ಸೋರುತ್ತೆ. ಬೇರಣ
ಎಷ್ಟು ಎಚ್ಚರಿಕೆ ವಹಿಸಿದರೂ ಆಗೀಗ ಕಚ್ಚಿಸಿಕೊಳ್ಳೋದು ಅವನಿಗೆ
ಅಭ್ಯಾಸವಾಗಿ ಹೋಗಿತ್ತು. ಇದು ಹೇಗಾದರೂ 'ಕಾಂಗ್‌ಡೋ'
'ಮೊಛಲೀ' ಹಾಗೆ ನೋಸ ಮಾಡ್ತಾ ಇರಲಿಲ್ಲ. ಇಷ್ಟಿಷ್ಟು ಖಂಡಿತ
ವಾಗೂ ಸಿಕ್ತಾ ಇದ್ದವು. ಅದೇ ಅವನ ಆಧಾರ.

"ದಿನವೂ ಸಿಕ್ಕೆದ 'ಮೊಛಲೀ ಕಾಂಗ್‌ಡೊ' ಗಳನ್ನು ಬೀರೂ
ಮೋನಿ ಬೆಳಗಿ ಇಟ್ಟಿದ್ದ ದೊಡ್ಡ ಹಿತ್ತಾಳೆ ತಟ್ಟೆಯಲ್ಲಿಟ್ಟು, ಬಟ್ಟೆ ಕಟ್ಟೆ
ಕೊಂಡು 'ಬಾಜಾರ' ಕ್ಕೆ ಹೋಗುತ್ತಿದ್ದ ಹ್ಯಾಳ....'ಬಾಜಾರ್'
ಅಂದ್ರೆ ನಮ್ಮೂರದ್ದಲ್ಲ; ಅಲ್ಲಿ ಒಳ್ಳೇ ಬೆಲೆ ಸಿಕ್ತಾ ಇರಲಿಲ್ಲ. 'ಕೋಲ್
ಕ್ಯಾಟಾ' ದಲ್ಲಿ ಅಂದ್ರೆ ಸೇರು 'ಮೊಛಲೀ' ಗೆ ನಮ್ಮ 'ಬೋಂಗ್ಲಾ'
ಸೇರು ಗೊತ್ತಲ್ಲ — ಮೂರು ನಾಲ್ಕು 'ಟೋಕಾ' ಸಿಕ್ಕುತ್ತೆ.
'ಕಾಂಗ್‌ಡೋ' ಗೆ ಒಂದೊಂದೂವರೆ. 'ಗೋರೀಬ್‌ಲೋಗ್' ರ
'ಹೊರ್ತಾರಿ' ನೋಡಿ. ಬೀರೂ 'ಉಲ್ಟೋಡಾಂಗಾ ರೋಡ್'
ಲೈಬ್ರೆ ನಿಲ್ದಾಣಕ್ಕೆ ನಡೆದು, 'ಜೂಶೋ ಆಣಾ' ತಿಕೀಟನ್ನು ಕೊಂಡು
'ಷಿಯೋಲ್ದಾ' ಕ್ಕೆ ಗಾಡಿ ಹಿಡ್ತುತ್ತಿದ್ದ. 'ಷಿಯೋಲ್ದಾ' ದ
'ಫೊರ್‌ಕ್ಯುಲೊರ್' ರಸ್ತೆ ಡಾಟೆ ಎದುರು ಸಾಲಂಗಡಿಗಳ ಮುಂದೆ
ಕೊಂಚ ನಡೆದು 'ಕಿಷ್ಟೋ' ಬಾಬುವಿನ 'ಮಿಷ್ಟಿ' ಅಂಗಡಿಯ
ಪಕ್ಕದಲ್ಲಿ ಕಾಲ್ದಾರಿಯ ಮೇಲೆ ಕುಳಿತು, ಬಟ್ಟೆ ಮುಚ್ಚಿದ ತಟ್ಟೆಯನ್ನು
ಮುಂದಿಟ್ಟುಕೊಂಡು, ಓಡಾಡುವ ಜನರನ್ನೆಲ್ಲ 'ಬೊಡಾ ಬೋಬೂ,
ಬೊಡಾ ಷಾಏಬ್, ಬೊಡೀಮಾ, ಮೊಛಲೀ ಲೇಬೂನ್.....'
ಎಂದು ಕೇಳುತ್ತ ವ್ಯಾಪಾರ ನಾಡುತ್ತಿದ್ದ. ಒಂದೊಂದು ದಿನ ಇಲ್ಲಿ
ಕರ್ಚಾಗದಿದ್ದರೆ, ಹತ್ತಿರದ ಗಲ್ಲಿಗಳಲ್ಲಿ ಕೂಗಿ ಮನೆಮನೆಗೂ ಹೋಗಿ
ಮಾರುತ್ತಿದ್ದ. ರೈಲಿನ ಕರ್ಚು ಕಳೆದು ಉಳಿದ ಒಂದು ಒಂದೂಕಾಲು
'ಟೋಕಾ' ಸಂಸಾರಕ್ಕೆ ಬಹಳ ಸಹಾಯವಾಗಿತ್ತೆಂದು ಹೇಳಲೇಬೇಕಾ
ಗಿಲ್ಲ. ಇಂಥ ಜೀವನವಾದರೂ ಬೀರೂ, ಸಂಜೆಯಮೊತ್ತನಲ್ಲಿ ಗುಡಿಸ
ಲಿನ ಮುಂದೆ ಪಾಯಾಗಿ ಕುಳಿತು ಸ್ವಲ್ಪ ಅಫೀಮು ಬೆರೆಸಿದ 'ಗುಡು
ಗುಡಿ' ಯನ್ನು ಸೇದ್ತಾ ಇದ್ದವ್ದನ್ನು ನೋಡಿದರೆ, ಅವನೇ ರಾಜ ಅನ್ನ
ಬಹುದಾಗಿತ್ತು.

"ಬೀರೂ ಹೀಗೆ ಸಂಪಾದಿಸೋದೇ ನಿನಾ ಮನೆಪಾರ್ತೆಯನ್ನು
ಮನಸ್ಸಿಗೆ ಹಚ್ಚಿಕೊಂಡವನೇ ಅಲ್ಲ. ತಂದ ದುಡ್ಡನ್ನು ಹೆಂಡತಿಯ
ಕೈಗೆ ಹಾಕಿಬಿಡ್ತಿದ್ದ. ಬೇಕಾದಾಗ 'ಯಾಕ್ಟ, ದೂಪೊ ಪೊಯ್‌ಸೊ'
ಕೇಳ್ತಿದ್ದ. ಮೋನಿಯೇ ದಿನಗಟ್ಟಲೆ ಸಾಮಾನನ್ನು ತರ್ತಾ ಇದ್ದಳು.
ಬುದ್ಧಿವಂಶಿ, ಇದ್ದ ಸ್ವಲ್ಪ ದುಡ್ಡಿನಲ್ಲೂ ಇಷ್ಟಿಷ್ಟನ್ನು ಕುಡಿಕೆಯಲ್ಲಿ
ಕೂಡಿಡ್ತಾ ಇದ್ದಳು. ಬೇಕಲ್ಲ, 'ದುರ್ಗೋ ಪೂಜೋ'ದಲ್ಲಿ ಉಧಾಯ
ನೋಡಕ್ಕೆ ಹೆಪ್ಪೆಪ್ಪೇ.... ನಾವೆಲ್ಲ, ಬಡಪರಾಗಲೀ ಶ್ರೀಮಂತರಾಗಲೀ
ಮಾಡೋದು ಇಸ್ನೇನು ಅಂತೀರಿ—ಬೆಂಗೋಲಿಸ್! ಹೆಪ್ಪೆಪ್ಪೇ!"

"ದಾಪ, ಬೀರು ಏನಾದ ಕಡೆಗೆ?" ನಾನು ಮತ್ತೆ ಎಚ್ಚರಿಸ-
ಬೇಕಾಯಿತು.

"'ಹ್ಯಾಂ! ಹ್ಯಾಂ!....ಅದಕ್ಕೇ ಬರ್ತಾ ಇದೀನಿ 'ಮೊಷಾಯ್.'
ಅದು ನಜೆಪಮ್ದೊ ದುರ್ಗೋಪೂಜೋ' ಹಿಂದಿನ ದಿನವೇ...."

"ಆ ದಿನ ಬೀರೂ ಎಂದಿಗಿಂತ ಮುಂಚಾಗಿ ಐದಕ್ಕೇ ಎದ್ದು
ಗಾಳ - ಬುಟ್ಟಗಳನ್ನು ತಗೊಂಡು 'ಫ್ಲೊಟೋರ್'ಗಳಿಗೆ ಹೊರಟ.
ಅವನು ಗುಡಿಸಲಿಗೆ ಹಿಂದಿರುಗಿದಾಗ ಹತ್ತು ಗಂಟೆಯ ಸಮಯ.
ಮೋನಿ ದೊಡ್ಡ ಹಿತ್ತಾಳೆ ತಟ್ಟೆಯನ್ನು ಮಣ್ಣಿತಕ್ಕೆ ತೊಳೆಯುತ್ತಿ•

ಜಯಂತಿ

ದ್ದಳು. ಬೀರು ತುಂಬಿದ ಬುಟ್ಟಿಯನ್ನು ಅವಳ ಬಳಿ ಇಟ್ಟು ಅಲ್ಲೇ ಕುಕ್ಕರಗಾಲಿನಲ್ಲಿ ಕುಳಿತು, ಅಂದು ನಡೆದದ್ದನ್ನೆಲ್ಲ ವರದಿ ಮಾಡಿದ. ಆದರೆ ಸಾಮಾಂಪ ಇಷ್ಟು. ಆ ಬೆಳಿಗ್ಗೆ ಆದೇನು ಮರವೈಷ್ಟವೋ, 'ಷೂಜೋ, ಫೋಟೋ ವೈಕ್ಷಪೋರ್' ಬಂಡಾಗಲೂ 'ದೂಟೋ ಮೊಳಲೀ'ಗಿಂತ ಹೆಚ್ಚಾಗಿ ಗಾಳವನ್ನು ಕಚ್ಚೇ ಇರಲಿಲ್ಲ. ಸರಿ, ಮುದುಕ 'ಕಾಂಗ್‌ಜೋ' ಕಡೆಗೆ ಮನಸ್ಸನ್ನು ತಿರುಗಿಸಿದ. ಇಲ್ಲಿ ಅದೃಷ್ಟ ಜೆನ್ನಾಗಿತ್ತು. ಕಲ್ಲಿನ ಪೊಟರೆಗಳಲ್ಲಿ, ದಡದ ಬಿಲಗಳಲ್ಲಿ, ಆವನು ಕೈಹಾಕಿದ ಕಡೆಗಳಲ್ಲೆಲ್ಲ ಹೆಚ್ಚು ಕಡಿಮೆ ಸಣ್ಣದೋ ದೊಡ್ಡದೋ 'ಕಾಂಗ್‌ಜೋ ಸಿಕ್ಕೇ ಸಿಕ್ಕಿತು ನಿಜ, ಎರಡು ಕಡೆ ಕಚ್ಚಿಸಿಕೊಂಡ, ಆದರೇನು 'ಕಾಂಗ್‌ಜೋ'ನ ಬಿಡಲಿಲ್ಲ. ಬೀರೂ ಬುಟ್ಟಿಯನ್ನು ನೋಡುತ್ತ 'ಕಾಂಗ್‌ಜೋನೇ ಸುಮಾರು ಮೂರು ಪಾವು ಇರಬಹುದು ಅಂತ ಅಂದಾಜು ಮಾಡಿದ. ಒಂದು ಸೇರಾದರೂ ಮಾಡಬೇಕೆಂದು ಅವನ ಇಚ್ಛೆ. ಹಬ್ಬದ ದಿನದ ಹಿಂದಿನ ದಿನ, ಎಂದಿಗಿಂತ ಹೆಚ್ಚು ಬೆಲೆ ಸಿಕ್ಕಬಹುದು; ಎಲ್ಲಿಯೂ ಮಾರಾಟವಂತೂ ಇಗೇ ಆಗುವ ಭರವಸೆ. ಅಂದ ಮೇಲೆ ಇನ್ನೊಂದು ಪಾವನ್ನಾದರೂ ಭರ್ತಿಮಾಡೋದಕ್ಕೆ ಬೀರೂ ದೂರದ 'ಫೋಟೋ ಪ್ರೊಜೋರ್'ಗೆ ಹೋದ.

"ಇಲ್ಲಿಗೆ ಅವನು 'ಬಿಜೇಷ್'ವಾಗಿ ಹೋಗುತ್ತಿರಲಿಲ್ಲ. ಇನ್ನು ಯಾರಾದರೂ ಹೋಗುತ್ತಿದ್ದುದೂ ಅಷ್ಟಕ್ಕಷ್ಟೆ. ನೀರೆಲ್ಲ ಪಾಚಿಗಟ್ಟಿತ್ತು. ಅಲ್ಲಲ್ಲಿ ಜೊಂಡು ಬೆಳೆದಿತ್ತು. ಕಪ್ಪೆಗಳು ಒಟಗುಟ್ಟುತ್ತಿದ್ದವು; ಇವನು ಕಾಲಿಟ್ಟ ಕಡೆಯಲ್ಲೆಲ್ಲ ಒಂದೊಂದು ನೀರಿಗೆ ಹಾರಿಕೊಳ್ಳುತ್ತಿದ್ದವು. 'ಮೊಳಲೀ'ಯ ಸುಳಿವು ಕಾಣಲಿಲ್ಲ. ಆವರೆ ಬಿಲಗಳಲ್ಲಿ ಮೂತಿ ಹಾಕಿ ಕುಳಿತಿದ್ದ 'ಕಾಂಗ್‌ಜೋ'ಗಳು ಒಳಗೆ ಸರಿದು ಕೊಳ್ಳುತ್ತಿದ್ದವು. ಬೀರು ನಾಲ್ಕಾರನ್ನು ಎಳೆದು ಬುಟ್ಟಿಗೆ ಭರ್ತಿ ಮಾಡಿದ. ಸೇರು ಪೂರ್ತಿಯಾಯಿತೆನಿಸಿತು. ಇನ್ನೇನು ಹಿಂದಿರುಗ ಬೇಕೆನ್ನುವಲ್ಲಿ, ಆವನ ಕಾಲಿನ ಬಳಿಯ ಬಿಲದಿಂದ ದೊಡ್ಡ ಮೂತಿ ಒಳಗೆ ಸರಿದುಕೊಂಡದ್ದು ಅವನ ಮುದಿ ಕಣ್ಣಿಗೆ ಕಾಣಿಸಿತು. ಅವನ್ನು ಬಿಟ್ಟಾನೇ ಬೀರೂ ? ಬಿಲದ ಮುಂದೆ ಕುಳಿತು ಕೈಬೆರಳುಗಳನ್ನು 'ಕಾಂಗ್‌ಜೋ'ದಂತೆ ಮಾಡಿ, ಉಪಾಯವಾಗಿ ಒಳಕ್ಕೆ ಸ್ವಲ್ಪ ತೂರಿಸಿದ. ಏನೂ ಸಿಕ್ಕಲಿಲ್ಲ. 'ಒಳಗೆ ಆಳದಲ್ಲಿ ಅವಿತುಕೊಂಡರೆ ಬಿಜೋ ಆಸಾಮಿಯೇ ನಾನು ?' ಎಂದುಕೊಂಡು, ಮುದುಕ ಕೈಯನ್ನು ಇನ್ನೂ ಒಳಕ್ಕೆ ತಳ್ಳಿದ ಆವರೆ ತಟ್ಟನೆ ಕೈತಾನಾಗಿ ಹೊರಗೆಳೆದು ಕೊಂಡಿತು. ಅವನ ಷ ! ಅಂದು ಉಸಿರೆಳೆದು 'ಒರೆ ಷಾಲಾ !' ಎಂದು ಬೈದು 'ಎಷ್ಟು ಜೋರಾಗಿ ಕಚ್ಚಿತು, ಭಾರಿ 'ಕಾಂಗ್‌ಜೋ' ಆನ್ನುತ್ತ ಕೈನೋಡಿಕೊಂಡ. 'ಜೊರ್ಜನೀ' ಬೆರಳಿನ ಮೇಲೆ ಕಡಿತದ ಆಳವಾದ ಗುರುತು ಕಂಡಿತು, ರಕ್ತವೂ ಹೊರಕ್ಕೆ ಬರುತ್ತಿತ್ತು.

ಮುದುಕ ಇಷ್ಟಕ್ಕೆಲ್ಲ ಹೆದರೋನೇ ? ರಕ್ತವನ್ನು ಹೆರಕಲು ಪಂಜೆಯ ತುದಿಗೆ ಒರೆಸಿಕೊಂಡು ಸುಮ್ಮನಾವ, ಆಷ್ಟೆ. 'ಷಾಲಾ'ನ ಬಲ ಆಗೆದೇ ಹಿಡೀಜೇಕು, ಬಿಡಬಾರ್ದು ಅಂತ ಆತ್ತಿತ್ತ ನೋಡಿದ. ಬಗೆಯೋದಕ್ಕೆ ಏನೂ ಸಿಕ್ಕಲಿಲ್ಲ. 'ಹ್ಯಾಂ', ಇರಲಿ. 'ಬೊಂಕೇಂ'ಗೆ ಹಾರೆ ತಂದು ಬಗೆ ಆಂತ ಹೇಳಿ ಕಳುಹಿಸ್ತೀನಿ. ಇಲ್ಲಿ ಇನ್ನೂ ಆಷ್ಟು 'ಕಾಂಗಜೋ' ಸಿಕ್ಕುತ್ತವೆ. ಎಲ್ಲಾನೂ ತರಲಿ. 'ದೊಗ್ರೋ-ಪೂಜೋ' ಹಬ್ಬಕ್ಕಾಗುತ್ತೆ, ಮನೇಲಿ, ಅಂದುಕೊಂಡು ಆ ಬಿಲದಿಂದ ಆದು ತಪ್ಪಿಸಿಕೊಳ್ಳದಂತೆ ಬಿಲದ ಬಾಯಿಗೆ ಹುಲ್ಲು ತುರುಕಿ, ದೊಡ್ಡ ಕಲ್ಲೊಂದನ್ನು ತಂದು ಮುಚ್ಚಿ, ಗುರುತಿಗೆ ಅಂತ ಗಿಡದ ಕೊಂಬೆಯನ್ನು ಕಿತ್ತು ಆಲ್ಲೇ ನೆಟ್ಟು ಮನೆಗೆ ಹಿಂತಿರುಗಿದ.

"'ಬೋಂಕೇಂ' ಮನೇಲಿಲ್ಲನೆ 'ಸೊರೊತ್' ಬಾಬುವಿನ ಮನೆಗೆ ಸೌದೆ ಸೀಳೋದಕ್ಕೆ ಹೋಗಿದ್ದ. ಆವನನ್ನು ಕಳುಹಿಸೋ ಹಾಗೆ ಬೀರೂ ಮೋನಿಗೆ ಜೇಳಿದ. ಆವಳು ತಟ್ಟೆಯನ್ನು 'ಜೋಜಾರ್'ಗ ತಯಾರಿಸುತ್ತಿದ್ದಾಗ, ಬೀರು ಹರುಕಿಲ್ಲದ ಬೇರೆ ಗಿಡ್ಡು ಪಂಜೆ, ಜುಬ್ಬ ಗಳನ್ನು ಧರಿಸಿ ಸಿದ್ಧವಾದ. 'ಮೊಳಲೀ, ಕಾಂಗ್‌ಜೋ' ಗಳನ್ನು ತುಂಬಿ ಬಟ್ಟೆ ಕಟ್ಟಿದ ತಟ್ಟೆಯನ್ನು ಹಿಡಿದು ಹೊರಡುವಾಗ, 'ಜೋಜಾರ್' ನಿಂದ ಏನನ್ನಾದರೂ ತರಬೇಕೆ– ಎಂದು ಕೇಳಿದ. ಆದರೆ ಮೋನಿ ಹಿಂದಿನ ದಿನವೇ ವ್ಯಾಪಾರವನ್ನೆಲ್ಲ ಮುಗಿಸಿದ್ದಳು. 'ಒರ್ ಬಿಂಡೊ' ಬಾಬುವಿನ ಅಂಗಡಿಯಲ್ಲಿ ಗಂಡಸರೆಲ್ಲರಿಗೂ ಒಂಜೊಂದು ಪಂಜೆ, ಬಿಳಿಯ ಜುಬ್ಬ; 'ಜೋಬಿ'ಗೆ ಬಣ್ಣದ ಸೀರೆ, ಚೀಟ ಕುಪ್ಪುಸ; ತನಗೆ ಒಂದು ಬಿಳಿಯ ಸೀರೆ; 'ಜೋಬಿ'ಯ ಮಗು 'ಒನೀಲ'ಗೆ 'ಪೊರ್ಷ್‌ರೊಷ್ಟ್' ಅಂಗಿ, 'ಸೊಸೊರಂಜೋನ್' ಬಾಬುವಿನ ಜವಾಹಿರಿ ಅಂಗಡಿಯಿಂದ ಒಂದು ಬೆಳ್ಳಿ ಉಂಗುರ, ಇಷ್ಟೆಲ್ಲ. ಜಗ್ಗದ ತಿಂಡಿ ತೀರ್ಥಗಳನ್ನು ಅವಳೇ ಮಾಡೋಳಾಗಿದ್ದಳು. ಹೀಗಿದ್ದು ಬೀರೂ ತರೋದು ಏನೂ ಉಳಿದಿರಲಿಲ್ಲ.

"ಬೀರೂ ಹೋದ ಒಂದು ಗಂಟೆಯ ಮೇಲೆ 'ಬೋಂಕೇಂ' ಮನೆಗೆ ಬಂದ. ಮೋನಿ ಹಾರೆ-ಬುಟ್ಟಿಗಳನ್ನು ಕೊಟ್ಟು 'ಫೋಟೋ ಪ್ರೋಜೋರ್'ಗೆ ಕಳುಹಿಸಿದಳು. ಹೋಗುವಾಗ 'ಆ ಹಾಳಾದ್ದು ನಿನ್ನ 'ಜೋಬಾ'ನ ಚೋರಾಗಿ ಕಚ್ಚಿತಂತೆ. 'ಬಿಷೇಷ್ ಬೊಜೋ' ಅಂತೆ. ಕೈಹಾಕಬೇಡ, ಬಗೆದು ಹಿಡಿ ಅಂತ ಹೇಳಿಯೂ ಹೇಳಿದಳು.

"'ಬೋಂಕೇಂ' ಅಲ್ಲಿಗೆ ತಲುಪಿದ ಮೇಲೆ ಆತ್ತಿತ್ತ ನೋಡುತ್ತ ಸಿಕ್ಕಿದ 'ಕಾಂಗ್‌ಜೋ' ಗಳನ್ನು ಹಿಡಿದು ಬುಟ್ಟಿಗೆ ತುಂಬಿಕೊಳ್ಳುತ್ತ ನಡೆದ. ಬೀರೂ ನೆಟ್ಟಿದ್ದ ಗಿಡದ ಕೊಂಬೆ, ಇಟ್ಟಿದ್ದ ಕಲ್ಲು ಇವನ್ನು ಗುರುತಿಸುವುದು ಅವನಿಗೆ ಕಷ್ಟವಾಗಲಿಲ್ಲ. ಕಲ್ಲನ್ನು ಎತ್ತಿಟ್ಟು ಬಿಲದೊಳಗೆ ಬಗ್ಗಿ ನೋಡಿದ. ಕತ್ತಲೆಯ ಕಪ್ಪಲ್ಲಿಪೆ ಇನ್ನೇನೂ ಕಾಣಲಿಲ್ಲ. ಹಾರೆಯಿಂದ ಬಗೆಯೋದಕ್ಕೆ ಮೊದಲು ಮಾಡಿದ. ನಾಲ್ಕಾರು ಏಟುಗಳನ್ನು ಹಾಕಿರಬೇಕು, 'ಆರೇ ಜೋಬಾ!' ಅಂತ 'ಜೋಂಕೇಂ' ಜಂಗನೆ ಮೇಲೆ ನೆಗೆದು ನೂರಮಾವ. ಯಾಕೆ ಅಂತೀರಾ ? ಅವನಿಗೆ ಅಲ್ಲಿ ಕಂಡದ್ದು 'ಜೋಜೊ ಕಾಂಗ್‌ಜೋನೇ' ಅಷ್ಟು; 'ಬೂಷ್ !' ಅಂತ ಮೆಡಿಬಿಟ್ಟು ಮೇಲೆದ್ದ 'ಕಾಳೊ ಷರ್ಪೊ ! ಘಟೊ ಷರ್ಪೊ !"

"ಆ" ನನ್ನಿಂದ ತಾನಾಗಿಯೇ ಸ್ವರ ಹೊರಟಿತು.

"ಘಟೊ ಷರ್ಪೊ.....ಹ್ಯಾಂ !"

"ದ್ಯಾಖೋನ್ ನೊಷಾಯ್ !" ಸೇನ್‌ಗುಪ್ತರು ಮುಖರ್ಜಿಯವರೊಂದಿಗೆ ಧ್ವನಿಕೂಡಿಸಿದರು.

"ಹಾಗಾದರೆ ಆ ಬಡಪಾಯಿ ಮುದುಕ ಬೀರೂ—ಕಚ್ಚಿಸಿಕೊಂಡೋನು—ಅವನೇನಾದ ?" ಆತುರದಿಂದ ನನ್ನ ಮಾತು ಹರಕು ಮುರುಕಾಗಿ ಹೊರಟಿತು.

"ಹ್ಯಾಂ !.....ಅದೇ 'ಬಿಷೇಷ್ ಬಿಚಿತ್ರೊ', ಅದಕ್ಕೇ ಬರ್ತಾ ಇದೀನಿ.....ಹ್ಯಾಂ, 'ಬೋಂಕೇಂ' ಗೂ ತಮಗೆ ಅನ್ನಿಸಿದ ಹಾಗೇ ಅನ್ನಿಸಿತು. ತೆಟ್ಟನೆ ಹಾರೆ ಬುಟ್ಟಿಗಳನ್ನು ಎತ್ತಿಕೊಂಡು ಓಡುತ್ತ ಮನೆಗೆ ಬಂದು ಹೇಳಿದ. ಎಲ್ಲರೂ ಗಾಬರಿಯಾದರು. ಮೋನಿಯಂತೂ ಅತ್ತೇಬಿಟ್ಟಳು—ಗಂಡ ಬದುಕಿದಾನೋ ಇಲ್ಲಪ್ಪೋ ಅಂತ....."

'ಬೀರೂ ಕಲ್ಕತ್ತಾಕ್ಕೆ ಅಂದ್ರೆ ಸಿಯಾಲ್ದಾಕ್ಕೆ ಹೊರಡುವವರಿಗಾದರೂ ಹುಷಾರಾಗಿದ್ದನಲ್ಲ—ಅಷ್ಟು ಹೊತ್ತಾದರೂ.'

"ಅದೇ ಪೊರಮಾಷ್ಚರ್ಜೊ? (ಪರಮಾಶ್ಚರ್ಯ) ಅವನಿಗೆ 'ಘಟೊ ಷರ್ಪೊ? ಕಚ್ಚಿದೆ ಅಂತಲೇ ಗೊತ್ತಿರಲಿಲ್ಲ ನೋಡಿ !" ಸೇನ್‌ಗುಪ್ತರೂ ಇನ್ನೂ ಆಶ್ಚರ್ಯವನ್ನು ಹೊಂದಿಯೇ ಇದ್ದರು.

"ಹ್ಯಾಂ.....ಹ್ಯಾಂ.....ಮುಂದಿದೆ, ಇದಕ್ಕಿಂತ 'ಬಿಷೇಷ್ ಆಷ್ಚರ್ಜೊ ಬಿಸೊಯ್' "

"ಊಹೂಂ ?"

"ಮೋನಿ 'ಬೋಂಕೇಂ' ನನ್ನು ಕೂಡಲೇ 'ಷಿಯೋಲ್ದಾ'ಕ್ಕೆ ಅಟ್ಟಿದಳು—'ಬೊಬಾ'ನ ಬಳಿಗೆ.....

'ಬೋಂಕೇಂ' ಬೀರೂವಿನ ಪರಿಚಿತವಾದ ಮೂಲೆಯ ಸ್ಥಳಕ್ಕೆ ಬಂದು ನೋಡಿದಾಗ ಅವನು ಅಲ್ಲಿರಲಿಲ್ಲ. ಪಕ್ಕದಲ್ಲಿದ್ದ 'ಮಿಷ್ಟಿ' ಅಂಗಡಿಯ 'ಕಿಷ್ಟೊ' ಬಾಬುವನ್ನು ವಿಚಾರಿಸಿದ. ಸ್ವಲ್ಪ ಹೊತ್ತಿನ ಕೆಳಗೆ 'ಬ್ಯಾಪೋರ್' ಮುಗಿಸಿ, ಆಗ ತಾನೆ ಕೊಂಚ ಮಿಷ್ಟಿ ಕೊಂಡು ಕೊಂಡು ಹೋದನೆಂದು ತಿಳಿಯಿತು. ಪುಡುಗನ ಆತುರದ ಮಾತು, ಆತಂಕದ ಮುದ್ರೆಯನ್ನು ಗಮನಿಸಿದ. 'ಕಿಷ್ಟೊ' ಬಾಬು 'ಕೀ' ಖೊಬೋರ್ ? ಕೀ ಹೋಯ್‌ಗೇಲೋ ?' ಎಂದು ವಿಚಾರಿಸಿದರು. 'ಬೋಂಕೇಂ' 'ಕೂಚ್ ನೋಯ್ ಪುನ ಆಷ್ಟೊ' ಎಂದು ಹೇಳಿ ಬೇಗ ಬೇಗ ಮುಂದುವರಿದ. 'ಕಿಷ್ಟೊ' ಬಾಬು ಅವನ ಕಡೆಗೇ ನೋಡುತ್ತಿದ್ದರು.

ಅಲ್ಲಿಂದ ನಾಲ್ಕು ಅಂಗಡಿಯಾಚೆ 'ಒರೊಬಿಂದೊ' ಬಾಬುವಿನ ಬಟ್ಟೆ ಅಂಗಡಿಯ ಮುಂದೆ ಬೀರು ನಿಂತಿದ್ದುದು ಮಗಸಿಗೆ ಕಂಡಿತು. ಅವನ ಕೈಯಲ್ಲಿ ಬಣ್ಣಬಣ್ಣದ ಸಣ್ಣ ಕುಲಾವಿ ಇತ್ತು. ಹತ್ತಿರಕ್ಕೆ ಬಂದಿದ್ದ 'ಬೋಂಕೇಂ' 'ಬೊಬಾ ! ಬೊಬಾ !' ಅಂತ ಕೂಗಿದ. ಪರಿಚಿತವಾದ ಧ್ವನಿಯನ್ನು ಕೇಳಿ ಬೀರೂ ಮಗನ ಕಡೆಗೆ ತಿರುಗಿದ. 'ಅರೆ ! ನೀನು ಯಾಕೆ ಬಂದೆ, ಈಗ—ರೈಲು ಛಾರ್ಜ್ ದಂಡ ಮಾಡಿಕೊಂಡು ?' ಅಂತ ಬೀರೂ ಆಕ್ಷೇಪಿಸಿದ.

'ಏನಿಲ್ಲ.....ನೀನು ಹೇಗಿದೀಯೋ ನೋಡೋಣ ಅಂತ ಬಂದೆ. ಸದ್ಯ ದೇವರ ದಯದಿಂದ ಹುಷಾರಾಗಿದೀಯಲ್ಲ,' ಅಂದ 'ಬೋಂಕೇಂ.'

ಹ್ಞು ! ನಂಗೇನಾಗಿದೆ—ಹುಷಾರಾಗಿಲ್ಲದೆ ಇರೋದಕ್ಕೆ ?..... ಯಾರು ಏನು ಹೇಳಿದರು ?' ಬೀರೂ ನಸುನಗುತ್ತ ಕೇಳಿದ.

'ನಾವೆಲ್ಲ ಅಂದುಕೊಂಡಿವು....ಮನೇಲಿ,' ಬೋಂಕೇಂ ನಿದಾನವಾಗಿ ಅಂದ.

'ಯಾಕ್ಕೂ,' ಬೀರು ತನ್ನನ್ನೇ ಕೇಳಿಕೊಂಡಂತೆ ಹೇಳಿದ.

'ಯಾಕೆ ಅಂದ್ರೆ.....ಆ ಕಾಂಗಡೋ ಹಿಂಡಿ ಅಂತ ಹೇಳಿ ಬಂದಿದ್ದೆಯಲ್ಲ,' ಅಂತ ಬೋಂಕೇಂ ಶುರು ಮಾಡಿದ.

'ಹ್ಯಾಂ, ಹ್ಯಾಂ....ಬಗೆದೆಯಾ ? ಹಿಂಡಿದಿಯಾ ? ಎಷ್ಟು ಗಾತ್ರ ಇತ್ತು ? ಇನ್ನೂ.....' ಅಂತ ಬೀರೂ ಪ್ರಶ್ನೆಗಳನ್ನು ಕೇಳ್ತಾ ಇದ್ದ.

'ಬಗೆದೆ.....ಆದರೆ ಅದು ಕಾಂಗ್‌ಡೋ ಆಗಿರಲಿಲ್ಲ'..... ಅಂತ ಬೋಂಕೇಂ ಮುಂದುವರಿಸಿದ.

'ಹ್ಯಾಂ !' ಅಂತ ಮುದುಕ ಆಶ್ಚರ್ಯಪಟ್ಟ.

'ಅದು ಘಟೊ ಷರ್ಪೊ,' ಅಂದ ಬೋಂಕೇಂ.

'ಹ್ಯಾಂ !.....ಘಟೊಷರ್ಪೊ ! ನಿಷ್ಚೊಯ್ ?' ಅಂತ ಬೀರೂ ಕೇಳಿದ. ಅವನ ಕಣ್ಣುಗಳು ಅಗಲವಾದವು ದೃಷ್ಟಿ ಕೆಟ್ಟಿತು. ಬಾಯಿ ಅಗಲವಾಗಿ ತೆಗೆದುಕೊಂಡಿತು. ಮುಖದ ಮೇಲೆ ಮೃತ್ಯುವಿನ ಮುದ್ರೆ ಬಿದ್ದಿತು.

'ನಿಶ್ಚೊಯ್ ಬೊಬಾ,' ಅಂತ ಬೋಂಕೇಂ ಒತ್ತಿಹೇಳಿದ.

ಆದರೆ ಬೀರೂ ಕೇಳುತ್ತಿರಲಿಲ್ಲ

'ಘಟೊಷರ್ಪೊ !.....ನನ್ನನ್ನು ಕಡಿದದ್ದು ಘಟೊಷರ್ಪೊ,' ಅಂತ ಗಂಟಲಿನಲ್ಲೇ ಹೇಳಿಕೊಂಡ.

"ಬೀರೂವಿನ ಕೈಕಾಲುಗಳು ನಡುಗಿದವು. ಬಲಗೈಯಲ್ಲಿದ್ದ ಕುಲಾವಿ ಜಾರಿಕೊಂಡಿತು. ಎಡಗೈಯಿನ ತಟ್ಟೆ ಡಣಡಣನೆ ಕೆಳಗೆ ಬಿದ್ದಿತು. ಬೀರೂ ಅಲ್ಲೇ ಕುಸಿದು ಬಿದ್ದುಬಿಟ್ಟ. 'ಬೋಂಕೇಂ ಗಾಬರಿಯಾಗಿ 'ಬೊಬಾ ! ಬೊಬಾ !' ಅಂತ ಕೂಗಿಕೊಳ್ಳುತ್ತ ಅವನನ್ನು ಒಡಿದುಕೊಳ್ಳಲು ಮಾಡಿದ ಯತ್ನ ಫಲಿಸಲಿಲ್ಲ. ಸುತ್ತಲೂ 'ಬಾಜಾರ' ನ ಜನರು ನೆರೆದರು. 'ಒರೊಬಿಂದ' ಬಾಬು, 'ಕಿಷ್ಟೋ' ಬಾಬುಗಳೂ ಇತರರೂ ಓಡಿಬಂದರು. ಈವರೆಗಾಗಲೇ ಬೀರೂವಿನ ಅರೆತೆರೆದ ಬಾಯಲ್ಲಿ ನೊರೆ ಕಟ್ಟಿಕೊಂಡಿತ್ತು, ಕಣ್ಣಿನ ಗುಡ್ಡೆ ಮೇಲೆ ಸಿಕ್ಕಿಕೊಂಡಿತ್ತು, ಮೇಲುಸಿರು ಹಾಯುತ್ತಿತ್ತು.

"ಬಂದ ಜನರೆಲ್ಲ 'ಏನಾಯ್ತು ? ಏನಾಯ್ತು ?' ಎಂದು ನಿಚಾರಿಸೋರೇ, ಮೇಲೆಮೇಲೆ ನುಗ್ಗೋರೇ. 'ಹೋಯ್ ಹೋಯ್ ! ನಮ್ಮ 'ಬೊಬಾ' ನ ಕಾಪಾಡಿ ! ಏನಾದರೂ ಮಾಡಿ! ಅಂತ ಬೋಂಕೇಂ ಹೆಲ್ಲುಕಿರಿದು ನೊರೆಯಡುತ್ತಿದ್ದ.

ಜಯಂತಿ

" 'ಒರೊಬಿಂದೊ' ಬಾಬು ಮುಂದೆ ಬಂದು, 'ಗಾಳಿ ಬಿಡಿ! ಗಾಳಿ ಬಿಡಿ! ದೂರ ಹೋಗಿ!' ಅಂತ ಜನರನ್ನು ಅತ್ತಿತ್ತ ತಳ್ಳಿದರು. ಇನ್ನೂ ಯಾರು ಯಾರೋ ಹಾಗೇ ಅನ್ನುತ್ತ ಸಹಾಯ ಮಾಡಿದರು. ಬಾಬುಗಳು ಪಂಚೆಯ ಕುಚ್ಚಿನಿಂದ ಗಾಳಿಹಾಕಿದರು. ಮೈಕೈ ಮುಟ್ಟಿ ನೋಡಿ 'ತಣ್ಣಗಾಗ್ತಾ ಇದೆ. ಯಾರಾದರೂ ಡಾಕ್ಟರ್ ಸಾಹೇಬರ ಹತ್ತಿರ ಓಡಿಹೋಗಿ,' ಅಂದರು. 'ಡೋಕ್ಟರ್ !....ಡೋಕ್ಟರ್ !.... ಬಿಬೇಕಾನಂದೊ ಮೆಡಿಕೊಲ್ ಹಾಲ್....ಚಕ್ರೊಬೊರ್ತಿ ಬಾಬು....' ಎಂದು ಕೂಗುಗಳು ಕೇಳಿಸಿದವು. ಯಾರೋ ಇಬ್ಬರು ಮೂರು ಜನ ಓಡಿಹೋದರು.

'ಚಕ್ರಬೊರ್ತಿ' ಬಾಬು ಬಂದರು. ಬೀರೂನ ಮೈ ಕೈ ಮುಟ್ಟಿದರು, ಮೂಗಿನ ಮುಂದೆ ಮುಂಗೈಯಾಡಿಸಿದರು. ತಮ್ಮ ತಲೆಯನ್ನು ಅತ್ತಿತ್ತ ಆಡಿಸಿಬಿಟ್ಟರು. ಹಾಗೂ ಅವರ ಮೋಟಾರ್ ಕಾರನ್ನು ತರಿಸಿ ಬೀರೂನನ್ನು ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ಸಾಗಿಸಿದರು. ಅವರೂ, ಜೋಂಕೇಂ, ಒರೊಬಿಂದೊ ಬಾಬು ಜತೆಯಲ್ಲಿ ಹೋದರು. ಆದರೆ ಏನೂ ಪ್ರಯೋಜನವಾಗಲಿಲ್ಲ.

" ರಸ್ತೆಯ ಗುಂಪು ಗುಜುಗುಜು ಅನ್ನುತ್ತ ನಿದಾನವಾಗಿ ಚದರಿತು. ಬೀರೂನ ತಟ್ಟೆ, ಕೊಂಡ ಕುಲಾವಿ ಎರಡೂ ಅಲ್ಲೇ ಬಿದ್ದಿದ್ದವು. ತಟ್ಟೆಯೊಳಗಿನ ಉರು 'ರಸೊಗುಲ್ಲೊ', ಉರು 'ಸಂದೇಷ್' ಗಳನ್ನು ನೋಡಿ ನಿಟ್ಟುಸಿರುಬಿಡುತ್ತ ಕೆಕ್ಕೊ ಬಾಬು 'ಹೋಯ್! ಹೋಯ್! ಈ ಬಡವ ಎಂದೂ ನಿಷ್ಟೀನ ಕೊಂಡೋನೇ ಅಲ್ಲ. ಇವತ್ತು ಕೊಳ್ಳೋಕೆ ಬಂದಾಗ, ಇದೇನು ಇಷ್ಟು ಮನಸ್ಸು ಮಾಡಿದೆ ಅಂತ ಕೇಳಿದರೆ ಇಷ್ಟು ಪೊಯ್ಷಾ ಕರ್ಚುಮಾಡಿದರೆ ಮನೆಯೋಳು ಬಯ್ತಾಳೆ. ಆದರೇನು ಹೆಬ್ಬ, ಒಂದು ಸಾರಿ ಕೊಂಡುಬಿಡ್ತೀನಿ ಅಂದ,' ಅಂತ ಮರುಗಿದರು. ಕುಲಾವಿಯನ್ನು ಕೈಯಿಗೆ ತೆಗೆದುಕೊಂಡು 'ಅವನ ಮೊಮ್ಮಗೂಗೇನೋ. ಕೆಳುಹಿಸೋಣ' ಅಂದುಕೊಂಡರು." ಮುಖರ್ಜಿಯವರೂ ನಿಟ್ಟುಸಿರುಬಿಟ್ಟರು.

ನನಗೆ ಈಗ ನಾಲಗೆ ಬಂದಿತು. 'ಅವನು ಷಾಕ್ ನಿಂದ ಸತ್ತು ಹೋದ ಅಂತ ಕಾಣುತ್ತೆ,' ಅಂದೆ.

" ನೋಯ್ ಮೋಷಾಯ್. 'ಮೆಡಿಕಲ್ ಕೋಲೇಜ್' ಆಸ್ಪತ್ರೇಲಿ ಪರೀಕ್ಷೆ ಮಾಡಿದರಲ್ಲ; ಹೇಳಿದರಂತೆ, ಸಾವು 'ಪರ್ಫೊಬಿಸೊ' ದಿಂದಲೇ ಆಯ್ತು ಅಂತ. ಅಲ್ಲಿ ಬಹಳ ಬುದ್ಧಿವಂತರು ಇದಾರೆ. 'ಬಿಷೋಯ್' ಎಲ್ಲ ಕೇಳಿ 'ಆಷ್ಟರ್ಜೊ' ದಿಂದ ಸೂಕ್ಷ್ಮವಾಗಿಯೇ ಪರೀಕ್ಷೆ ಮಾಡಿದರಂತೆ." ಮುಖರ್ಜಿಯವರ ಮಾತಿನ ಮುಂದೆ 'ಅಪೀಲ್' ಇರಲಿಲ್ಲ.

'ಹಾಗಾದರೆ ವಿಚಿತ್ರನೆ,' ನಾನು ತಲೆದೂಗಿದೆ.

" ಬಿಚೀತ್ರೊ, ಬಿಚೀತ್ರೊ. "

" ಆವಕ್ಕೇ ನಂಬಿದರೆ ನಂಬಿ ಬಿಟ್ಟರೆ ಬಿಡಿ- ಅಂತ ಹೇಳಿದ್ದು," ಸೇನ್‌ಗುಪ್ತರು ಕೊನೆಮಾಡಿದರು.

ದಿ ಸದ್ವೈದ್ಯ ಶಾಲಾ (ಪ್ರೈವೇಟ್) ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ,
ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಸೀಪಕ್ವ ರಸಗಳೂ

ಆತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

॥ ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ ॥

ಶಾಖೆಗಳು:

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)

(ಕನ್ನಡ ನೀಡಿ ಬಿಟ್ಟು)

ಯುನೈಟೆಡ್ ಕಸ್ಟರ್ಸ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಗಣಪತಿಯ ಅವತಾರ

(ಸಂಶೋಧನಾತ್ಮಕ ವಿವೇಚನೆ)

ಪ್ರೊ ಉಡುಪಿ ವೆಂಕಟಕೃಷ್ಣರಾವ್ ಎಂ. ಎ. ಮದ್ರಾಸ್ ಕ್ರಿಶ್ಚಿಯನ್ ಕಾಲೇಜ್

ಪುರಾತನ ಕಾಲದಲ್ಲಿ ಭೀತಿದಾಯಕ ಭೂತಗಳೆಂದು ಹೆಸರಾದ ಶಕ್ತಿಗಳು, ಕಾಲ ಗತಿಸಿದಂತೆ ವರದಾಯಕ ದೇವತೆಗಳ ರೂಪದಲ್ಲಿ ಪರಿಣಾಮಗೊಂಡಿವೆ. ಇಂದು ನಾವು ಮಂಗಲಮೂರ್ತಿಯೆಂದು ಆರಾಧಿಸುತ್ತಿರುವ ಗಜಾನನ, ಭೂತ-ರಾಕ್ಷಸಗಳಲ್ಲಿ ಎಣಿಕೆಗೊಳ್ಳುತ್ತಿದ್ದ.

ಬಾಣಭಟ್ಟನಿಂದ ಪನಮಾನಪ್ರೋಕ್ತವೆಂದು ಕೊಂಡಾಡಲ್ಪಟ್ಟ **ವಾಯುಪುರಾಣವು** ಈಗ ಉಪಲಬ್ಧವಾಗಿರುವ ಪುರಾಣಗಳಲ್ಲಿ ಪ್ರಾಯಶಃ ಅತಿ ಪ್ರಾಚೀನವಾಗಿರಬಹುದೆಂದು ಎಲ್ಲರೂ ಒಪ್ಪಿದ್ದಾರೆ. ಇದರಲ್ಲಿ ಕಂಡುಬರುವ ಗಣೇಶ ಕ್ಷೇಮಕನು ಕಾಶೀಪಟ್ಟಣವನ್ನು ನಾಶ ಮಾಡಿದನೆಂದು ೧೮ನೆಯ ಅಧ್ಯಾಯದ ೨೪ರಿಂದ ೩೦ನೆಯ ಶ್ಲೋಕಗಳಲ್ಲಿ ಓದುತ್ತೇವೆ. ಆ ಕಥೆಯನ್ನು ಹೀಗೆ ಸಂಗ್ರಹಿಸಬಹುದು: ದಿವೋದಾಸನೆಂಬ ರಾಜನು ಈ ಪಟ್ಟಣದಲ್ಲಿ ಆಳುತ್ತಿದ್ದಾಗ, ಈಶ್ವರನು ಆಗ ತಾನೇ ಪಾರ್ವತಿಯನ್ನು ಮದುವೆಯಾಗಿ ಮಾನಸೊಡನೆ ವಾಸಿಸುತ್ತಿದ್ದನಂತೆ. ಅವನ ಅನಾಚಾರವನ್ನು ಕಂಡು ಸಿಟ್ಟಾದ ಅತ್ತೆ ಮೇನಾದೇವಿಯು, ಮಗಳ ಹತ್ತಿರ ತನ್ನ ಅಭಿಪ್ರಾಯವನ್ನು ಸೂಚಿಸಿದಳಂತೆ.

" ಮಮ ಪಾರ್ಶ್ವೀತ್ಪನಾಚಾರಃ ತವ ಭರ್ತಾ ಮಹೇಶ್ವರಃ|
ದರಿದ್ರಃ ಸರ್ವ ಏವೇಹ ಅಕ್ಷಿಷ್ಟಂ ಲಡತೇನಘೇ ॥ "

ಈ ತಿರಸ್ಕಾರಸೂಚಕವಾದ ಮಾತನ್ನು ಸಹಿಸಲಾರದೆ ಪಾರ್ವತಿಯು, ತನ್ನ ಗಂಡನೊಡನೆ ತಮ್ಮದೇ ಸ್ವಂತವಾದ ಮನೆಗೆ ಹೋಗೋಣವೆಂದು ಕೇಳಿಕೊಂಡಾಗ, ಸ್ವಂತಮನೆಯಿಲ್ಲದ ಈಶ್ವರನು ಸಿಟ್ಟಿಗೆದ್ದು, ತನ್ನ ಸೇವಕನಾದ ಗಣೇಶ ಕ್ಷೇಮಕನಿಗೆ ಕಾಶೀ ಪಟ್ಟಣವನ್ನು ನಿರ್ಮೂಲಗೊಳಿಸಬೇಕೆಂದಾಜ್ಞೆಯನ್ನಿತ್ತನು. ಆಗ ಈ ಗಣೇಶನು ತನ್ನ ಭಕ್ತನಾದ ಕ್ಷೌರಿಕನೊಬ್ಬನ ಸ್ವಪ್ನದಲ್ಲಿ ಅತನ ಮುಂದೆ ತೋರಿ, ತನ್ನ ಪ್ರತಿಮೆಯನ್ನೊಂದನ್ನು ಪಟ್ಟಣದ ಮುಖ್ಯದ್ವಾರದಲ್ಲಿ ಸ್ಥಾಪಿಸಲು ಪ್ರೇರಿಸಿದನಂತೆ. ಪಟ್ಟಣವೇನೋ ನಾಶಿತವಾಯಿತು; ಆದರೆ ಆ ಭಕ್ತನು ಈ ಗಣೇಶನ ಪ್ರತಿಮೆಯನ್ನು ದ್ವಾರವಲ್ಲಡಿಸಿದಲ್ಲಿ, ಮಕ್ಕಳನ್ನು ಬಯಸುವ ಮುತ್ತೈದೆಯರು ಅತನನ್ನು ಪ್ರಾರ್ಥಿಸಿ ಮಕ್ಕಳನ್ನು ಪಡೆಯಲಾರಂಭಿಸಿದರು. ಅದರೆ ರಾಜನಾದ ದಿವೋದಾಸನ ರಾಣಿಯು ಅಲ್ಲಿ ಸೇವಿಸಿದರೂ ಮಕ್ಕಳಾಗದಿರಲು, ರಾಜನು ಸಿಟ್ಟಿಗೆದ್ದು, ಆ ಭೂತವನ್ನು ನಪುಂಸಕಲಿಂಗದಲ್ಲಿ ನಿರ್ದೇಶಿಸಿ, ಆ ವಿಕಂಭನ (ಗಣೇಶ) ಸ್ಥಾನವನ್ನೇ ನಾಶಮಾಡಿಸಿ, ಗೋಮತೀ ನದಿಯ ತೀರದಲ್ಲಿ ಹೊಸ ಪಟ್ಟಣವನ್ನೇ ಸ್ಥಾಪಿಸಿದನು. ಹಾಳಾದ ಪಟ್ಟಣದಲ್ಲಿ ಶಿವನು ತನ್ನ ಹೆಂಡತಿಯೊಡನೆ ವಾಸಿಸಲಾರಂಭಿಸಿದನು. ಈ ರಾಜನ ಪರಿಣಾಮವು ನಷ್ಟವಾದನಂತರ, ದಿವೋದಾಸನ ವಂಶದಲ್ಲಿಯೇ ಹುಟ್ಟಿದ ಅಲರ್ಕನೆಂಬ ರಾಜನು, ಕ್ಷೇಮಕ ರಾಕ್ಷಸನನ್ನು ಹೊಡೆದೋಡಿಸಿ, ಆ ಪಟ್ಟಣವನ್ನು ವಶಪಡಿಕೊಂಡನಂತೆ.

ಈ ಸಂದರ್ಭದಲ್ಲಿ ಗಣೇಶನನ್ನು 'ರಾಕ್ಷಸ'ನೆಂದು ನಪುಂಸಕಲಿಂಗದಲ್ಲಿ ನಿರ್ದೇಶಿಸಿದ್ದು, ಅತನ ವಿಗ್ರಹವನ್ನು ಒಬ್ಬ ಕ್ಷೌರಿಕನು ಸ್ಥಾಪಿಸಿದ್ದೂ ಗಮನಾರ್ಹವಾಗಿದೆ. ಅತನು ಯಾವುದೋ ನೀಚ ಜಾತಿಯವರ ಆರಾಧ್ಯದೇವತೆಯೆಂಬುದು ಸ್ಪಷ್ಟವಾಗುತ್ತದೆ. ಈತ ನಾಗ ಅರಣ್ಯದೇವತೆಯಾಗಿ ಸಣ್ಣ ಪಣ್ಣ ಮಕ್ಕಳನ್ನು ಅಪಹರಿಸುವ ಸ್ವಭಾವವುಳ್ಳ ನೈಋತರಾಕ್ಷಸರುಗಳಲ್ಲಿ ಒಬ್ಬನೆಂದು ಪರಿಗಣಿತನಾಗಿದ್ದನು. ನೈಋತಾ ನಾಮಯತಃ ಸ್ಮೃತಾಸ್ತ್ರಯಾಂಃ, ತೇ ರಾಕ್ಷಸಾಃ ಸರ್ವೇ ನಾಲಾನಾಂ ತು ವಿಶೇಷತಃ (೪೪ ಅಧ್ಯಾಯ ೧೩ನೆಯ ಶ್ಲೋಕ). ಈ ಗ್ರಹಗಳನ್ನು ಪೈಶಾಚಿಕರೆಂದೂ ಭೂನಿರಾಕ್ಷಸರೆಂದೂ ಆಗ ಕರೆಯುತ್ತಿದ್ದರಂತೆ. ಸ್ಕಂದನೂ ಈ ಗ್ರಹಗಳಲ್ಲಿ ಸೇರಿದ್ದನಂತೆ. ಭದ್ರಕ, ಸಿಕತ, ಪೂತನಾ ಇತ್ಯಾದಿ ಎಂಟು ತೆರದಲ್ಲಿ ಈ ಗ್ರಹಗಳಿದ್ದುವಂತೆ. (ಪ್ರಾಯಶಃ ಭಾಗವತದಲ್ಲಿ ಬರುವ ಪೂತನೆಯೂ ಈ ಗುಂಪಿಗೆ ಸೇರಿದವಳೇ ಆಗಿರಬೇಕು.) ಅವರನ್ನು 'ಕೌಮಾರ ಗ್ರಹ'ಗಳೆಂದೂ ಕರೆಯುವುದಿತ್ತಂತೆ :

ಕೌಮಾರಾಃ ತೇ ತು ವಿಜ್ಞೇಯಾಃ ಬಾಲಾನಾಂ ಗ್ರಹಪೃತ್ತಯಃ
ಸ್ಕಂದಗ್ರಹನಿಶೇಷಾಣಾಂ ಯೇ ಚ ಲೋಕವಿನಾಯಕಾಃ ॥

ಸಾಂಸ್ಕಾರ ಗೃಹ್ಯಸೂತ್ರದಲ್ಲಿಯೂ ಸಾಯಂಯ ರೂಪದಲ್ಲಿದ್ದ ಕುಮಾರನ ನಿರ್ದೇಶವು ಬಂದಿದ್ದು, ಅತನನ್ನು ಕಪಟ್ಟೆ ಅಧಿಷ್ಠಾತೃವಾದ ರಾಕ್ಷಸನನ್ನಾಗಿ ಮಾಡಿದ್ದರು. ಅಲ್ಲಿಯೇ ಪೂತನಾ ಶಕುನನನ್ನೂ ರೋಗವನ್ನುಂಟುಮಾಡುವ ರಾಕ್ಷಸನೆಂಬ ವರ್ಗಣೆ ಬಂದಿದೆ. ಮಹಾಭಾರತದಲ್ಲಿಯೂ ಈ ಗ್ರಹಗಳನ್ನು ರೋಗಗಳಿಗೆ ಅಧಿದೇವತೆಗಳೆಂದು ಗಣಿಸಿದ್ದಾರೆ. ಪತಂಜಲಿಯು ಕಾಲದಲ್ಲಿ ಶಿವ, ಸ್ಕಂದ, ವಿಶಾಖರುಗಳ

ಪೂಜೆಯು ಪರ್ಣನೆಯಿದ್ದರೂ, ಜಗ ಇವು ಉಪಕಾರಕ ಗ್ರಹಗಳೆಂದೇ ಪರಿಗಣಿತಗಳಾಗಿದ್ದುವೆಂದು ತೋರುತ್ತವೆ. ಭಾರತವಲ್ಲಿ ಸುಬ್ರಹ್ಮಣ್ಯ ನೆಂಬ ಹೆಸರೇ ಕಾಣಿರುವುದೂ ವಿಚಿತ್ರವಾಗಿದೆ. ಆದರೆ ಕ್ರಮೇಣ ಗುಪ್ತರ ಕಾಲದಲ್ಲಿ ಈ ಉಪಕಾರಕ ಗ್ರಹಗಳಿಗೆ ಹೇಗೋ ಉಪಕಾರಕತ್ವ-ವನ್ನು ಕಲ್ಪಿಸಿ, ಸ್ಕಂದ, ಗಣೇಶರಿಗೆ ಶಿವನ ಪುತ್ರಸ್ಥಾನವನ್ನೂ ಕಲ್ಪಿಸಿ ಕೊಟ್ಟಿರಬೇಕು. ಗುಪ್ತರ ಶಾಸನಗಳಲ್ಲಿ ಬ್ರಹ್ಮಣ್ಯ ದೇವನ ನಿರ್ದೇಶವೂ ಬಂದಿದೆ. ಕುಮಾರಗುಪ್ತ, ಸ್ಕಂದಗುಪ್ತ ಇತ್ಯಾದಿ ಹೆಸರು ಗಳನ್ನು ನಾವು ಅವರಲ್ಲಿ ಕಾಣುತ್ತೇವೆ.ಪ್ರಾಯಶಃತೈತ್ತಿರೀಯಬ್ರಾಹ್ಮಣ ದಲ್ಲಿ ಮೊದಲು ನಿರ್ದೇಶಿಸಲ್ಪಟ್ಟ ಈಶ್ವರನ ಗಣಗಳಲ್ಲಿ ಕಾರ್ತಿಕೇಯ, ನಂದಿಗಳೊಡನೆ ಹೆಸರಿಸಲ್ಪಟ್ಟ ದಂತಿಯೇ ಆರ್ವಾಚೀನ ಗಣಪತಿ-ಯಾಗಿರಬಹುದು. ವಿನಾಯಕರೂ (ಒಬ್ಬನಲ್ಲ) ಆಗ ರುದ್ರನೊಡನೆ ವರ್ಣಿಸಲ್ಪಡುತ್ತಾರೆ. ಮಾನವಗೃಹ್ಯಸೂತ್ರದಲ್ಲಿ, ವಿಘ್ನಕಾರಿಗಳಾದ ನಾಲ್ಕು ಜನ ವಿನಾಯಕರಿದ್ದಾರೆಂದೂ ಹೇಳಿ, ಇದೇ ರೀತಿಯಲ್ಲಿ ಯಾಜ್ಞವಲ್ಕ್ಯ ಸ್ಮೃತಿಯಲ್ಲಿಯೂ ಮೊದಲು ಈ ನಾಲ್ಕು ಗ್ರಹಗಳನ್ನು ನಿರ್ದೇಶಿಸಿ, ಕಡೆಗೆ ಇವರೆಲ್ಲರೂ ಸೇರಿ ' ಗಣಪತಿ ವಿನಾಯಕ ' ಎಂಬ ಒಂದೇ ದೇವತೆಯಾದನೆಂದೂ ವರ್ಣಿಸಿದೆ. ಭಾರತವಲ್ಲಿ ಒಂದೆಡೆ ಈ ಗಣೇಶ್ವರನೇ ವಿಷ್ಣುವೆಂದೂ ಹೇಳಿದೆ.ಪಾಯುಪುರಾಣದಲ್ಲಿಯಾದರೋ ಭೂತವಿನಾಯಕಾದಿಗಳಿಂದ ಸೇನಿತನಾದನನು ಶಿವನೆಂದು ಹೇಳುವರೇ ಹೊರತು ಗಣಪತಿ, ಗಣೇಶ, ಅಥವಾ ಗಣಪತಿವಿನಾಯಕರ ಸುದ್ದಿಯೇ ಇಲ್ಲವಾಗಿದೆ. ಇಲ್ಲಿ ಬಂದ ಗಣೇಶನಿಗೇ **ನಿತಂಭ, ಪ್ರೇಮಕ**ರೆಂಬ ಪರ್ಯಾಯನಾಮಗಳಿದ್ದದ್ದನ್ನೂ ನಾವು ಗಮನಿಸತಕ್ಕದ್ದು ಇವರಿಂದ " ನಿಷುಸೀದ **ಗಣಪತೇ**..... ಗಣಾನಾಂ ತ್ವಾ **ಗಣಪತಿಂ** ಹವಾ-ಮಹೇ " ಇತ್ಯಾದಿ ವೈದಿಕ ಮಂತ್ರಗಳಲ್ಲಿ ಗಣಪತಿಯ ನಿರ್ದೇಶ ಬಂದಿ-ದ್ದರೂ, ಅದು ಈಗಿನ ' ಗಣಪತಿ ' ಗಲ್ಲವೆಂಬ ಸಂಶಯವೇ ಬಲವತ್ತರ-ವಾಗುವುದು.

ಈಶ್ವರನ ತ್ರಿಪುರವಿಜಯವನ್ನು ಹಾಡುಗಳಲ್ಲಿ ವರ್ಣಿಸಿ ದೇವತೆ ಗಳು ಕೊಂಡಾಡುವಾಗ, ಗಣೇಶನು ಮೃದಂಗವನ್ನು ಬಾರಿಸಿ ಎಲ್ಲರ ಚಿತ್ತವನ್ನೂ ಆಕರ್ಷಿಸಿದ್ದರಿಂದ, ಆತನಿಗೆ ಈ ಉತ್ತಮವಾದ ದೇವ-ತ್ವವೂ ವಿಘ್ನರಾಜತ್ವವೂ ಪ್ರಾಪ್ತವಾಗಿರಬಹುದೋ ಎಂಬ ಊಹೆಯು ಹೊರಬೀಳುತ್ತದೆ. ಪ್ರಾಯಶಃ ಕೆಲವು ಕಾಲಸ್ಕಂದ, ಗಣಪತಿಗಳ-ಬ್ಬರಿಗೂ ಈ ವಿಷಯದಲ್ಲಿ ಸ್ಪರ್ಧೆ ಹುಟ್ಟಿರಬಹುದು. ಮುಂಚೆ ಕೆಲ ಕಾಲ ಸ್ಕಂದನೇ ಪ್ರಮಥ ಗಣಾಗಳ ಅಧಿಪತಿಯಾಗಿ ಪೌರಾಣಿಕ ಕವಿ ಗಳಿಂದ ವರ್ಣಿತನಾಗಿರಬೇಕು. ಆದ್ದರಿಂದಲೇ ಕೆರಾಕಾರ್ಜುನೀಯ-ದಲ್ಲಿ ತೋರುವ ಗಣೇಶ್ವರನು ಸ್ಕಂದನೊಬ್ಬನೇ. ಹಣ್ಣನ್ನೊಂದು ಕೈಯಲ್ಲಿ ಹಿಡಿಕೊಂಡು ತಂದೆಯಾದ ಶಿವನು ಮುಕ್ಕಣ್ಣಿಗೆ ಭೂಪ್ರದಕ್ಷಿಣೆ ಮಾಡಿ ಯಾರು ತನ್ನನ್ನು ಮೊದಲು ಮುಟ್ಟುತ್ತಾರೋ ಅವರಿಗೇ ಹಣ್ಣನ್ನು ಕೊಡುವುದಾಗಿ ಹೇಳಿದನಂತೆ; ಸುಬ್ರಹ್ಮಣ್ಯನಾದರೋ ಸಟಾಟೋಪದಿಂದ ನವಿಲನ್ನೇರಿ ಭೂಪ್ರದಕ್ಷಿಣೆಮುಗಿಸಿ ನಿರತನಾದನಂತೆ; ಆಗಲೇ ಬುದ್ಧಿವಂತನಾದ ಗಣಪತಿಯು ಲಂಬೋದರನಾದ್ದರಿಂದ ತಾನು ಗೆಲ್ಲಲಾರೆನೆಂದೇ ತೀರ್ಮಾನಿಸಿ, ಉಪಾಯದಿಂದ ತಂದೆಯು ದೇಹದೊಳಗೇ ಭೂಮಂಡಲವಿದ್ದದ್ದರಿಂದ, ತಂದೆಗೇ ಪ್ರದಕ್ಷಿಣೆ ಮಾಡಿ, ಹಣ್ಣನ್ನು ತಿಂದನೆಂದೂ ಹಣ್ಣು ತಿಂದು ಸುಮ್ಮಾರು ಹೊತ್ತಾದ ನಂತರವೇ ಸ್ಕಂದನು ಹಿಂತಿರುಗಿದನೆಂದೂ ಇದ್ದ ಕಥೆಯ ತಿರುಳನ್ನು ಗಮನಿಸಿದರೆ, ಈ ಸ್ಕಂದ-ಗಣಪತಿಯರ ಪ್ರೋಟಿಯ ಕಥೆಯನ್ನೇ ಹೇಳುವಂತಿದೆ. ಜಂತೂ ಗಣಪತಿಯ ಕೈಯೇ ಮೇಲಾಯಿತೆಂದು ಹೇಳಬಹುದೆಂದು ತೋರುತ್ತದೆ. ಅದರಲ್ಲಿಯೂ ಕೆಲವರು ಸಾಮರಸ್ಯವನ್ನು ಪ್ರತಿಪಾದಿ-ಸಲೋ ಎಂಬಂತೆ, ಇವರಿಬ್ಬರು ತಾಯಿಯ ಸ್ತನ್ಯವನ್ನು ಏಕಕಾಲ-ದಲ್ಲಿಯೇ ಕುಡಿದರೆಂದು ಸಮಂ ದೇವಿ ಸ್ಕಂದ ದ್ವಿಪವದನಪೀಠಂ ಸ್ತನಯುಗಂ— ಎಂದು ಭಗವತ್ಪಾದರು ಸೌಂದರ್ಯಲಹರಿಯಲ್ಲಿ ಹಾಡಿದ್ದಾರೆ ಹಾಗೆ ಇವರಿಬ್ಬರು ಅವಳಿಜವಳಿ ಮಕ್ಕಳೋ ಎಂಬ ಸಂಶಯವು ಬರುವುದು. ಗಣಪತಿಯನ್ನು ಜ್ಞಾನಾಧಿದೇವತೆಯನ್ನಾಗಿ ಮಾಡಿ, ಮಹಾಭಾರತವೆಂಬ ಜ್ಞಾನನಿಧಿಯನ್ನೇ ಆತನಿಂದ ಬರೆಸಿದ ಕಥೆಯನ್ನೂ ಗಮನಿಸತಕ್ಕದ್ದಾಗಿದೆ. ಅವನನ್ನೂ ಓಂಕಾರಸ್ವರೂಪ-ನೆಂದು ಚಿತ್ರಿಸಿ, ಆನೆಯ ಕುಂಡಿಲಿನಂತಿರುವ ರೂಪವನ್ನೂ ಅವನಿಗೆ ಕಲ್ಪಿಸಿದವರು ಅಸ್ಪಷ್ಟವೇ ಆದ ಚರಿತನೆಂದು ವರ್ಣಿಸುವರೆಯೇ ಎಂಬಂತೆ ಅಂಥಾ ಬೃಹತ್ತಾದ ಹೊಟ್ಟೆಯಿದ್ದವನಿಗೆ ಅತಿ ಚಿಕ್ಕದಾದ ಇಲಿಯನ್ನು ವಾಹನವಾಗಿ ಚಿತ್ರಿಸಿದರು. ಅರ್ಥಾತ್ ಯಾವತರದ ವಿಘ್ನಗಳೇ ಬರಲಿ, ಅತಿ ದೊಡ್ಡವಾದ ಭಾರತವನ್ನು ಬರೆಯುವರೆ ಸಮರ್ಥನಾದ ಲೇಖನಿ-ಯನ್ನು ತನ್ನ ದಂತವೆಂದೇ ಯೋಚಿಸಿ, ಆ ವಿಘ್ನವನ್ನೂ ಕೊಡಲೇ ನೀಗಿಸಿಕೊಂಡನು. ಅಸಮರ್ಥವಾದ ವಾಹನಕ್ಕೂ ಶಕ್ತಿಯನ್ನು ಕಲ್ಪಿಸಿ ಕೊಟ್ಟು ತನ್ನ ಮಹಿಮೆಯನ್ನು ಬೆಳಗಿಸಿದನು. ಈತನನ್ನು ಅರ್ಚಿಸಿದಲ್ಲಿ ನಮಗೆ ಸಿದ್ಧಿಬುದ್ಧಿಗಳು ತಾನಾಗಿಯೇ ಲಭಿಸುವುವೆಂಬದನ್ನು, ವ್ಯಂಗ್ಯ ಮರ್ಯಾದೆಯಿಂದ ಈತನಿಗೆ ಸಿದ್ಧಿ ಬುದ್ಧಿಗಳೆಂಬ ಎರಡು ಹೆಂಡಿರೆಂಬ ನೂಗನಾದ ಕಥೆಯನ್ನೂ ಜೋಡಿಸಿದರು. ನಾಲ್ಕು ಯುಗಗಳಲ್ಲಿ ಬೇರೆ ಬೇರೆ ವಾಹನಗಳೂ, ಎರಡೆರಡು ಕೈಗಳೂ ಕಡಿಮೆಯಾಗುವುದನ್ನೂ ಗಮನಿಸಿದರೆ,ಅರ್ಚಕರಲ್ಲಿ ಹೇಗೆ ಭಕ್ತಿಯನ್ನುಂಟುಮಾಡಿದನೆಂಬುದನ್ನು ನಾವು ಮನಗಾಣುತ್ತೇವೆ.

ಧ್ಯಾಯೇತ್ಸಿಂಹಗತಂ ವಿನಾಯುಕಮಮುಂ ದಿಗ್ಬಾಹುಮಾದ್ಯೇ-
ಯುಗೇ
ತ್ರೇತಾಯಾಂತು ಮಯೂರವಾಹನಮಮುಂ ಷಡ್ಬಾಹುಕಂ
ಸಿದ್ಧಿದಂ,
ದ್ವಾಪಾರೇ ತು ಗಜಾನನಂ ಯುಗಭುಜಂ ರಕ್ತಾಂಗರಾಗಂ ವಿಭುಂ
ತುರ್ಯೇ ತು ದ್ವಿಭುಜಂ ಸಿತಾಂಗರುಚಿರಂ ಸರ್ವಾರ್ಥದಂ ಸರ್ವದಾ.

ಇಲ್ಲಿ ಮೊದಲು ಸಿಂಹವಾಹನ, ವಿನಾಯಕ, ಎಂಟು ಕೈಗಳಿಂದ ಕೂಡಿದವ, ಕ್ರಮೇಣ ನವಿಲುವಾಹನ, ಆರುಕೈ. ಆಗಲೇ ಸಿದ್ಧಿದನಾವ-ನೆಂದೂ, ದ್ವಾಪರಯುಗದಲ್ಲಿ ನಾಲ್ಕು ಭುಜಗಳುಳ್ಳವನಾಗಿ ಕೆಂಪು ವರ್ಣವುಳ್ಳವನಾದನಂತೆ, ಕಡೆಗೆ ತಾನೇ ಎರಡು ಕೈಗಳೂ, ಬಿಳೀ ವರ್ಣ ವುಳ್ಳವನಾಗಿ ಸರ್ವ ಅಭಿಷ್ಟಗಳನ್ನು ಕರುಣಿಸುವವನಾದನೆಂದು ಚಮ-ತ್ಕಾರವಾಗಿ ಈತನನ್ನು ವರ್ಣಿಸಿದ್ದಾರೆ.

ಜ್ಯೋತಿರಾಜ

ಗಂಗಾತನಯ ತಾಕುರ್ಲಿ.

ಅದೋ ನೋಡಲ್ಲಿ
ತುಂಬು ಹಣತೆಯಲಿ
ಅಡ್ಡ ಸಾಲು ಬತ್ತಿ—
ಮುತ್ತೈ ಸುತ್ತಿಹುದು,
ಸುತ್ತು ಬೆಳಗುವುದು,
ಇತ್ತ ಕತ್ತನೆತ್ತಿ.

ಸುತ್ತಿ ಸುಳಿಗಾಳಿ
ಮುತ್ತಿ ಬಿಸಿಗಾಳಿ
ಎತ್ತ ಸೂಸುತಿಹುದು ?
ಸುತ್ತುಮುತ್ತಲಿನ
ಉಸಿರನೆತ್ತಿ ತಾ
ಮುಂದೆ ಸಾಗುತಿಹುದು.

ಜ್ಯೋತಿ ಕುಣಿಯುವುದು,
ಕತ್ತು ಮಣಿಯುವುದು,
ಮತ್ತೆ ಗಾಳಿಗಾಗಿ,—
ಹೊಗೆಯ ಕಾರುವುದು
ಅಂಕುಡೊಂಕಾಗಿ
ಸುರುಳಿಸುರುಳಿಯಾಗಿ

ಸಂದ ಸುಳಿಗಾಳಿ
ಮುಂದುಮುಂದಾಗಿ
ಹೊತ್ತಿ ಸಾಗುತಿಹುದು.
ಕುಣಿತ ಮೂಂದಾಗಿ
ಮಣಿತ ಮುಗಿಸಿ ತಾ
ಮತ್ತೆ ಬೆಳಗುತಿಹುದು.

ಸಾಲು ಹಣತೆಯಲಿ
ಸಾಲು ಜ್ಯೋತಿಗಳು
ಬೆಳಕ ನೀಡುತಿಹವು;
ಸಂದ ಕಾರಿರುಳು
ಬೆಂದು ಬೆದರಿ ತಾ
ಜಿದರಿ ಓಡುತಿಹುದು.

"ಜ್ಯೋತಿರಾಜ"
ದಯಿಡೋರಿ ನನ್ನ ಬಳಿ
'ತ್ರಾಣವೀವೆಯೇನ್ಯೆ"
" ಎನ್ನ ತ್ರಾಣ
ನಿನಗಿರದ ಬಾಣ ನೀ
ಬೇಡ ದೂರ ಸಾಗು."

"ಕರುಣಸಾಗರನೆ !
ಮರಣವೆನಗಿತ್ತೆ !
ಮರುಕ ತೋರದಾದೆ ? "
"ಮರಣ ನಿನಗಾಯ್ತೆ ?
ಮರುಕ ದೂರಾಯ್ತೆ
ಎನಿತು ಜೇಳದಾದೆ ?"

"ಮರುಗಿ ಬಳಲುವೆನು
ಕರಗಿ ಸಾಯುವೆನು.
ತ್ರಾಣ ನೀಡದಾದೆ ?"
"ಮರುಕ ಎನಗುಂಟು,
ಮರಳಿ ಕರೆಯುವೆನು,
ಬುಡದಿ ನಿಲ್ಲು ಎಂದೆ !"

"ಇತ್ತ ತ್ರಾಣವನು
ಮತ್ತೆ ಮರೆಯದಿರು.
ಧನ್ಯ ಜ್ಯೋತಿರಾಜ !"
"ಧನ್ಯ ! ನಾನೆಂದು,
ಮಾನ್ಯ ನಾನೆಂದು.
ರಾಣಿಸಂಗದಿಂದ"

ಜ್ಯೋತಿ ಬೆಳಗುವುದು.
ತನಿರ ಆಡಗುವುದು,
ಉದರ ಬುಡದಿ ನಿಂದು—
ರಾಜರಾಣಿಯರ
ನಿಲಸವಾಯ್ತೆಂದು
ಸುಖದಿ ಮಿಂದು ಮಿಂದು

ಎದೆಯ ಹಣತೆಯಲಿ
ಎಣ್ಣೆ ನೀನಾಗಿ
ಸುರಿಯ ಬಾರೆ ರಾಣಿ !
ತುಂಬು ಹಣತೆಯಲಿ
ಜ್ಯೋತಿ ಬೆಳಗುವುದು
ತುಂಬು ನಿಂದು ಮಿಂದು.

ಜಯಂ

ಪ್ರತೀಕ್ಷೆ

[ಸಣ್ಣಕಥೆ*]

ಶ್ರೀ ರಾಘವೇಂದ್ರ ಖಾಸನೀಸ್, ಎಂ. ಎ., ಡಿಪ್. ಲಿಬ್. ಪುಣೆ.

ಕಥೆಯಲ್ಲಿಯ ಅಕ್ಕ ಭಗ್ನಪ್ರಣಯಿನಿ; ತಂಗಿ ಪುರುಷವ್ಯಕ್ತಿಯ ಸಾಹಚರ್ಯದ ಅಭಿಲಾಷಿಣಿ. ಅವರ ಬದುಕಿನ ರೀತಿ, ಇಬ್ಬರ ಆಕಾಂಕ್ಷೆಗಳನ್ನೂ ಮಂಜಿನಿಂದ ಮುಚ್ಚಿಬಿಟ್ಟಿದೆ. ಜೀವನಯಾತ್ರೆಯಲ್ಲಿ ಇಬ್ಬರೂ ಯಾರನ್ನೋ ಪ್ರತೀಕ್ಷಿಸುತ್ತಿರುವರು. ಪರಿಸ್ಥಿತಿ ಅವರ ಪ್ರತೀಕ್ಷೆಯನ್ನು ಒಂದು ಸಲ ಪೋಷಿಸಿದರೆ, ಇನ್ನೊಂದು ಸಲ ಶೋಷಿಸುವುದು.

ಹೌರಾ ಸ್ಟೇಶನ್ನಿನ ಪ್ಲ್ಯಾಟಫಾರ್ಮಿನ ಮೇಲೆ ನಿಂತು ಅವರು ಬಿರಬಿರನೆ ಎಲ್ಲ ಕಡೆಗೂ ನೋಡತೊಡಗಿದರು. ಪ್ರತಿಯೊಬ್ಬ ವ್ಯಕ್ತಿಯ ಮುಖವನ್ನೂ ಸೂಕ್ಷ್ಮವಾಗಿ ಅವಲೋಕಿಸುವ ಪ್ರಯತ್ನ ಮಾಡಿದರು. ಆದರೆ ಅವರಿಬ್ಬರ ಕಡೆಗೆ ಮಾತ್ರ ಒಬ್ಬರೂ ಲಕ್ಷ್ಯಕೊಡಲಿಲ್ಲ. ಎಲ್ಲರೂ ತಮ್ಮ ತಮ್ಮ ಗಡಿಬಿಡಿಯಲ್ಲಿ ನಿರತರಾಗಿದ್ದಾರೆ. ಪ್ರತಿಯೊಬ್ಬನಿಗೂ ಒಂದಿಲ್ಲ ಒಂದು ಕೆಲಸ ಇದ್ದೇ ಇದೆ. ಮತ್ತೆ ಇವರಾದರೂ ಏನು ಕೆಲಸವಿಲ್ಲದೆ ಸುಮ್ಮನೆ ಸುತ್ತಾಡಲು ಬಂದವರಲ್ಲ. ಇವರಿಗೂ ಕೆಲಸ ವಿದೆ.

ಅಸ್ತವ್ಯಸ್ತವಾಗಿ ಹರಡಿದ್ದ ಸ್ಟೇಶನ್ನಿನ ಆ ಗಡಿಬಿಡಿ-ಗೊಂದಲದ ಮಧ್ಯದಲ್ಲಿ ನಿಂತಿದ್ದ ಅವರಿಗೆ ಆಶ್ಚರ್ಯವೆನಿಸತೊಡಗಿತ್ತು. ಇಡೀ ಸ್ಟೇಶನ್ನಿನ ತುಂಬೆಲ್ಲ ಯಾರೋ ಒಬ್ಬರು ಮಾತನಾಡುತ್ತಿದ್ದರು. ಇಬ್ಬರೂ ಅಕ್ಕ-ತಂಗಿಯರು ಒಬ್ಬರನ್ನೊಬ್ಬರು ನೋಡಿದರು. ಒಮ್ಮೆಲೆ ಧ್ವನಿ ನಿಂತು ಹೋಯಿತು. ಸತಾರದ ರೆಕಾರ್ಡ್ ಹತ್ತಿತು. ತಂಗಿಯು ಬೆರಳು ಮಾಡಿ ತೋರಿಸಿ ಹೇಳಿದಳು: "ಅಲ್ಲಿ ನೋಡು!" ಇಬ್ಬರೂ ಕಡಾಯಿಯಂತೆ ಕಾಣಿಸುವ ಲಾವುಡ್‌ಸ್ಪೀಕರಿನ ಕಡೆಗೆ ನೋಡಿದರು.

ಅಕ್ಕನೆಂದಳು: "ಹಿಂದೊಮ್ಮೆ ನೀನು 'ಪೂಜಾ' ಹೇಳಿಯಲ್ಲಿ ಗದ್ದಲದಲ್ಲಿ ತಪ್ಪಿಸಿಕೊಂಡಿದ್ದೆಯಲ್ಲ! ಆಗ ಯಾರೋ ಒಬ್ಬರು ಒಂದೇ ಸವನೆ ನಿನ್ನ ಹೆಸರು ಹೇಳುತ್ತಿದ್ದರು. ಆದರೆ ಅವರ ಆಕಾರ ಹೀಗಿದ್ದಿದ್ದಿಲ್ಲ. ಮಿಸೂಜಾ ಅವರಲ್ಲಿ ಬೆಳ್ಳಿಯ ಪಾತೇಲಿ ಇಲ್ಲವೆ? ಅವರ ಹಾಗಿತ್ತು."

"ಈಗ ನಾನು ಮತ್ತೊಮ್ಮೆ ತಪ್ಪಿಸಿಕೊಂಡರೆ?"

ಅಕ್ಕನು ಹಣೆಗೆ ನಿರಿಗೆ ಹಾಕಿದಳು. ಮಗ್ಗುಲಿನ ಕಿರಾಣೀ ಅಂಗಡಿಗೆ, ಅಡಿಕೆ ತರಲು ಹೋದಾಗ ಅವಳು ತಪ್ಪಿಸಿಕೊಂಡಿದ್ದಳು. ಅದು ಅವಳು ಮೊದಲನೇ ಸಲ ತಪ್ಪಿಸಿಕೊಂಡಮ್ಮ. ಮುಂದ ಐದನೆಯ ಈಯತ್ತೆಯಲ್ಲಿದ್ದಾಗ, ಎರಡನೆಯ ಸಲ ತಪ್ಪಿಸಿಕೊಂಡಿದ್ದಳು. ಶಾಲೆ ಬಿಟ್ಟ ಮೇಲೆ ನೇರವಾಗಿ ಮನೆಗೆ ಬರದೆ, ಪರಸ್ಪರ ಗಂಗೆಯ ಘಟ್ಟಕ್ಕೆ ದೋಣಿಗಳನ್ನು ನೋಡಲು ಹೋಗಿದ್ದಳು ಆಗ. ಹೋದ ವರ್ಷವೆ ಪೂಜಾ ಮುಂಟಪದಲ್ಲಿ ಮತ್ತೆ ತಪ್ಪಿಸಿಕೊಂಡಿದ್ದಳು; ನಾಲ್ಕು ತಾಸುಗಳ ನಂತರ ಮನೆಗೆ ಮರಳಿದ್ದಳು. ಆ ಮೇಲೆ ಹಾಸಿಗೆಯ ಮೇಲೆ ಬಿದ್ದು, ಸಿಸುಗುಟ್ಟುತ್ತ ನುಡಿದಿದ್ದಳು: "ನನಗೇನೂ ಹೆತ್ತಲೇ ಇಲ್ಲ. ಸ್ವಲ್ಪವೂ ಇಲ್ಲ. ಬರೀ ಕೈಯಿಂದ ಏಕೆ, ಬುಲೂನ ಬ್ಯಾಟಿನಿಂದ ಹೊಡೆದರೂ ನನಗೆ ಪೆಟ್ಟು ಹತ್ತುವದಿಲ್ಲ'! ಆ ಮೇಲೆ ಧ್ವನಿಯನ್ನು ಕೆಳಗಿಳಿಸಿ ಅವಳು ತನ್ನಷ್ಟಕ್ಕೆ ತಾನೇ ನಕ್ಕಿದ್ದಳು, ಹಾಗೂ ನುಡಿದಿದ್ದಳು: "ತಪ್ಪಿಸಿಕೊಂಡಾಗ ಬಹಳ ಮಜಾ ಎನಿಸುತ್ತದೆ" ಆಗ ಅಕ್ಕನು ಅವಳ ಕೂದಲನ್ನು ಹಿಡಿದು ಅಲುಗಾಡಿಸಿದ್ದಳು.

ಅಕ್ಕನು ಹಣೆಯ ಮೇಲಿನ ನಿರಿಗೆಗಳನ್ನು ಅಳಿಸಿದಳು. ತಂಗಿಯ ತುಟಿಗಳ ತುದಿಯು, ಕಣ್ಣುಗಳ ಮೂಲೆಯಲ್ಲಿ ಇದೇ ಕ್ಷಣವೇ ದಾರಿ ಕಾಯುತ್ತಿತ್ತು. ಅವಳು ದೃಷ್ಟಿಯನ್ನು ಕೆಳಗಿಳಿಸಿ ತುಟಿಯ ಮೇಲೆ ನಾಲಗೆಯನ್ನು ಸವರುತ್ತ ಕೇಳಿದಳು; "ನಾವು ಇಲ್ಲಿ ತಪ್ಪಿಸಿಕೊಂಡು ಹೋಗಲು ಬಂದಿದ್ದೇವೆ, ಅಲ್ಲವೆ?" ಕಣ್ಣುಗಳನ್ನು ಮೇಲೆತ್ತಿ ಆ ಮೇಲೆ ಒಮ್ಮೆಲೆ ಜೋಕ್ ಜೋಕ್ ನಗತೊಡಗಿದಳು. ಅಕ್ಕನು ಗಡಿಬಿಡಿಯಿಂದ ಹಿಂದಿರುಗಿ ನೋಡಿದಳು. ತಗ್ಗಿದ ಧ್ವನಿಯಲ್ಲಿ ತಂಗಿಯನ್ನು ಕೇಳಿದಳು: "ಹೀಗೇಕೆ ನೋಡುತ್ತಿದ್ದಿ ನೀನು? ಇದೇ ಈಗ ಏನೆಂದೆ?"

ತಂಗಿಗೆ ನೆನಪಾಯಿತು. ಜೇಕರಿಸಿ ಅವಳು ಗಂಟಲನ್ನು ಸರಿಪಡಿಸಿಕೊಂಡು ಕೇಳಿದಳು: "ನಾವಿನ್ನೇನು ಮಾಡುವುದು?"

ಅಕ್ಕನು ಇದರ ಬಗೆಗೆ ವಿಚಾರಮಾಡತೊಡಗಿದಳು. ಈ ಕಡೆಗೆ ಆ ಕಡೆಗೆ ನೋಡುವ ನೆಪಮಾಡಿ ಎಲ್ಲವನ್ನೂ ನೋಡಿಕೊಂಡಳು:– ಗೋಡೆಗೆ ಬೆನ್ನುಹಚ್ಚಿಕೊಂಡು ಕುಳಿತು ಪಾದಾ ಕೊದಲಲ್ಲಿ ಬೆರಳಾಡಿ

* ಪ್ರಸಿದ್ಧ ಬಂಗಾಲಿ ನವ್ಯ ಕಥೆಗಾರ ಶ್ರೀಪಾಸ್ ಸೂತನಂಡಿಯವರ ಕಥೆಯೊಂದರ ಅನುವಾದ. ಸಂ. ಚ.

ತ್ತಿದ್ದಾನೆ. ಅಂದರೆ ಅವನು ಕೂಡ ವಿಚಾರ ಮಾಡುತ್ತಿದ್ದಾನೆ. ಮುರಿನಲ್ಲಿದ್ದ ಫೇಸ್ ಪಾವಡರಿನ ಜಾಹೀರಾತಿನ ಕಡೆಗೆ ನೋಡುತ್ತಿದ್ದನೆ. ಅಂದರೆ, ಅವನ ಮನಸ್ಸು ಕೂಡ ಅಕಾಣಿಯ ಮೇಲಿರಲಿಕ್ಕಿಲ್ಲ. ಂದಾ ಕೂಪಲಿಗೆ ಕೈಹಚ್ಚುವುದೇ ತಡ, ಒಂದೆರಡಾದರೂ ಕೂವಲೆಳೆ ಗೆ ಬರುತ್ತವೆ. ಇನ್ನು ಸ್ವಲ್ಪೇ ದಿವಸಗಳಲ್ಲಿ ಅವನ ತಲೆಗೆ ಟಕ್ಕಲು ೀಳುವುದು. ಇದನ್ನು ಅವನಿಗೆ ಹೇಳಿದರೆ ಅವನೆನ್ನುತ್ತಾನೆ: ಆದಂತಲೇ ನಾನೆನ್ನುವುದು, ಈಗ ನನ್ನ ಲಗ್ನ ಮಾಡದಿದ್ದರೆ ಮುಂದೆ ಬೋಳುತಲೆಯನನ ಕೊರಳಲ್ಲಿ ಯಾರೂ ಮಾಲೆ ಹಾಕುವದಿಲ್ಲ! ಂದು. ಆದರೆ ಇಷ್ಟು ಸಣ್ಣ ವಯಸ್ಸಿನಲ್ಲಿ ತಲೆಗೆ ಟಕ್ಕಲು ಹೇಗೆ ಬೀಳುತ್ತದೆ? ಉಳಿದವರಿಗೆ ಯಾರಿಗೂ ಹೀಗಾದದ್ದನ್ನು ನಾನು ನೋಡಿಲ್ಲ. ಈಗ ಅವನು ಉಘ್ ಎಂದು ಊದಿ, ಬೆರಳಿಗೆ ಹತ್ತಿದ್ದ ಕೂದಲನ್ನು ಾರಿಸಿ ಬಿಡುವನು.....

"ಅಕ್ಕಾ, ಇದೇನು? ನೀನು ಸುಮ್ಮನೆ ಹಾಗೇ ನೋಡುತ್ತ ಬಿಟ್ಟೆಯಲ್ಲ!" "ಎಲ್ಲಿ? ನೋಡುತ್ತ ಎಲ್ಲಿ ನಿಂತಿದ್ದೇನೆ? ನಡೆ ಅಲ್ಲಿ ಹೋಗೋಣವಂತೆ" ಅವಳು ಕಣ್ಣು ಹೊರಳಿಸಿದಳು.

ಅವರಿಬ್ಬರೂ ಸಹೋದರಿಯರು ನಿಬಿಡವಾಗಿದ್ದ ಜನಸಮೂಹದಲ್ಲಿ ದಾರಿ ಮಾಡಿಕೊಳ್ಳುತ್ತ ಉತ್ತರದ ಕಡೆಗೆ ಸಾಗಿಸಿದರು. ಟಕೇಟ ಆಫೀಸಿನ ಎದುರಿಗಿದ್ದ ಕಟ್ಟೆಗೆಯ ಜೌಕಿನಲ್ಲಿ ಜನರು ಸಾಲಾಗಿ ನಿಂತಿದ್ದರು. ಅದರ ಹತ್ತಿರವೇ ಇದ್ದ, ಪಾವಟಿಗೆಗಳಿಲ್ಲದ ಇಳಿಯುವ ಜಿನ್ನೆಯ ಮೇಲೆ ಜನರು ಮುಲಗಿದ್ದರು. ಕುಳಿತಿದ್ದರು. ಅವರ ಸಮೀಪದಲ್ಲಿಯೇ ಹಾಯ್ದರೂ ಅವರನ್ನು ತುಳಿಯದೆ, ಮನುಷ್ಯರು ಶ್ವಾಸವನ್ನು ತಡೆಹಿಡಿದು ಓಡುತ್ತಿದ್ದರು. ಅವರು ಫರ್ಡ್‌ಕ್ಲಾಸ್ ವೇಟಿಂಗ್‌ರೂಮಿಗೆ ಬಂದರು. ಒಂದು ಬೂಕಿನ ತುದಿಗೆ ಕುಳಿತರು. ಇಲ್ಲಿ ಕಿಟಕಿಯೊಳಗಿಂದ ರಸ್ತೆ ಕಾಣಿಸುತ್ತದೆ. ಒಂದರ ಹಿಂದೊಂದು ಸಾಲುಸಾಲಾಗಿ ಬಸ್ಸುಗಳು ನಿಂತಿವೆ. ಒಂದೊಂದೇ ಬಸ್ಸು ಸಾಲಿನ ಮುಂದಿನ ತುದಿಯಿಂದ ಬಿಡುತ್ತದೆ. ವೇಟಿಂಗ್‌ರೂಮಿನಲ್ಲಿ ಸ್ವಲ್ಪ ಕತ್ತಲಿಯಿದೆ; ಸ್ವಲ್ಪ ಬೆಳಕಿದೆ. ಗೊಮ್ಮಟೆಯ ಫಾನಸೆಯಿದೆ. ನೀರಿನ ಸಳವಿದೆ. ತಿಕೀಟಿಗಾಗಿ ನಿಂತ ಹೆಂಗಸರ ಸಾಲಿದೆ. ಹಾಗೂ ಮೂರ ಹೋಗುವ ದಾರಿ ನೋಡುವ ಪ್ರವಾಸಿಕರಿದ್ದಾರೆ.

"ಅಕ್ಕಾ, ನೀರು ಕುಡಿಯುವುದಿದೆ ನನಗೆ."

"ಹೋಗು. ಕುಡಿದು ಬಾ!"

ಅಕ್ಕನು ತಂಗಿಯ ಮೇಲೆ ದೃಷ್ಟಿಯನ್ನಿಟ್ಟಳು. ಅವಳು ಬಾಗಿ, ನಳದ ಬೆಣೆಯನ್ನೊತ್ತಿ ಬೊಗಸೆಯಿಂದ ನೀರು ಕುಡಿಯಹತ್ತಿದಳು. ಕೈಯಲ್ಲಿ ತಂಬಿಗೆಯನ್ನು ಹಿಡಿದು ಮಗ್ಗುಲಲ್ಲಿ ನಿಂತಿದ್ದ ಮನುಷ್ಯನು ಅವನ್ನು ನೋಡುತ್ತಿದ್ದ. ಅಕ್ಕನು ಅಸ್ವಸ್ಥಳಾದಳು. ತಂಗಿಯ ಪೋಲಕಾ, ಎದೆಯ ಮೇಲೆ ಸ್ವಲ್ಪ ಹರಿದಿತ್ತು! ಆ ಮನುಷ್ಯನು ಇಷ್ಟು ಕಣ್ಣಲ್ಲಿ ಕಣ್ಣಿಟ್ಟು ಏನು ನೋಡುತ್ತಿದ್ದಾನೆ? ನೀರು ಕುಡಿಯುವುದಾವನೋಲೆ ತಂಗಿಯು ನೆರಿಗಿನಿಂದ ಬಾಯೊರೆಸಿಕೊಂಡಳು. ಆ ಮನುಷ್ಯನು ಇನ್ನೂ ಹಾಗೆಯೇ ನೋಡುತ್ತ ನಿಂತಿದ್ದಾನೆ. ಅಕ್ಕನ ದೃಷ್ಟಿಯೊಂದಿಗೆ ತನ್ನ ದೃಷ್ಟಿ ಕೂಡಿದ ತತ್‌ಕ್ಷಣ, ಅವನು ಮುಖವನ್ನು ಹೊರಳಿಸಿದನು. ಆದರೆ ಅಕ್ಕನು ಹಾಗೇ ನೋಡುತ್ತ ನಿಂತಳು. ಆ ಮನುಷ್ಯನು ತಂಬಿಗೆಯನ್ನು ತುಂಬಿ, ಮಂಗಳಸೂತ್ರ ಧರಿಸಿದ ಒಬ್ಬ ಹೆಂಗುಸಿನ ಕೈಯಲ್ಲಿ ಅದನ್ನು ಕೊಟ್ಟನು. ಮತ್ತೆ ಅವನು ಈ ಕಡೆಗೆ ನೋಡಿದನು. ಮಂಗಳಸೂತ್ರದ ಹೆಂಗುಸು ಮೇಲೆ ಎತ್ತರಿಸಿ ನೀರು ಕೂಡಿಯುತ್ತಿದ್ದಳು. ಅವಳ ಹಣೆಯ ಮೇಲಿನ ಕುಂಕುಮವು ಉದುರಿ, ಮೂಗಿನ ತುದಿಯ ಮೇಲೆ ಬಿದ್ದಿತ್ತು. ಕುಂಕುಮವು ಉದುರಿ, ಮೂಗಿನ ತುದಿಯ ಮೇಲೆ ಬಿದ್ದರೆ, ಗಂಡನು ಬಹಳ ಪ್ರೀತಿಸುತ್ತಾನೆ—ಎಂದು. ಅದು ಅಕ್ಕನಿಗೆ ಗೊತ್ತಿದೆ, ತಾಯು ಅನ್ನುವಾಗ ಅವಳು ಅವನ್ನೊಮ್ಮೆ ಕೇಳಿದ್ದಾಳೆ.

"ತುಫಾನ್ ಎಕ್ಸ್‌ಪ್ರೆಸ್ ಲೇಟ್ ಇದೆಯೆಂದು ಕಾಣುತ್ತದೆ."

ಅಕ್ಕನು ಗೋಣು ಹೊರಳಿಸಿದಳು. ಅವಳ ಸಮೀಪದಲ್ಲಿಯೇ ನಿಂತಿದ್ದ ಹೆಂಗುಸು ಆನ್ನತೊಡಗಿದಳು:

"ಪೀಡಾ, ಇನ್ನೂ ಎಷ್ಟು ಹೊತ್ತು ದಾರಿ ನೋಡಬೇಕಾಗುವುದೋ ಯಾರಿಗೆ ಗೊತ್ತು!"

"ಯಾರೋ ಬರುವವರಿದ್ದಾರೆಂದು ಕಾಣುತ್ತದೆ."

ಹೆಂಗುಸು ನಕ್ಕಳು ನಗುತ್ತ ನಗುತ್ತ ಅವಳು ವೇಟಿಂಗ್‌ರೂಮಿನ ತುಂಬೆಲ್ಲ ಕಣ್ಣು ಹರಿಸಿದಳು.

"ಇಲ್ಲಿ ಬಹಳ ಹೊಲಸಿದೆ!"

"ಹೌದಲ್ಲ!"

ಈ ಕಡೆಗೆ ಆ ಕಡೆಗೆ ನೋಡಿದಮೇಲೆ ಅಕ್ಕನು ಒಮ್ಮೆಲೆ ಹೌಹಾರಿದಳು. ಅಲೆ, ತಂಗಿ ಎಲ್ಲಿದ್ದಾಳೆ?

"ಪತ್ರದಲ್ಲಿ ಬರೆದಿದ್ದರು ನಿನ್ನೆ ಬರುವವರಿದ್ದಾರೆಂದು. ನಾನು ನಿನ್ನೆ ಬಂದಿದ್ದೆ. ಸುಳ್ಳೇ ಎಡತಾಕುವುದಾಯಿತು, ಹಾಗೇ ತಿರುಗಿ ಹೋದೆ."

ಅಕ್ಕನು ಹೊರಟುನಿಂತಳು.

"ನಿಮ್ಮದು ವೇಳೆಯಾಯಿತೇನು?"

"ಏತರ ವೇಳೆ?"

"ನೀವು ಎಲ್ಲಿಗಾದರೂ ಹೋಗುವವರಿದ್ದೀರೋ ಅಥವಾ ನಿಮ್ಮ ವೈಕೆ ಯಾರಾದರೂ ಬರುವವರಿದ್ದಾರೆಯೋ?"

"ಇಲ್ಲಿಲ್ಲ, ನಾವೇ ಹೋಗುವವರಿದ್ದೇವೆ."

ಮುಂಬೆ ಅಕ್ಕನು ಹೆಚ್ಚು ಮಾತು ಬೆಳೆಸುವ ಗೋಜಿಗೆ ಹೋಗಲಿಲ್ಲ. ಅವಳು ಪ್ಲ್ಯಾಟ್‌ಫಾರ್ಮಿನ ಮೇಲೆ ಬಂದಳು. ಮನುಷ್ಯರ ಹಾಗೂ ಶಬ್ದದ ಕೋಲಾಹಲದ ನಡುವೆ ಬಂದು ನಿಂತಳು. ನಿಂತಲ್ಲಿಂದಲೇ ಅವಳು ತಂಗಿಯನ್ನು ಹುಡುಕಾಡಿದಳು. ಹೆಜ್ಜೆಯಮೇಲೆ ಹೆಜ್ಜೆ ಹಾಕುತ್ತ ಒಂದು ಗೇಟಿನ ಹತ್ತಿರ ಬಂದಳು. ಇಲ್ಲಿಂದ ಇನ್ನು ರಸ್ತೆ ಕಾಣಿಸುತ್ತದೆ. ಹೌರಾ ಪೂಲು ಕಾಣಿಸುತ್ತದೆ. ಆ ಪೂಲನ್ನು ದಾಟದರಾಯಿತು, ಬಂತು ಕಲಕತ್ತಾ. ಕಲಕತ್ತೆಯ ಒಂದು ಸಂದಿಯಲ್ಲಿ ಅವರ ಮನೆಯಿದೆ. ಆ ಮನೆಯು ಮೊದಲನೆಯ ಅಂತಸ್ತಿನ

ಒಂದು ಹೋಲಿಯಲ್ಲಿ ಅಪ್ಪ, ಅಣ್ಣ, ತಮ್ಮ ಹಾಗೂ ತಂಗಿ ಇರುವರು. ಚಳಿಗಾಲವಲ್ಲಿ ಚಳಿ, ಹಾಗೂ ಬೇಸಗೆಯಲ್ಲಿ ಸೆಕೆ, ಕೋಣೆಯಲ್ಲಿ ತಾಣೆ ಹೊಡೆದು ಕೂಡುತ್ತಿದ್ದುವು. ದಕ್ಷಿಣ ದಕ್ಕಿನಿಂದ ಬೀಸುವ ಎಲ್ಲ ಗಾಳಿಯೂ ಮೇಲೆ ಗಚ್ಚಿಯ ಮೇಲಿಂದ ಹಾಯ್ದು ಸರಸ್ಸರ ಹೋಗಿ ಬಿಡುತ್ತಿತ್ತು. ಗಾಳಿ ಹೋಗುತ್ತಿತ್ತು. ಮೋಡ ಹೋಗುತ್ತಿದ್ದುವು. ಬಿಸಿಲು ಹೋಗುತ್ತಿತ್ತು, ಸಂಜೆ ಹೋಗುತ್ತಿತ್ತು. ಇನ್ನು ಮೇಲೆ ಎಂದಿಗೂ, ನೀರು ಬರುವುದೇ ತಡ–ಮೈತೊಳೆದುಕೊಂಡು ಹೊರಗೆ ಗಚ್ಚಿಯ ಮೇಲೆ ಬಂದು ನಿಲ್ಲಲು ಬರುವಂತಿಲ್ಲ. ಅಕ್ಕ-ಪಕ್ಕದ ಹುಡುಗಿಯರ ಕೂಡ ಹರಟೆ ಹೊಡೆಯಲು ಬರುವಂತಿಲ್ಲ.

ಮೂಗು ಅರಳಿಸಿ ಅಕ್ಕನು ಜೋರಾಗಿ ಶ್ವಾಸ ತೆಗೆದುಕೊಂಡಳು: 'ಇಲ್ಲಿ ಎಂಥದೋ ವಾಸನೆ ಬರುತ್ತದೆ. ಈ "ಇಲ್ಲಿ"ಯೇ ಎಂಥದೋ ಬರುತ್ತದೆ. ಅಪ್ಪನನ್ನು ಸ್ನಾನಕ್ಕೆ ಒಯ್ಯುವ ವೇಳೆಯಲ್ಲಿ ದಾದಾ ಒಂದು ಬಾಟ್ಲಿಯಲ್ಲಿ ಏನೋ ತಂದಿದ್ದ. ಅದರಂತೆ. ಹೌದು, ಅಂಥದೇ ಒಂದು ತರಪ ವಾಸನೆ ಇಲ್ಲಿ ಬರುತ್ತದೆ. ಇವಳು ಇಷ್ಟರಲ್ಲಿಯೇ ಎಲ್ಲಿ ಹೋದಳು ?"

ಜಜ್ಜನು ಮತ್ತೊಮ್ಮೆ ಮನುಷ್ಯರ ಹಾಗೂ ಶಬ್ದದ ಗೊಂದಲವಲ್ಲಿ ಬಂದಳು.

§ § § §

ಅವನು ಒದರುತ್ತಿದ್ದ, "ದಿಲ್ಲೀ ದೇಖೋ ! ಆಗ್ರಾ ದೇಖೋ !" ಎಂದು; ಹಾಗೂ ಒಂದು ಹ್ಯಾಂಡಲನ್ನು ಗರ್‌ಗರ್ ತಿರುಗಿಸುತ್ತಿದ್ದ. ಕುತುಬ್‌ಮಿನಾರ್, ತಾಜ್‌ಮಹಲ್—ಎಲ್ಲ ಚಿತ್ರಗಳೂ ಒಂದರ ಹಿಂದೊಂದು ಸಾಲಾಗಿ ಬರುತ್ತಿದ್ದುವು; ಹೋಗಿಬಿಡುತ್ತಿದ್ದುವು. ಒಂದೇ ಸ್ವರದ ಕೂಗು. ಹ್ಯಾಂಡಲನ್ನು ಸ್ವಲ್ಪ ನಿಧಾನವಾಗಿ ತಿರುಗಿಸೆಂದರೆ, ಅವನು ನೆಗಡಿ ಬಂದವರ ಮುಖಮಾಡಿ ನಕ್ಕು ಬಿಡುತ್ತಿದ್ದ. ಸ್ಟೇಶನಿನ ಕಂಬದಮೇಲೆ ಹಚ್ಚಿದ್ದ ಚಿತ್ರವನ್ನು ನೋಡಿ, ತಂಗಿಗೆ ಆ ಮನುಷ್ಯನ ನೆನಪಾಯಿತು. ಒಂದು ದಿವಸ ಅವಳು ಅವನನ್ನು ಕೇಳಿದ್ದಳು ಸಹಿತ—ಅವನು ದಿಲ್ಲಿ-ಆಗ್ರಾ ನಿಜವಾಗಿಯೂ ನೋಡಿ ಬಂದಿದ್ದಾನೇನೆಂದು. ಅದಕ್ಕೆ ಅವನು ಏನೂ ಉತ್ತರ ಕೊಟ್ಟಿದ್ದಿಲ್ಲ. ಇಷ್ಟೇ ಅಲ್ಲ, ಕೊಳಚೆಯ ತೂತಿಗೆ ಕಣ್ಣುಹಚ್ಚಿ ದಿಲ್ಲಿ-ಆಗ್ರಾ ನೋಡುವ ಎಲ್ಲ ಹುಡುಗರನ್ನೂ ಅವನು ಬೆದರಿಸಿ ಕಳಿಸಿದ್ದನು. ಆ ಮನುಷ್ಯನು ಈಗ ತಂಗಿಗೆ ನೆನಪಾದನು. ಆಮೇಲೆ ಬಹಳ ದಿವಸಗಳನಂತರ ಒಬ್ಬ ಸಿನೇಮಾದವನು ಬಂದಿದ್ದನು. ಆದರೆ ಆ ದಿಲ್ಲಿ-ಆಗ್ರಾವಾಲಾ ಏಕೆ ಬರುವುದಿಲ್ಲವೆಂದು ಅವಳಿಗೆ ಎಷ್ಟೋ ಸಲ ಅನಿಸಿತ್ತು. ರಾತ್ರಿಯೆಲ್ಲ ಅವಳು ಇದನ್ನು ಕುರಿತೇ ಯೋಚಿಸಿದ್ದಳು. ಅವನ ನೆನಪಾದರೆ ಕುತುಬ್‌ಮಿನಾರ್, ತಾಜ್‌ಮಹಲ್, ಹವಾಮಿ-ಜಹಾಜ್, ಜಟಾಯು ಯುದ್ಧ—ಎಲ್ಲವೂ ಒಂದೊಂದಾಗಿ ಕಣ್ಣಿದಿರು ಸುಳಿದು ಹೋಗುವುದು. ಅದೆಷ್ಟೋ ದಿವಸ ರಾತ್ರಿಯಲ್ಲಿ ಅವಳಿಗೆ ಅವನ ನೆನಪು ಬರುತ್ತಿತ್ತು. ಚಿತ್ರ ನೋಡುತ್ತ ನೋಡುತ್ತ ಅವಳು ಪೆಚ್ಚು ಕಡಮೆ ಆ ಹೆಂಗುಸಿನ ಸೈಗೆ ಅಂಟಿಕೊಂಡೇ ನಿಂತಿದ್ದಳು. ಆ ಹೆಂಗುಸು ಮುಖಮೇಲೆ ಮಾಡಿ ನೋಡಿದಳು. ಅವಳು ತನ್ನನ್ನೇ ನೋಡುತ್ತಿದ್ದಳು. ತಂಗಿಯು ಸ್ವಲ್ಪ ಪಕ್ಕಕ್ಕೆ ಸರಿದಳು. ಚಿತ್ರದ ಮೇಲೆ ಇಂಗ್ಲೀಷಿನಲ್ಲಿ ಏನೇನೋ ಬರೆದಿತ್ತು. ಇಂಗ್ಲೀಷ್ ಅಕ್ಷರದ ಜ್ಞಾನ ಅವಳಿಗಿದೆ; ಆದರೆ ಎಲ್ಲ ಅಕ್ಷರಗಳೂ ಕೂಡಿ ಒಟ್ಟಿಗೆ ಏನಾಗುತ್ತದೆ ಎಂಬುದು ಅವಳಿಗೆ ತಿಳಿಯುವುದಿಲ್ಲ. ಇಷ್ಟಾದರೂ ತುಟಿ ಅಲುಗಿಸಿ ಒಂದೊಂದೇ ಅಕ್ಷರವನ್ನು ಅವಳು ಓದುತ್ತಾಳೆ. ಓರೆನೋಟದಿಂದ ಆ ಹೆಂಗುಸಿನ ಕಡೆಗೆ ನೋಡುತ್ತಾಳೆ.

ಆ ಹೆಂಗುಸು ಲಗ್ನವಾದರೂ ಎರಡು ಹೆರಳು ಬಿಟ್ಟಿದ್ದಾಳೆ. ಮಂಗಳಸೂತ್ರವಿದೆ. ಆದರೆ ಹಸಿರು ಬಳೆಗಳಿಲ್ಲ; ಯಾಕೆ ? ಕಾಲಿಗೆ ಮದರಂಗಿ ಹಚ್ಚಿದೆ. ಆದರೆ ಸೆರಗನ್ನು ತಲೆಯ ಮೇಲೆ ತೆಗೆದು ಕೊಂಡಿಲ್ಲ. ಅವಳು ಬಹುಶಃ ಯಾವುದಾದರೂ ಶಾಲೆಯಲ್ಲಿ ಕಲಿಸುತ್ತಿರಬೇಕು; ಅಥವಾ ಹೊಲಿಗೆಯ ಕ್ಲಾಸಿಗೆ ಹೋಗುತ್ತಿರಬೇಕು. ಮತ್ತೊಮ್ಮೆ ಅವಳ ಕಡೆಗೆ ನೋಡಿದಾಗ, ಆ ಹೆಂಗುಸು ತುಸುವೇ ನಕ್ಕಂತೆ ಅವಳಿಗೆ ಭಾಸವಾಯಿತು. ತತ್‌ಕ್ಷಣವೇ ಗಡಬಡಿಸಿಕೊಂಡು ಅವಳು ಮತ್ತೆ ಆ ಅಕ್ಷರಗಳನ್ನು ಓದಲು ಸುರುಮಾಡಿದಳು. ಆದರೆ ಇಷ್ಟು ದೊಡ್ಡವಾದ ಅಕ್ಷರಗಳು ಏನು ಹೇಳುತ್ತಿವೆ,—ಎಂಬುದು ಅವಳಿಗೆ ತಿಳಿಯುತ್ತಿರಲಿಲ್ಲ. ನೋಡವಿದ್ದರೂ ಅವಳ ಕಳ್ಳದೃಷ್ಟಿಗೆ ಈಗ ಗೋಚರವಾಯಿತು; ಆ ಹೆಂಗುಸು ತನ್ನ ಹಿಂದೆಯೇ ಬಂದು ನಿಂತಿದ್ದಾಳೆಂಬುದು. ಚಿತ್ರವನ್ನೇ ನೋಡುತ್ತಿರಬೇಕು ಬಹುಶಃ. ಸವಿಯಾದ ವಾಸನೆ ಬರುತ್ತಿರುವುದು, ನಿಶ್ಚಿತವಾಗಿಯೂ ಅವಳ ಅರಿವೆಯದಿರಬೈಕು. ಮೆಲ್ಲಮೆಲ್ಲನೆ ಅವಳು ದೀರ್ಘವಾಗಿ ಶ್ವಾಸತೆಗೆದುಕೊಂಡಳು. ಚಾಕಲೇಟಿನ ಕಾಗದಕ್ಕೆ ಇಂಥದೇ ವಾಸನೆಯಿರುತ್ತದೆ.

"ಅಷ್ಟೇನೂ ಚೆನ್ನಾಗಿಲ್ಲ ಅದು."

ಬೆಚ್ಚಿಬಿದ್ದು ತಂಗಿಯು ಒಮ್ಮೆಲೆ ಮುಖ ತಿರುವಿದಳು. ಆ ಹೆಂಗುಸು ಚಿತ್ರದ ಕಡೆಗೆ ನೋಡುತ್ತಿದ್ದಳು. ಅವಳೂ ಆ ಚಿತ್ರವನ್ನು ನೋಡತೊಡಗಿದಳು.

" ಹೋದ ಪೂಜಾಸೂಟಿಯಲ್ಲಿ ನಾವು ಹೋಗಿದ್ದೆವು. ಅವ್ವಯ್ಯಾ ! ಏನು ಗದ್ದಲ. ಹೋಗಿ ಬರುವುದು ಎಷ್ಟು ತ್ರಾಸು, ಏನು ಕತೆ ! ಅಲ್ಲಪೆ ಹೊಟೆಲ್ಲಿನ ಬಾಡಿಗೆ ಸಹಿತ ಎಷ್ಟು ತುಟ್ಟಿ...."

ತಂಗಿಗೆನಿಸುತ್ತಿತ್ತು, ಈ ಸವಿಯಾದ ವಾಸನೆಯನ್ನೆಲ್ಲ ಹೀರಿ ಎದೆಯಲ್ಲಿ ಕೂಡಿಸಿಡಬೇಕೆಂದು. ಮಾತಾಡಲು ಹೆದೆಲ್ಲ ಖರ್ಚಾಗಿ ಹೋದರೆ....? ಆದರೂ ಅವಳು ಮಾತಾಡಿದಳು:

"ಚೆನ್ನಾಗಿಲ್ಲವೆ ? ಅಂದರೆ ಅಲ್ಲಿ ಹಾಗೆ—"

"ನೋಡುವಂತಹದು ಏನೂ ಇಲ್ಲ. ಬರೀ ಅರಣ್ಯ ಹಾಗೂ ಗುಡ್ಡ. ಅಲ್ಲಿ ಯಾರು ಹೋಗಲಿಕ್ಕೆ ಕೂತಿದ್ದಾರೆ ? ಅದಕ್ಕಿಂತ ಈ ಚಿತ್ರ ನೋಡಿರಿ. ಇದು ಕೊನಾರ್ಕದ್ದು. ಇದು ಮಾತ್ರ ಬಹಳ ಪ್ರೇಕ್ಷಣೀಯವಾಗಿದೆ."

" ನೀವು ಹೋಗಿದ್ದಿರೇನು ?"

" ನನ್ನ ನೆಗೆಣ್ಣಿ ಹೋಗಿದ್ದಳು."

" ಈಗ ನೀವೆಲ್ಲಿ ಹೊರಟಿದ್ದೀರಿ ?"

" ಥಾಣೇಗಂಜಕ್ಕೆ."

" ಒಬ್ಬರೇ ?"

" ಹೌದು."

" ಅಲ್ಲಿ ಯಾರಾದರೂ ಇದ್ದಾರೆಂದು ತೋರುತ್ತದೆ."

ಹೆಂಗುಸು ' ಕಿಸಕ್ಕನೆ ' ನಕ್ಕಳು—ಸಿನೇಮಾದಲ್ಲಿ ನಾಯಕಿ ನಕ್ಕಂತೆ. ಮುಂದೆ ಏನೋ ಹೇಳಬೇಕೆಂದು ಅವಳು ಬಾಯಿತೆರೆದಳು. ಆದರೆ ಏನೂ ಮಾತಾಡದೆ ಅವಳು ಮತ್ತೆ ನಕ್ಕಳು. ಅದನ್ನು ನೋಡಿ ತಂಗಿಯೂ ನಕ್ಕಳು.

" ನೀವು ಎಲ್ಲಿ ಹೊರಟಿದ್ದೀರಿ ?

" ಮುಂಬಯಿಗೆ !"

" ಮುಂಬಯಿಗೆ ? ಯಾರಾದರೂ ನಿಮ್ಮನ್ನು ಪೈಕಿ ಅಲ್ಲಿದ್ದಾರೆಂದು ಕಾಣುತ್ತದೆ." ತಂಗಿಯು ನಕ್ಕಳು. ಅವಳಿಗೆನಿಸಿತ್ತು ಸುಳ್ಳು ಹೇಳಿದರೆ ಮನುಷ್ಯನು ಚಿತ್ರಪಟಲ್ಲಿಯಂತೆ ಸುಂದರಕಾಣಿಸುವನೆಂದು.

" ಮತ್ತೆ ಯಾರಿದ್ದಾರೆ ನಿಮ್ಮ ಕೂಡ ?"

" ನನ್ನ ಅಕ್ಕ."

" ಇನ್ನೂ ಅಲ್ಲಿಯೇ ಇರುವುದೇನು ?"

" ಇಲ್ಲ. ಅಲ್ಲಿಂದ ನಾವು ಇನ್ನೂ ಎಷ್ಟೋ ಸ್ಥಳಗಳಿಗೆ ಹೋಗುವವರಿದ್ದೇವೆ. ಈ ಚಿತ್ರ ಎಲ್ಲಿಯದಿದೆಯೋ ಅಲ್ಲಿ ಸಹಿತ ನಾವು ಒಂದು ಪೇಳಿ ಹೋದರೂ ಹೋಗಬಹುದು.

ಚಾಕಲೇಟಿನ ವಾಸನೆ ಮೈಗೆ ಮೆತ್ತಿದ್ದ ಆ ಹೆಂಗುಸು ಅವಳ ಕಡೆಗೆ ನೋಡುತ್ತ ನಿಂತಳು. ಅವಳ ತುಟಿಗಳು ತೆರೆದಿವೆ. ಸೊಟ್ಟು ಸೊಟ್ಟಾಗಿ ಬಂದಿದ್ದ ಹಲ್ಲುಗಳ ಸಂದಿನಲ್ಲಿ ಹೊಲಸು ಸಂಜಯವಾದದ್ದು ಕಾಣಿಸುತ್ತದೆ. ತಂಗಿಯು ಮೆಲ್ಲನೆ ಶ್ವಾಸತೆಗೆದುಕೊಂಡಳು. ಈಗ ಈ ಹೆಂಗುಸು ಎಷ್ಟು ಸೇರತೊಡಗಿದ್ದಾಳೆ.

" ಮುಂದಿನ ವರ್ಷ ಇವರಿಗೆ ರಜೆ ಸಿಕ್ಕರೆ ನಾವು ಬನಾರಸಕ್ಕೆ ಹೋಗುವವರಿದ್ದೇವೆ."

" ನಾವು ಸಹಿತ ಹೋಗುವವರಿದ್ದೇವೆ—" ತಂಗಿಯು ಮನಸ್ಸಿನಲ್ಲಿಯೇ ನುಡಿದಳು.

" ಅಕ್ಕಾ, ಗಾಡಿ ಏಳುನಂಬರಿನಿಂದ ಬಿಡುತ್ತದೆ. ಬೇಗ ನಡೆ."

ಓಡುತ್ತ ಓಡುತ್ತ ಬಂದು. ಪಾಕ್ ಪ್ಯಾಂಟ್ ಪಾಕಿದ್ದ ಹುಡುಗನು ಸೂಟ್‌ಕೇಸ್ ಎತ್ತಿದನು. ಬಿದಿರಿನ ಸಣ್ಣ ಚೀಲವನ್ನು ತೋಗಾಡಿಸುತ್ತ ಆ ಹೆಂಗುಸು ಅಂದಳು:

" ಒಳ್ಳೇದು. ಬರುತ್ತೇನೆ ನಾನು."

ಅವರು ಏಳು ನಂಬರಿನ ಸೇಲೆ ಹೋಗುತ್ತಿದ್ದಾರೆ. ತಂಗಿಯು ಸುತ್ತಲೂ ನೋಡಿದಳು. ದೂರದಲ್ಲಿ ಒಂದು ಮುಂಡಸೆಯ ಕೂಬಕ್ಕೆ ಆಂಟಿಕೊಂಡು ಅಕ್ಕ ನಿಂತಿದ್ದಳು. ಇನ್ನೂ ಪೇಳೆಯಿದೆ. ತಂಗಿ ತನ್ನ ಪ್ಲಟ್‌ಫಾರ್ಮಿನ ಕಡೆಗೆ ನೋಡತೊಡಗಿದಳು.

ಇಷ್ಟೆಲ್ಲ ಗೊಂದಲ ಅಲ್ಲಿ ನಡೆದಿದ್ದರೂ, ಅಕ್ಕನಿಗೆ ಏನೂ ಕೇಳಿಸುತ್ತಿರಲಿಲ್ಲ. ಮುಂಡಸೆಯ ಕೂಬಕ್ಕೆ ಆತುಕೊಂಡು ಅವಳು ಕಬ್ಬಿಣದಂತೆ ನಿಂತಿದ್ದಳು. ತಲೆಯಮೇಲೆ ಕೆಂಪು ಟೊಪ್ಪಿಗೆ ಹಾಗೂ ಖಾಕೀ ಪ್ರೆಸ್ಸನ್ನು ಹಾಕಿಕೊಂಡ ಮನುಷ್ಯನು ಆ ಕಡೆಗೆ ಈ ಕಡೆಗೆ ನೋಡುತ್ತಿದ್ದರೂ, ಅವಳ ಕಡೆಗೇನೇ ಬರುತ್ತಿದ್ದನು. ಮಗ್ಗಿಲಲ್ಲೇ ಹಾಯ್ದು ಹೋದನು. ಅವನು ಮತ್ತೊಮ್ಮೆ ಪುನಃ ನೋಡಿದ್ದನು. ಕಣ್ಣಿಗೆ ಕಣ್ಣು ಕೂಡಿತ್ತು. ಮುಂದೆ ಬಹಳ ಪೇಳೆಯನಂತರ ಅಕ್ಕನಿಗೆ ಉಸಿರು ಬಿಡಲು ಪುರುಸೊತ್ತಾಯಿತು. ಇದಾವನಂತರ ಸ್ಟೇಶನ್ನಿನ ಮೇಲಿನ ಧಡಧಡ ಸಪ್ಪಳ. ಅಕ್ಕನಿಗೆನಿಸಿತು. ಇದಕ್ಕಿಂತ ವೇಟಿಂಗ್-ರೂಮಿಗೆ ಹೋಗುವುದೇ ಹೆಚ್ಚು ಒಳ್ಳೆಯದೆಂದು. ಅಲ್ಲಿಯೇ ಕುಳಿತು ದಾರಿ ನೋಡಬೇಕು. ತಂಗಿಯು ಬಹುಶಃ ಅಲ್ಲಿ ಬಂದು ಕುಳಿತಿದ್ದರೂ ಕುಳಿತಿರಬಹುದು. ಬಾಕು ತುಂಬಿತ್ತು. ಅಕ್ಕನು ಗೋಡೆಗಾತುಕೊಂಡು ನಿಂತಳು.

ಹಿಂದೆ ಮಾತಾಡಿಸಿದ್ದ ಆ ಹೆಂಗುಸು ಎಲ್ಲಿ ಹೋಗಿದ್ದಳೋ, ಈಗ ತಿರುಗಿ ಬಂದಳು. ಅವಳಿಗೆ ಕೂಡ ಕೂಡಲಿಕ್ಕೆ ಸ್ಥಳ ಸಿಗಲಿಲ್ಲ. ಅವಳು ಸೆನೀಪಕ್ಕೆ ಬಂದು ನಿಂತಳು. ಅಂದಳು: "ಊಂಹು, ಇನ್ನೂ ಬಂದೇ ಇಲ್ಲ."

" ಯಾರು ಬರುವವರಿದ್ದಾರೆ ? "

ಏನಾದರೂ ಮಾತಾಡಬೇಕೆಂದು ಅಕ್ಕನು ವಿಚಾರಿಸಿದಳು. ಹಾಗೂ ಪ್ರಶ್ನೆ ಕೇಳಿ ಅವಳ ಮುಖ ನೋಡುತ್ತ ನಿಂತಳು. ಆಗ ಅವಳ ಲಕ್ಷ್ಯಕ್ಕೆ ಬಂತು. ಎಷ್ಟು ದೊಡ್ಡ ಕಣ್ಣುಗಳು—ಹಾಗೆ ನೋಡಿದರೆ ಎರಡು ಮುಖಗಳಿಗೆ ಸಾಲುವಷ್ಟು ದೊಡ್ಡವು—ಇದರೂ ಅವು ಅವಳ ಒಂದೇ ಮುಖಕ್ಕೆ ಕೂಡ ಎಷ್ಟು ಶೋಭಿಸುತ್ತಿದ್ದುವು! ಗದ್ದದ ಕೆಳಗೆ ವಯೋರೇಷೆ ಅಲುಗಾಡಿತು. ತುಟಿಗಳು ಸ್ಫುರಿಸಿದುವು.

" ಯಾರು ಬರುವವರಿದ್ದಾರೆ ? ಯಾರೂ ಇಲ್ಲ !"

ಹೌದು. ನಿಜಕ್ಕೂ ಅದೇ ಪ್ರಶ್ನೆ. ಅದೇ ಮಾತಿನ ಧರತಿ. ಅಕ್ಕನ ನೆನಸಿಗೆ ಪಾಲಿಶಿಂಗ್ ಪೇಪರ್ ತಿಕ್ಕಿದಂತಾಯಿತು. ಎರಡು ರೂಪಾಯಿ ಕೈಯ ಮೇಲಿಟ್ಟು ಮಾಂಸಿ ಅಂದಿದ್ದಳು: " ಹೀಗೆ ದಿನಾಲು ಬಿರತೊಡಗಿದರೆ ನಾನೇನು ಇಲ್ಲಿ— " ಮನ್ಸುಲಿನ ಕೋಣೆಯಲ್ಲಿ ಯಾರೋ ಇದ್ದರೆಂದು ಕಾಣುತ್ತದೆ. ಮನೆಯಿಂದ ಹೊರಗೆ ಬರುತ್ತಿರುವಾಗ ಅಕ್ಕನು ' ಮಾಂಸಿ ' ಗೆ ಅನ್ನುವುದನ್ನು ಕೇಳಿದ್ದಳು.

" ಯಾರು ಬರುವವರಿದ್ದಾರೆ ? ಯಾರೂ ಇಲ್ಲ. "

" ತಿಂಗಳಿಗೆ ಮೂವತ್ತು ರೂಪಾಯಿ ಹೆಚ್ಚು ಸಿಗುವುದೆಂದ ನೂರಾಐವತ್ತು ಮೈಲಿನ ಮೇಲಿನ ನೌಕರಿಯನ್ನು ಹಿಡಿದೆ. ಅದ ಏನು ಅವಶ್ಯವಿತ್ತು ಅವರದು ? ಶಾಲೆಯಲ್ಲಿ ನನಗೆ ಸಿಗುವುದರಲ್ಲಿಯೆ ಸ್ವಲ್ಪ ಕೈಯಿಂದ ಹಾಕಿದರೆ, ಬೇಕಾದಹಾಗೆ ಏಳು ಜನರ ಸಂಸಾ ಏಸ್ತಿಸಿಂದ ಸಾಗುವುದು. " ಅಕ್ಕನು ತಲೆಯಲ್ಲಾಡಿಸಿದಳು. ತತ್ಪ್ಲ ಅವಳು ಲೆಕ್ಕಹಾಕಿ ನೋಡಿದಳು—ತಮ್ಮ ಐದು ಜನರ ಸಂಸಾ ನಡೆಸಲು ಎಷ್ಟು ಹಣ ಬೇಕಾಗಬಹುದು?....

ಜಯಂ

"ಆದರೆ ನಾನು ಹೇಳಿದ್ದನ್ನು ಒಬ್ಬರೂ ಕೇಳಿಲ್ಲ. ನಾನೂ ಂಟು ವರ್ಷಗಳಿಂದ ನೋಡುತ್ತ ಬಂದಿದ್ದೇನೆ. ತಂಗಿಯಂದಿರು ಯಸ್ಸಿಗೆ ಬಂದಿದ್ದಾರೆ. ಅವರ ಲಗ್ನವನ್ನು ಮುಗಿಸಿಬಿಡಬೇಕು ೂವಲು. ಅದಕ್ಕೆ ಹಣ ಬೇಕಾಗುತ್ತದೆ ಅಂತೆ : "ನನ್ನ ಲಗ್ನವಾಗುವ ನಕ ನಿನ್ನ ದುಡ್ಡಿಗೆ ನಾನು ಕೈಹಚ್ಚುವುದಿಲ್ಲ."

"ಎಲ್ಲಿ ನೌಕರಿಯಿದೆ ಅವರಿಗೆ?"

"ಡಿ. ವ್ಹಿ. ಸಿ. ಯಲ್ಲಿ."

"ನಮ್ಮ ಅಣ್ಣನು ಸಹಿತ ಅಲ್ಲಿ ಪ್ರಯತ್ನ ಮಾಡಿದ್ದ. ಆದರೆ ನಾಧಿಸಲಿಲ್ಲ."

"ಹೀಗೇನು? ಮತ್ತೆ ಇವನು ಎಷ್ಟೋ ಮುಂದಿಯನ್ನು ಕೆಲಸಕ್ಕೆ ಕಿಚ್ಚಿಕೊಂಡಿದ್ದಾನೆ. ಬೇಕಾದರೆ ಈಗ ಬರಲಿ ಅವರು. ನಾನು ಕೇಳಿ ೋಡುತ್ತೇನೆ. ನೀವು ಇಲ್ಲಿಯೇ ಇದ್ದೀರಲ್ಲ? ಅಥವಾ ಏನು ನಿಮ್ಮ ನಾಡಿಯ ವೇಳೆಯಾಗುತ್ತ ಬಂತೊ?"

"ಇಲ್ಲ ಇಲ್ಲ. ನಮ್ಮ ಗಾಡಿಗೆ ಇನ್ನೂ ವೇಳೆಯಿದೆ. ನಾನು ಲ್ಲಿಯೂ ಹೋಗುವುದಿಲ್ಲ. ಇಲ್ಲಿಯೇ ಇರುವಷ್ಟಿದ್ದೇನೆ."

"ಹಾಗಾದರೆ, ನಾನು ಇನ್ನೊಮ್ಮೆ ಹೋಗಿ ನೋಡಿಬರುತ್ತೇನೆ"

ಆ ಹೆಂಗುಸು ಹೊರಟಿದ್ದಳು. ಅವಳನ್ನು ನೋಡುತ್ತ ನೋಡುತ್ತ ಂತ ಅಕ್ಕನಿಗೆ ಶ್ವಾಸಬಿಟ್ಟ ಸಪ್ಪಳ ಕೇಳಬಂತು. ಮೇಲೆ ಸತಾಪೆ ಪ್ಪರ. ಅವಳು ನಡೆಯತೊಡಗಿದಳು. ಗದ್ದಲ-ಗಪ್ಪಲ. ವಿಶಾಲವಾದ ಜನಸ್ತೋಮದಲ್ಲಿ ಕ್ಷಣಾರ್ಧದಲ್ಲಿಯೇ ಆ ಹೆಂಗುಸು ಎಲ್ಲಿಯೋ ಣ್ಮರೆಯಾಗಿಬಿಟ್ಟಿದ್ದಳು ಅಕ್ಕನ ಎದೆ ಧಡಧಡನೆಂದಿತು. ಅವಳಿಗೆ ಸ್ವಲ್ಪ ಹೆದರಿಕೆಯೂ ಆಯಿತು. ದಾದಾನ ಹಾಗೆ—ಛೇ, ಛೇ, ಾದಾನೇ. ಅವಳು ಒಮ್ಮೆಲೆ ಹಿಂದೆ ಸರಿದಳು. ಜರೆ, ದ ದ ಜಲ್ಲ. ಷ್ಟರಲ್ಲಿಯೇ ಜಿನ್ನೇದ ಪಟ್ಟಿಯೊಳಗಿಂದ ಅವಳು ನೋಡದ ತುಣು-ಕನ್ನು ನೋಡಿದ್ದಳು. ಸಂಜೆಯ ಮೋಡವದು.

ಅಕ್ಕನು ಸ್ಟೇಶನ್ನಿನ ಗೇಟಿಗೆ ಬಂದು ನಿಂತಳು. ಸಂಜೆ ಮುಗಿ-ಯುತ್ತ ಬಂದಿದೆ. ಸ್ಟಾಪಿನ ಮೇಲೆ, ಬಸ್ಸಿನಲ್ಲಿ, ಆಫೀಸಿನಿಂದ ತಿರುಗುವ ಜನರು ಕಿಡಕಿಯಿಂದ ನೋಡುತ್ತಿದ್ದಾರೆ. ಜಂಗುತಿಂದ ಟ್ರಂಕಿನಂತೆ ನಿಸ್ತೇಜವಾಗಿವೆ ಅವರ ಮುಖಗಳು. ಹೌರಾ ಬ್ರಿಜ್ಜಿನಮೇಲೆ ಹಳದಿ ಬಣ್ಣದ ಕ್ಷೀಣವಾದ ಬಿಸಿಲು ಜರೆದು ಅಸ್ತವ್ಯಸ್ತವಾಗಿ ಬಿದ್ದಿದೆ. ದೋಣಿ ಯೊಂದು ಗಂಭೀರವಾಗಿ ಸಿಳ್ಳು ಹಾರಿಕೆತು. ಬೆನ್ನು ತಗ್ಗಿಸಿ, ತೂಗುತ್ತ-ತೂಗುತ್ತ ಕೈಗಾಡಿಗಳು ಪೂಲಿನ ಏರನ್ನು ಏರುತ್ತಿವೆ. ಬಸ್ಸಿನಿಂದ ಕೆಳ-ಗಿಳಿದು ಡ್ರಾಯ್ವರನು ಪ್ರಶಾಂತವಾಗಿ ಮೋಡದಲ್ಲಿ ಬೀಡಿಯ ಹೊಗೆಯನ್ನು ಬಿಡತೊಡಗಿದನು. ಸಂಜೆಯು ಮುಗಿಯುತ್ತ ಬಂದಿದೆ.

ಅಕ್ಕನು ಪುನಃ ಒಳಗೆ ಬಂದಳು.

ಕೊಲ್ಯಾಪ್ಸಿಬಲ್ ರೇಲಿಂಗಿಗೆ ಆತುಸಿಂತು ತಂಗಿಯು ಗಾಡಿಯು ಹೋಗುವುದನ್ನು ನೋಡುತ್ತಿದ್ದಳು. ಕಿಡಕಿಯೊಳಗಿಂದ ತಲೆಗಳು ಹೊರಗೆ ಬಂದು ಪ್ಲಾಟ್‌ಫಾರ್ಮಿನ ಕಡೆಗೆ ನೋಡಿ ನಗುತ್ತಿವೆ. ನಗುತ್ತ ನಗುತ್ತ ಆ ಮುಖಗಳು ಸರಿದು ಹೋಗುತ್ತಿವೆ. ಹೀಗೆಯೇ ತಾನೂ ಹೋಗಬೇಕು.— ಎಂದು ಅವಳಿಗೆನಿಸಿತು. ಗಾಡಿಯ ಹಿಂದಿನ ಭಾಗವು ಪೇಗೆ ಕೀಲಿಯಂತೆ ಕಾಣಿಸುತ್ತಿದೆ! ರೂಲಿನ ಮೇಲೆ ಅಡ್ಡವಾಗಿ ಒಂದು ಪೂಲಿದೆ. ಪ್ಲಾಟ್‌ಫಾರ್ಮಿಗೆ ಅಂಟಿಕೊಂಡು ಎತ್ತರವಾಗಿ ಏರುತ್ತ ಒಂದು ರಸ್ತೆ ನೇರವಾಗಿ ಮೇಲೆ ಪೂಲಿನ ವರೆಗೆ ಹೋಗಿದೆ. ಕೈಯಲ್ಲಿ ಜೀಲಸನ್ನು ಹಿಡಿದುಕೊಂಡು ಮೂರು ಜನರು ಹೊರಟಿದ್ದಾರೆ. ಗುಡ್ಡವನ್ನು ಏರುವವರಂತೆ ನಡೆಯುತ್ತಿದ್ದಾರೆ. ಆ ಮೂವರೂ ಕಾಣಿಸದಂತಾದರೂ ತಂಗಿಯು ಹಾಗೆಯೇ ಆ ರಸ್ತೆಯ ಕಡೆಗೆ ನೋಡುತ್ತ ನಿಂತಳು. ನೋಡುತ್ತ ನಿಂತಾಗ, ಕ್ರಮೇಣ ಅವಳ ಲಕ್ಷ್ಯಕ್ಕೆ ಬಂತು, ತನ್ನ ಕಾಲುಗಳು ಬಹಳ ನೋಯುತ್ತಿವೆ ಎಂಬುದು. ಆಗ ಅವಳಿಗೆನಿಸಿತು, ಅಕ್ಕನು ತನ್ನ ಹಾದಿಯನ್ನು ನೋಡುತ್ತ ಕುಳಿತಿರಬೇಕೆಂದು.

ಅಕ್ಕನು ವೇಟಿಂಗ್-ರೂಮಿನಲ್ಲಿ ಕಾಣಿಸಲಿಲ್ಲ. ಅದಕ್ಕೆಂದು ಅವಳು ಪುನಃ ಪ್ಲಾಟ್‌ಫಾರ್ಮಿನ ಮೇಲೆ ಬಂದಳು. ಅವಳಿಗೆನಿಸಿತು, ಮನುಷ್ಯರನ್ನು ನೋಡೋಣವೆಂದು. ಆದರೆ ಒಂದು ಕ್ಷಣಮಾತ್ರವೂ ಒಬ್ಬರೂ ಜಲ್ಲಿ ಸ್ಪಷ್ಟವಾಗಿ ನಿಲ್ಲುತ್ತಿರಲಿಲ್ಲ. ಒಬ್ಬ ಮುದುಕನು "ವೇಯಿಂಗ್ ಮಶೀನಿ"ನ ಮೇಲೆ ನಿಂತು ತನ್ನ ತೂಕವನ್ನು ನೋಡಿ-ದನು. ಅವನು ತನ್ನ ಕೈಗೆ ಬಂದ, ಕಾರ್ಡನ್ನೋದಿದನು. ಆ ಮೇಲೆ ಜಾಪುಕ್ಕಾಲನ್ನು ಹಾಕುತ್ತ ಹೋಗಿಬಿಟ್ಟನು. ಆ ಮೇಲೆ ತಂಗಿಯು ಜಾಹೀರಾತನ್ನು ಓದತೊಡಗಿದಳು. ಓದುತ್ತ ಓದುತ್ತ ಅವಳು ಪುಸ್ತಕದ ಅಂಗಡಿಯವರೆಗೆ ಬಂದಳು. ಗುಂಪುಗುಂಪಾಗಿ ಪುಸ್ತಕ ಗಳನ್ನು ಪಚ್ಚಿಟ್ಟಿದ್ದರು. ಬಹಳ ಜನರು ಬರುತ್ತಾರೆ; ಪುಸ್ತಕವನ್ನು ನೋಡುತ್ತಾರೆ. ತಿರುವಿಹಾಕುತ್ತಾರೆ. ಆದರೆ ಬಹಳ ಜನರು, ಏನೂ ಕೊಂಡುಕೊಳ್ಳದೆ ಹಾಗೆಯೇ ಹೋಗಿಬಿಡುತ್ತಾರೆ. ತಂಗಿಯು ಸದ್ದಿ-ಲ್ಲದೆ ಆ ಪುಸ್ತಕಗಳ ಸಮೀಪಕ್ಕೆ ಬಂದಳು.

"ಕೇವಲ ಮೂರು ನಿಮಿಷ ಉಳಿದಿವೆ. ಇನ್ನೂ ಇವಳ ಪತ್ತೆ ಇಲ್ಲ. Irresponsible" ತಂಗಿಯು ಗೋಣು ಹೊರಳಿಸಿ ನೋಡಿ-ದಳು. ಐದಾರು ಹುಡುಗ-ಹುಡುಗಿಯರು ನಿಂತಿದ್ದರು.

"ಅವಳ ಸಲುವಾಗಿ ನಿಂತರೆ, ನಮಗೆ ಸಹಿತ ಗಾಡಿ ತಪ್ಪಿ-ಹೋಗುವುದು!"

"ಹಾಗಾದರೆ?"

ತಮ್ಮತಮ್ಮೊಳಗೆ ಏನು ಮಾಡಬೇಕೆಂದನ್ನು ನಿಶ್ಚಯಿಸಿ ಅವರು ಹೋಗಿಬಿಟ್ಟರು. ಅಷ್ಟರಲ್ಲಿಯೇ ಓಡುತ್ತ ಓಡುತ್ತ ಒಬ್ಬ ಹುಡುಗಿ ಬಂದಳು. ಕನ್ನಡಕವಿತ್ತು. ನೋಡಲು ಬಹಳ ತೆಳ್ಳಗೆ. ಚಿಕ್ಕವಳಿ-ದ್ದಳು. ಬಹುಶಃ ಎಳನೆಯ ಈಯತ್ತೆಯಲ್ಲಿರಬೇಕು. ಅವಳು ಕಾಣಿ-ಸಿದ ಕೂಡಲೆ ತಂಗಿಯು ಅವಳನ್ನು ತಟ್ಟನೆ ಗುರುತಿಸಿದಳು : 'ಎಲ್ಲರೂ ಇದುವರೆಗೆ ದಾರಿ ನೋಡುತ್ತಿದ್ದ ಹುಡುಗಿ ಇವಳೇ' ಎಂದು.

"ಅವರೆಲ್ಲರೂ ಇದೇ ಈಗ ಹೋದರು."

"ಆಂ? ಹೋದರೆ?"

ಆ ಹುಡುಗಿಯು ಕೈಯಲ್ಲಿಯ ಸಣ್ಣ ಬ್ಯಾಗನ್ನು ಮುಷ್ಟಿಯಲ್ಲಿ ಇನ್ನೂ ಬಿಗಿದು ಹಿಡಿದಿದ್ದಳು. ಕನ್ನಡಕವನ್ನು ಒತ್ತಿ ಮೂಗಿನ ಮೇಲೆ

ಯಾಗಿ ಕೂಡಿಸಿದಳು. ಆ ಮೇಲೆ ಅವಳು ತಂಗಿಯ ಕಡೆಗೆ ನೋಡಿದಳು. ಆ ನೋಟದಲ್ಲಿ ಪ್ರಶ್ನೆಯಿತ್ತು : 'ಇನ್ನೇನು ಮಾಡೋಕು ದಾನು ?'

" ನೀವು ಒಬ್ಬರೇ ಯಾಕೆ ಹೋಗುವುದಿಲ್ಲ ? "

" ಒಬ್ಬಳೆ ? ಓ, ಹೋಗಬಹುದಲ್ಲ. ಅದರಲ್ಲೇನಿದೆ ? ಆದರೆ ಏನೆ ಸಿಕ್ಕೀತೋ ಇಲ್ಲವೋ ಎಂದು ಸಂಶಯ, ಅಷ್ಟೆ. "

ಹಾಗೂ ಒಮ್ಮೆಲೆ ಅವಳು ಬೆಚ್ಚಿಬಿದ್ದು ನುಡಿದಳು : " ಅರೆ "– ಹುಡುಗ ಗಡಬಡಿಸಿಕೊಂಡು ಬಂದ; ಆ ಗುಂಪಿನಲ್ಲಿ ತಂಗಿಯು ಶಿವನನ್ನು ನೋಡಿದ್ದಳು. ಆದರೆ ಇವನು ಮತ್ತೇಕೆ ತಿರುಗಿ ಬಂದ ? ತಂಗಿಯು ಕಿವಿಗೊಟ್ಟು ಕೇಳಿದಳು:

" ನೀವು ಇದೇ ಈಗ ಬಂದಿರೆಂದು ಕಾಣುತ್ತದೆ "– ಹುಡುಗನು ಕೇಳಿದ.

" ಹೌದು. ಮತ್ತೆ ನೀವು ?– "

" ನಾನು ಕೂಡ– "

" ಹಾಗಾದರೆ ಗಾಡಿಯಂತೂ ಹೋಯಿತು. ಯಾವುದೋ ಒಂದು ಮೆರವಣಿಗೆಯ ಸಲುವಾಗಿ ನಮ್ಮ ಟ್ರ್ಯಾನು ನಡುವೆಯೇ ಸಿಕ್ಕುಬಿದ್ದಿತು. ಅದಕ್ಕಾಗಿ ಈ ಎಲ್ಲ ರಗಳೆ."–

" ಈ ಮೆರವಣಿಗೆ, ಈ ಸೋರ್ಜಾ ಇಂಥವೆಲ್ಲವನ್ನೂ ಕಾಯ್ದೆಯಿಂದ ಬಂದುಮಾಡಬೇಕು. ಆದರೆ—ಈಗ ಇನ್ನೇನು ಮಾಡುವುದು ? ಗಾಡಿಯಂತೂ ತಪ್ಪಿದಂತಾಯಿತು."

"ಹೌದಲ್ಲ: ಅಲ್ಲದೆ ನಾನು ಮನೆಯಲ್ಲಿ ಹೇಳಿ ಬೇರೆ ಬಂದಿದ್ದೇನೆ. ತಿರುಗಿ ಬರಲು ರಾತ್ರಿ ಹತ್ತು ಹನ್ನೊಂದಾಗಬಹುದೆಂದು! ಲಗ್ನಕ್ಕೆ ಹೋಗುವುದೆಂದ ಮೇಲೆ ಇಷ್ಟು ತಡವಾಗುವುದು ಸಹಜವೇ.ಅಂಥಪ್ಪ ನಾನು ಈಗ ಬೇಗನೆ ಹೋದರೆ ಎಲ್ಲರೂ ನಗುತ್ತಾರೆ. "

" ಹಾಗಾದರೆ.... ಅದಕ್ಕಿಂತ ಇಲ್ಲಿಯೇ ಎಲ್ಲಿಯಾದರೂ ಸ್ವಲ್ಪ ಸುತ್ತಾಡಿ ಬರೋಣ. ಇಲೆಕ್ಟ್ರಿಕ್ ಟ್ರೇನಿನಲ್ಲಿ ಕೂತಿದ್ದಿರೇನು ? "

"ಇಲ್ಲ. ಆದರೆ ಮೊದಲು ಈ ಕ್ಯಾಂಟೀನಿನೊಳಗೆ ಏನಾದರೂ ಸ್ವಲ್ಪ ತಿಂದು ಬರುವಾ."

ಅವರಿಬ್ಬರೂ ಹೋಗಿಬಿಟ್ಟರು. ಅಷ್ಟರಲ್ಲಿಯೇ ಸ್ಟೇಶನ್ನಿನಲ್ಲಿಯ ಎಲ್ಲ ದೀಪಗಳು ಒಮ್ಮೆಲೆ ಝಗ್ಗೆಂದು ಹತ್ತಿದವು. ಅವುಗಳ ಬಣ್ಣ ಬೇರೆಯಿದೆ ಎಂದು ತಂಗಿಗೆನಿಸಿತು. ಬೆಳಕುಭೂತಗಳಂತೆ ನೆರಳು ಬಿದ್ದಿವೆ!! ಒಂದು ಗಾಡಿ ಬರಹತ್ತಿದೆ. ಇರುವೆಗಳಂತೆ ಜನರು ಗುಂಪು ಗುಂಪಾಗಿ ಸ್ಟೇಶನ್ನಿನಲ್ಲಿ ನುಗ್ಗುತ್ತಿದ್ದಾರೆ. ಇಷ್ಟು ಜನರನ್ನು ಒಂದೇ ಕಡೆಗೆ ನೋಡುವುದು ಅವಳಿಗೆ ಸೇರಲಿಲ್ಲ. ಅವಳು ಮತ್ತೆ ವೇಟಿಂಗ್ ರೂಮಿಗೆ ಬಂದಳು.

ಅವ್ವನು ತಮ್ಮನ ಕಪಾಳಿಗೆ ಫಟ್ಟೆಂದು ಬಿಗಿದಿದ್ದಳು, ಮತ್ತು ಚೀರಿಕೊಂಡಿದ್ದಳು. " ಮಗನೇ, ಇನ್ನೂ ಇಷ್ಟು ಯಾಕೆ ಮುಂದೆ ಹೋಗಲಿಲ್ಲ. ?" ಯಾರದೋ ಮನೆಯಲ್ಲಿ ಲಗ್ನವಿತ್ತು. ಅಲ್ಲಿಗೆ ಅವನು ಹೋಗಿದ್ದನು. ನಿಮಂತ್ರಣ ಬಿಮಂತ್ರಣ ಏನೂ ಇಲ್ಲ. ಅಲ್ಲಿ ಅದು ಯಾರದೋ ಲಕ್ಷಕ್ಕೆ ಬಂದಿತ್ತು. ಅವರು ಅವನನ್ನು ಸಿಕ್ಕಂತೆ ಥಳಿಸಿದ್ದರು. ಅಕ್ಕನ ಮುಖದ ಕಡೆಗೆ ನೋಡುತ್ತ ಅವನು ಮುಳುಮುಳು ಅತ್ತಿದ್ದನು. ಆಗ ತಮ್ಮನ ಮುಖವು ಹೀಗೆಯೇ ಚಪ್ಪಟೆಯಾಗಿತ್ತು.

ಅಕ್ಕನು ಇನ್ನೂ ಹೆಚ್ಚು ಆ ಫೋಟೋಗಳ ಸಮೀಪಕ್ಕೆ ಸರಿದಳು. ಲೈಲುಗಾಡಿಯ ಕೆಳಗೆ ಸಿಕ್ಕು ಸತ್ತವರ ಫೋಟೋಗಳು. ಕಾಜಿನ ಮೇಲೆ ತನ್ನ ನೆರಳು ಬಿದ್ದಿದೆ. ಅದರಲ್ಲಿ ತನ್ನ ಮುಖವು ಕಾಣಿಸುತ್ತದೆ. ಮುಖ ನೋಡಲೆಂದು ಅವಳು ಸ್ವಲ್ಪ ಹಿಂದೆ ಸರಿದಳು. ಆ ಮೇಲೆ ಮಗ್ಗಿಲಿಗೆ ಸರಿದಳು. ಎಷ್ಟು ಹೀನ, ಎಷ್ಟು ಭಯಂಕರ ಎಂದೆನಿಸಿತು. ಅವಳಿಗೆ, ದಾದಾ ಒಮ್ಮೆ ಎತ್ತರದ ಧ್ವನಿಯಲ್ಲಿ ಹೇಳಿದ್ದನು: "ನಾನಾದರೂ ಏನು ಮಾಡಲಿ ? ನನ್ನಿಂದೇನು ಸಾಧ್ಯವಿದೆ? ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇನೆ ನಾನು...." ಅಕ್ಕನಿಗೆ ಆ ಕಾಜಿನ ತುಂಬೆಲ್ಲ ದಾದಾನ ಮುಖವು ಕಾಣಿಸತೊಡಗಿತು. ಅವಳಿಗೆ ಬಹಳ ಕೆಡಕೆನಿಸಿತು, ವೇದನೆಮಯವಾಯಿತು. ಗಾಡಿಯ ಕೆಳಗೆ ಸಿಕ್ಕು ಸತ್ತವರ ಬಗ್ಗೆ ಅವಳಿಗೆ ಅಪಾರ ಕರುಣೆ ಹುಟ್ಟಿತು.

ಮತ್ತೆ ಅಕ್ಕನಿಗೆ ಆ ಹೆಂಗುಸು ಕಾಣಿಸಿದಳು. ಗಂಡಸಿನ ಕೈಯಲ್ಲಿ ಪುಟ್ಟದಾದ ಸೂಟ್‌ಕೇಸ್ ಹಾಗೂ ಬೆಡಿಂಗ್. ಅವರು ಮಾತಾಡುತ್ತಿಲ್ಲ. ಓಡುತ್ತ ಓಡುತ್ತ ಹೋಗಿ ಅಕ್ಕನು ಹೆಂಗುಸಿನ ಕೈಹಿಡಿದಳು.

''ಇವರೇ ಏನು ?"

ಹೆಂಗುಸು ತಲೆಯಾಡಿಸಿದಳು.

" ಹೇಳಿದಿರೇನು ?"

" ಇಲ್ಲ. "

" ಹಾಗಾದರೆ ಅವರ ವಿಳಾಸ ಕೊಡಿರಿ ನನಗೆ. ನಾನು ದಾದಾಸಿಗೆ ಕಳಿಸುತ್ತೇನೆ." ಮಾತಾಡುವುದು ಮುಗಿದ ಮೇಲೆ ಅಕ್ಕನು ಅವಳ ಕಡೆಗೆ ನೋಡುತ್ತ ನಿಂತಳು. ಪುಟ್ಟ ಮುಖಕ್ಕೆ ಶೋಭಿಸುವಂತಿದ್ದ ಎರಡು ಕಣ್ಣುಗಳು; ದಪ್ಪವಾದ, ಗನ್ನಡ ತುದಿಯ ವರೆಗೆ ಜೋತುಬಿದ್ದ ಹಾಗೂ ಮಣ್ಣಿನಂತೆ ಕಪ್ಪಾಗಿದ್ದ ಕೆಳದುಟಿಯು ಅವಳಿಗೆ ಕಾಣಿಸಿತು.

" ಅಲ್ಲಿಯ ನೌಕರಿ ಮುಗಿಯಿತು ! "

ಅಕ್ಕನು, ಆ ಹೆಂಗುಸು ದೂರದೂರ ಹೋಗುತ್ತಿರುವುದನ್ನು ನೋಡಿದಳು. ಅವಳ ಹೆಗಲ ಮೇಲೆ ಸೂಟಕೇಸ್ ಹಾಗೂ ಬೆಡಿಂಗ್ ಕೊಟ್ಟಂತೆ ಕಾಣಿಸುತ್ತಿತ್ತು ದೂರದಿಂದ. ನೋಡುತ್ತ, ನೋಡುತ್ತ ಅಕ್ಕನಿಗೆ ತೂಕಡಿಗೆ ಬಂದಂತೆನಿಸತೊಡಗಿತು. ರೆಪ್ಪೆಗಳು ಜಡವಾಗ ತೊಡಗಿದ್ದುವು. ಅತಿ ಕಷ್ಟದಿಂದ ಆ ಕಡೆಗೆ ಈ ಕಡೆಗೆ ನೋಡಿದಾಗ, ಅವಳಿಗೆ ನೆನಪಾಯಿತು : ತಂಗಿಯು ದಾರಿಕಾಯುತ್ತ ಕುಳಿತಿರಬಹುದೆಂದು.

ಅಕ್ಕನು ವೇಟಿಂಗ್‌ರೂಮಿಗೆ ಬಂದು ನೋಡಿದಾಗ, ತಂಗಿಯು ಬಂದು ಬಾಕಿನ ಮೇಲೆ ಕುಳಿತಿದ್ದಳು. ಅವಳ ಹತ್ತಿರ ಕೂಡುತ್ತ ಕೇಳಿದಳು : " ಇಷ್ಟೊತ್ತಿನ ವರೆಗೆ ಎಲ್ಲಿ ಹೋಗಿದ್ದೆ ? "

" ಅಲ್ಲಿ. ಆ ಕಡೆಗೆ."

ಅವರಿಬ್ಬರೂ ಒಬ್ಬರಿಗೊಬ್ಬರೂ ಹತ್ತಿಕೊಂಡು ಮೌನವಾಗಿ ಕುಳಿತರು. ಸ್ಟೇಶನ್ನಿನ ಗದ್ದಲದಿಂದ ಅದಿಷ್ಟೇ ಸ್ಥಳವು ಬಿಳಿಚಿಂತಿತ್ತು. ವಿಶೇಷ ಜನರಿರಲಿಲ್ಲ. ಬಹಳ ದೂರ ಹೋಗುವ ಪ್ರವಾಸಿಕರಷ್ಟೇ ಅಲ್ಲಿ ಕುಳಿತಿದ್ದರು. ಅಕ್ಕನು ತೊಡೆಯ ಮೇಲೆ ಕೈಯಿಟ್ಟುಕೊಂಡು, ಕೆಳಗಿನ ಹಾಸುಗಲ್ಲನ್ನು ನೋಡುತ್ತ ಕುಳಿತಿದ್ದಿಳು. ಜಕನಾತ್ಮಾತ್ಮಾಗಿ ಮುಖ-

ನನ್ನು ಮೇಲೆತ್ತಿ ಅವಳೆಂದಳು : " ಇಲ್ಲಿಯೇ ಏಕೆ ಕೂಡುವುದು ? ಕಡೆ. ಆ ಕಡೆಗಾದರೂ ಹೋಗಿ ಬರೋಣ."

ಸಾವಕಾಶವಾಗಿ ಅವರು ಸ್ಕೇಟಿನ್ನಿನ ಇನ್ನೊಂದು ಭಾಗದ ಕಡೆಗೆ ಎಂದರು. ಗಡಿಬಿಡಿಯಲ್ಲಿದ್ದ ಜನರು ಅವರ ಎಡಕ್ಕೂ ಬದಿಗಳಿಂದ ಹಾಯ್ದು ಹೋಗುತ್ತಿದ್ದರು. ಅವರು ಎಲ್ಲಿಯೋ ಹೋಗಿಬಿಡುತ್ತಿದ್ದರು. ಲಾವುಡ್ ಸ್ಪೀಕರಿನ ಧ್ವನಿಯಾಯಿತು. ಸತಾರವ ಸ್ವರ-ವೆದ್ದಿತು. ರೈಲು ಸಿಳ್ಳುಹೊಡೆಯಿತು. ಇಬ್ಬರೂ ಸಹೋದರಿಯರೂ ಒಂದೇ ಕಾಲಿನ ಮೇಲೆ ಭಾರ ಹಾಕಿ ನಿಂತರು.

ಕ್ಯಾಂಟೀನಿನ ಬಾಗಿಲನ್ನು ನೂಕಿ ಒಬ್ಬ ಹುಡುಗ. ಒಬ್ಬ ಹುಡುಗಿ ಹೊರಗೆ ಬಂದರು. ತಂಗಿಯು ಅವನ್ನು ನೋಡಿದಳು. ಅವರು ಇನ್ನು ತಿರುಗಾಡಲು ಹೋಗುವರೆಂದು ಅವಳಿಗೆನಿಸಿತು. ಅವರು ನಡೆಯು-ವುದರ ಕಡೆಗೆ ಲಕ್ಷ್ಯಕೊಟ್ಟಳು. ಪೆಬ್ಬಲ್ಲನೆ ಕಳ್ಳನೋಟದಿಂದ ಕ್ಯಾಂಟೀ-ನಿನ ಬಾಗಿಲನ್ನು ನೋಡಿದಳು. ಒಬ್ಬ ಮನುಷ್ಯನು ಬಾಗಿಲನ್ನು ತೆಗೆದು ಹೊರಗೆ ಬಂದನು. ಅಷ್ಟರಲ್ಲಿಯೇ ಅವಳಿಗೆ ಒಳಗಿನದೆಲ್ಲ ಕಾಣಿಸಿತು.

" ಅದೇನು ? "

" ಹಾಟೆಲ್ಲು."

ತಂಗಿಯು ಉಗುಳಿದಳು. ಕಣ್ಮುಚ್ಚಿದಳು. ಬಾಗಿ, ಕೆಮ್ಮಿದ್ದನ್ನೆಲ್ಲ ನುತ್ತೆ ಉಗುಳಿದಳು ಅಕ್ಕನು ಅವಳ ಬೆನ್ನ ಮೇಲೆ ಕೈಯಿಟ್ಟಳು; ಅವಳನ್ನು ಸಮೀಪಕ್ಕೆ ಎಳೆದುಕೊಂಡಳು.

" ಇಲ್ಲಿಯ ನೀರು ಬಹಳ ತಣ್ಣಗಿದೆ ! "

" ಇರಲಿ. ಕುಡಿದು ಬಾ ಹೋಗು. ಹೊಟ್ಟೆಯಲ್ಲಿ ಏನಾನರೂ ಇರಲಿ."

ತಂಗಿಯು ತಲೆಯಲ್ಲಾಡಿಸಿದಳು.

ಕಳಗೆ ಬಾಗಿ ಅಕ್ಕನು ಕೇಳಿದಳು: " ಏನು ?"

" ಏನೂ ಇಲ್ಲ."

" ಹಸಿವೆಯಾಯಿತೇನು ?"

" ಇಲ್ಲ."

ಕ್ಯಾಂಟೀನಿನ ಬಾಗಿಲು ತೆರೆಯಿತು. ಅವರಿಬ್ಬರೂ ಕಣ್ಣು ಹೊರಳಿಸಿದರು. ಬಾಗಿಲು ಬಂದಾದ ಸಪ್ಪಳು ಮಾತ್ರ ಕೇಳಿಸಿತು. ರೈಲುಗಾಡಿ ಸೀಟಿ ಹೊಡೆಯಿತು. ತಂಗಿ ಪಿಸುಗುಟ್ಟಿದಳು." ಥೇಟ್ ಏನು ಊದಿದಂತೆ ಸಪ್ಪಳವಾಗುವುದಲ್ಲವೆ ?"

" ಹೌದು."

"ಹೌದು!" "ಅಕ್ಕಾ ನಿನಗೆ ನೆನಪು ಇದೆಯೇನು? ನಾವು ಒಂದು ಸಲ ಮೋಟಾರ್ ಬೋಟಿನಲ್ಲಿ ಹೋಗಿದ್ದೆವು. ಅಪ್ಪ ಆಗ ಜತೆಯಲ್ಲಿ-ದ್ದರು."

" ಮತ್ತೆ ಆ ಬೋಟಿನ ಡ್ರಾಯಪ್ಪರನಿದ್ದನಲ್ಲ, ಅವನ ಒಂದು ಹಲ್ಲು ಬಂಗಾರದ್ದಿತ್ತು. ಅವನು ನನ್ನನ್ನು ತನ್ನ ತೊಡೆಯಮೇಲೆ ತೆಗದುಕೊಂಡಿದ್ದ."

" ಹೌದು ಮತ್ತೆ, ಅವನು ಇಂಜನ್ನಿನ ಸೀಟಿಹೊಡೆದಾಗಲೆಲ್ಲ ನೀನು ಅಂಜಿ ಅವನನ್ನು ಜಪ್ಪಿಕೊಂಡು ಬಿಡುತ್ತಿದ್ದಿ."

"ಛೀ. ನನಗೆ ಸ್ವಲ್ಪ ಕೂಡ ಅಂಜಿಕೆ ಬಂದೇ ಇಲ್ಲ, ಆದಿವಸ."

ಅಕ್ಕನು ನಗುತ್ತ ತೋರಿಸಿದಳು: "ಅಲ್ಲಿ ನೋಡು."

ಅದೇ ಹೊಸದಾಗಿ ಲಗ್ನವಾದ ವರನು ಕನ್ಯೆಯನ್ನು ಮನೆಗೆ, ಕರೆದುಕೊಂಡು ಹೊರಟಿದ್ದ. ಹೊಸ ಟ್ರಂಕು, ಹೊಸ ಹೋಲ್ಡಾಲು ಹೊಸ ಅರಿವೆ, ಹೊಸ ಆಭರಣ. ಮೇಲೆ ತಲೆಗೆ ಬಾಸಿಂಗ. ಕನ್ಯೆಯು ಭಾರವಾದಂತೆ ನಡೆಯುತ್ತಿದ್ದಾಳೆ. ಗಂಡನು 'ಫುಕ್ ಫುಕ್' ಸಿಗರೇಟು ಸೇದುತ್ತಿದ್ದಾನೆ.

" ಅಕ್ಕಾ, ಅವಳ ಕೂದಲನ್ನು ನೋಡಿದೆಯೇನು ? ಮುಂದೆ ಬಹಳ ತೆಳ್ಳಗಿವೆ."

" ಹೌದು."

" ಮತ್ತೆ ಆ ಬಳೆಗಳಿಗೆ, ಅಲ್ಲ ಅದೇನೋ— ರೆಸ್‌ಲೆಟ್, ಅಥವಾ ಮುತ್ತೇನೊ ಅನ್ನುತ್ತಾರಲ್ಲವೆ ?"

" ಹೌದು."

"ಅವರೆ ವರನು ಬಹಳ ವಯಸ್ಸಾದವನಿದ್ದಾನೆ!"

"ಹೌದು!"

" ಅಕ್ಕಾ, ದಾದಾನ ಆ ಗೆಳೆಯ ಮತ್ತೆ ಎಂದೂ ಯಾಕೆ ಬರಲಿಲ್ಲ."

" ಯಾರಿಗೆ ಗೊತ್ತು !"

" ಎಷ್ಟು ಒಳ್ಳೆಯವನಿದ್ದನು—ಅಲ್ಲವೆ ?"

ಅಕ್ಕನು ಅದಕ್ಕೆ ಏನೂ ಉತ್ತರ ಕೊಡಲಿಲ್ಲ.

"ಒಮ್ಮೆ ಅವನು ಚಾಕಲೇಟ್ ತಂದುಕೊಟ್ಟಿದ್ದನು. ನಿನಗೆ ನೆನಪಿದೆಯೆ ?"

ಉತ್ತರ ದೊರೆಯಲಿಲ್ಲವೆಂದು ತಂಗಿಯು ಅಷ್ಟಕ್ಕೇ ನಿಲ್ಲಿಸಲಿಲ್ಲ.

" ಅಪ್ಪನು ಅನ್ನುತ್ತಿದ್ದಳು, ನೀನು ಅವನಿಗೆ ಬಹಳ ಸೇರುತ್ತಿ-ದ್ದೆಯಂತೆ !"

" ನೀನು ಸುಮ್ಮನಿರು....ಇನ್ನು ಸಾಕು !"

" ಅವರೆ—ಅವನು ಬರಲಿಲ್ಲವೆಂದು ನಿನಗೆ ಕೆಟ್ಟೆನಿಸಿತು, ಅಲ್ಲವೆ ?"

ಚೆಟ್ಟನೆ ಅಕ್ಕನು ಹೊರಳಿ ಎದ್ದುನಿಂತಳು. ತಂಗಿಯು ಒಮ್ಮೆಲೆ ಸುಮ್ಮನಾದಳು. ಆ ಅತೀ ಭವ್ಯವಾದ ಸ್ಕೇಟಿನ್ನಿನಲ್ಲಿ, ಆ ಗಲಭೆ-ಗೊಂದಲದಲ್ಲಿ ಭೂತಗಳಂತಹ ಅವಾಸ್ತವ್ಯವಾದ ನೆರಳುಗಳನ್ನು ಚೆಲ್ಲಿ ಕಣ್ಣಿಗೆ ಕಣ್ಣುಹಚ್ಚಿ ಆ ಇಬ್ಬರೂ ಸಹೋದರಿಯರು ನಿಂತಿದ್ದರು. ಅವರ ಎಡ-ಬಲದಲ್ಲಿಯೇ ಜನ ಹೋಗುತ್ತಿತ್ತು; ಬರುತ್ತಿತ್ತು. ರೈಲು ಗಾಡಿಯ ಸಿಳ್ಳುಗಳು ಪುನಃ ಪುನಃ ಚೀರುತ್ತಿದ್ದವು. ಲಾವುಡ್ ಸ್ಪೀಕರಿನಮೇಲೆ ಸಿತಾರ್ ಮಿಡಿಯುತ್ತಿತ್ತು.

ತಂಗಿಯ ಕಣ್ಣುಗಳು ಒದ್ದೆಯಾದವು. ಬಂದ ಕೆಮ್ಮನ್ನು ತಡೆ-ಹಿಡಿಯಲು ಅವಳು ಕೆಳಗೆ ಬಾಗಿದಳು. ಸ್ವಲ್ಪ ಪೇಳೆಯಲ್ಲಿ ಕೆಮ್ಮು ನಿಂತಿತು. ಬಾಯೊರಿಸಿಕೊಂಡು ಅವಳು ಬಾಗಿ ಅಕ್ಕನನ್ನು ನೋಡಿ, ದೀನಧ್ವನಿಯಿಂದ ನುಡಿದಳು.

" ನನಗೆ ನೀರು ಕುಡಿಯಬೇಕಾಗಿದೆ. "

" ಹಾಗಾದರೆ ಕುಡಿದು ಬಾರಲ್ಲ ! "

ತಂಗಿಯು ಹೋಗಲಿಲ್ಲ. ಮತ್ತೆ ಅವಳನ್ನು ಬಾಗಿ ನೋಡಿದಳು; ಎಂದಳು : " ಒಬ್ಬ ಹೆಂಗುಸಿನ ಪರಿಚಯವಾಯಿತು ಅಗಲೇ, ಒಬ್ಬಳೇ ಹೊರಟಿದ್ದಾಳೆ. ಅವಳು ತನ್ನ ಗಂಡನ ಕೂಡ ಮುಂದಿನ ವರ್ಷ

ಟ್ರೈಸ್ಪಿಗೆ ಹೋಗುವವಳಿದ್ದಾಳೆ.'' ಅಕ್ಕನು ಎದ್ದು ನಿಂತಿದ್ದರೂ ಮಲಗಿದವಳಂತಿದ್ದಳು. ಸತತವಾಗಿ ಏಕದೃಷ್ಟಿಯಿಂದ ಮುಂದೆಯೇ ನೋಡಹತ್ತಿದಳು. '' ಇನ್ನು ನಾವು ಏನು ಮಾಡಬೇಕು ? '' ಎಂದು ತಂಗಿಯು ಕೇಳಿದಳು.

'' ನನಗೆ ಗೊತ್ತಿಲ್ಲ.''

'' ದಾದಾ ಏನು ಹೇಳಿದ್ದ ನಿನಗೆ ? ''

ಅಕ್ಕನು ಜ್ಞಾಪಿಸಿಕೊಳ್ಳಲು ಪ್ರಯತ್ನಿಸಿದಳು. ಆದರೆ ಅವಳಿಗೆ ತೂಕಡಿಕೆ ಬಂದಿದೆ. ಜಡವೆನಿಸುತ್ತಿದೆ. ಕಣ್ಣು ಭಗ ಭಗ ಉರಿಯುತ್ತಿದೆ. ಅವಳು ಮತ್ತೊಮ್ಮೆ ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದಳು.

'' ಅವರು ಈಗ ಬರಬಹುದೇನು ? ''

'' ಯಾಕೆ ? ''

ತಂಗಿಗೆ ಆಶ್ಚರ್ಯವೆನಿಸಿತು. ಅಕ್ಕನು ಇಷ್ಟೆಲ್ಲವನ್ನೂ ಹೇಗೆ ಮರೆತಳು ? ಅವಳಿಗೆ ಆಗಿದೆಯಾದರೂ ಏನು ? ಅವಳು ಅಕ್ಕನನ್ನು ಎಚ್ಚರಿಸಲೆಂದು ಅವಳ ಮೈಯನ್ನು ಅಲುಗಾಡಿಸಿದಳು.

'' ಹಾಗಾದರೆ ನಾವು ಬಂದದ್ದಾದರೂ ಯಾಕೆ ಇಲ್ಲಿ ?—ಯಾಕೆ ಹೇಳಲ್ಲ ! ''

ಕಣ್ಣು ತೆರೆದು ಅಕ್ಕನು ನಾಲ್ಕೂ ಕಡೆಗೆ ನೋಡಿದಳು. ಮನುಷ್ಯರು. ಬೆಳಕು. ಸಪ್ಪಳ. ಮತ್ತೆ ಅವಳು ಇದಿರಿಗೆ ನೋಡಲು ಸುರು ಮಾಡಿದಳು. ಆ ಮೇಲೆ ಬೇಸತ್ತ ಧ್ವನಿಯಲ್ಲಿ ಅಂದಳು : '' ನಾವು ಸ್ವಲ್ಪ ಹೊತ್ತು ತಡೆಯೋಣ. ಹಾದಿ ಕಾಯೋಣ. ಆ ಮೇಲೆ ಅವರು ಬರುವರು. ನಮಗೆ ಕೇಳುವರು. ನಿಮ್ಮಕೂಡ ಯಾರು ಇದ್ದಾರೆ ? ನೀವು ಎಲ್ಲಿ ಹೊರಟಿದ್ದೀರಿ ? ಎಂದು. ನಾವು ಹೇಳೋಣವಂತೆ—ಜತೆಯಲ್ಲಿ ಯಾರೂ ಇಲ್ಲ. ಬರೀ ನಾನಿಬ್ಬರೇ ಇಬ್ಬರು ಅಕ್ಕತಂಗಿಯರು. ಮುಂಬೈಗೆ ಹೊರಟಿದ್ದೇನೆ. ಅಲ್ಲಿ ಸಿನೇಮಾವಲ್ಲಿ ಕೆಲಸ ಮಾಡುವವರಿದ್ದೇವೆ. ಆ ಮೇಲೆ ಅವರು ನಮ್ಮನ್ನು ಹಿಡಿದುಕೊಂಡು ಹೋಗುವರು. ನಮ್ಮ ವಿಳಾಸ ಕೇಳುವರು. ಆಗ ನಾವು ಏನೂ ಹೇಳುವುದೇ ಬೇಡ. ಆ ಮೇಲೆ ಅವರು ನಮ್ಮನ್ನು ರಿಮಾಂಡ್-ಹೋಮಿಗೆ ಕಳಿಸುವರು. ''

'' ಅಲ್ಲಿ ನಾವೇನು ಮಾಡಬೇಕಾಗುವುದು, ಅಕ್ಕಾ ? ''

'' ಅಕ್ಕಾ, ಅಕ್ಕಾ ನಡೆ. ನಾವು ಓಡಿ ಹೋಗೋಣ. ''

ತಕ್ಕನಿಗೆ ಬಹುಶಃ ಅದು ಕೇಳಿಸಿರಲಿಕ್ಕಿಲ್ಲವೆಂದು ತಂಗಿಯು ಪುನಃ ಮತ್ತೊಮ್ಮೆ ಅದನ್ನೇ ಅಂದಳು. ಮೆಲ್ಲಮೆಲ್ಲನೆ ಅಕ್ಕನ ತೂಕಡಿಕೆ ಹೋಯಿತು. ತಣ್ಣಗಾದ ನಿರ್ಲಿಪ್ತ ಧ್ವನಿಯಲ್ಲಿ ಅವಳು ಕೇಳಿದಳು, '' ಓಡಿ ಹೋಗುವುದಾದರೂ ಎಲ್ಲಿಗೆ ? ''

'' ಎಲ್ಲಿಯಾದರೂ....ಎಲ್ಲಿಯಾದರೂ, ಬರುತ್ತೀಯಾ ? ''

'' ಆ ಮೇಲೆ ? ''

ತಂಗಿಯು ಬರೀ ನೋಡುತ್ತ ಕುಳಿತಳು. ಅಕ್ಕನು ಅವಳನ್ನು ತನ್ನ ಕಡೆಗೆ ಎಳೆದುಕೊಂಡಳು. ಕೆಳಗೆ ಬಾಗಿ, ಅವ ಕಿವಿಯ ಹತ್ತಿರ ತನ್ನ ಬಾಯಿಯನ್ನೊಯ್ದು ಅವಳು ಕೇಳಿದಳು : '' ನಿನಗೆ ಅಂಜಿಕೆ ಬಂತೇನು ? ''

ತಂಗಿಯು ಏನೂ ಮಾತಾಡಲಿಲ್ಲ. ಪ್ರತಿಯಾಗಿ, ತೊಡೆಗಳಲ್ಲಿ ಮುಖವನ್ನು ಮುಚ್ಚಿ ಅವಳು ಗದಗದ ನಡುಗತೊಡಗಿದಳು. ಎರಡೂ ಕೈಗಳನ್ನೂ ಅವಳ ಬೆನ್ನಮೇಲಿಟ್ಟು ಅಕ್ಕನು ಗಂಭೀರಪಾಗಿ ಕುಳಿತಳು.

ಒಬ್ಬಳಿಗೆನಿಸುತ್ತಿತ್ತು, ಮನುಷ್ಯರ ಮುಖಚರ್ಯೆಗಳೆಲ್ಲ ಜಂಗುತಿಂದ ಟ್ರಂಕಿನಂತಿವೆ, ಎಂದು.

ಇನ್ನೊಬ್ಬಳಿಗೆನಿಸುತ್ತಿತ್ತು, ನಗುನಗುತ್ತ ರೈಲಿನಲ್ಲಿಯ ಮುಖಗಳೆಲ್ಲ ಕ್ರಮೇಣ ಸರಿದುಹೋಗುತ್ತಿವೆ, ಎಂದು.

ದಶಾವತಾರ

" ರಂಜನ " ಭಟ್ಟ, ಮದ್ರಾಸು

ಹತ್ತವತಾರವ ಸುಳ್ಳಿಂಬೆಯಾ ಮಗು,
ಅಲ್ಲವೆನ್ನದಿರು
ಸಲ್ಲದು ನಿನಗದು

ನಾನರಿಸಿದ್ದವ ಮಾನವನಾದ
ದೇವನಿದ್ದವನೆ ದಾನವನಾದ
ಹೇಗಿದ್ದರೂ ಇದು ಅವತಾರವೆ ಕಾಣ್.

ಇಲ್ಲಿ ಎಲ್ಲವೂ ದೇವಸಮರ್ಪಿತ-
ಹೊತ್ತು ಹೊತ್ತಿಗಿದೊ ವಿಧವಿಧನೈವೇದ್ಯ
ಹೆಜ್ಜೆ ಹೆಜ್ಜೆಗೂ ಹೊಸ ಹೊಸ ಹಾದಿ

ಮೂರು ಲೋಕವ ಗೆಂಡ ನಾನೆ ಆಗಿದ್ದೆ.
ಈಗಲೂ ನಾನಿರುವೆ ಮೂರು ಹೆಂಡಿರ ಗಂಡ.
ಲಂಕೆಸೇತುವೆ ಜಿಗಿದೆ ನಾನೆ ವಾನರ ದೂತ

ನಾನೆ ಈಗಾಗಿರುವೆ ಅಫೀಸುಮೂತ.
ಹರಿಯುತಿದೆ ಅಲಿ ಹೊಳೆಯು ಬಿಗ ಹೆಸುರಿತು ಭೂಮಿ-
ಈಗಲೋ ಉರಿಯುತಿದೆ ಬೆಂಕಿನಾಲಿಗೆಯಿಲ್ಲಿ-

ನಾನೆ ನಿಕ್ರಮಮೂರ್ತಿ ಶಕ್ತಿ ಶೌರ್ಯದ ಕೀರ್ತಿ-
ಸನ್ನ ಹೆಸರನೆ ಸಾರಿ, ಇತಿಹಾಸಸಾಗುತಿದೆ–
ಆ ಅವನೆ, ಆ ಇವನೆ, ನಾನೆ : ನಾನೇ ನಾನು

ಯಾರದೋ ಕೊಲೆಗೈದು
ಜೂಲಕೇರಿದ ನಾನು–
ಹತ್ತವತಾರವ ಸುಳ್ಳಿಂಬೆಯಾ ಮಗು ?

ವಿಕ್ಟರ್ ಮಾಯರ್

(ಜೀವನ ಪರಿಚಯ)

ಸ್ವಾ. ವೆಂಕೋಬಾಚಾರ್ಯ ಉಪಾಧ್ಯಾಯ, ಎಂ. ಎಸ್., ಹೈದರಾಬಾದ್

ಮಾನವನ ಜನ್ಮಸಹಜ ಒಲವುಗಳನ್ನು, ಪರಿಸ್ಥಿತಿಯು ಒದಗಿರಿಕೊಟ್ಟ ವಿಷಯದ ನಿತ್ಯಕೃಷಿಯು ಹತ್ತಿಕ್ಕಿ ಬಿಡಬಹುದು. ಒಬ್ಬ ನಟನಿಗೆ ಬೇಕಾದ ರೂಪ-ಗುಣಗಳೂ ಮನಸಿನ ಒಲವೂ ಇದ್ದರೂ ವಿಕ್ಟರ್ ಮಾಯರನಿಗೆ ನಟನಾಗುವ ಯೋಗವಿರಲಿಲ್ಲ. ವಿಜ್ಞಾನಕ್ಷೇತ್ರದ ಕೃಷಿಕನಾಗಿ ಕೃತಾರ್ಥತೆಯನ್ನು ಪಡೆದ.

೧೯ನೆಯ ಶತಮಾನದಲ್ಲಿ ಆಗಿಹೋದ ಪ್ರಸಿದ್ಧ ವಿಜ್ಞಾನಿಗಳಲ್ಲಿ ವಿಕ್ಟರ್‌ಮಾಯರ್ ಅವರೂ ಒಬ್ಬರು. ಇವರು ವಿಜ್ಞಾನ ಪ್ರಪಂಚದಲ್ಲಿ ೩೮ ವರ್ಷಗಳ ಕಾಲ ಸತತವಾಗಿ ಸಂಶೋಧನೆಗಳನ್ನು ನಡೆಸಿ ತುಂಬ ಖ್ಯಾತಿಯನ್ನು ಪಡೆದರು; ಪ್ರಮುಖ ಸಾಧಯವ ರಸಾಯನ ಶಾಸ್ತ್ರಜ್ಞ ರೆಂದು ಎನಿಸಿಕೊಂಡರು.

ವಿಕ್ಟರ್‌ಮಾಯರ್ ಅವರು, ಕ್ರಿ. ಶ. ೧೮೪೮ರಲ್ಲಿ ಸಪ್ಟೆಂಬರ್ ತಿಂಗಳ ೮ ರಂದು 'ಬರ್ಲಿನ್'ನಲ್ಲಿ ಜನಸಿದರು. ಅವರ ತಂದೆ ಕ್ಯಾಲಿಕೊ ಬಟ್ಟೆಗಳನ್ನು ತಯಾರಿಸುವ ಕಸಬುದಾರರಾಗಿದ್ದರು. ವಿಕ್ಟರ್ ಅವರು ತಮ್ಮ ೧೦ನೆಯ ವರ್ಷದಲ್ಲಿ, ವಿಶ್ವವಿದ್ಯಾನಿಲಯಗಳಿಗೆ ವಿದ್ಯಾರ್ಥಿಗಳನ್ನು ತರಬೇತು ಮಾಡುವ ಮೇಲುದರ್ಜೆಯ ವಿದ್ಯಾಶಾಲೆಯಲ್ಲಿ ತಮ್ಮ ವಿಕ್ಷಣವನ್ನು ಪಡೆದರು. ತಮ್ಮ ಹದಿನಾರನೆಯ ವರ್ಷದಲ್ಲಿ ಅವರು ಬರ್ಲಿನ್ ವಿಶ್ವವಿದ್ಯಾಲಯದಲ್ಲಿರುವಾಗ, ಪ್ರಸಿದ್ಧ ರಸಾಯನ ಶಾಸ್ತ್ರಜ್ಞರಾದ Hofmann ಅವರು ಮಾಡಿದ ಭಾಷಣಗಳು ವಿಕ್ಟರ್ ಅವರ ಮನಸ್ಸಿನ ಮೇಲೆ ತುಂಬ ಪರಿಣಾಮವನ್ನುಂಟುಮಾಡಿದುವು. ಇದರ ಫಲವಾಗಿ ಅವರು ಕ್ರಿ. ಶ. ೧೮೬೫ರಲ್ಲಿ Heidelberg ವಿಶ್ವವಿದ್ಯಾನಿಲಯವನ್ನು ಸೇರಿದರು. ಇಲ್ಲಿ ಅವರಿಗೆ ಪ್ರಸಿದ್ಧ ವಜ್ಞಾನಿಗಳಾದ Emil Erlnmeyer, Helmhloz, Kopp, Kircholf ಮತ್ತು Beuns ಅವರ ನೇತೃತ್ವದಲ್ಲಿ ರಸಾಯನ ಶಾಸ್ತ್ರವನ್ನು ಅಭ್ಯಸಿಸುವ ಸಂಯೋಗ ಬೊರೆಯಿತು. ವಿಷಯವನ್ನು ಬೇಗನೆ ಗ್ರಹಿಸಿಕೊಂಡು ಅಭ್ಯಾಸವನ್ನು ಮುಂದುವರಿಸಿ, ೨೦ನೆಯ ವರ್ಷದಲ್ಲಿ ಅವರು "ಡಾಕ್ಟೊರೆಟ್" ಡಿಗ್ರಿಯನ್ನು ಪಡೆದರು.

ಈ ತರುಣ ವಿಜ್ಞಾನಿಯಲ್ಲಿರುವ ಅಸಾಧಾರಣ ಪಾಂಡಿತ್ಯವನ್ನು ಕಂಡುಕೊಂಡ ಬುನ್‌ಸನ್ ಅವರು, ವಿಕ್ಟರ್ ಅವರನ್ನು ತಮ್ಮ ಸಹಾಯಕನಂತೆ ನೇಮಿಸಿಕೊಂಡರು. ಸಹಾಯಕನಂತೆ ಶ್ರೇಷ್ಠ ವಿಜ್ಞಾನಿ ಬುನ್‌ಸನ್ ಅವರ ಜೊತೆಯಲ್ಲಿ ಐದು ವರ್ಷದ ವರೆಗೆ "ಖನಿಜಗಳಿಂದ ಕೂಡಿದ ನೀರಿನ ವಿಶ್ಲೇಷಣೆ"ಯ ಬಗ್ಗೆ ಅಧ್ಯಯನ ನಡೆಸಿದರು. ಆನಂತರ ಕ್ರಿ. ಶ. ೧೮೬೯ ರಲ್ಲಿ ಪುನಃ ಬರ್ಲಿನ್ನಿಗೆ ಬಂದು, ವಿಜ್ಞಾನಿ ಪೇಯರ್ ಅವರ ಸಹಾಯಕರಾಗಿ,ರಸಾಯನ ಶಾಸ್ತ್ರದಲ್ಲಿ ಸಂಶೋಧನೆಗಳನ್ನು ಪ್ರಾರಂಭಿಸಿದರು. ರಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟ ಮೌಲಿಕ ವಿಚಾರಗಳಿಂದ ಕೂಡಿದ ಅನೇಕ ಲೇಖನಗಳನ್ನೂ ಬರೆದರು.

ವಿಕ್ಟರ್ ಅವರು ಕೈಕೊಂಡ ಸಂಶೋಧನೆಗಳ ಫಲವಾಗಿ ಕ್ರಿ. ಶ. ೧೮೭೧ ರಲ್ಲಿ ಅವರನ್ನು Stattgurt pollytechnic ನಲ್ಲಿ ಮುಖ್ಯ ಪ್ರಾಧ್ಯಾಪಕರನ್ನಾಗಿ ನೇಮಿಸಲಾಯಿತು. ಮರುವರ್ಷವೇ ಕುತೂಹಲ ಜನಕವೂ ಶುಭಸೂಚಕವೂ ಆದ ಒಂದು ಘಟನೆ ಸಂಭವಿಸಿತು. Zurich Pollytechnicನ ಉಪಾಧ್ಯಕ್ಷರಾದ Koppeler ಅವರು ರಸಾಯನಶಾಸ್ತ್ರವನ್ನು ಬೋಧಿಸುವುದಕ್ಕಾಗಿ ಒಬ್ಬ ಮುಖ್ಯ ಪ್ರಾಧ್ಯಾಪಕರ ಶೋಧನೆಯಲ್ಲಿದ್ದಾಗ, ಅಕಸ್ಮಿಕವಾಗಿ Stattgurt ಗೆ ಬಂದರು. ಅಲ್ಲಿ ಅವರು ವಿಕ್ಟರ್ ಅವರಿಗೆ ಗೊತ್ತಿಲ್ಲದಂತೆ ಅವರ ಭಾಷಣಗಳನ್ನು ಕೇಳಿ ಸಂತೋಷಪಟ್ಟು, ಅವರನ್ನು Zurich ಗೆ ಬರಲು ಆಹ್ವಾನಿಸಿದರು. ವಿಕ್ಟರ್ ಅವರು ಆಹ್ವಾನವನ್ನು ಸ್ವೀಕರಿಸಿ ಮುಖ್ಯ ಪ್ರಾಧ್ಯಾಪಕರಂತೆಯೂ Zurich polytechnic ನ ರಸಾಯನ ಪ್ರಯೋಗ ಶಾಲೆಯ ಡೈರೆಕ್ಟರ್‌ರಂತೆಯೂ ಕೆಲಸಮಾಡಲು ಒಪ್ಪಿಕೊಂಡರು.

Zurich ಗೆ ಬರುವ ಮೊದಲು ಅವರು ಕ್ರೈಸ್ತ ಹೆಣ್ಣುಮಗಳೊಡನೆ ಲಗ್ನವಾದರು. ಜನ್ಮತಃ 'ಜಿವ್' ಆಗಿದ್ದರೂ, ಅವರು ಕ್ರೈಸ್ತ ಧರ್ಮವನ್ನೇ ಅನುಸರಿಸಿದರು Zurich polytechnic ನಲ್ಲಿ ಪ್ರಾಧ್ಯಾಪಕರಂತೆಯೂ ಸಂಶೋಧಕರಂತೆಯೂ ೧೩ ವರ್ಷಗಳ ಕಾಲ ತಮ್ಮ ಸೇವೆಯನ್ನು ಸಲ್ಲಿಸಿದರು. ಅವರಲ್ಲಿ ಕೆಲಸ ಮಾಡುವ ಶಕ್ತಿ ಅಸಾಧಾರಣವಾಗಿದ್ದಿತು. ತಾವು ಕೆಲಸ ಮಾಡುವುದಲ್ಲದೆ ವಿದ್ಯಾರ್ಥಿಗಳನ್ನೂ ಕೆಲಸ ಮಾಡುವಂತೆ ಪ್ರೇರೇಪಿಸುತ್ತಿದ್ದರು. ಅವರ ನೇತೃತ್ವದಲ್ಲಿ ೧೦೬ ವಿದ್ಯಾರ್ಥಿಗಳು ಸಂಶೋಧನೆಯನ್ನು ನೆಡೆಸಿ, ೧೩೦ ಉಚ್ಚ ತರಗತಿಯ ಪ್ರಬಂಧಗಳನ್ನು ಪ್ರಕಟಿಸಿದುದು ಇದಕ್ಕೆ ಒಂದು ನಿದರ್ಶನವಾಗಿದೆ.

ಮಾಯರ್ ಅವರು ಯಾವಾಗಲೂ ತಲೆನೋವಿನಿಂದ ನರಳುತ್ತಿದ್ದರು. ಕ್ರಿ. ಶ. ೧೮೮೦ ರ ಆಚೆಗೆ ಈ ತಲೆನೋವು ಹೆಚ್ಚಾಗಿ, ಅವರ ಪ್ರಕೃತಿ ದಿನೆ ದಿನಕ್ಕೆ ಕೆಡಹತ್ತಿತು, ನಿತ್ರಾಣರಾಗತೊಡಗಿದರು. ನಿದ್ದೆ ಬಾರದ ಹಾಗಾಯಿತು. ಅವರ ಗೆಳೆಯರು ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕೆಂದು ಅವರಿಗೆ ಒತ್ತಾಯಪಡಿಸಿದರು. ಆಗಾಗ ವಿಶ್ರಾಂತಿ

ಯನ್ನು ತೆಗೆದುಕೊಂಡರೂ ಅನು ಅವರ ಪ್ರಕೃತಿಯ ಮೇಲೆ ಯಾವ ತೆರನ ಪರಿಣಾಮವನ್ನೂ ಉಂಟು ಮಾಡಲಿಲ್ಲ. ಕೊನೆಗೆ ಕ್ರಿ. ಶ. ೧೮೮೪ ರಲ್ಲಿ ತೀವ್ರವಾದ ತಲೆನೋವು ಉಂಟಾಗಿ, ಪ್ರಕೃತಿ ಮತ್ತಷ್ಟು ಹದಗೆಟ್ಟಿದ್ದರಿಂದ, ಅವರು ತಮ್ಮ ಕೆಲಸವನ್ನು ಕೆಲವು ದಿನಗಳ ಪರಿಗೆ ನಿಲ್ಲಿಸಿಬಿಟ್ಟರು. ಅನಂತರ Gottingen ವಿಶ್ವವಿದ್ಯಾನಿಲಯದಲ್ಲಿ ಮುಖ್ಯ ಪ್ರಾಧ್ಯಾಪಕರಂತೆ ಕೆಲಸ ಮಾಡಲು ಒಪ್ಪಿಕೊಂಡು, ಕ್ರಿ. ಶ. ೧೮೮೫ ರ ಬೇಸಗೆಯ ವ್ಯಾಸಂಗಕಾಲದಲ್ಲಿ ತಮ್ಮ ಕೆಲಸವನ್ನು ಪ್ರಾರಂಭಿಸಿದರು. ಇಲ್ಲಿ ಅವರು Poul Jacobson ರೊಡನೆ ಸಹಕರಿಸಿ "ಸಾವಯವ ರಸಾಯನ ಶಾಸ್ತ್ರ" ಎಂಬ ಪಠ್ಯಪುಸ್ತಕವನ್ನು ಬರೆದು ಪ್ರಕಟಿಸಿದರು.

Gottingen ವಿಶ್ವವಿದ್ಯಾನಿಲಯದಲ್ಲಿ ಬಹಳ ವರ್ಷಗಳ ಕಾಲ ಅವರು ಕೆಲಸಮಾಡಲಿಲ್ಲ. ಶ್ರೇಷ್ಠ ವಿಜ್ಞಾನಿ ಬುನ್‌ಸನ್ ಅವರು ನಿವೃತ್ತಿ ಹೊಂದಿದ ಮೇಲೆ, ಅವರ ಇಚ್ಛೆಯಂತೆ Heidelberg ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡಲು ಒಪ್ಪಿಕೊಂಡರು. ಇಲ್ಲಿ ಅವರು ಹಳೆಯ ಹುರುಪು ಸಾಮರ್ಥ್ಯದಿಂದ ತಮ್ಮ ಕೆಲಸವನ್ನು ಮುಂದುವರೆಸಿದರು. ಆದರೆ ಅವರ ಆರೋಗ್ಯ ದಿನಕ್ರಮೇಣ ಕೆಡುತ್ತ ಹೋಗಿತ್ತು. ಕೊನೆಗೆ ಅವರಿಗೆ ತಮ್ಮ ಅನಾರೋಗ್ಯದಿಂದಾಗಿ ತಮ್ಮಲ್ಲಿ ಸ್ಪಷ್ಟ ವಿಚಾರಶಕ್ತಿಯು ಕಡಮೆಯಾಗುತ್ತಿದ್ದುದು ತಿಳಿದು ಬಂದಿತು. ಇದೇ ಕಾರಣದಿಂದ ಕ್ರಿ. ಶ. ೧೮೮೬ ರಲ್ಲಿ ಅವರು ವಿಷಪದಾರ್ಥವನ್ನು ತೆಗೆದುಕೊಂಡು ತಮ್ಮ ಜೀವನಯಾತ್ರೆಯನ್ನು ಮುಗಿಸಿದರು.

ವಿಜ್ಞಾನವನ್ನು ಅಭ್ಯಸಿಸುವ ಪ್ರತಿಯೊಂದು ದೇಶವೂ ವಿಕ್ಟರ್ ಅವರಲ್ಲಿರುವ ಬೌದ್ಧಿಕ ಗುಣಗಳನ್ನು ಕಂಡು ಅವರನ್ನು ಆದರಿಸಿತು. Konigsberg ವಿಶ್ವವಿದ್ಯಾನಿಲಯವು ಅವರಿಗೆ "Honorary Doctor of Medicine" ಎಂಬ ಪದವಿಯನ್ನು ಕೊಟ್ಟು ಗೌರವಿಸಿತು. ಕ್ರಿ. ಶ ೧೮೯೧ ರಲ್ಲಿ ರಾಯಲ್ ಸೊಸೈಟಿಯು "ಡೇವಿಪದಕ"ವನ್ನು ಕೊಟ್ಟು ಅವನನ್ನು ಗೌರವಿಸಿತು. ನೋಬೆಲ್ ಪಾರಿತೋಷಕ ಪ್ರಾರಂಭವಾದ ಕ್ರಿ. ಶ. ೧೯೦೦ ರ ವರೆಗೆ ಅವರು ಜೀವಂತರಾಗಿದ್ದಲ್ಲಿ, ಅವರಿಗೆ ರಸಾಯನಶಾಸ್ತ್ರದಲ್ಲಿ ನೊಬೆಲ್ ಪಾರಿತೋಷಕವು ನಿಸ್ಸಂದೇಹವಾಗಿ ಸಿಗಬಹುದಾಗಿತ್ತು.

ಮಾಯರ್ ಅವರು ಪ್ರಖ್ಯಾತ ಶಿಕ್ಷಕರಾಗಿದ್ದರು. ಶ್ರೇಷ್ಠ ಪ್ರಯೋಗಕಾರರಾಗಿದ್ದರು. ಸಾವಯವ ರಸಾಯನಶಾಸ್ತ್ರವನ್ನು ಕಲಿಸುವುದೆಂದರೆ ಅವರಿಗೆ ತುಂಬ ಇಷ್ಟ. ಅವರು ತಿಳಿಸಬೇಕಾದ ವಿಷಯವನ್ನು ಹೆಜ್ಜೆ ಪ್ರಯತ್ನಿಟ್ಟು ಸೊದಲೆ ತಯಾರಿಸಿಕೊಂಡು, ತಮ್ಮದೇ ಆದ ಒಂದು ವಿಶಿಷ್ಟ ರೀತಿಯಲ್ಲಿ ವಿದ್ಯಾರ್ಥಿಗಳ ಮನಸ್ಸನ್ನು ಹಿಡಿಯುವಂತೆ ಹೇಳಿಕೊಡುತ್ತಿದ್ದರು. ಭಾಷಣಗಳನ್ನು ಮಾಡುವಾಗ ಪ್ರಯೋಗಗಳನ್ನು ವಿವರಿಸಿ ವಿಷಯದಲ್ಲಿ ಮತ್ತಷ್ಟು ಅಭಿರುಚಿಯನ್ನು ಹುಟ್ಟಿಸುತ್ತಿದ್ದರು. ಅವರ ಭಾಷಣಗಳು ಬೋಧಪ್ರದವಾಗಿದ್ದುವು ಎಂತಲೆ ವಿದ್ಯಾರ್ಥಿಗಳು ಅವರನ್ನು ಪ್ರೀತಿಯಿಂದಲೂ ಗೌರವದಿಂದಲೂ ಕಾಣುತ್ತಿದ್ದರು.

ಸಾಹಿತ್ಯಿಕ ಸಾಮರ್ಥ್ಯ ಮತ್ತು ಸ್ಪಷ್ಟ ಪ್ರತಿಪಾದನಾಶಕ್ತಿಯ ಮೂಲಕ ಸಾಮಾನ್ಯ ವಿಜ್ಞಾನದ ವಿಷಯವಲ್ಲಿ ಉತ್ತಮ ತರದ ಲೇಖನಗಳನ್ನು ಬರೆದು ಜನರ ಮೆಚ್ಚುಗೆಯನ್ನು ಪಡೆದರು; ಶ್ರೇಷ್ಠ ಲೇಖಕರೆಂದು ಎನಿಸಿಕೊಂಡರು. ಮಾಯರ್ ಅವರಲ್ಲಿ ಮನೋಹರವಾದ ಗುಣಗಳಿದ್ದುವು. ಇದರಿಂದಾಗಿ ಅವರು ತಮ್ಮ ಶಂಗಡಿಗರ ಮನಸ್ಸನ್ನು ಸೆಳೆದುಕೊಳ್ಳುತ್ತಿದ್ದರು; ಮತ್ತು ಅವರ ಮೇಲೆ ಒಳ್ಳೆಯ ಪ್ರಭಾವವನ್ನು ಬೀರುತ್ತಿದ್ದರು. ಅವರು ಒಳ್ಳೆಯ ಮಾತುಗಾರರಾಗಿದ್ದರು; ಆದರಾತಿಥ್ಯದಲ್ಲಿ ಪ್ರವೀಣರಾಗಿದ್ದರು ಅವರು ತಮ್ಮ ಮನೆಯಲ್ಲಿ ಪ್ರತಿಯೊಬ್ಬ ಅತಿಥಿಯ ಸೌಲಭ್ಯ ಸೌಕರ್ಯಗಳನ್ನೂ ಜ್ಞಾಪಕದಲ್ಲಿ ಇಡುತ್ತಿದ್ದರು.

ಮಾಯರ್ ಅವರು ರಸಾಯನಶಾಸ್ತ್ರದಲ್ಲಿ ಕೈಕೊಂಡ ಸಂಶೋಧನೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದಾಗಿದೆ:

೧. ಸಾವಯವ ರಸಾಯನಶಾಸ್ತ್ರ. ೨. ಸಾಮಾನ್ಯರಸಾಯನ ಶಾಸ್ತ್ರ.

ಸಾವಯವ ರಸಾಯನ ಶಾಸ್ತ್ರದಲ್ಲಿ ಅವರು ಕೈಕೊಂಡ ಸಂಶೋಧನೆಗಳಲ್ಲಿ ಆಲಿಫ್ಯಾಟಿಕ್-ನೈಟ್ರೊ ಸಂಯುಕ್ತಗಳನ್ನು (Aliphatic nitro Compounds) ಕಂಡುಹಿಡಿದುದು ಅತಿ ಮುಖ್ಯ. ಸಂಶೋಧನೆಯಾಗಿದೆ.

ಅಲ್ಕಿಲ್ ಹೇಲೈಡ್ (Alkyl Halide) ಮತ್ತು ಸಿಲ್ವರ್ ನೈಟ್ರೈಟುಗಳ (Silver nitrite) ರಾಸಾಯನಿಕ ಕ್ರಿಯೆಯಿಂದ ನೈಟ್ರೊ ಸಂಯುಕ್ತಗಳನ್ನು ತಯಾರಿಸುವ ಸಾಮಾನ್ಯ ವಿಧಾನವನ್ನು ಕಂಡುಹಿಡಿದರು. ನೈಟ್ರೊ ಸಂಯುಕ್ತಗಳ ಮೇಲೆ ನೈಟ್ರಸ್ ಆಮ್ಲದ ಕ್ರಿಯೆಯ ಅಧ್ಯಯನ ನಡೆಸಿದರು. Primary ಮತ್ತು Secondary ನೈಟ್ರೊ ಸಂಯುಕ್ತಗಳ ಮೇಲೆ ನೈಟ್ರಸ್ ಆಮ್ಲದ ಕ್ರಿಯೆಯಿಂದ ಅನುಕ್ರಮವಾಗಿ ನೈಟ್ರೊಲಿಕ್ ಆಮ್ಲ (Nitrolic acid) ಮತ್ತು Psuedo nitrol ಗಳು ಉಂಟಾಗುತ್ತವೆಂದೂ Tertiary ನೈಟ್ರೊ ಸಂಯುಕ್ತಗಳ ಮೇಲೆ ನೈಟ್ರಸ್ ಆಮ್ಲದ ಕ್ರಿಯೆ ನಡೆಯುವದಿಲ್ಲವೆಂದೂ ತೊರಿಸಿಕೊಟ್ಟರು. ಈ ರೀತಿಯಾಗಿ ನೈಟ್ರಸ್ ಆಮ್ಲದ ಕ್ರಿಯೆಯಿಂದ Primary, Secondary ಮತ್ತು Tertiary ನೈಟ್ರೊ ಸಂಯುಕ್ತಗಳಲ್ಲಿರುವ ಭೇದವನ್ನು ಕಂಡುಹಿಡಿದರು. ಥಯೋಫೀನ್ ಸಂಯುಕ್ತಗಳನ್ನು ಬೇರ್ಪಡಿಸಿ ಅವುಗಳ ಅಧ್ಯಯನ ನಡೆಸಿದರು. ಟಾರಿನ್ನಿಯಲ್ಲಿ ಥಯೊಟಾಲ್ಟೀನ್(Thiotoltiene) ಎಂಬ ಸಂಯುಕ್ತವನ್ನು ಕಂಡುಹಿಡಿದರು. ಗಂಧಕದಿಂದ ಕೂಡಿರ ಈ ಸಂಯುಕ್ತಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿ, ಅವುಗಳ ಇರುವಿಕೆಯನ್ನು ಕಂಡು ಹಿಡಿಯುವುದಕ್ಕಾಗಿ ಅನೇಕ ಕ್ರಿಯೆಗಳನ್ನು ಸೂಚಿಸಿದರು. ಕ್ರಿ ಶ. ೧೮೮೦ರಲ್ಲಿ Iodoxeಸಂಯುಕ್ತಗಳನ್ನು ಕಂಡುಹಿಡಿದು ರಾಸಾಯನಿಕ ಜಗತ್ತನ್ನು ಚಕಿತಗೊಳಿಸಿದರು.

ವಿಕ್ಟರ್ ಅವರುCarl meyer ಅವರ ಜೊತೆಗೆ ಭೌತಿಕ ರಸಾಯನ ಶಾಸ್ತ್ರದಲ್ಲಿ ಸಂಶೋಧನೆಗಳನ್ನು ನಡೆಸಿ, ಕ್ರಿ. ಶ. ೧೮೭೮ ರಲ್ಲಿ

ದ್ರವ್ಯಗಳ ಹೆಬೆಯ ಸಾಂದ್ರತೆಯನ್ನು ಗೊತ್ತುಹಚ್ಚುವ ಒಂದು ವಿಧಾನವನ್ನು ಕಂಡುಹಿಡಿದರು. ಈ ವಿಧಾನವನ್ನು ಅಣುಗಳ ತೂಕವನ್ನು ಕಂಡುಹಿಡಿಯವಲ್ಲಿ ಉಪಯೋಗಿಸಲಾಯಿತು. ಇದೇ ವಿಧಾನವನ್ನು ಅನುಸರಿರಿ ಮಾಯರ್ ಅವರು ಹೆಬೆಯ ರೂಪವಲ್ಲಿ ಆರ್ಸಿನಸ್ ಆಕ್ಸೈಡಿನ್ ಸೂತ್ರ As_4O_6 ಆಗಿನೆಯೆಂದೂ ಪಾದರಸ ಮತ್ತು ಕೆಡ್ಮಿಯಂ Cadmiumಲೋಹಗಳು ಏಕ ಪರಮಾಣುವಿನ ಬಾಷ್ಪಗಳನ್ನು ಉಂಟುಮಾಡುತ್ತವೆಂದೂ, ಶಾಖ ಕೊಟ್ಟಾಗ ಹೆಲೋಜನ-ಅಣುಗಳು ಪರಮಾಣುಗಳಲ್ಲಿ ಬೇರ್ಪಡುತ್ತವೆಂಬುದನ್ನೂ ತೋರಿಸಿಕೊಟ್ಟರು. ಅನಂತರ ಅವರು ನೀಫೇನ್, ಈಫೇನ್, ಏಸಿಟಲೀನ್ ಮತ್ತು ಹೈಡ್ರೋಜನ್-ಸಲ್ಫೈಡು ಅನಿಲಗಳ ಸ್ಥಿರೀಕರಣ ಸುಡಿತದ ಬಗ್ಗೆ ಅಧ್ಯಯನ ನಡೆಸಿದರು.

ಅನೇಕ ಉಪಯುಕ್ತ ಸಲಕರಣೆಗಳನ್ನು ರಚಿಸಿ, ಅವುಗಳನ್ನು ಪ್ರಯೋಗ ಶಾಲೆಗಳಲ್ಲಿ ವಿವಿಧ ಪ್ರಯೋಗಗಳಿಗಾಗಿ ಉಪಯೋಗಿಸಬಹುದೆಂಬುದನ್ನು ತೋರಿಸಿಕೊಟ್ಟರು. ಬೇರೆ ಬೇರೆ ಉಷ್ಣತೆಯಲ್ಲಿ ಪದಾರ್ಥಗಳ ದ್ರವಿಸುವ ವಿಶಿಷ್ಟತೆಯನ್ನು ಗೊತ್ತು ಹಚ್ಚಲು ಒಂದು ವಿಧಾನವನ್ನು ಕಂಡುಹಿಡಿದರು. ಪದಾರ್ಥಗಳನ್ನು ಶೋಷಿಸುವುದಕ್ಕಾಗಿ ಒಲೆಗಳನ್ನು ರಚಿಸಿದರು.

ಪ್ಲಾಟಿನಮ್ ಏರ್ ಉಷ್ಣಮಾಪಕದಿಂದ ಅನೇಕ ನಿರವಯವ ಲವಣಗಳ ದ್ರವಿಸುವ ಉಷ್ಣತ್ವವನ್ನು ಗೊತ್ತುಹಚ್ಚಿದರು. ಕ್ರಿ. ಶ. ೧೮೮೪ರಲ್ಲಿ ಅನೇಕವಿಧದ ರಸಾಯನ ಶಾಸ್ತ್ರಜ್ಞರಾದ Tragede well ಜೊತೆಸೆ ಸಹಕರಿಸಿ, ಲವಣಗಳ ವಿಶ್ಲೇಷಣಕ್ಕೆ ಸಂಬಂಧಪಟ್ಟ ಟೇಬಲ್ಲುಗಳನ್ನು (Tables) ಪ್ರಕಟಿಸಿದರು.

ವಿಕ್ಟರ್ ಅವರ ತಂಗಿಯರ ಹೇಳಿಕೆಯಂತೆ ವಿಕ್ಟರ್ ಅವರ ಮನಸ್ಸಿನಲ್ಲಿ ವಿಜ್ಞಾನಿಯಾಗುವ ಬದಲು ಒಬ್ಬ "ನಟ"ನಾಗಬೇಕೆಂಬುದಿದ್ದಿತು. ನಾಟಕೀಯತೆಯ ದೃಷ್ಟಿ, ಭಾವುಕ ಶಕ್ತಿ, ಸುಮಧುರವಾದ ಕಂಠ, ಪ್ರಭಾವಶಾಲಿಯಾದ ನಡಿಗೆ, ನೀಲಿ ಕಣ್ಣುಗಳುಳ್ಳ ಸುಂದರವಾದ ಮುಖ, ಆಂದನಾದ ತಲೆ-ಒಟ್ಟಿನಲ್ಲಿ ಅವರಲ್ಲಿ ಹುಟ್ಟು ನಟನಿಗೆ ಇರಬೇಕಾದ ಎಲ್ಲ ಗುಣಗಳೂ ಇದ್ದುವು ರಸಾಯನ ಶಾಸ್ತ್ರದಲ್ಲಿ ಅಧ್ಯಾಪಕ ವೃತ್ತಿಯನ್ನು ಕೈಕೊಂಡ ಮೇಲೆ ಈ ಎಲ್ಲ ಗುಣಗಳು ಅವರಿಗೆ ಒಂದಿಲ್ಲ ಒಂದು ವಿಧದಿಂದ ಸಹಾಯಕವಾದುವು. ಅವರಿಗೆ ಸಾಹಿತ್ಯದಲ್ಲಿ ವಿಶೇಷವಾಗಿ ನಾಟಕ ಸಾಹಿತ್ಯದಲ್ಲಿ ವಿಶೇಷ ಅಭಿರುಚಿ ಇದ್ದಿತು; ಸಂಗೀತವು ಚೆನ್ನಾಗಿ ಬರುತ್ತಿತ್ತು. ಹೀಗೆ ರಂಗಭೂಮಿಯಲ್ಲಿ ಕೀರ್ತಿಯನ್ನು ಪಡೆಯಬಹುದಾದ ಈ ಮಹಾಮಭಾವರಿಂದ ರಾಸಾಯನಿಕ ಪ್ರಯೋಗ ಶಾಲೆಗೆ ತುಂಬ ಲಾಭವಾಯಿತು.

ಒಲವಿನೋಲೆಗಳಿರಡು

'ಶಿವಶ್ರೀ' ಹೈದರಾಬಾದ್

೧

ಮರೆಯದಿರಿ ನೀವೆನ್ನ ಒಂದು ಚಣವೂ

ಮೂರು ದಿನಗಳಿಗೊಂದು ಓಲೆ ಬರೆಯುವೆನೆಂದು
ಹೇಳಿದಿರಿ ಹೋಪಾಗ ಗಲ್ಲ ಹಿಡಿದು—
ವಾರ ಮೂರಾದರೂ ಸುದ್ದಿಯೇ ಬರೆದಿಲ್ಲ
ಏನು ಮಾಡುವಿರೇನೊ ಮನೆಯ ಹಿಡಿದು?
"ಅಳಬೇಡ ಆರಗಣಿಯೆ ಹೋಗುತಲೆ ಬರೆಯುವೆನು"
ಎಂದು ಹೇಳಿದಿರಂದು ಅನುಕಂಪ ಮೂರೆದು
ಹೇಗೆ ಜೀವಿಸಲಿನಿಯು? ಇನ್ನೆರಡು ವಾರಗಳ,
ನೀವಿಂತು ಮೌನವಿರೆ ನನ್ನ ಮನವೆದು.
ನೆರೆಮನೆಯ ಸುಂದರಿಯು, ಬಾಳ ಗೆಳತಿಯು ನನಗೆ
ಚಿಕ್ಕಂದಿನಿಂದಲೂ ಬಲು ಗಂಡುಬೀರೆ—
ಮೊದಲ ದೀಪಾವಳಿಗೆ ನೀನಿಲ್ಲಿಗೈತರಲು
ಉಪ್ಪುನೀರನು ಕೊಟ್ಟ ದಿಟ್ಟ ನೀರೆ;
ಮದುವೆಯಾಗುವ ಮುನ್ನ ಒಲ್ಲೆನೆಂದಿಹ ಗಂಡ-
ನೊಡಗೂಡಿ ಬಾಳನ್ನು. ಸವೆಸುತಿಹಳು
"ನಮ್ಮನರೆ ಸರಿಯಕ್ಕ ಬಲುಮುದ್ದು ಮಾಡುವರು"
ಎಂದು ನುಡಿಯುತೆ ನನಗೆ ಮರುಗುತಿಹಳು.
ಒಂದೆರಡು ವಾರದೊಳೆ ಹಿಂತಿರುಗಿ ಹೋದಾಗ
ನಿಮ್ಮನ್ನು ಅತಿಯಾಗಿ ನೆನೆದಳವಳು:
"ಭಾವನವರೇಕೆಂತು ಮೌನವಾಂತಿಹರಕ್ಕ
ಏನಾದರೂ ಜಗಳವಾಯುತೇನು?
ಮೇಲುನೋಟಕೆ ಬಹಳ ಮಿದುವಾಗಿ ಕಾಣುವರು
ಅಂತರಂಗದಿ ಅವರು ಕಟುಕರೇನು?"
ಎಂದಿಂತು ಕೇಳಿದಳು, ನೋವನ್ನೆ ಹಿಂಡಿದಳು—
ಕೋಪ ಬಂದಾಗಂತು ರಣಚಂಡಿಯವಳು.
"ಕಪಟ ವರ್ತನರಲ್ಲ, ಮುಚ್ಚು ಮರೆಯವರಲ್ಲ
ಕೋಪತಾಪಗಳಂತು ಮೊದಲೆ ಇಲ್ಲ
ಮುದುವೆಯಾಗಿಹ ತೊಟ್ಟು ಜಗಳವನೆ ನಾಕಾಣೆ
ಅವರವರ ಗೋಜಿಗೇ ಹೋಗುವವರಲ್ಲ"
ಎಂದು ನಾನೀ ರೀತಿ ಅವಳ ಸಂತೈಸಿದೆನು
ಹಣೆಗೆ ಕುಂಕುಮವಿಟ್ಟು ಬೀಳ್ಕೊಟ್ಟಿನು,
ಎಲ್ಲ ದುಗುಡವು ನನ್ನ ತೊತ್ತಳಂ ದುಳಯುತಿರೆ
ತಡೆಯದಾಗದೆ ನಿಮ್ಮ ಮುಂದಿಟ್ಟಿನು.
ಈಗಲಾದರು ನೀವು ಪತ್ರ ಬರೆಯಿರಿ ದೇವ!
ಮರೆಯದಿರಿ ನೀವೆನ್ನ ಒಂದು ಚಣವೂ,
ಚಣವೊಂದು ಯುಗವಾಗಿ ಕಳೆಯುತ್ತಲಿಹೆನಿಲ್ಲಿ
ನಿಮ್ಮ ಓಲೆಯ ದಾರಿ ಕಾದು ದಿನವೂ.

❋ ಒಲವಿನೋಲೆಗಳೆರಡು ❋

' ಶಿವಶ್ರೀ ' ಹೈದರಾಬಾದ್

೨

ದಿನವೊಂದು ಯುಗ....!

ದೇವಿ! ನಿನ್ನಯ ಪತ್ರ ನೋಡಿ ನನ್ನಯ ಮನವು
ಹಿಗ್ಗಿ ಹೀರೇಕಾಯಿಯಾಯಿತಿಂದು
ಬರುವಾಗ ನಾನಂದು ಕಂಬನಿಯನೊರಸಿದೆನು
ಕಲೆಯು ಗಲ್ಲದ ಮೇಲೆ ನಿಲ್ಲದಿರಲೆಂದು

" ಹೋಗುತಲೆ ಬರೆಯುವೆನು " ಎಂದು ಹೇಳಿದೆ ನಿನಗೆ
ಬರುವಾಗ ದಾರಿಯಲಿ ಅವನೆ ನೆನೆದೆ
ನೂರಾರು ಎಡರುಗಳು ಬಂದು ಮುತ್ತಿದುವೆನಗೆ
ತಿಳಿಯದಿರು ಎಂದಿಗೂ " ನಾ ನಿನ್ನ ಮರೆದೆ "

" ಗೆಳತಿ ಸುಂದರಿಯಂತು ಬಂದು ಹೋಗಿಹಳೆಂದು
ಹೀಗೆ, ಹೀಗುಂಟು, ಕತೆಯೆಲ್ಲ " ವೆಂದು
ಬರೆದುದನು ನೋಡಿದರೆ ಕಾಣುವುದು ನನಗೇನೊ
ಹೊಸದಾಗಿ ಅದರಲ್ಲಿ ಕಗ್ಗನ್ನೊಂದು.

ತನಗೆ ತೋಚಿದ ನೀತಿ ಹೇಳಬಯಸುವ ಕವಿಯು
ತನ್ನ ಪಾತ್ರವ ತಾನು ಮುಂದುಮಾಡಿ
ಅದರಂತೆ ನೀನೀಗ ಸುಂದರಿಯ ನೆನಪ ಮಾಡಿ
ನಿನ್ನ ಬಗೆ ಬಿಚ್ಚಿರುವೆ ಅವಳ ಕೂಡಿ!

ಇಲ್ಲಿವ್ವರೇನಂತೆ ನನಗಿಲ್ಲವೇ ಚಿಂತೆ
ವಿರಹ ಕೊಯ್ಯುತಲಿಹುದು ಕ್ರಕಚದಂತೆ,
ದಿನವೊಂದು ಯುಗವಾಗಿ ಕಾಲನೂಕುತಲಿರುವೆ
ಅವಧಿ ಮುಗಿಯಲು ಒಡನೆ ಹೊರಟು ಬರುವೆ.

ಮುಗುಡನೇತಕೆ ರಮಣಿ? ತಪನನೇತಕೆ ತರುಣಿ?
ಎರಡು ವಾರಗಳಲ್ಲಿ ಓಡಿ ಬರುವೆ.
ಬಂದಾರು ದಿನಗಳಲಿ ಎರಡೋಲೆಗಳ ಬರೆದು
ಅಂಚೆಗೆಂದವುಗಳನು ತೆಗೆದಿರೆಸಿವೆ.

ಒಗೆಯಲಿಕೆ ಹಾಕಿದ್ದ ಕೋಟನೊಳಜೇಬಿಂದ
ಅಗಸ ಪತ್ರವ ಕೊಡಲು ಭ್ರಾಂತನಾದೆ.
" ಕಾಗದವ ಕಾಣದೆಯೆ ಎನಿತು ನೊಂದಳೊ ಏನೋ?
ಎನ್ನವಳು ಎನ್ನರಸಿ " ಎನಿಸಿತೆನಗೆ

ನಿಜ ನಲ್ಲೆ, ನೀನಲ್ಲಿ, ನಿನ್ನಿಂದ ದೂರವಿರೆ
ಆಗದಿಹುದೇ ಭ್ರಾಂತಿ ಇಲ್ಲಿ ನನಗೆ?
ತಾಪ ಶಮಿಸಲಿ ಎಂದು ಈ ಓಲೆ ಬರೆದಿರುವೆ
ವಿರಹದಲಿ ಬೇಯದಿರು, ನನ್ನ ಚಿನ್ನ!

ಉಳಿದೆರಡು ಓಲೆಗಳನಿದರೊಡಲ ಇಟ್ಟಿರುವೆ
ಓದು ಮುಗಿವುದರೊಳಗೆ ಬಂದೆ, ರನ್ನ!

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಪೂರಾಟ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವು ವರ್ಷಗಳಿಂದ ನಮ್ಮ್ಯ ವ್ಯವಹಾರ ನಡೆದಿದ್ದು,
ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಸ ರೋಡ್, ಧಾರವಾಡ

ಪ್ರತಿಫಲ

(ಐದು ದೃಶ್ಯಗಳ ಪೌರಾಣಿಕ ನಾಟಕ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

೨ನೆಯ ದೃಶ್ಯ

[ವಸಂತೋದ್ಯಾನದ ಒಂದು ದೃಶ್ಯ. ರಮಣೀಯ ಪುಷ್ಪಗುಚ್ಛಗಳು.]

ಶಾಲಿನಿ : (ಆತುರದಿಂದ ಬರುತ್ತಾ) ಮಧ್ಯಾಹ್ನದ ದಗೆಯಡಗಿಸಲು ಎಷ್ಟು ಬೇಗ ಮೋಡಗಳು ಕವಿತವು ! ಸಖಿಯರ ಜಲಕ್ರೀಡೆ ಮುಗಿಯುವಂತೆಯೇ ಇಲ್ಲ ! ಸಚ್ಚಿದಾನಂದ ಸರಸಿಯಲ್ಲಿ ಸರಸವಾಡುತ್ತಿರುವರೇನೋ ಎಂಬಂತೆ ಆನಂದಮತ್ತರಾಗಿದ್ದಾರೆ. ಬಿಲ್ವಮರದಡಿ ಅಣಿಮಾಡಿದ್ದ ಪೂಜಾಸಾಮಗ್ರಿ ಮಳೆ ಬಂದು ಕೆಟ್ಟೀತೆಂದು ನಾನು ಹೊರಟು ಬಂದೆ. ಅಪರಾವರೂ ಮನದಣಿಯೆ ಕ್ರೀಡಿಸಲಿ. (ಹೋಗುವಳು.)

(ವಸಂತೋದ್ಯಾನದ ಮತ್ತೊಂದು ಭಾಗ. ಎದುರೇ ತಿಳಿಗೊಳ. ಸುಂಟರಗಾಳಿ ಸುಯ್ಯನೆ ಬೀಸುತ್ತಿದೆ. ತೆರೆಯ ಹಿಂದಿನಿಂದಲೇ ದೇವಯಾನಿ ಶರ್ಮಿಷ್ಠೆಯರ ಕೂಗಾಟ ಕೇಳುವದು.)

ಶರ್ಮಿಷ್ಠಾ : ನಳಿನಾ, ಬೇಗಬೇಗ ಓಡು. ಸುಳಿಗಾಳಿಗೆ ಸಿಕ್ಕಿ ನನ್ನ ಚೀನಾಂಬರ ಹಾರುತ್ತಿದೆ. ಬೇಗ ಹಿಡಿ.

ದೇವಯಾನಿ : ನಳಿನಾ, ನನ್ನ ಕಣ್ಣಿಗೆ ಧೂಳು ಮುಸುಕಿದೆ. ನನ್ನ ಪತ್ತಲವನ್ನಿತ್ತ ತಾ. ಕಣ್ಣು ಬಿಡಲಾಗುತ್ತಿಲ್ಲ. ಬೇಗ ತಾ, ಸಖಿ !

ನಳಿನಿ : ಹೂಂ, ಹೂಂ, ಹಿಡಿಯಿರಿ. ಮಳೆ ಹನಿಯುತ್ತಿದೆ. ಬೇಗ ಲತಾಮಂಟಪಕ್ಕೆ ಹೋಗೋಣ ಬನ್ನಿ. (ನಳಿನಿ ರಂಗಸ್ಥಳಕ್ಕೆ ಬರುವಳು.) ಅಬ್ಬಾ, ಇಬ್ಬರೂ ನಿಸ್ಸೀಮ ಈಜುಗಾರತಿಯರು ! ನೀರಾನಿಗೇ ಈಜುಕಲಿಸುವ ನಿಪುಣರು. ನೀರಿನಿಂದ ಹೊರಬರಲು ಇಬ್ಬರಿಗೂ ಮನಸ್ಸಿಲ್ಲ. ಸುಂಟರಗಾಳಿ ಬೀಸಿ, ಮಳೆಯುದುರದಿದ್ದರೆ ಈಗಲೂ ನೀರಿನಿಂದೀಚೆಗೆ ಹೊರಬರುತ್ತಿರಲಿಲ್ಲವೇನೋ ! (ಕೆಲಕೆಲ ನಗುವಳು.) ಓ, ದೇವಯಾನೀ, ರಾಜಕುಮಾರೀ, ಬೇಗ ಬನ್ನೀ (ಕೂಗುವಳು).

(ಉತ್ತರದಿಂದ ದೇವಯಾನಿ ಕಣ್ಣುಜ್ಜಿಕೊಳ್ಳುತ್ತಲೇ ಬರುವಳು. ಶರ್ಮಿಷ್ಠಾ ಇತ್ತಣಿಂದ ಬರುವಳು. ಶರ್ಮಿಷ್ಠೆಳ ನಸುಗೆಂಪಿನ ಸೀರೆ ದೇವಯಾನಿಯ ಮೇಲಿದೆ. ಅವಳ ಗುಲಾಬಿಯ ಸೀರೆಯನ್ನು ಶರ್ಮಿಷ್ಠಾ ಉಟ್ಟಿದಾಳೆ.)

ದೇವಯಾನಿ : ಬೆಂಕಿಬಿದ್ದಂತೆ ಕಣ್ಣು ಉರಿಯುತ್ತಿದೆಯಲ್ಲಾ—ಒಸ್ಸೂ ತೆರೆಯಲಾಗುವುದಿಲ್ಲ. ಪೃಥ್ವಿಯ ಧೂಳನ್ನೆಲ್ಲಾ ಈ ಸುಳಿಗಾಳಿ ತಂದು ನನ್ನ ಕಣ್ಣಿಗೇ ತುಂಬಿದೆಯಲ್ಲಾ ಸಖಿ ! (ಕಣ್ಣು ಬಿಡಲು ಪ್ರಯಾಸಪಡುವಳು).

ಶರ್ಮಿಷ್ಠಾ : ಬಹುಶಃ ನಾವೆಲ್ಲ ಹೀಗೆ ಒಟ್ಟಾಗಿ ಸೇರಿ ನಲಿವುದು ಇದೇ ಕಡೆಯ ಬಾರಿಯೇನೋ ! ಮಳೆಗಾಳಿಯು ಹಾವಳಿಯಿಲ್ಲದಿದ್ದರೆ, ಈ ಸಂಜೆ ಕಳೆದು ಕಣ್ಣಿಗೆ ಕತ್ತಲಾದರೂ ನೀರಿನಲ್ಲೇ ಇರಬಹುದಾಗಿತ್ತು.

ದೇವಯಾನಿ : (ಕಣ್ತೆರೆದು, ಸೀರೆ ಬದಲಿಸಿರುವುದನ್ನು ಕಂಡು ಚಕಿತಳಾಗುವಳು.) ಇದೇನು ಶರ್ಮಿಷ್ಠಾ ? ನನ್ನ ಸೀರೆಯನ್ನು ನೀನು ಉಟ್ಟಿರುವೆಯಲ್ಲಾ ! ನಾನಂತೂ ಧೂಳುಬಿದ್ದಿತೆಂದು ಕಣ್ಮುಚ್ಚಿಕೊಂಡಿದ್ದೆ. ಕಣ್ತೆರೆದಿದ್ದ ನಿನಗೂ ತಿಳಿಯಲಿಲ್ಲವೆ ?

ಶರ್ಮಿಷ್ಠಾ : (ಕುಪಿತಳಾಗಿ) ಸಿಲ್ಲಿಸು ನಿನ್ನ ಮಾತನ್ನು ! ಕಣ್ಮುಚ್ಚಿಕೊಂಡಿದ್ದಾಕ್ಷಣ ನಿನ್ನ ಸ್ಪರ್ಶಜ್ಞಾನ ಹಾಳಾಗಿದ್ದಿತೇನು ? ನನ್ನ ಚೀನಾಂಬರವೆಲ್ಲಿ, ನಿನ್ನ ಒರಟು ಪತ್ತಲವೆಲ್ಲಿ ? ಲಾಭವೇ ಆಯ್ತೆಂದು ಬಾಯುಮುಚ್ಚಿಕೊಂಡಿರು.

ದೇವಯಾನಿ : ಹಾಂ, ಇದೀಗ ಆಶ್ಚರ್ಯ ! ತಪ್ಪುಮಾಡಿದ್ದಲ್ಲದೇ ನನ್ನದೇ ತಪ್ಪೆಂದು ದೂರುತ್ತಿರುವೆ ! ಆಚಾರ್ಯ ಪುತ್ರಿಯೂ ನಿನಗಿಂತ ಉತ್ತಮ ವರ್ಣದವಳೂ ಆದ ನಾನುಟ್ಟುದನ್ನು ನೀನು ಉಡಬಹುದು; ನೀನುಟ್ಟುದನ್ನು ನಾನು ಉಡಬಾರದು. ಶುಚಿಯಾದ ಪವಿತ್ರ ನಾರುಮಡಿಯೇ ನನಗೆ ಚೀತಾಂಬರಕ್ಕಿಂತ ಹೆಚ್ಚು ಪ್ರಿಯ. ನೀನುಟ್ಟುಬಿಟ್ಟ ಚೀತ್ಕಾಂಬರ ನನಗೆ ತೃಣಸಮಾನ ! ಪುನಃ ಸ್ನಾನ ಮಾಡಿ ಪವಿತ್ರ ಬಟ್ಟೆ ಧರಿಸಬೇಕಾಯ್ತು ಈಗ.

ಶರ್ಮಿಷ್ಠಾ : (ಬಿಡುಗಟ್ಟಿ) ಎಲೆ ಗಯ್ಯಾಳಿ, ಎಷ್ಟು ವಾದಿಸುವೆ ! ನೀನುಟ್ಟಬಿಟ್ಟ ಪತ್ತಲವನ್ನು ಬೇಕೆಂದೇ ನಾನುಟ್ಟೆನೇ ? ನಮ್ಮ ಆಶ್ರಯದಲ್ಲಿದ್ದು ನಮ್ಮ ಎಂಜಲುಂಡು ಬದುಕುವ ನಿನಗೆಷ್ಟು ಸೊಕ್ಕು? ಬೀದಿಯ ಭಿಕಾರಿಗಳಿಗೆ ಗದ್ದಿಗೆಕೊಟ್ಟರೆ ಅರ್ಹತೆ ಬರುವುದೇನು ? ಕಾಡಿನಲ್ಲಿ ಕಂದಮೂಲ ತಿಂದು ಕಸಿಗಳಂತಿರಬೇಕಾದವರನ್ನು ನಾಡಿಗೆ ಕರೆತಂದು ಗುರುಪಟ್ಟ ಕಟ್ಟಿದರೂ ಕೃತಜ್ಞತೆಯಿದೆಯೇ ? ಈ ಭಿಕಾರಿಣಿಯ ನಾರುಮಡಿ ಪವಿತ್ರವಂತೆ ! ಈ ಅನರ್ಘ್ಯ ಚೀನಾಂಬರ ಅಪವಿತ್ರವಂತೆ !

ನಳಿನಿ : ಎಲೆ ದೇವಯಾನಿ ! ನಿನ್ನ ಗೃಹಚಾರ ಎಲ್ಲೋ ವಕ್ರವಾಗಿದೆ. ಎಚ್ಚರಿಕೆ ! ರಾಜಕುಮಾರಿ ಕುಪಿತಳಾಗಿರುವುದು ಕಾಣುತ್ತಿಲ್ಲವೇ ನೀನಾಡಿದ ಮಾತು ತಪ್ಪಾಯಿತೆಂದು ಕೇಳಿಕೋ ! ನಿನ್ನ ಪೂರ್ವ ಪುಣ್ಯದಿಂದ ಈ ಚೀನಾಂಬರ ಸಿಕ್ಕಿದೆ—ಅದಕ್ಕಾಗಿ ಹರ್ಷಿಸು. ಹೂಂ ಬೇಡಿಕೋ.

ದೇವಯಾನಿ : (ಗಂಭೀರಳಾಗಿ) ಏನು, ಈ ಚೀನಾಂಬರಕ್ಕಾಗಿ ಆಸೆಯೇ ? ಇಚ್ಛಿಸಿದಲ್ಲಿ ಇವಕ್ಕೂ ನಿಗಿಲಾದ ಸಾವಿರ ಾಂಬರಗಳನ್ನು ತರಿಸಬಲ್ಲೆ. ಬೀದಿಯ ಭಿಕಾರಿಯಂತೆ ! ಎಲೇ ್ಞಾನಿ, ಬಿಕ್ಷೆ ಬೇಡುವ ತಿನಸೇ ದಕ್ಷಗರ್ವ ಭಂಗಮಾಡಿತು. ತಪೋ-ನನ್ನು ಕಪಿಗಳೆಂದೆಯಲ್ಲನೇ ? ಮಹತ್ತಿದ್ದಲ್ಲಿ ಮಾತ್ರ ಮಹತ್ತನ್ನು ತಿಸಬಹುದು. ಎಂಜಲುಂಡು ಬದುಕುತ್ತಿರುವವರು ಯಾರು ? ತಂದೆ. ನನ್ನ ತಂದೆಯೆದುರು ಅಂಜಲೀ ಬದ್ಧನಾಗಿ ನಿಂತು ಅವ-ತ್ತನ್ನು ಮಹಾಪ್ರಸಾದವೆಂದು ತಲೆಗೊತ್ತಿಕೊಳ್ಳುತ್ತಾನೆ. ಗುರು-ಶ್ರಿಯಾದ ನನ್ನ ವಲ್ಕಲ ನಿನಗೆ ಸಿಕ್ಕಿರುವುದು ನಿನ್ನ ಪೂರ್ವಾರ್ಜಿತ ಣ್ಯ !

ಶರ್ಮಿಷ್ಠಾ : (ಸಿಟ್ಟೇರಿ ದೇವಯಾನಿಯನ್ನು ಹೊಡೆಯುತ್ತ) ಲೆ ಬಾಯಾಳಿ, ನಿಲ್ಲಿಸು ಈ ವಲ್ಯವಂತಹ ಸಿಡಿಮಾತುಗಳನ್ನ ! ನನ್ನ ಾಜ್ಯಪಿತನನ್ನು ಆಕ್ಷೇಪಿಸುವೆಯಾ ? ಹುಟ್ಟಾ ದರಿದ್ರಯಾಚಕರಾದ ಮಗೆ, ಅನ್ನವಿಟ್ಟಧಣಿಯೆಂಬ ಪರಿಜ್ಞಾನ ಬೇಡವೇ ? ನನ್ನ ತಂದೆ ಾರ್ವಭೌಮ. ಸದಾ ಮೇಲುನ್ಯಯಾಗಿ ಕೊಡುವನು. ತ್ರಾಹಿ ತ್ರಾಹಿ, ೀಹಿ ದೇಹಿ ಎಂದು ಕೈ ಕೆಳಗೆ ಮಾಡಿ ಬೇಡುವ ಯಾಚಕ ನಿಮ್ಮಪ್ಪ. ರಿದುಂಬ ನಿಮಗೆ ಮಾನ ಮರ್ಯಾದೆಯಿಲ್ಲ, ಕೃತಜ್ಞತೆಯಿಲ್ಲ, ಉಪಕಾರ ಸ್ಮರಣೆ ಇಲ್ಲ !

(ದೇವಯಾನಿ ಏಟು ತಾಳಲಾರದೆ ಆಕ್ರಂದನ ಮಾಡುತ್ತ ಓಡಹೋಗುವಳು.)

ನಳಿನಿ : (ಅಡ್ಡಹಾಕಿ ತಾನೂ ಹೊಡೆಯುತ್ತ) ನಿಲ್ಲೆ, ಘಟವಾಣಿ ರಾಜಕುಮಾರಿಯನ್ನು ಬಾಯಿಗೆ ಬಂದಂತೆ ಅಂದು, ಕಾಲಿಗೆ ಬಿದ್ದು ಕ್ಷಮೆಕೇಳದೆ ಓಡುವೆಯಾ ? ಎಲೈ ನಿರ್ಲಜ್ಜೆ, ಎಷ್ಟೊ ಕಾಲದಿಂದ ನನ್ನ ಸಖಿಯನ್ನು ಅವಮಾನಿಸುತ್ತಿರುವೆ. ಈವರೆಗೆ ಬಹುಕಷ್ಟದಿಂದ ತಾಳಕೊಂಡಿದ್ದೆವು. ಇನ್ನು ನಮ್ಮ ಸ್ಥೈರ್ಯವೂ ತೀರಿತು.

ದೇವಯಾನಿ : ಅಯ್ಯೋ, ಅಪ್ಪಾ, ನಾನೀ ಏಟುಗಳನ್ನು ತಾಳಲಾರೆ. (ದುಃಖಿಸುತ್ತಾ) ಹುಟ್ಟಿದಾಗಿನಿಂದ ಒಂದೇಟು ತಿನ್ನದವ, ಒಂದು ಕಠಿಣಮಾತು ಕೇಳದ ನಾನು, ಈ ರಾಕ್ಷಸಿಯರ ಕೈಗೆ ಸಿಕ್ಕಿ-ಬಿದ್ದೆನಲ್ಲಾ ! ಅಯ್ಯೋ ದುಷ್ಟ ರಕ್ಕಸಿಯರೇ, ನನ್ನನ್ನೇಕೆ ಹಿಂಸಿಸು-ವಿರಾ ಹಾಯ್, ಕ್ರೂರ ಕರ್ಮಿಗಳೊಡನೆ ಸಖ್ಯಬೆಳಸಿದರೆ ಇದೇ ಫಲ ! (ಮತ್ತೆ ಹೊಡೆಯುವರು) ಅಯ್ಯೋ, ಬೇಡ, ಬೇಡ. ನಿಮ್ಮ ಈ ಅಪಚಾರಕ್ಕೆ ಮಹಾರಾಜರು ತಕ್ಕಶಿಕ್ಷೆ ಕೊಡುವರು. ಬೇಡ, ಬೇಡ.

ನಳಿನಿ: (ಭೀತಳಾಗಿ) ಹೌದು ರಾಜಕುಮಾರಿ, ಮಡುಕಬೇಡ. ನಿನ್ನ ತಂದೆತಾಯಿಯರಿಗೆ ಈ ದುಷ್ಟಳಮೇಲೆ ಎಲ್ಲಿಲ್ಲದ ಅಭಿಮಾನ. ಇವಳು ಹೇಳುವ ಚಾಡಿಯನ್ನೇ ನಂಬಿ ನಮ್ಮನ್ನು ಶಿಕ್ಷಿಸುವುದು ನಿಶ್ಚಯ !

ಶರ್ಮಿಷ್ಠಾ : (ಕೋಪದಿಂದ ಬುಸುಗುಟ್ಟುತ್ತ) ಎಲೈ ಕೃತಘ್ನೆ, ನಿನ್ನಿಂದಾಗಿರುವ ಹಾನಿಗೆ ನಿನ್ನನ್ನು ಏನು ಮಾಡಿದರೂ ದೋಷವಿಲ್ಲ. ದಾನವಕುಲಕುಠಾರಿನಿ ನೀನು. ಸಂಜೀವಿನೀ ವಿದ್ಯೆಯನ್ನು ಸುರರ ಹಸ್ತಗತ ಮಾಡಿಸಿದವಳು ನೀನು; ಸಂಜೀವಿನಿವಿದ್ಯೆಯನ್ನು ಕಚನಿಗೆ ನೊರಕಿಸಿಕೊಟ್ಟು, ಅವನೊಲವನ್ನು ಬದಲಾಗಿ ಪಡೆದು ಸುರರಾಜ್ಯ-ವಲ್ಲಿ ಸುಖಿಸುವ ಹಂಚಿಕೆ ಹಾಕಿದ ದೇಶದ್ರೋಹಿ ನೀನು. ರಾಜಾಶ್ರಯ ಸೇರಿ, ರಾಜರ ಉಚ್ಛಿಷ್ಟ ಉಂಡು ಬದುಕುವ ನಿಮ್ಮಿಂದ ಕೃತಘ್ನತೆಯೇ ಪ್ರತಿಫಲ. ನಿನ್ನ ಮುಖಾವಲೋಕನವೇ ಮಹಾಪಾಪ. ಅಸುರ ಕುಲದ ಹೆಮ್ಮಾರಿಯೇ, ನೀನೇಕೆ ಸಾಯದುಳಿದೆ ಹುಟ್ಟಿದೊಡನೆಯೇ ನೀನು ಸಾಯಬಾರದಿತ್ತೇ ? (ಉದ್ರೇಕದಿಂದ ದೇವಯಾನಿಯ ಕೈಯನ್ನು ಜಗ್ಗುವಳು.)

ದೇವಯಾನಿ: (ಬಿಕ್ಕುತ್ತಾ) ಅಯ್ಯೋ, ನನ್ನನ್ನೇಕೆ ಹೀಗೆ ಕಾಡುವೆ,ಶರ್ಮಿಷ್ಠೇ? ಕಚನ ನೆನಪನ್ನು ಕೆಣಕಿ ನನ್ನೆದೆಗೆ ಕಿಚ್ಚಿಡದಿರು. ಈ ಅಸತ್ಯದ ಆರೋಪಗಳನ್ನಾಡದಿರು !

ನಳಿನಿ: ಎದೆಗೆ ಕಿಚ್ಚಂತೆ ! ನಮ್ಮ ಕುಲಕ್ಕೇ ಕಿಚ್ಚಿಟ್ಟಿರುವವಳು ನೀನು ! ನಿನಗೇ ಕಿಚ್ಚಿಕ್ಕಿದರೂ ಪಾಪವಿಲ್ಲ. ತಂದೆಯ ಒಡಲ ಒಡೆದು ಕೊಂಡೇ ಕಚ ಬರಲೆಂದ ಪಿತೃಘಾತಕಿ ನೀನು ! ಪುತ್ರೀವಾತ್ಸಲ್ಯದಿಂದ ಇರುವ ಒಂದು ಕಣ್ಣೂ ಕುರುಡಾಗಿರದಿದ್ದರೆ, ಇಂತಹ ಮಗಳನ್ನು ಅಂದೇ ತೊರೆದುಬಿಡುತ್ತಿದ್ದರು.

ಶರ್ಮಿಷ್ಠಾ: ನಿಮ್ಮ ಬಣ್ಣವೆಲ್ಲಾ ತಿಳಿದಿದೆ,-ದ್ರೋಹಿಯೇ, ನೀನು ನಿಮ್ಮಪ್ಪಾ ಇಬ್ಬರೂ ಅಂತರಂಗದಲ್ಲಿ ಸುರರ ಪಕ್ಷಪಾತಿಗಳೇ ! ಯಾಚಕ ರಿಗೆ ಎತ್ತಣ ನಿಷ್ಠೆ ! ಹೊಟ್ಟೆ ತುಂಬಿದಾಯಿತು ! ನಿನ್ನಮೇಲಿನ ಮೋಹ ದಿಂದ ನಿಮ್ಮಪ್ಪ ಸಹ ಉಂಡ ಮನೆಗೆರಡು ಬಗೆದರು. ಅಸುರಕುಲಕ್ಕೆ ದ್ರೋಹಮಾಡಿದರು.

ದೇವಯಾನಿ:(ಸಂತಾಪದಿಂದ)ನಿಲ್ಲಿಸಿ ನಿಮ್ಮ ದುರ್ಭಾಷೆಯನ್ನು ನನ್ನ ಪೂಜ್ಯ ಪಿತನನ್ನು ನಿಂದಿಸುವ ನಿಮ್ಮ ನಾಲಗೆಗಳನ್ನು ಸೀಳಬೇಕು. ಕುಲಕ್ಕೆ ತಕ್ಕಂತಹ ಹೀನ ಮಾತನ್ನಾಡುತ್ತಿರುವಿರಿ. ಉಪಕಾರಕ್ಕೆ ಪ್ರತಿಯಾಗಿ ಅಪಕಾರ ನಿಮ್ಮ ಹುಟ್ಟುಗುಣ. ಅಸುರರ ಶ್ರೇಯಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವ ಪೂಜ್ಯರ ಬಗ್ಗೆ ಇಂತಹ ಮಾತುಗಳು ನಿನ್ನಂತಹ ಹೀನರಕ್ತಸಿಯಿಂದಲ್ಲದೆ ಬೇರೆಯವರಿಂದ ಹೊರಹೊಮ್ಮಲು ಸಾಧ್ಯವೇ ? ಬಲಿಯನ್ನು ಉಳಿಸುವ ಕಟ್ಟಕಡೆಯ ಯತ್ನದಲ್ಲಿ ನನ್ನ ಪೂಜ್ಯ ಪಿತ ತನ್ನ ಕಣ್ಣನ್ನೇ ಬಲಿಯಿತ್ತರು. ಎಲೈ ಗುರುದ್ರೋಹಿನೀ, ಅಂತಹ ತ್ಯಾಗಿಯನ್ನೂ ಜರೆವ ನಿನ್ನನ್ನು ಭೂಮಾತೆ ಹೇಗೆ ಸಹಿಸಿ-ದ್ದಾಳೋ !

ನಳಿನಿ: ಅಹಹಾ ! ಇವಳ ಪಿತೃವಾತ್ಸಲ್ಯವೇ ? ಕಚನಿಗೆ ಒಡ-ಬೊಹಿದುಕೊಂಡು ಬರುವಂತೆ ಒತ್ತಾಯ ಮಾಡಿಸಿದಾಗ ಎಲ್ಲಿತ್ತು ಈ ವಾತ್ಸಲ್ಯ ? ಎಚ್ಚರಿಕೆ ! ರಾಜಕುಮಾರಿಯನ್ನು ಹೀಗೆಲ್ಲ ನಿಂದಿಸಿದರೆ ಪರಿಣಾಮ ಒಳ್ಳೆತಾಗುವುದಿಲ್ಲ. ತಕ್ಕ ಶಾಸ್ತಿಮಾಡುವೆ. (ಕೆಂಗಣ್ಣು ಬಿಡುವಳು)

ದೇವಯಾನಿ: (ನೋವಿನಿಂದ) ಹಾಯ್ ಕಚ ! ಬಹು ಪ್ರಯಾಸದಿಂದ ಅದುಮಿಟ್ಟ ಆ ಹಳೆಯ ನೆನಪನ್ನೇಕೆ ಕೆರಳಿಸುತ್ತಿರು-ವರು ? ಎದೆಯ ಮಾಗದ ಗಾಯವನ್ನೇಕೆ ಕೆದಕುತ್ತಿರುವರು ?

(ಸಂತಾಪದಿಂದ) ಎಲೈ ವಂಚಕಿಯರೇ, ಸಖಿಯರೆಂದು ನಂಬಿ ಎನ್ನೆದೆಯ ಗುಟ್ಟನ್ನು ಹೇಳಿದ ಕಾರಣ ಎಂತಹ ಪ್ರತೀಕಾರ ಮಾಡಿದಿರಿ! ನೀವು ಸಖಿಯರಲ್ಲ--ಶತ್ರುಗಳು! ಶರ್ಮಿಷ್ಠಾ, ನೀನಂತೂ ವಿಷಸರ್ಪಿಣಿ, ಅಲ್ಪವಿದ್ಯೆಯ ಮಹಾಗರ್ವದಿಂದ ಎಷ್ಟು ಅನರ್ಥ ಮಾಡಿಬಿಟ್ಟೆ! ರಾಜನೀತಿ ನಿಪುಣೆಯೆಂಬ ನಿನ್ನ ಅಹಂಕಾರ ಮಣ್ಣುಗೂಡಿ ಹೋಗಲಿ! ಕಚನ ಮೇಲಿದ್ದ ನಸ್ಸೊಲವನ್ನು ತಿಳಿದು, ಕಚನನ್ನು ಕೊನೆಗಾಣಿಸಲು ನೀನು ನಳಿನಾ ಹಂಚಿಕೆ ಹೂಡಿದಿರಲ್ಲವೆ? ನಿಮ್ಮ ಮಾತಿನಂತೆ ನಳಿನಳ ತಂದೆ ಆ ಮುಂದಮತಿ ಕೇತುಮಂತ ಕಚವಿನಾಶಕ್ಕೆ ಪಣತೊಟ್ಟ, ಕಚ ತಿಳಿದು ನನ್ನ ಪ್ರೇಮಭಗ್ನವಾಗಲೆಂದು ನಿಮ್ಮ ಅಭೀಷ್ಟ. ಹಾಗೆ ಹೇಳದೆ ಕಚ ತಿಳಿದರೆ ಸಂಜೀವಿನೀವಿದ್ಯೆ ಅನ್ಯಹಸ್ತಗತವಾಗದೆಂದೆ; ಕಚ ಸುರರ ಗೂಢಚಾರನೆಂದೆ. ಕಚ ಸತ್ತರೂ ನಾಲ್ಕಾರುಬಾರಿ ಸಂಜೀವಿನೀ ವಿದ್ಯೆಯಿಂದ ಬದುಕಿದ. ನಿಮ್ಮ ಈರ್ಷೆ ಪೇರೆ ಮೀರಿತು. ಕಚನ ಭಸ್ಮವನ್ನು ಆಚಾರ್ಯರಿಗೆ ಸುರೆಯಲ್ಲಿ ಕದಡಿಕೊಟ್ಟರೆ ಕಚನ ಶಾಶ್ವತ ನಾಶವಾಗುವುದೆಂಬ ಉಪಾಯ ಸಹ ನಿನ್ನದೇ ಅಲ್ಲವೇ? ನಿಮ್ಮ ವಂಚನೆಯೇ ನಿಮ್ಮ ಕುಲನಾಶಕ್ಕೆ ಹೇತುವಾಯಿತು. ಸಂಜೀವಿನೀವಿದ್ಯೆ ಸುರರ ಹಸ್ತಗತವಾದದ್ದು. ನಿಮ್ಮ ಗುರುದ್ರೋಹದಿಂದ! ಗುರುಹತ್ಯೆ, ಬ್ರಹ್ಮಹತ್ಯೆಗೆ ಅಂಜದ ಅಸುರ ಕುಲಾಧಮೆಯರು ನೀವು. (ಶರ್ಮಿಷ್ಠೆ ಕುಪಿತಳಾಗಿ ಸುತ್ತಲೂ ನೋಡುವಳು) ಕುಲಕ್ಕೆ ಮೃತ್ಯುವಾದವಳು ನೀನು. ಕೈತಪ್ಪಿ ನೀನು. ಕಚನೆಲ್ಲಿ ನನಗೊಲಿಯುವನೋ ಎಂದು ನೀನಾಗಿ ಅವನನ್ನು ಕಂಡು ಆಚಾರ್ಯರ ಉದರದಿಂದ ಪುನರ್ಜನ್ಮ ಪಡೆದ ಕಾರಣ ನನಗೆ ಸಹೋದರನಾದಂತಾಯಿತೆಂದು ದುರ್ಬೋಧೆ ಮಾಡಿ ಅವನ ಮನ ಕೆಡಿಸಿದೆ. ಹಾಯ್, ನನ್ನ ಪ್ರಣಯ ಕಶ್ಮಲವನ್ನು ಜಿವುಟಿ ಎಸೆದೆ. ಅದಾವ ಸುಖ ಕಂಡೆ? ಪರರ ಸುಖದಲ್ಲಿ ವಿಷಬೆರಸಿ ಅವರ ನೋವು ಕಂಡು ನಲ್ಲಿಯುವ ರಾಕ್ಷಸತೆಗೆ ಧಿಕ್ಕಾರ! ಒಲುಮೆಯರಿಯದ ಬರಡುಹೃದಯದ ನಿನ್ನದು ನನ್ನ ಸಾವುನೋವುಗಳು ನಿನಗೆಂತು ವೇದ್ಯವಾಗಬಲ್ಲವು? ನನ್ನ ಶತ್ರುಗಳಿಗೂ ಭಗ್ನಪ್ರಣಯದ ಯಾತನೆ ಬೇಡ.

ನಳಿನಿ: ಎಲೈ ಮಂದಭಾಗ್ಯೆ, ಬಾಯಿಮುಚ್ಚೀ ನೀನೋ ಯಾಚಕಪುತ್ರಿ! ಈ ಶುಭಾಂಗಿ ಚಕ್ರವರ್ತಿ ತನುಜೆ! ಸೂರ್ಯ ಚಂದ್ರರು ತಮ್ಮ ಪಥಬಿಟ್ಟರೂ, ಇವಳ ಪ್ರಣಯಭಗ್ನವಾಗದು. ಆ ಶತ್ರುಗೂಢಚಾರನಾದ ಕಚ ಸತ್ತಿದ್ದರೆ ಪೀಡೆ ತಪ್ಪುತ್ತಿತ್ತು. ದೇಶಭಕ್ತ ರಾಜಭಕ್ತಿಯಿದ್ದಲ್ಲಿ ನೀನವನ ಪಕ್ಷ ಪಹಿಸುತ್ತಿದ್ದೆಯಾ? ದ್ರೋಹಿ ನೀನು!

ಶರ್ಮಿಷ್ಠಾ: (ತಿರಸ್ಕಾರದಿಂದ) ನಳಿನಿ, ಆ ದಾಸಿಯೊಡನೇಕೆ ಮಾತು? ತಿರಿದುಂಬುವರಿಗೆ ಪೂರಾಲೊಚನೆಯಿರುವುದೇ? ಸ್ವಾರ್ಥಸುಖವೊಂದೇ ಮುಖ್ಯ. ಈ ಮಂದಭಾಗ್ಯೆಗೆ ರಾಜಧರ್ಮವೇನು ಗೊತ್ತು? ನಾನು ರಾಜಪುತ್ರಿ. ರಾಜ್ಯಕ್ಷೇಮ ನನ್ನ ಮೊದಲ ಗುರಿ. ಒಲುಮೆ, ಪ್ರಣಯ ಈ ಮರುಳಾಟವೆಲ್ಲಾ ಅನಂತರ.

ದೇವಯಾನಿ: ಎಲೆ ರಕ್ಕಸಿ. ಸಾಕುನೂಡು ನಿನ್ನ ಪೆಮ್ಮೆಯ ಮಾತುಗಳನ್ನು. ನೀನು ಕಚನ ಪ್ರೇಮಕ್ಕಾಗಿ ಹಂಬಲಿಸಿರಲಿಲ್ಲವೇ? ಕಚ ಅಲಭ್ಯನೆಂದು ತಿಳಿದಾಗ ಪ್ರಣಯಮಾತ್ಸರ್ಯದಿಂದ ಅಣ್ಣ-ತಂಗಿಯೆಂಬ ಧರ್ಮಭೀತಿ ಹುಟ್ಟಿಸಲಿಲ್ಲವೇ? ಏಕೆ ಹೆದರಿ ಸತ್ಯವನ್ನು ಸತ್ಯವನ್ನು ಮರೆಸುವೆ?

ಶರ್ಮಿಷ್ಠೆ: (ಭೀತಿಯಿಂದ) ಹೆದರಿಕೆ! ನನಗೆ— ಕ್ಷತ್ರಿಯ ಕನ್ಯೆಗೆ? ಎಲೈ ಮರುಳೇ, ವೀರಕ್ಷತ್ರಾಣಿ ನಾನು ನಿನಗೆ ಹೆದರಲೇ? ಕಚನನ್ನು ನಾನು ವರಿಸಬೇಕೆಂದಿದ್ದು ಒಲುಮೆಗಾಗಿಯಲ್ಲ- ದೇವ ರಾಜ್ಯದ ಒಳಗುಟ್ಟು ತಿಳಿಯಲು! ಈಗ ಆ ರಾಜಶ್ರೇಷ್ಠನನ್ನು ವರಿಸಬೇಕೆಂದಿರುವುದೂ ಪ್ರಣಯದ ಮರುಳಾಟಕ್ಕಾಗಿಯಲ್ಲ; ಅಸುರರಾಜ್ಯ ವಿಸ್ತರಣೆಯಲ್ಲಿ, ಸುರರಾಜ್ಯಕ್ಕೆ ಧಾಳಿಮಾಡುವುದರಲ್ಲಿ, ಆ ವೀರವರನ ನೆರವು ಪೊರಕೆಸಲಿಕ್ಕಾಗಿ. ಅವನ ತಂದೆ ನಹುಷ ಸುರೇಂದ್ರ ಪದವಿ ಪಡೆದ ವೀರ. ಎಲೈ ಯಾಚಕ ಪುತ್ರಿ- ಈಗಲಾದರೂ ತಿಳಿಯಿತೇ ರಾಜಪುತ್ರಿಯರ ಅಂತರಂಗ?

ದೇವಯಾನಿ: (ತಿರಸ್ಕಾರದಿಂದ) ತಿಳಿಯಿತು, ತಿಳಿಯಿತು. ರಾಜಕುಮಾರಿಯರಿಗೆ ಹೃದಯವಿಲ್ಲ, ಸ್ನೇಹವಿಲ್ಲ, ಕರುಣೆಯಿಲ್ಲ! ಮಾನವನ ವಿಕಾಸಕ್ಕೆ ಮೂಲವಾದ ಒಲುಮೆ ಅವರಿಗೆ ಮಾರಾಟದ ಸರಕು! ಧಿಕ್, ಧಿಕ್! ಎಲೈ ಶತಮೂರ್ಖೆ, ನಿನ್ನ ಈ ಅಲ್ಪ ವಿದ್ಯೆಯೇ ನಿನ್ನ ನಾಶಕ್ಕೆ ಕಾರಣವಾಗಲಿ, ನಿನ್ನ ಶ್ರೇಷ್ಠತ್ವದ ಸೊಕ್ಕು ಡಗಲಿ. ಯಾಚಕ ಪುತ್ರಿಯೆಂದು ಬಾರಿಬಾರಿಗೂ ಹಳಿಯುತ್ತಿರುವೆಯಲ್ಲವೇ? ನಿನ್ನ ಪಾಪಕ್ಕೆ ತಕ್ಕ ಶಿಕ್ಷೆಯಾಗಲಿ! ಇನ್ನಿಲ್ಲಿದ್ದು ಈ ಅಪಮಾನವನ್ನು ತಿಲಮಾತ್ರವೂ ಸೈರಿಸಲಾರೆ ಹೋಗಿ ತಂದೆಗೆ ತಿಳಿಸುವೆ. (ಬೇಗ ಹೋಗುವಳು).

ನಳಿನಿ: ರಾಜಕುಮಾರಿ, ಇವಳನ್ನು ಹೋಗಗೊಟ್ಟರೆ ಕೆಲಸ ಕೆಟ್ಟಿತು. ಅಪಮಾನಿತವಾದ ಗಜಸರ್ಪಗಳಂತೆ ಮಹಾ ಅಪಾಯಕಾರಿಣಿ ಇವಳು.

ಶರ್ಮಿಷ್ಠಾ: (ಉದ್ರಿಕ್ತಳಾಗಿ) ನಿಜ. ಇವಳು ಅನಾಹುತ ಮಾಡಿಬಿಡುತ್ತಾಳೆ. ಇವಳಿರುವವರೆಗೂ ನಮಗೆ ಕಷ್ಟ ನಷ್ಟ ತಪ್ಪಿದ್ದಲ್ಲ. ಹೋಗಿ ಅವಳನ್ನು ಎಳೆದು ತಾ. ಆ ಪಾಪಿಣಿಯನ್ನು ಇಲ್ಲದಂತೆ ಮಾಡಿಬಿಡಬೇಕು. ಆಗಲೇ ನಮ್ಮ ಕಷ್ಟಗಳಿಗೆ ಕೊನೆ. ಆಗಲೇ ದಾನವ ಕುಲದ ಭಾಗ್ಯೋದಯ. (ಒಂದು ಮುರದ ಸಣ್ಣ ರೆಂಬೆಯನ್ನು ಕಿತ್ತುಕೊಳ್ಳುವಳು) ಎಳೆದು ತಾ ಅವಳನ್ನು-ಇವರಿಂದಲೇ ಚೆನ್ನಾಗಿ ಬಡಿದು ಅವಳ ಸೊಲ್ಲನ್ನಡಗಿಸುವೆ.

(ಗುಡಗಿನಾರ್ಭಟೆ- ದೇವಯಾನಿ ಆಕ್ರಂದನ ಮಾಡುವಳು- ನಳಿನಿ ಅವಳನ್ನು ಎಳೆದು ತರುವಳು.)

ದೇವಯಾನಿ: ಅಯ್ಯೋ, ನನ್ನನ್ನೇಕೆ ಕಾಡುವಿರಿ? ಬಿಡಿ, ಗಗನವೊಡಲು ನೀಳ ಗುಡುಗು ಸಿಡಿಲುಗಳು ಆರ್ಭಟಿಸುತ್ತಿವೆ. ನನ್ನ ತಂದೆ ನಾನೇಕೆ ಬರಲಿಲ್ಲವೆಂದು ಹೆದರುತ್ತಾರೆ. ನನ್ನನ್ನು ಬಿಟ್ಟುಬಿಡಿರಿ!

ನಳಿನಿ: ನಿನ್ನನ್ನು ಬಿಟ್ಟರೆ ನಾವು ಕೆಟ್ಟೆವು. ಜಾಡಿ ಹೇಳಿ ನಮಗೆ ಶಿಕ್ಷೆ ಕೊಡಿಸುವೆ. ಇಲ್ಲಿ ತಾ ಆ ಕೋಲನ್ನು ರಾಜಕುಮಾರಿ!

ದೇವಯಾನಿ : (ಭೀತಳಾಗಿ) ಅಯ್ಯೋ, ಇದೇನು ಹುಚ್ಚಿಕೆ ಮಾಡಿದ್ದೀರಿ ? ಶರ್ಮಿಷ್ಠಾ, ನನ್ನನ್ನು ಬಿಡಿರಿ ! ನಿಮಗೆ ಯಾವ ಅಪಾಯವನ್ನೂ ಮಾಡುವುದಿಲ್ಲ.

ಶರ್ಮಿಷ್ಠಾ : ನೀನಿರುವವರೆಗೂ ತೊಂದರೆ ತಪ್ಪಿದ್ದಲ್ಲ. ಶತ್ರು ಎಂದು ಆಡಿಯೇ ಹೋಗಿದ್ದೀಯಾ. ಶತ್ರುಶೇಷವನ್ನುಳಿಸಬಾರದು. (ನಳಿನಾ ಕೋಲಿನಿಂದ ದೇವಯಾನಿಯನ್ನು ಥಳಿಸುವಳು).

ದೇವಯಾನಿ : ಅಯ್ಯೋ, ಶರ್ಮಿಷ್ಠಾ, ನನ್ನದು ತಪ್ಪಾಯಿತು! ಇದೋ ಕೈ ಮುಗಿದು ಬೇಡುವೆ, ಸಖಿ, ನನ್ನನ್ನು ಬಿಡಿಸು !

ಶರ್ಮಿಷ್ಠಾ : ಸಖಿಯಂತೆ ! ಎಲೇ ಯಾಚಕಿ ! ಸಮಾನ ಸ್ಕಂದರು ಮಾತ್ರ ಸಖಿಯರು. ನೀನು ಶತ್ರುವೋ ದಾಸಿಯೋ ಹೇಳು.

ದೇವಯಾನಿ : (ಏಟನ್ನು ತಾಳಲಾರದೆ) ಇಲ್ಲ ಶತ್ರುವಲ್ಲ. ಅಯ್ಯೋ ತಂಗಿ, ಈ ದುಷ್ಟಳ ಕೈಯಿಂದ ನನ್ನನ್ನು ಬಿಡಿಸೇ, ಅಯ್ಯೋ !

ಶರ್ಮಿಷ್ಠಾ: ತಂಗಿ ! ಎಂದಿನಿಂದ ತಂಗಿಯಾದೆ ? ನಿನ್ನ ಹೆಮ್ಮೆಯೇ ! ದಾಸಿಯೆಂದು ನೊಡಲು ಒಪ್ಪು.

ದೇವಯಾನಿ: ಆಗಲಮ್ಮಾ ಆಗಲಿ. ನೀನೇ ಒಡತಿ, ನಾನು ದಾಸಿ ಆಯಿತೇ ? ಅಯ್ಯೋ ಹೊಡೆತ ನಿಲ್ಲಿಸಿರೇ–ನಾ ತಾಳಲಾರೆ.

ಶರ್ಮಿಷ್ಠಾ: ಹಾಗೆ ಬಾ ದಾರಿಗೆ. ಎಲೈ ದಾಸಿ ! ಎಷ್ಟು ನಿನ್ನ ಸೊಕ್ಕು ? ಚಾಡಿ ಹೇಳಲು ಓಡುವೆಯಾ ? ಈಗ ನಿನ್ನನ್ನು ಬಿಟ್ಟರೆ ನಮಗೆ ಶಿಕ್ಷೆ ಮಾಡಿಸುವೆ.

ನಳಿನಿ: ಹೌದು ರಾಜಕುಮಾರಿ ! ಇವಳನ್ನು ಬಿಡಕೂಡದು. ಹೀಗೆ ಒಂಟಿಯಾಗಿ ಇನ್ನೆಂದೂ ನಮ್ಮ ಕೈಗೆ ಸಿಕ್ಕಳು. ನಮ್ಮ ಕುಲಕ್ಕೆ ಮೃತ್ಯುವಾಗಿರುವ ಇವಳನ್ನು ತೀರಿಸಿಬಿಡಬೇಕು.

ಶರ್ಮಿಷ್ಠಾ: ನಿಜ,ನಿಜ. ಅಂದಿನಿಂದ ಎದೆಯಲ್ಲಡಗಿಸಿದ್ದ ಸೇಡನ್ನೆಲ್ಲಾ ಇಂದು ತೀರಿಸಿಬಿಡುವ !

ದೇವಯಾನಿ: ಹಾ! ರಕ್ಕಸಿಯರಿರಾ, ಕಲ್ಲು ಹಿಂಡಿ ನೀರು ಬರಿಸಬಹುದೇ ? ನಿಮ್ಮೆಡೆಯಲ್ಲಿ ಕರುಣೆಯುಂಟೇ ? ಹಾಯ್, ತಂದೆಯೇ ತ್ರಿಕಾಲಜ್ಞರಾದ ನಿನಗೂ ನನ್ನ ದುರವಸ್ಥೆ ತಿಳಿಯದೇ ? ಸರ್ವಪ ಹೆಡೆಯುನ್ನಾಶ್ರಯಿಸಿದ್ದ ಕಪ್ಪೆಯಂತಾಯಿತಲ್ಲಾ ನಮ್ಮ ಸ್ಥಿತಿ ! ಓ, ಜಗದಂಬಾ. ಇವರ ಕೃತ್ಯಕ್ಕೆ ನೀನೇ ಸಾಕ್ಷಿ, ಅಯ್ಯೋ ನನಗೆ ರಕ್ಷಕರೇ ಇಲ್ಲವಾದರಲ್ಲಾ (ಬಿಕ್ಕುವಳು)

ನಳಿನಿ: ಕಚನನ್ನು ಧ್ಯಾನಿಸಿಕೋ- ಪ್ರತ್ಯಕ್ಷನಾದನು! ಎಲೈ ಯಾಚಕಿ; ನಮ್ಮ ರಾಜಕುಮಾರಿಯನ್ನು ಜೈದಿದ್ದಕ್ಕೆ ಇದೋ ಶಿಕ್ಷೆ ! (ತಲೆಯ ಮೇಲೆ ಹೊಡೆಯುವಳು. 'ಅಯ್ಯೋ' ಎಂದು ಬಿಸ್ದು ದೇವಯಾನಿ ಪ್ರಜ್ಞೆ ತಪ್ಪುವಳು.)

ಶರ್ಮಿಷ್ಠಾ: ತಲೆಗೆ ಏಟು ಬಿದ್ದು ಪ್ರಜ್ಞೆತಪ್ಪಿ ಬಿದ್ದಳು. ಈಗೇನು ಮಾಡುವುದು ನಳಿನಿ ?

ನಳಿನಿ: ಉದ್ಯಾನದ ಮೂಲೆಯಲ್ಲಿರುವ ಹಾಳುಭಾವಿಗೆ ಎತ್ತಿ ಹಾಕುವ ಕೆಳಗಿರುವ ಕಲ್ಲುಬಂಡೆಗೆ ತಾಕಿ ತಲೆಯೊಡೆದು ಪ್ರಾಣ ಬಿಡುತ್ತಾಳೆ. ಮಳೆ ಬಿರುಗಾಳಿ ಬಂದಾಗ ಓಡಿಬಂದೆವೆಂದೂ ಎಲ್ಲೋ ಕಾಣದೆ ಕಾಲಿಟ್ಟು ಅವಳು ಬಿದ್ದಿರಬಹುದೆಂದೂ ಹೇಳಿಬಿಡುವ! ಕಾಲ್ತೊಡಕಾಗಿದ್ದ ಈ ದೇವಯಾನಿ ತೀರಿಹೋದರೆ ನಮ್ಮ ಶ್ರೇಯಕ್ಕೆ ನಾಂದಿ !

ಶರ್ಮಿಷ್ಠಾ: (ಭೀತಿಳಾಗಿ) ನನಗೇಕೋ ಭಯವಾಗುತ್ತಿದೆ, ನಳಿನಿ!

ನಳಿನಿ: ವೀರಕ್ಷತ್ರಾಣಿಯಾದ ನಿನಗೇಕೆ ಹೆದರಿಕೆ ? ಶತ್ರುಶೇಷ ಉಳಿಯಬಾರದು. ನಡೆ.

[ಉದ್ಯಾನದ ಮೂಲೆ]

ನಳಿನಿ: ಇನ್ನು ದೇವಯಾನಿಯ ಗತಿ ಪೂರೈಸಿತು. ಮತ್ತೆ ಶಾಲಿನಿ ಬಂದಾಳು ನಡೆ. ಅರಮನೆಗೆ ಓಡುವ! ಮಳೆ ಬೇರೆ ಹಸಿಯುತ್ತಿದೆ.

ಶರ್ಮಿಷ್ಠಾ: ನಡೆ, ಬೇಗ ಓಡುವ. [ಇಬ್ಬರೂ ಓಡುವರು ಮಳೆ ಧಾರಾಕಾರವಾಗಿ ಸುರಿಯುವುದು. ಬಾವಿಯಾಳದಿಂದ ದೇವಯಾನಿಯ ನರಳಿಕೆ-ಅನಂತರ ಕ್ಷೀಣ ಧ್ವನಿ ಕೇಳಿಬರುವುದು.]

ದೇವಯಾನಿ: ಓ; ರಾಜಕುಮಾರಿ ಶರ್ಮಿಷ್ಠಾ, ನಿನಗಿದೋ ನಮಸ್ಕಾರ! ನನ್ನನ್ನು ಮೇಲೆತ್ತಿಕೊಳ್ಳಿರೇ ನಿಮಗೆ ಯಾವ ಕೇಡನ್ನು ಮಾಡೆ ಯಾವ ತೊಂದರೆಯನ್ನೂ ಕೊಡೆ, ದಯಮಾಡಿ ಮೇಲೆತ್ತಿಕೊಳ್ಳಿರೇ ಓ, ನಳಿನಾ, ಅಸುರ ಕನ್ಯಾಮಣಿಯರೇ, ಮೇಲೆತ್ತಿರೇ, ! ಓ ಶರ್ಮಿಷ್ಠಾ, ಇನ್ನೆಂದೂ ನಿನಗೆ ಎದುರಾಡೆ, ನಲಿಗೆಯುಂದ ಮಾತನಾಡೆ ! ಒಡತಿಯೆನ್ನುವೆ–ಚಾಡಿ ಹೇಳೆ–ನನ್ನಾಣೆ–ಮೇಲೆತ್ತಿಕೊಳ್ಳಿರೇ. ಅಯ್ಯೋ, ನೋಲೆ ಮಳೆ. ಇಲ್ಲಿ ನೀರು ಅಣೆಕಲ್ಲುಗಳು ಬೇರೆ (ಭೀತಿಯಿಂದ) ಶರ್ಮಿಷ್ಠಾ, ನಳಿನಾ ! ಶರ್ಮಿಷ್ಠಾ, ನಳಿನಾ!! (ಬೇಗ ಬೇಗ ಕೂಗುವಳು.)

ಹಾಯ್, ಅವರು ಅರಮನೆಗೆ ಓಡಿರಬೇಕು. ಭೃಗು ಮಹರ್ಷಿಯ ಪುತ್ರಿಯಾಗಿ, ಶುಕ್ರಪುತ್ರಿಯಾಗಿ ನನಗೀ ಅಪಮೃತ್ಯವೇ ? ಹಾಯ್ ದುರ್ವಿಧಿಯೇ ಈ ಜನ ಶೂನ್ಯ ಪ್ರದೇಶಕ್ಕೆ ಯಾರೂ ಬರುವದಿಲ್ಲ. ಅನ್ನಾಹಾರವಿಲ್ಲದೆ ನಾನೀ ಮೃತ್ಯುಕೂಪದಲ್ಲಿ ಸೊರಗಿ ಸಾಯುವಂತಾಯಿತಲ್ಲಾ ! ಯಾರಿಗೆ ನಾ ಮೊರೆಯಿಡಲಿ ? ಓ, ಜಗಜ್ಜನನಿ, ಓ ಗೌರಿದೇವಿ ! ಓ ಆದಿಮಾತೆ ಮೋಡದೊಡಲ ನಿಂಚುನೀನು. ಪಂಚಭೂತಗಳನ್ನೇ ಪುಂಜಮಾಡಿಕೊಂಡಿರುವ ಮಹಾದೇವಿ ನೀನು ತಾಯಿಯಿಂದು ನಂಬಿ ರಕ್ಷಣೆಗಾಗಿ ಮೊರೆಯಿಡುತ್ತಿರುವೆ. ಅನನ್ಯ ಶರಣಾಗಿ ಬೇಡುತ್ತಿರುವೆ. ತೇಲಿಸಿದರೂ ನೀನೇ, ಮುಳುಗಿಸಿದರೂ ನೀನೇ–ಎರಡು ಕೈಗಳನ್ನೂ ಮೇಲೆತ್ತಿಬೇಡುತ್ತಿರುವೆ. ತಾಯಿಕಾಣದ ಎಳಗರುವಿನಂತೆ ಹಂಬಲಿಸುತ್ತಿರುವೆ ಅಮ್ಮಾ–ಅಮ್ಮಾ– (ಕ್ಷೀಣವಾಗಿ ಕೂಗುತ್ತಲೇ ಇರುವಳು. ಅತ್ತಣಿಂದ ಯಯಾತಿಯು ಪ್ರವೇಶ. ಯಯಾತಿ ಸುಂದರ ಯುವರಾಜ. ಯೋಗ್ಯ ಉಡಿಗೆ ಧರಿಸಿದ್ದಾನೆ.)

ಯಯಾತಿ : ಅರಣ್ಯದಂಚಿನ ಈ ಉದ್ಯಾನ ಎಷ್ಟು ಸೊಗಸಾಗಿದೆ. ಚೈತ್ರರಥ, ನಂದನವನಗಳೊಡನೆ ಸ್ಪರ್ಧಿಸುವಂತಿದೆ.

ಬೇಟೆಯ ಬೆನ್ನಟ್ಟಿ ಮುಂದೆ ಬಂದ ನನ್ನ ಜಾಡು ತಿಳಿಯದೆ ಅನುಚರರು ಏನುಮಾಡಿದರೋ ! ಈ ಮಳೆ ಬೇರೆ. (ಅಮ್ಮಾ ಎಂಬ ನರಳಿಕೆ ಕೇಳುವುದು). ಇದೇನು ಈ ನಿರ್ಜನ ಪ್ರದೇಶದಲ್ಲಿ ಸ್ತ್ರೀಕಂಠದ ನರಳಿಕೆ ? (ಮತ್ತೆ ಧ್ವನಿ ಕೇಳುವುದು) ಭೂತ ಹೇಷ್ಟಿಯಿರಬಹುದೆ ? ಕ್ಷತ್ರಿಯನಾದ ನನಗೆ ಭಯವೇಕೆ ? ಆರ್ತರಿಗೆ ರಕ್ಷಣೆಕೊಡುವುದು ನನ್ನ ಧರ್ಮ. ಪಾತಾಳದಿಂದ ಬರುವಂತಿದೆಯಲ್ಲಾ ಧ್ವನಿ. (ಮತ್ತೆ ಕೂಗು ಕೇಳುವುದು) ಓ, ಈ ನೆಲಬಾವಿಯಿಂದಲೇ ಧ್ವನಿಬರುತ್ತಿದೆ. (ಬಗ್ಗಿ ನೋಡಿ) ಯಾರಲ್ಲಿ ?

ದೇವಯಾನಿ : ಓ, ಆಪದ್ಬಾಂಧವೆ, ಆಪದ್ಬಂಧುವೆ ಕಾಪಾಡು ಕಾಪಾಡು. (ಶಂಕೆಯಿಂದ) ಯಾವುದೋ ಧ್ವನಿ ಕೇಳಿದಂತಾಯ್ತು! ಈ ನಿರ್ಜನ ಪ್ರದೇಶಕ್ಕೆ ಯಾರುಬರುವರು ? ನನ್ನ ಭ್ರಾಂತಿಯ ಸೃಷ್ಟಿಯೇ ಈ ಧ್ವನಿ ?

ಯಯಾತಿ : ಓ, ಭದ್ರೆ! ಭ್ರಮೆಯಲ್ಲ. ನಿಜವಾಗಿಯೂ ನಾನು ಬಂದಿಹೆ—ಈ ಆಳವಾದ ನೆಲಭಾವಿಗೆ ಕಾಣದೆ ಕಾಲಿಟ್ಟೆಯಾ ? ಹೇಗೆ ಮೇಲೆ ಬರುತ್ತಿ ? (ಕ್ಷಣ ಚಿಂತಿಸಿ) ನನ್ನ ಉತ್ತರೀಯವನ್ನೂ ಶಿರೋವಸ್ತ್ರವನ್ನೂ ಕಟ್ಟಿಬಿಡುವೆ. ಅದನ್ನು ಹಿಡಿದು ಮೇಲೇರಿ ಬಾ. (ಉತ್ತರೀಯವನ್ನೂ ಬಿಡುವನು. ದೇವಯಾನಿ ಮೇಲೇರಿ ಬರುತ್ತಾ.)

ದೇವಯಾನಿ : ಹಾಯ್, ನನ್ನ ಕೈಕಾಲು ಸೋತುವು. ಹೇಗೆ ನೀಲಕ್ಕೇರಲಿ ? ಓ, ಆಪದ್ಬಂಧು, ನಾನು ಸೋತೆ.

ಯಯಾತಿ: ಹೆದರದಿರು ಶುಭಾಂಗಿ ! ಇದೋ ನನ್ನ ಕೈ-ಹಿಡಿದು ಮೇಲೇರಿ ಬಾ.[ತನ್ನ ಬಲಗೈಯನು ನೀಡಿ ಅವಳ ಬಲಗೈಯನ್ನು ಹಿಡಿದು ಮೇಲೆತ್ತುವ. ದೇವಯಾನಿ ಅವನತ್ತ ನೋಡಿ, ಕೈಮುಗಿಯು-ವಳು.]

ದೇವಯಾನಿ: ಓ, ಆಪದ್ಬಾಂಧವ, ನೀನು ಯಾವ ದೇವತೆ ? ನನ್ನ ಪ್ರಾರ್ಥನೆ ಕೇಳಿ ದೈವೀ ಕೃಪೆಯೇ ಮೂರ್ತಿವೆತ್ತಂತೆ ಬಂದ ನೀನಾರು ? ಈ ಮೃತ್ಯುಕೂಪದಿಂದ ಮೇಲೆತ್ತಿ ಜೀವದಾನ ಮಾಡಿದ ನಿನ್ನ ಉಪಕಾರವನ್ನು ಹೇಗೆ ತೀರಿಸಲಿ?

ಯಯಾತಿ: ಮಂಗಳಾಂಗಿ, ನಾನು ದೇವತೆಯೂ ಅಲ್ಲ, ಗಂಧರ್ವನೂ ಅಲ್ಲ ಸಾಮಾನ್ಯ ಮಾನವ ನಾನು. ಬೇಟೆಯ ಬೆನ್ನಟ್ಟಿ ಬಂದೆ ಬಾಯಾರಿತು. ನೀರು ಕುಡಿಯಲು ಈ ಸರಸಿಗೆ ಬಂದೆ. ಮಳೆ ಹನಿಯು ತಾಗಿ ಲತಾಮುಂಟಪದಲ್ಲಿ ನಿಂತೆ. ಆರ್ತಧ್ವನಿ ಕೇಳಿ ಈ ಬಾವಿಯೆಡೆಗೆ ಬಂದೆ ನೀನಾರು ಶ್ಯಾಮಚ್ಯುತಳಾದ ಲಕ್ಷ್ಮಿಯೋ, ವನಲಕ್ಷ್ಮಿಯೋ, ಅಪ್ಸರೆಯೋ, ಮಾನವ ದುರ್ಲಭನಾದ ಈ ರೂಪರಾಶಿಯನ್ನು ಕಂಡರೆ ನನ್ನನ್ನು ಪರೀಕ್ಷಿಸಲು ಬಂದ ವಿಷ್ಣುಮಾಯೆಯೋ ಎಂದು ಶಂಕೆಯಾ ಗುತ್ತದೆ.

ದೇವಯಾನಿ : ಓ, ಮಹಾತ್ಮ, ನಾನು ಸಾಮಾನ್ಯ ಮಾನವಿ, ರಾಜ ಕುಮಾರಿ ಶರ್ಮಿಷ್ಠೆಯ ಸಖಿ (ನೆನಪಿನಿಂದ ಬಿಕ್ಕುತ್ತ) ಜಲ ಕ್ರೀಡೆಯಾಡಲು ಇಲ್ಲಿಗೆ ಬಂದೆವು. ಬಿರುಗಾಳಿ ಬಂದಾಗ ನನ್ನ ಕಣ್ಣಿಗೆ ಮಣ್ಣು ಬಿದ್ದು, ವಸ್ತ್ರ ಅವಲು ಬದಲಾದುದು ತಿಳಿಯಲಿಲ್ಲ. ರಾಜ ಕುಮಾರಿ ನನ್ನನ್ನು ದೂಷಿಸಿ, ಬಿಕ್ಷುಕನ ಮಗಳೆಂದು ಜರೆದು, ಹೊಡೆದು ಪ್ರಜ್ಞೆ ತಪ್ಪಿಸಿ ಈ ಬಾವಿಗೆ ನೂಕಿ ಹೋದಳು. ಹಾಯ್ ಈ ಅಪಮಾನ ಸಹಿಸಿ ನಾನು ಹೇಗೆ ಜೀವಿಸಲಿ ? ನನ್ನ ತಂದೆ ರಾಜಾ ಶ್ರಯದಲ್ಲಿರುವ ಕಾರಣ, ಅವಳು ನನ್ನನ್ನು ಯಾಚಕ ಪುತ್ರಿಯೆಂದು ನಿಂದಿಸಿ, ದಾಸಿಯೆಂದು ಧಿಕ್ಕರಿಸಿ ನೂಕಿಹೋದಳು. (ಬಿಕ್ಕಿ ಅಳುವಳು)

ಯಯಾತಿ : (ಕರುಣೆಯಿಂದ) ಎತ್ತಿ ಶುಭಾಂಗಿ, ಏಕೆ ದುಃಖಿ ಸುವೆ ? ತ್ರಿಭುವನ ಮೋಹಕವಾದ ರೂಪಸಂಪತ್ತಿರುವ ನೀನು ಬಿಕ್ಷು ಕನ ಮಗಳಾದರೂ ಸಮ್ರಾಟನ ಪಟ್ಟ ಮಹಿಷಿಯಾಗಲು ಅರ್ಹಳು. ಕರುಣೆ, ಆಶ್ರಿತವಾತ್ಸಲ್ಯವಿಲ್ಲದ ಆ ದರ್ಪಿಷ್ಠೆ ಹುಟ್ಟಿನಿಂದ ರಾಜ ಕುಮಾರಿಯಾದರೂ ದಾಸಿಯಾಗಲು ಮಾತ್ರ ಯೋಗ್ಯಳು. ರಾಜ ವಂಶದಲ್ಲಿ ಹುಟ್ಟಿದರೂ ಹೀನಗುಣವುಳ್ಳ ಆ ಹೆಣ್ಣು ಹುಟ್ಟಿದ ಮನೆ ಸೇರಿದ ಮನೆಗಳೆರಡಕ್ಕೂ ಕಳಂಕ ತರುವಳು. ಅವಳ ಗುಣವರಿತರೆ ಯಾವ ರಾಜವಂಶೀಯನೂ ಅವಳನ್ನು ಕೈಹಿಡಿಯುವುದಿಲ್ಲ. ನೀನು ದುಃಖಿಸಿ, ನಿನ್ನ ಸುಂದರ ಕಣ್ಣುಗಳಿಗೆ ನೋವು ಕೊಡಬೇಡ.

ದೇವಯಾನಿ : (ಹರ್ಷದಿಂದ) ಓ, ಪ್ರಿಯಭಾಷಿ, ಕರ್ಣಾಮೃತ ವಾಗಿವೆ ನಿನ್ನ ನುಡಿಗಳು ! ನನಗೆ ಪ್ರಾಣದಾನ ಮಾಡಿ ಜನ್ಮ ಜನ್ಮಾಂತರಕ್ಕೂ ತೀರದ ಋಣಕ್ಕೆ ನನ್ನನ್ನು ಬದ್ಧಳನ್ನಾಗಿ ಮಾಡಿರುವಿರಿ.

ಯಯಾತಿ : ಭದ್ರೇ, ನಿನ್ನ ರೂಪು, ಗುಣ ಸೌಜನ್ಯಗಳು ನನ್ನನ್ನು ಸೆರೆಹಿಡಿದಿವೆ. ನಿನ್ನೊಲವು ದೊರತರೆ ನಾನೇ ಧನ್ಯ.

ದೇವಯಾನಿ: ಪ್ರಿಯ ಬಂಧು, ಇದೆಲ್ಲವೂ ದೈವೇಚ್ಛೆಯೆನ್ನಲೇ? ಬಲಗೈ ನೀಡಿ ನನ್ನ ಕೈಹಿಡಿದು ಮೇಲೆತ್ತುವಾಗ ನನ್ನ ಪಾಣಿ-ಗ್ರಹಣ ಮಾಡಿದಿರಿ. ಸ್ಪರ್ಶಮಾತ್ರದಿಂದಲೇ ನನ್ನ ತನು-ಮನವನ್ನೆಲ್ಲಾ ನಿಮ್ಮದಾಗಿ ಮಾಡಿಕೊಂಡಿರಿ. ನಿಮ್ಮ ಕುಲಗೋತ್ರಗಳನ್ನು ಕೇಳ-ಬಹುದೇ ?

ಯಯಾತಿ : ಅಗತ್ಯವಾಗಿ. ಬಾ ರಮಣಿ ಈ ಲತಾಕುಂಜ-ದೆಡೆಯಲ್ಲಿ ಕೂರುವ. ನಾನು ಚಂದ್ರವಂಶದ ರಾಜನಾದ ಯಯಾತಿ. ಓ, ಶುಭಾಂಗಿ, ನಿನ್ನಂತಹ ಚೆಲುವೆಯನ್ನು ನಾನೆಲ್ಲೂ ಕಂಡಿಲ್ಲ. ಈ ಚೆಲುವು, ಈ ತೇಜಸ್ಸು, ಈ ಗುಣ ಹೀಗೆ ಸಮ್ಮಿಳನವಾಗಿರುವುದು ಬಹು ದುರ್ಲಭ ನಾವು ಗಾಂಧರ್ವ ವಿಧಿಯಿಂದ ವಿವಾಹವಾಗೋಣವೇ ? (ಕಳವಳದಿಂದ) ನಿನ್ನ ಮುಖ ರಮಲವೇಕೆ ಕಳೆಗುಂದಿತು ಸುಭಗೇ ?

ದೇವಯಾನಿ : (ಸ್ವಗತ) ನಳಿನಳ ಹೊಗಳಿಕೆ ಉತ್ಪ್ರೇಕ್ಷೆಯಲ್ಲ. ಇಂತಹ ಪತಿಯನ್ನು ಪಡೆದರೆ ಶರ್ಮಿಷ್ಠೆಯ ಗರ್ವಕ್ಕೆ ಮೇರೆಯುಂಟೇ? (ಪ್ರಕಟವಾಗಿ) ನೀವು ನಹುಷಪುತ್ರ ಯಯಾತಿಯೇ ? ನನಗೆ ಭೀತಿ ಯಾಗುತ್ತಿದೆ ಮಹಾರಾಜ. ನೀವು ಸಾಮ್ರಾಟರು. ನಾವು ಬಡವರು ! ನಿಮ್ಮ ಅಂತಃಪುರದಲ್ಲಿ ನನಗಿಂತಲೂ ನೂರರ್ಮಡಿ ಚೆಲುವೆಯಿರಿರ-ಬಹುದು.

ಯಯಾತಿ: ಶುಭಾಂಗಿ, ಒಲುಮೆಯ ಅನರ್ಘ್ಯ ನಿಧಿಯೇ ಲ್ಲಿರುವಾಗ. ನೀನೇಕೆ ಬಡವಳು? ನಿನ್ನ ಊಹೆಯೂ ತಪ್ಪು ಈ ರೂತಿ ವಿಷಯಲಂಪಟನಲ್ಲ. ಈ ವರೆಗೂ ಅವಿವಾಹಿತ. ನಿನ್ನಲ್ಲಿ ತ್ರ ಮನಸೆರೆಯಾಗಿದೆ. ನಿನ್ನ ಕುಲಗೋತ್ರ ತಿಳಿಸುವೆಯಾ ?

ದೇವಯಾನಿ: ಧನ್ಯಳಾದೆ. ಆರ್ಯಪುತ್ರ, ನನಗೆ ರಾಜಮುಖ- ರು ಅಧಿಕಾರದಾಸೆಯಿಲ್ಲ. ನಿಮ್ಮೊಲುಮೆಯ ಏಕಾಧಿಕಾರವನ್ನು ತ್ರ ಬಯಸುವೆ. ನಿಮ್ಮ ಹೊರತು ಉಳಿದವರೆಲ್ಲ ನನಗೆ ಸೋದರರು ನ್ನ ಕುಲಗೋತ್ರಗಳೂ ಹಿರಿಯವೇ ಭಾಗ್ಯಪುತ್ರ ಶುಕ್ರಾಚಾರ್ಯರ ಸರನ್ನು ಕೇಳಿರುವಿರಲ್ಲವೇ ? ಅವರ ಪುತ್ರಿಯಾದ ದೇವಯಾನಿ ನಾನು!

ಯಯಾತಿ: (ಖಿನ್ನನಾಗಿ, ಭೀತನಾಗಿ) ಹಾಯ್, ಎಂತಹ ಚಾತುರ್ಯವಾಯ್ತು. ದೇವಿ, ನನ್ನ ಅಪಚಾರವನ್ನು ಮನ್ನಿಸು! ೀನು ನನಗೆ ಅಲಭ್ಯಳಾದ ಬ್ರಾಹ್ಮಣ ಕನ್ಯೆ ? ಸೂರ್ಯನನ್ನು ಹೆಣ್ಣೆಂದು ನ್ಮಮಿಸಿ ತಿನ್ನಹೋದ ಹಕ್ಕಿಯಂತೆ, ನಿನ್ನ ದಿವ್ಯತೇಜಸ್ಸನ್ನು ಕಂಡು ಭ್ರಮಿಸಿದೆ. ಕ್ಷಮಿಸು ದೇವಿ. ದೇವದಾನವ ವಂದ್ಯರಾದ ಪೂಜ್ಯ ಶುಕ್ರರ ಹೆಸರನ್ನು ನಾನು ಕೇಳಿದೆನೇ ? ಇದೋ, ಕೈಮುಗಿದು, ಬೇಡುವೆ ನನ್ನ ಈ ಅಧಿಕ ಪ್ರಸಂಗವನ್ನು ಅವರೊಡನೆ ಹೇಳದಿರು. ರಾಜಾಶ್ರಯ ದಲ್ಲಿರುವ ಅಧಿಕಾರಿಯು ಮಗಳಿರಬಹುದೆಂದು ಭಾವಿಸಿದ್ದೆ. ನನ್ನ ತಪ್ಪನ್ನು ಕ್ಷಮಿಸು.

ದೇವಯಾನಿ : (ಸ್ವಗತ) ಹಾಯ್, ಕಚನಂತೆ ಇವನೂ ಕೈತಪ್ಪಿ ಹೋಗುವನೇ ! (ಪ್ರಕಾರ) ಆರ್ಯಪುತ್ರ, ನಿಮಗೇಕೆ ಈ ನಿಷ್ಕಾರಣ ಕಳವಳ ? ದೈವವೇ ನಿಮ್ಮನ್ನಿಲ್ಲಿಗೆ ಕರೆತಂದು ನನ್ನ ಪಾಣಿ ಗ್ರಹಣ ಮಾಡಿಸಿರುವಾಗ, ನಾನು ಹೇಗೆ ಅಲಭ್ಯೆ ? ಬ್ರಾಹ್ಮಣ ಕನ್ಯೆ ಕ್ಷತ್ರಿಯನಿಗೆ ಅಲಭ್ಯಳೆನ್ನುವ ಸಾಮಾನ್ಯ ನಿಯಮಕ್ಕೆ ನಮ್ಮ ಈ ಅಘಟಿತ ಘಟನೆ ಹೊರತು! ನನ್ನ ತಂದೆಗೆ ನನ್ನ ಕಂಡರೆ ಪಂಚ- ಪ್ರಾಣ. ನನ್ನ ಇಷ್ಟವನ್ನೆಂದಿಗೂ ವಿರೋಧಿಸರು. ಇನ್ನೇಕೆ ನಿಮಗೆ ಅಳುಕು ?

ಯಯಾತಿ : ಈ ವರೆಗೆ ನಿನ್ನ ಪೂಜ್ಯಪಿತರು ನಿನ್ನಿಷ್ಟವನ್ನು ವಿರೋಧಿಸದಿದ್ದರೂ, ಧರ್ಮವಿರುದ್ಧವಾದ ಈ ವಿವಾಹಕ್ಕೆ ಒಪ್ಪಿಗೆ ಕೊಡಲಾರರು. ಉತ್ತಮ ವರ್ಣದ ಕನ್ಯೆ ಅವಳಿಗಿಂತ ಕೀಳುವರ್ಣ- ದವನಿಗೆ ದಕ್ಕದ ತುತ್ತು. ನಿನ್ನನ್ನು ನಾನು ಬಯಸಿದ್ದನ್ನೇ ಅಪ- ಮಾನವೆಂದು ಬಗೆದು ನಿನ್ನ ತಂದೆ ನನ್ನನ್ನು ಶಪಿಸಬಹುದು. ನನ್ನ ಪ್ರಪಿತಾಮಹನಾದ ಪೂರೂರವ, ವಿತ್ತಾಪಹಾರಮಾಡಿ ಬ್ರಾಹ್ಮಣ ಶಾಪದಿಂದ ನಾಶವಾದ. ನಿನ್ನಂತಹ ಅನರ್ಘ್ಯ ಕನ್ಯಾರತ್ನವನ್ನಪಹರಿ- ಸಿದರೆ, ನಿನ್ನ ತಂದೆ ಶಪಿಸದಿರುವರೇ ? ಇದೋ, ನಿನಗೆ ಸಮಸ್ಯಾರ ! ಧರ್ಮಕ್ಕಂಜಿ, ಶಾಪಕ್ಕಂಜಿ ನಾನು ನಿನ್ನ ಆಸೆ ತೊರೆದರೂ ನಿನ್ನನ್ನು ಮರೆಯಲಾರೆ. ಇನ್ನು ಹೋಗಲು ಅನುಜ್ಞೆ ಕೊಡು. ನನ್ನ ಅನು- ಚರರು ನನಗಾಗಿ ಎಲ್ಲೆಡೆಯೂ ಹುಡುಕುತ್ತಿರಬಹುದು.

ದೇವಯಾನಿ: ಆರ್ಯಪುತ್ರ, ನನಗೆ ಜೀವದಾನ ಮಾಡಿದ ನಿನಗೆ ಚಿರಋಣಿ. ಬ್ರಾಹ್ಮಣ ಕನ್ಯೆಯಾದ ನನಗೆ ಗಾಂಧರ್ವ ವಿವಾಹ ಯೋಗ್ಯವಲ್ಲ, ತಂದೆಯ ಅನುಮತಿ ಪಡೆದು ಬ್ರಹ್ಮವಿಧಿಯಿಂದಲೇ ನಿಮ್ಮನ್ನು ಪಡೆಯುವೆ. (ಅರ್ತಳಾಗಿ) ಆದರೆ ನನ್ನದೊಂದು ಪ್ರಶ್ನೆ ನುಹಾರಾಜ-ಕೇವಲ ಕರುಣೆಯಿಂದ ನನ್ನನ್ನು ವಿವಾಹವಾಗಬೇಕೆಂದಿ ಚ್ಛಿಸಿದಿರೋ, ಅಥವಾ ಹೃತ್ಪೂರ್ವಕ ಪ್ರೀತಿಸಿ ವರಿಸಲಿಚ್ಛಿಸಿದಿರೋ ?

ಯಯಾತಿ: ಭದ್ರೇ, ನಿನ್ನ ರೂಪು ಗುಣಗಳಿಗೆ ಮನಸೋತು ಹೃತ್ಪೂರ್ವಕವಾಗಿ ನಿನ್ನನ್ನು ಇಚ್ಛಿಸಿದೆ. ನೀನಷ್ಟು ಉಚ್ಚವಂಶದವಳಲ್ಲ ದಿದ್ದಲ್ಲಿ, ನಿನ್ನನ್ನೇ ಅರಸಿಯಾಗಿ ಮಾಡಿಕೊಳ್ಳುತ್ತಿದ್ದೆ. ಆದರೆ ನಾನು ಧರ್ಮಭೀರು. ಧರ್ಮವಿರುದ್ಧವೆಂದರೆ ನನ್ನ ಒಲುಮೆಯನ್ನೇ ಬಲಿ ಕೊಟ್ಟೇನು. ಧರ್ಮ, ವಿವೇಕ, ತಪಸ್ಸುಗಳ ಸಾಕಾರಮೂರ್ತಿಯಂತಿ- ರುವ ಪೂಜ್ಯಶುಕ್ರರನ್ನು ನೋಡಲು ನನಗೀಗ ಅಂಜಿಕೆ. ನಿನ್ನಲ್ಲಿ ಪ್ರೇಮಾಲಾಪಗೈದು ಅಪಚಾರ ಮಾಡಿರುವೆನೆಂಬ ಅಳುಕು ಹೋಗದು. ನನಗಿನ್ನು ಹೋಗಲು ಅಪ್ಪಣೆ ಕೊಡು.

ದೇವಯಾನಿ: ಹೋಗಿಬನ್ನಿ, ನಿಮಗೆ ಮಂಗಳವಾಗಲಿ ! ಧ್ರುವನಕ್ಷತ್ರದಂತೆ ಸ್ಥಿರವಾಗಿರಲಿ ನಿಮ್ಮೊಲುಮೆ. ತಂದೆಯವರಿಂದಲೇ ನಿಮಗೆ ಕರೆಕಳುಹಿಸಿ ಕರೆಸಿಕೊಳ್ಳುವೆ. ಈ ಭಿಕ್ಷುಕಿಯನ್ನು ಮರೆಯ- ಬೇಡಿ.

ಯಯಾತಿ: ಹಾಗನ್ನದಿರು, ಶುಭಾಂಗಿ, ಭಿಕ್ಷುಕನಾದ ಶಿವನೇ ಸರ್ವಲೋಕಾಧಿಪತಿ. ನಿಗ್ರಹಾನುಗ್ರಹಶಕ್ತರಾದ ಶುಕ್ರರನ್ನೇ ಪಿತರ- ನ್ನಾಗಿ ಪಡೆದಿರುವ ನೀನು ಭಿಕ್ಷುಕಿಯೇ? ಅದೋ, ಸರೋವರದ ಬಳಿ ಸ್ತ್ರಿ ಯಾರೋ ಒಬ್ಬಾಕೆ ಬರುತ್ತಿದ್ದಾಳೆ. ನಾನಿನ್ನು ಬರುತ್ತೇನೆ. (ಯಯಾತಿ ಅವಳತ್ತಲೇ ನೋಡುತ್ತ ಹೊರಟುಹೋಗುವನು)

ದೇವಯಾನಿ: ಯಾರು ಬರುತ್ತಿರಬಹುದು? ಆ ಪಾಪಿ ಶರ್ಮಿಷ್ಠೆ ನನ್ನ ಗತಿ ಏನಾಯಿತೆಂದು ನೋಡಲು ಬರುತ್ತಿರಬಹುದೇ ? ಅಕಟಾ ! ಆ ರಕ್ತಸಿಯ ದ್ವೇಷ ಘೋರ ವಿಷದಂತೆ ತೀಕ್ಷ್ಣ ! ಜೀವ ಸಹಿತವಿರುವ ನನ್ನನ್ನು ಕಂಡರೆ ಪುನಃ ಬಡಿದು ಕೊಂದಾಳು. ಆ ಪುಲ್ಲಿ- ಗೆಯ ಪೊದೆಯೊಳಗೆ ಅವಿತುಕೊಳ್ಳುವೆ.

[ಓಡಿಹೋಗಿ ಅವಿತುಕೊಳ್ಳುವಳು. ಶಾಲಿನಿಯ ಪ್ರವೇಶ.]

ಶಾಲಿನಿ: ಓ ದೇವಯಾನಿ, ಪ್ರಿಯ ಸಖಿ ! ಎಲ್ಲಿ ಅಡಗಿರುವೆ ? ದೇವಯಾನೀ (ಕೂಗುತ್ತ ಸುತ್ತಮುತ್ತ ಹುಡುಕುವಳು) ಎಲ್ಲಿ ಹೋದಳು ತಿಳಿಯಲಿಲ್ಲ. ಕತ್ತಲಾಗುತ್ತ ಬಂದರೂ ಇನ್ನೂ ಆಶ್ರಮಕ್ಕೆ ಬಂದಿಲ್ಲವಲ್ಲಾ — ಎಂದು ಎಳೆಗರುವನಗಲಿದ ಸುರಭಿಯಂತೆ ಆಚಾ- ರ್ಯರು ತಪಿಸುತ್ತಿದ್ದಾರೆ. ಶರ್ಮಿಷ್ಠೆ-ನಳಿನಿಯರನ್ನು ಕೇಳಿದರೆ ಮಳೆಯ ಆರ್ಭಟಕ್ಕೆ ಬೆದರಿ ಮೂವರೂ ಎಡೆ ಸಿಕ್ಕಿದತ್ತ ಓಡಿದೆವೆಂದೂ ದೇವಯಾನಿ ಎತ್ತ ಹೋದಳೋ ನೋಡಲಿಲ್ಲವೆಂದೂ ಹೇಳುತ್ತಾರೆ. ಅರಮನೆಗೂ ಹೋಗದೆ, ಆಶ್ರಮಕ್ಕೂ ಬಾರದೆ ಇಲ್ಲೇ ಇರುವಳೇನೋ ಎಂದುಕೊಂಡರೆ, ಎಲ್ಲೂ ಕಾಣಳಲ್ಲಾ, ಓ ದೇವಯಾನಿ, ಎಲ್ಲಿದ್ದರೂ ಓ! ಗುಡುಗೆಳತಿ, ದೇವಯಾನೀ.....(ದೇವಯಾನಿ ಒಂದು ಪಾರ್ಶ್ವ ದಿಂದ ಬಂದು 'ಶಾಲಿನೀ' ಎಂದು ಕೂಗುತ್ತ ಬಂದು ಅಪ್ಪಿಕೊಳ್ಳು- ವಳು)

ಶಾಲಿನಿ: (ಹರ್ಷದಿಂದ) ಇಲ್ಲೇ ಇದ್ದೆಯಾ ? ನಡೆ ಸಖಿ, ನಿನ್ನ ತಂದೆ ಕಳವಳಿಸುತ್ತಿದ್ದಾರೆ. (ಕಳವಳದಿಂದ) ಇದೇಕೆ ದೇವಯಾನಿ, ನಿನ್ನ ಮುಖ ಬಾಡಿದೆ, ಕಣ್ಣಲ್ಲಿ ನೀರು ! ಏನಾಯಿತು ಹೇಳಬಾರದೇ ?

ದೇವಯಾನಿ: (ಬಿಕ್ಕಿಬಿಕ್ಕಿ ಅಳುತ್ತ) ಹಾಯ್ ಸಖಿ, ಹಾಗೇಕೆ ಬಂದೆ? ಈ ದೇವಯಾನಿ ಇನ್ನೂ ಏಕೆ ಸತ್ತಿಲ್ಲವೆಂದು ನೋಡಲು ಬಂದೆಯಾ ? (ಬಿಕ್ಕುವಿಕೆ) ಸಾವಿನ ದವಡೆಯಿಂದ ಪಾರಾದರೂ ಅಪಮಾನದ ಶಲ್ಲ, ಎದೆಯಲ್ಲಿ ನಾಟಿದೆ. ಈ ನನ್ನ ಹೃದಯ ಉಕ್ಕಿನದಾಗಿರಬೇಕು. ಇಷ್ಟು ಅಪಮಾನ ಸಹಿಸಿಯೂ ಅದು ಒಡೆಯದಲ್ಲಾ!

ಶಾಲಿನಿ : ನಿನ್ನ ಮಾತೇ ಅರ್ಥವಾಗದಲ್ಲಾ – ಏನಾಯಿತು ಹೇಳುಸಖಿ. ನನ್ನಿಂದ ತಿಳಿದೋ ತಿಳಿಯದೆಯೋ ಏನಾದರೂ ಅಪಚಾರವಾಗಿದ್ದರೆ ಕ್ಷಮಿಸು, ಇದೋ. ಕೈ ಮುಗಿದು ಬೇಡುವೆನು.

ದೇವಯಾನಿ : ಸಖಿ, ಈ ದುಷ್ಟ ಅಸುರ ಕುಲದಲ್ಲಿ ನೀನು ತಪ್ಪಿ ಹುಟ್ಟಿರುವೆ. ನೀನತ್ತ ಹೋದೆ– ಬಿರುಗಾಳಿಗೆ ನಮ್ಮ ವಸನಗಳು ಹಾರಿದವು, ನನ್ನ ಕಣ್ಣಿಗೆ ಧೂಳು ಕವಿಯಿತು. ಶರ್ಮಿಷ್ಠೆ ಬೇಗ ನೀರಿನಿಂದ ಈಚೆಗೆ ಬಂದು ನನಗೆ ವಸನಕೊಟ್ಟಳು. ಕಣ್ಮುಚ್ಚಿಕೊಂಡೇ ಉಟ್ಟುಕೊಂಡೆ. ಕಣ್ಬಿಟ್ಟಾಗ ನಮ್ಮ ಸೀರೆಗಳು ಅದಲು ಬದಲಾಗಿರುವುದು ತಿಳಿಯಿತು : ಹೀಗಾಯಿತಲ್ಲಾ ಎಂದ ಮಾತ್ರಕ್ಕೆ ರೇಗಿ, ' ಊಳಿಗದವಳು, ಯಾಚಕಿ, ರಾಜನುಚ್ಛಿಷ್ಟಕ್ಕೆ ಕೈ ಚಾಚುವನ ಮಗಳು '– ಎಂದು ನಾನಾರೀತಿಯಲ್ಲಿ ನನನ್ನೂ ತಂದೆಯನ್ನೂ ಜರೆದಳು. ನಾನು ಆಶ್ರಮಕ್ಕೆ ಹೊರಟೆ. ನಳಿನಿಗೆ ಹೇಳಿ ನನ್ನನ್ನು ಎಳತರಿಸಿ, ನಳಿನಿಯೊಂದಿಗೆ ಸೇರಿ ಪ್ರಜ್ಞೆ ತಪ್ಪುವಂತೆ ಹೊಡೆದು ಹಾಳು ಬಾವಿಯಲ್ಲೆತ್ತಿಹಾಕಿದರು. ಕಲ್ಲು ಕರಗುವಂತೆ ಬೇಡಿಕೊಂಡರೂ ಆ ರಕ್ಕಸಿಯರಿಗೆ ದಯೆಬರಲಿಲ್ಲ. ಆಯ್ಯೋ, ನಾನಿಷ್ಟು ನಿಕೃಷ್ಟಳಾದೆನೇ. (ಬೀಕ್ಕುವಳು) ನನ್ನ ಆಯುಷ್ಯ ಗಟ್ಟಿಯೆಂದು ತೋರುತ್ತದೆ. ಬೇಟೆಗಾರಸೊಬ್ಬ ನನ್ನ ಆರ್ತನಾದ ಕೇಳಿ ರಕ್ಷಿಸಿ ಹೊರಟುಹೋದ.

ಶಾಲಿನಿ : ಮಹಾಪಚಾರವಾಯ್ತು. ನಾನು ಆಶ್ರಮಕ್ಕೆ ಹೋದುದೇ ತಪ್ಪಾಯಿತು. ಸೀರೆಗಳ ವರ್ಣದಲ್ಲಿ ಸಾಮ್ಯವಿದ್ದುದರಿಂದ ಆತುರದಲ್ಲಿ ತಿಳಿಯಲಿಲ್ಲವೆಂದಿದ್ದರೆ ಈ ಹಗರಣವೇ ತಪ್ಪುತ್ತಿತ್ತು. ಮಹಾಮುಂಗೋಪಿ ಆ ಶರ್ಮಿಷ್ಠೆ. ಅವಳಿಗೆ ವಿವೇಕ ಹೇಳುವ ಬದಲು ಅವಳನ್ನು ಉದ್ರೇಕಿಸುವಳು ಆ ನಳಿನಿ. ಅವರಿಗೆ ಸರಿಯಾಗಿ ಬುದ್ಧಿ ಕಲಿಸಬೇಕು. ನಡೆ ಸಖಿ, ಮನೆಗೆ ಹೋಗೋಣ !

ದೇವಯಾನಿ : (ಸಂತಾಪದಿಂದ) ಎಲ್ಲಿದೆ ಮನೆ ? ಆ ದುಷ್ಟೆಯ ಎಂಜಲಿಗೆ ಮುತ್ತೆ ಕೈಯೊಡ್ಡಲೇ ? ಅನಳಿಗೆ ಸೇರಿದ ನೆಲದಲ್ಲಿ ಕಾಲಿಡೆ. ನನ್ನ ಪೂಜ್ಯ ಪಿತರನ್ನು ಇಲ್ಲಿಗೇ ಬರಮಾಡು. ಕಡೆಯಬಾರಿಗೆ ಅವರ ದರ್ಶನ ಮಾಡಿ ಆಶೀರ್ವಾದ ಪಡೆದು ಈ ಕಾಡನ್ನು ಸೇರುವೆ. ಆ ಗರ್ವಿಷ್ಠೆಯ ಗರ್ವಭಂಗವಾಗುವವರೆಗೂ ಅನ್ನ-ನೀರನ್ನು ಮುಟ್ಟಲಾರೆ. ನನಗೂ ಸ್ವಾಭಿಮಾನವಿದೆ. ಜಗತ್ತೆಲ್ಲಾ ಪೃಷಪರ್ವನ ಆಧೀನವಲ್ಲಿಲ್ಲ. ಅವನ ಪಂಗಿಲ್ಲದೆಡೆ ಬಾಳುವೆ ! ತಂದೆಯವರಲ್ಲೂ ಕೆಚ್ಚು, ಅಭಿಮಾನವಿದ್ದರೆ ಅವನಾಶ್ರಯವನ್ನು ಬಿಟ್ಟು ಬರಲಿ ! ಅವರು ಬರಲೊಪ್ಪದಿದ್ದರೆ. ನಾನೊಬ್ಬಳೇ ಹೋಗುವೆ. ತಂದೆಯನ್ನಿಲ್ಲಿಗೆ ಬರಮಾಡು.

ಶಾಲಿನಿ : ಶಾಂತಳಾಗು ಸಖಿ. ಶರ್ಮಿಷ್ಠೆಗಾಗಿ ನಾನು ಮರುಗುವುದಿಲ್ಲ. ಅವಳಿಗೆ ತಕ್ಕ ಶಾಸನವಾಗಬೇಕು. ಆದರೆ ಮಹಾರಾಜ–ಮಹಾರಾಣಿಯರದೇನು ತಪ್ಪು ? ನಿಮ್ಮ ಆಶೀರ್ವಾದ ಕವಚವೇ ರಾಜ್ಯದ ರಕ್ಷೆ. ಗುರುಗಳಿಗೆ ನಿನ್ನಲ್ಲಿರುವ ವಾತ್ಸಲ್ಯ ಜಗತ್ಪ್ರಸಿದ್ಧವಾಗಿದೆ. ನೀನು ತೊರೆದವರನ್ನು ಅವರೂ ತೊರೆಯುವುದು ನಿಶ್ಚಯ. ಇದೋ ಕೈ ಮುಗಿದು ಬೇಡಿಕೊಳ್ಳುವೆ. ಈ ಕೋಪ ಬಿಡು, ಈ ಛಲ ಬಿಡು.

ದೇವಯಾನಿ : ಇಲ್ಲ, ಇಲ್ಲ, ನನ್ನೊಡಲು ಬೇಯುತ್ತಿದೆ. ನನ್ನ ಸಂಯಮ ಸುಟ್ಟುಹೋಗಿದೆ ಸೇಡಿಗಾಗಿ ಎದೆ ಹಾತೊರೆಯುತ್ತಿದೆ. ರಾಜದಂಪತಿಗಳು ಸತ್ಯನಿಷ್ಠರಾಗಿದ್ದರೆ ಕಚನ ಕೊಲೆಪಾತಕನನ್ನು ಶಿಕ್ಷಿಸದೆ ಬಿಡುತ್ತಿದ್ದರೇ ? ಹೋಗು, ಹೋಗು. ಮೊದಲು ತಂದೆಯವರನ್ನು ಬರಮಾಡು.

ಶಾಲಿನಿ : ದೇವಯಾನಿ, ನೀನು ಪ್ರಾಜ್ಞೆ. ನಾನು ಅಜ್ಞೆ. ಆದರೂ ತಿಳಿದ ಮಾತನ್ನು ಬಿನ್ನವಿಸುವೆ. ಶರ್ಮಿಷ್ಠೆಯಂತೂ ರಕ್ಕಸಿ, ಸಂಯಮರಹಿತೆ, ದಯಾವಿಹೀನೆ, ಕ್ಷಮೆಯೇ ಜೀವದುಸಿರಾದ ಸಾಧಕಳು ನೀನು–ಕ್ಷಮೆ ದುರ್ಬಲರ ಬಲ, ಸಬಲರ ಭೂಷಣ. ರಾಜನ ಮೇಲೆ, ರಾಜ್ಯದ ಮೇಲೆ ದಯವಿಡು. ಶರ್ಮಿಷ್ಠೆಯನ್ನು ಉಗ್ರವಾಗಿ ಶಿಕ್ಷಿಸೋಣವಂತೆ.

ದೇವಯಾನಿ : (ಕನಲಿ) ಸಾಧ್ಯವಿಲ್ಲ. ಜಗವ ಸುಡುವ ಬಡಬಾನಲ ಹುಟ್ಟಿದ್ದು ಸಾಗರದೊಡಲಿನಲ್ಲಿ. ಕ್ಷಮಾರೂಪೆಯಾದ ಭೂಮಾತೆಯ ಗರ್ಭದಲ್ಲಿ ಜ್ವಾಲಾಮುಖಿಗಳಿವೆ, ಲಾವಾಪ್ರವಾಹವಿದೆ, ಕ್ಷಮೆ ಎನ್ನ ಹೃದಯದಲ್ಲಿ ಕ್ಷಯಿಸಿಹೋಗಿದೆ. ಹೋಗು, ಮೊದಲು ತಂದೆಯನ್ನು ಬರಮಾಡು. ಇಲ್ಲದಿದ್ದರೆ ನಿನ್ನೆದುರಿಗೇ ಉಸಿರು ಹಿಡಿದು ಪ್ರಾಣತ್ಯಾಗ ಮಾಡುತ್ತೇನೆ.

ಶಾಲಿನಿ : ಹಾಯ್, ಮಂದಭಾಗ್ಯೆ ಶರ್ಮಿಷ್ಠೆ. ಎಂತಹ ವಿನಾಶ ಕೃತ್ಯಮಾಡಿದೆ ? ಮಾನಧನೆಯಾದ ಸಖಿಯನ್ನು ಭಂಗಿಸಿ ರಾಜ್ಯಕ್ಕೆ, ನಿನ್ನ ಸೌಭಾಗ್ಯಕ್ಕೆ ಕೊಳ್ಳಿಯಿಕ್ಕಿದೆಯಲ್ಲಾ ! ಸಖಿ, ದೇವಯಾನಿ, ಶಾಂತಳಾಗು. ನಿನ್ನ ತಂದೆಯವರನ್ನೇ ಕಳುಹಿಸುವೆ. (ಹೋಗುವಳು).

ದೇವಯಾನಿ : (ಉದ್ರಿಕ್ತಳಾಗಿ ಅತ್ತಿತ್ತ ತಿರುಗುತ್ತಾ) ನನ್ನೆಡೆಯಲ್ಲಿ ಈಗ ಎರಡೇ ಹಂಬಲಗಳಿವೆ. ಒಂದು ಸೇಡು, ಎರಡನೆಯದು ಒಲವು, ಉತ್ಕಟ ದ್ವೇಷದಿಂದ ನನ್ನೆದೆ ಉಕ್ಕಾಗಿದೆ. ಯಯಾತಿ ಮಹಾರಾಜನನ್ನು ವರಿಸಲು ಪಿತನ ಅನುಮತಿ ಪಡೆಯುವೆ. ಪಿತನ ಆಶೀರ್ವಾದ, ಪತಿಯತೋಳ್ಬಲ ನನಗೆ ಆಶ್ರಯವಾಗಿರಲು ಅಸಾಧ್ಯವಾದುದು ಯಾವುದು ? ಈ ಅಸುರ ರಾಜ್ಯವನ್ನು ಧೂಳೀಪಟಮಾಡಿಸಿ ಆ ಗರ್ವಿಷ್ಠೆಯನ್ನು ತೊತ್ತಾಗಿ ಮಾಡಿಕೊಳ್ಳುವೆ. ಇದೇ ನನ್ನ ಪ್ರತಿಜ್ಞೆ. ಎಲೈ ಪಾಪಿಷ್ಠೆ ಶರ್ಮಿಷ್ಠೇ–ನಿನ್ನ ಹೆಮ್ಮೆಯ ದಿನಗಳನ್ನು ಬೆರಳ ಮೇಲೆಣಿಸಿಕೋ, ನೀನಾಡಿದ ಅವಹೇಳನದ ಮಾತುಗಳನ್ನೆಲ್ಲಾ ನೀನೇ ಗುಟುಕರಿಸುವಂತೆ ಮಾಡುವೆ. ದೇವಯಾನಿಯ ಸೇಡಿನ ದಾವಾಗ್ನಿಯಲ್ಲಿ ನಿನ್ನೀ ಸೌಭಾಗ್ಯ ಉರಿದು ಬೂದಿಯಾಗುವುದನ್ನು ನೋಡುವೆಯಂತೆ.

[ತೆರೆಬೀಳುವುದು]

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ '**ಕತ್ತಲಲ್ಲಿಯ ಜನ**' ಎಂಬ ಕಥೆಯನ್ನು ಕುರಿತು ೮ ಜನರಿಂದಲೂ, '**ತೋಬಾಟೇಕ ಸಿಂಗ್**' ಎಂಬ ಕಥೆಯನ್ನು ಕುರಿತು ಇಬ್ಬರಿಂದಲೂ ವಿಮರ್ಶೆಗಳು ಬಂದಿವೆ.

'**ಕತ್ತಲಲ್ಲಿಯ ಜನ**' ಕಥೆಯ ವಿಮರ್ಶಕರು

೧ ಸತ್ಯನಾರಾಯಣ ಕೃಷ್ಣಸ್ವಾಮಿ ತೊರಗಲ್ಲು, ಸ್ಕೂಲ್ ಆಫ್ ಆರ್ಟ್ಸ್, ಧಾರವಾಡ. ೨ ಶ್ರೀ. ಆರ್. ಎಸ್. ಗುರುದತ್ತೇ, ಬಸವೇಶ್ವರ-ಕಾಲೇಜ್, ಬಾಗಲಕೋಟೆ. ೩ ಶ್ರೀ ಕೆ. ಎಸ್. ಕುರುಬರ, ಸಾವಳಗಿ. ೪ ಶ್ರೀ. ಎಸ್. ಆರ್. ಪಾಡಿ, 'ವಿಶಾರದ' ಕಲ್ಲಕಟ್ಟೆ. ೫ ಶ್ರೀ. ಕಳೆಯತ್ತೋಡಿ ನರಸಿಂಹಭಟ್ಟ, ಇ- ಎಂ. ಹೈಸ್ಕೂಲ್, ಕಾಸರಗೋಡು. ೬ ಶ್ರೀ. ಉಮೇಶಭಟ್ಟ (ಉಮೇಶಭಕ್ತ), ಕಾಸರಗೋಡು. ೭ ಶ್ರೀ. ಜಿ. ಬಿ. ಪಾಟೀಲ ಬಿ.ಎ. ಬೆಳಗಾಂವಿ. ೮ ಶ್ರೀ. ಎಸ್. ಬಿ. ಪಾಟೀಲ ಡಿ. ಎಸ್. ಎ. ಸಿ. ಬೆಟಗೇರಿ.

'**ತೋಬಾಟೇಕಸಿಂಗ**' ಕಥೆಯ ವಿಮರ್ಶಕರು

೧ ಕುಮಾರಿ ಸಿ. ಲಕ್ಷ್ಮಿ ಪಾಡಿ, ಮುಟ್ಟತ್ತೋಡಿ. ೨ ಶ್ರೀ. ರಾಘವೇಂದ್ರ ಪಾಂಡುರಂಗಿ, ಧಾರವಾಡ.

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಸಮಿತಿಯ ಸದಸ್ಯರು ನೋಡಿ, ನಿಯಮವನ್ನು ಕುರಿತು ತಮ್ಮ ಅಭಿಪ್ರಾಯವನ್ನು ಹೀಗೆಂದು ಬರೆದಿದ್ದಾರೆ.

'**ಕತ್ತಲಲ್ಲಿಯ ಜನ**' ಕಥೆಯನ್ನು ಕುರಿತು ಬರೆದ ವಿಮರ್ಶಕರಲ್ಲಿ, ಬೇರೆಬೇರೆಯವರು ಬೇರೆಬೇರೆಯ ದೃಷ್ಟಿಯಿಂದ ಕಥೆಯನ್ನು ನೋಡಿದ್ದಾರೆ. ಒಬ್ಬಿಬ್ಬರು ಕಥೆಯ ಪಾತ್ರಗಳನ್ನೂ ಹಿನ್ನೆಲೆಯನ್ನೂ ಸರಿಯಾಗಿ ಅರ್ಥಮಾಡಿಕೊಂಡೇ ಇಲ್ಲ. ಉತ್ತರ ಕರ್ನಾಟಕದಲ್ಲಿ ಹಳ್ಳಿಗರ ರೀತಿ-ನೀತಿಗಳಿಗೂ ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಗರ ರೀತಿ-ನೀತಿಗಳಿಗೂ ತುಂಬ ವ್ಯತ್ಯಾಸವಿದೆ. ಎರಡರಲ್ಲಿಯ ಹೆಚ್ಚು-ಕಡಮೆ ಗೊತ್ತಿಲ್ಲದೆ ಹೋದರೆ, ಈ ಕಥೆಯ ವೈಶಿಷ್ಟ್ಯವೇನೆಂಬುದು ತಿಳಿಯಲಾರದು. ಇನ್ನೊಬ್ಬ ಒಳ್ಳೆಯ ವಿಮರ್ಶಕರು, ಕಥೆಗಾರರು ಹಳ್ಳಿಗರನ್ನು ಮಾತ್ರವೇ ತಿರಸ್ಕಾರದಿಂದ ನೋಡಿದ್ದಾರೆಂದು ಸಲ್ಪ ಕಸಲಿ ಬರೆದಿದ್ದಾರೆ. ಇವೆಲ್ಲಕ್ಕೂ ಕಾರಣವೆಂದರೆ, ನವ್ಯರೀತಿ ನಮ್ಮಲ್ಲಿಯ ಬಹುಜನರಿಗೆ ನವ್ಯವೇ ಆಗಿದೆ.

ಈ ಕಥೆಯ ವಿಮರ್ಶೆಗಳಲ್ಲಿ **ಶ್ರೀ. ಎಸ್. ಆರ್. ಪಾಡಿ** ಮತ್ತು **ಶ್ರೀ. ಬಿ. ಜಿ. ಪಾಟೀಲ** ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಕಳೆಯತ್ತೋಡಿ ನರಸಿಂಹಭಟ್ಟರು ಮತ್ತು ಶ್ರೀ. ಆರ್. ದಾಸ್. ಗುರುದತ್ತೆ ಅವರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ. ಬಿ. ಎಸ್. ಪಾಟೀಲ ಅವರ ವಿಮರ್ಶೆ ಚೆನ್ನಾಗಿದೆ. ಮಿಕ್ಕುವು ಸಾಮಾನ್ಯವಾಗಿವೆ.

ಮತ್ತೊಂದು ಕಥೆ '**ತೋಬಾಟೇಕಸಿಂಗ್**' ಎಂಬುದರ ಬಗ್ಗೆ ಬರೆದ ವಿಮರ್ಶೆಗಳೆರಡರಲ್ಲಿ ಕುಮಾರಿ ಸಿ. ಎಚ್. ಪಾಡಿ ಅವರದು ಚೆನ್ನಾಗಿದೆ. ಶ್ರೀ. ರಾಘವೇಂದ್ರ ಪಾಂಡುರಂಗಿಯವರದು ಸಾಧಾರಣವಾಗಿ ಇದೆ.

ಮುಂದಿನ ತಿಂಗಳ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ '**ನಂಬಿದರೆ ನಂಬಿ, ಬಿಟ್ಟರೆ ಬಿಡಿ**' ಎಂಬ ಕಥೆಯನ್ನಾಗಲಿ, '**ಪ್ರತೀಕ್ಷೆ**' ಎಂಬ ಅನುವಾದಿತ ನವ್ಯ ಕಥೆಯನ್ನಾಗಲಿ ಕುರಿತು ವಿಮರ್ಶೆ ಬರೆದು ಕಳುಹಬೇಕು.

— **ಸಂಪಾದಕರು**

ಕತ್ತಲಲ್ಲಿಯ ಜನ

(ನವ್ಯಕತೆಯ ವಿಮರ್ಶೆ)

ಶ್ರೀ. ಎಸ್. ಆರ್. ಹಾಡಿ, ಕಲ್ಲಕಟ್ಟ

ಬಿತ್ತಿದ ಬೆಳೆಗೊಂದು ಬೇಲಿಯಿದ್ದಂತೆ, ಸಮಾಜಕ್ಕೊಂದು ರೀತಿ ನೀತಿ, ಕಟ್ಟು ಕಟ್ಟಳೆ ಇರುವುದು ಅತ್ಯಗತ್ಯ. ಅದಿಲ್ಲವೆಂದಾದರೆ ಮನುಷ್ಯನು ಸ್ವೇಚ್ಛೆಯಿಂದ ವರ್ತಿಸುತ್ತಾನೆ. ನಿಯಮ ನಿಬಂಧನೆಗಳಿದ್ದರೆ ವ್ಯಕ್ತಿಯು ಅವುಗಳನ್ನು ಮುರಿದು ಮುನ್ನುಗ್ಗಲು ಭಯಪಡುವುದು ಮಾತ್ರವಲ್ಲ, ಅವುಗಳ ಪ್ರತಿಭಟನೆಯ ಬಲವಂತಕ್ಕೆ ಸಿಲುಕಿ ಒಂದು ರೀತಿಯ ಸಂಯಮ ಜೀವನ ನಡೆಸಲು ಪ್ರಯತ್ನಿಸುತ್ತಾನೆ. ಇದನ್ನು ಮನಗಂಡೇ ಅನಾದಿಕಾಲದಿಂದಲೂ ಮನುಮಹಾಲಯನಂಥ ಮೇಧಾವಿಗಳು ಈ ದಿಶೆಯಲ್ಲಿ ಕಾರ್ಯೋನ್ಮುಖರಾಗಿ ಸಮಾಜದ ಏಳಿಗೆಗೆ ಪ್ರಯತ್ನಿಸಿದರು. ಸಮಾಜ ರಚನೆಯೊಂದಿಗೆ ಧರ್ಮಶಾಸ್ತ್ರಗಳೂ, ವಿಧಿವಿಧಾನಗಳೂ ಹುಟ್ಟಿಕೊಂಡುವು. ಆದರೆ ಇಂತಹ ಕಟ್ಟುನಿಟ್ಟುಗಳೊಂದೂ ಇಲ್ಲದ ಸಮಾಜದಲ್ಲಿ, ಜನರು ಹೇಗೆ ಅಜ್ಞಾನಾಂಧಕಾರದಲ್ಲಿ ಮುಳುಗಿ ಪೇಯ ರೀತಿಯಲ್ಲಿ ವರ್ತಿಸುತ್ತಾರೆ– ಎಂಬುದರ ನಿರೂಪಣೆಯನ್ನು ಈ ಕಥೆಯಲ್ಲಿ ಕಾಣಬಹುದು.

ಹಳ್ಳಿಯಲ್ಲಿ ಒಂದಿರುಳು ನಡೆದ ಬಯಲಾಟದ ಘಟನೆಯನ್ನೆತ್ತಿಕೊಂಡು ಅದರ ಸುತ್ತಲೂ ಕತೆಯನ್ನು ಹೆಣೆದಿದ್ದಾರೆ ಲೇಖಕರು. ಆ ಘಟನೆಗಿಂತಲೂ ಅದರ ಸುತ್ತ ಸುಳಿಯುವ ಪಾತ್ರಗಳ ಸ್ವಭಾವ ಚಿತ್ರಣಕ್ಕೆ ಇದರಲ್ಲಿ ಹೆಚ್ಚಿನ ಪ್ರಾಶಸ್ತ್ಯವಿರುವುದರಿಂದ, ಇದನ್ನು ಪಾತ್ರ ಪ್ರಧಾನ ಕತೆಗಳ ಸಾಲಿಗೆ ಸೇರಿಸಬಹುದು. ಅಜ್ಞಾನದ ಕತ್ತಲಲ್ಲಿ ಮುಳುಗಿ ಪಾಶವೀವೃತ್ತಿಯಿಂದ ನಡೆಯುವ ಜನರ ಮೇಲೆ ಬೆಳಕು ಚೆಲ್ಲಿ ಕತೆಗಾರರು ಅವರ ಸ್ವಭಾವವನ್ನು ತೋರಿಸಿಕೊಡಲು ಯತ್ನಿಸಿದ್ದಾರೆ. ರಾಗಣ್ಣ, ಸಾವುಕಾರ ದೇಸಾಯಿ, ತೀನು, ಕಲ್ಲ, ಒನಪು ಯೆಲ್ಲ, ಗೌಡ, ತಿಪ್ಪಯ್ಯ, ತಬಲಜಿ ಅಣ್ಣಪ್ಪ ಮೊದಲಾದವರು ಪುರುಷ ಪಾತ್ರಗಳ ಪಂಕ್ತಿಯಲ್ಲಿ ಸೇರಿ ವಿವಿಧ ಮುಖಗಳನ್ನು ತೋರಿದರೆ, ನಿಂಗಿ, ಎಲ್ಲಿ, ಮಲ್ಲಿ, ಒನಪುಯೆಲ್ಲನ ಹೆಂಡತಿ– ಇವರು ಹೆಚ್ಚು ಕಡಿಮೆ ಒಂದೇ ರೀತಿಯ ಸ್ವಭಾವದವರಾಗಿದ್ದು ಸ್ತ್ರೀ ಪಾತ್ರದ ಸಾಲಿನಲ್ಲಿ ನಿಲ್ಲುತ್ತಾರೆ.

ದೇಸಾಯಿ ಮತ್ತ ರಾಗಣ್ಣ- ಇಬ್ಬರೂ ಸ್ತ್ರೀಲಂಪಟರಾಗಿ ವಾಚಕರ ಮುಂದೆ ಸುಳಿಯುತ್ತಾರೆ. ಆದರೆ ವ್ಯತ್ಯಾಸವಿಷ್ಟೇ– ಹಣವಂತ ದೇಸಾಯಿ ಮನಬಂದ ಹೆಣ್ಣನ್ನು ಕೊಂಡುಕೊಳ್ಳಬಲ್ಲವನಾದರೆ, ನಿರ್ಧನನಾದ ರಾಗಣ್ಣ ಹೆಣ್ಣನ್ನು ನೋಡಿ, ಧಕ್ಕೆ ಹೊಡೆದು ತನ್ನ ಕ್ಷುಪ್ರಕಾಮವಾಸನೆಯನ್ನು ತೀರಿಸಿಕೊಳ್ಳುತ್ತಾನೆ. ಹೂವಿಂದ ಹೂನಿಗೆ ಹಾರುವ ತುಂಬಿಯಂತೆ ಹಲವಾರು ಹೆಂಗುಸರನ್ನು– ಒಬ್ಬಳ ನಂತರ ಇನ್ನೊಬ್ಬಳಂತೆ– ಕಟ್ಟಿಕೊಂಡರೂ ತೀರದ ಭೋಗಲಾಲಸೆ ದೇಸಾಯಿಯದು. ಕಲಾಪ್ರಶಂಸೆಯ ಸೋಗಿನಲ್ಲಿ ಅವನು ನಿಂಗಿಗೆ ಪಾಕಿದ ಮಾಲೆ, ಕೇಳ್ತರದ ಪಾಸನಾ ಸ್ಫೂರ್ತಿಯ ಬಯಕೆಯಿಂದ ಕೊಟ್ಟ ಕರೆಯಾಗಿತ್ತು. ನಿಂಗಿ ಬಂದಾಗ ಎಲ್ಲಿ ಬಿಟ್ಟುಹೋದಳು. ' ಅವನಿಗೆ ಕೆಡುಕೆನಿಸಲಿಲ್ಲ ' ವಂತೆ. ಭೂತ ಭವಿಷ್ಯತ್ತುಗಳ ಚಿಂತೆಯಿಲ್ಲದೆ ವಿಷಯ ಲಾಲಸೆಯ ಪ್ರವಾಹದಲ್ಲಿ ಮೈಮರೆದು ತೇಲಿ ಹೋಗುತ್ತಾನೆ. ಆ ಸಾವುಕಾರ. ರಾಗಣ್ಣನಾದರೋ ನಿಂಗಿ ಬಂದಿಳಿದ ಸ್ಥಳದಲ್ಲಿ ನಾಲ್ಕಾರು ಸಲ ಹಾದು ಹೋಗಿ ಕಣ್ಣಿನ ಪಾಪ ತೀರಿಸಿಕೊಳ್ಳುತ್ತಾನೆ. ಹೆಂಗುಸರಿಗೆ ಧಕ್ಕೆ ಹೊಡೆಯುವುದರಲ್ಲಿಯೇ ' ತನ್ನ ಜೀವನದ ಸಾರ್ಥಿಕ್ಯ ' ವೆಂದು ಭಾವಿಸಿದ್ದ ರಾಗಣ್ಣ ಇಂದಿನ ಸಮಾಜದ ಹಲವಾರು ಕಾಮುಕ ಪುರುಷರ ಪ್ರತಿನಿಧಿಯಾಗಿದ್ದಾನೆ. ಮಲ್ಲಿಯ ಮೈಗೆ ತಾಗಿನಿಂತು ಕ್ಷಣಿಕ ತೃಪ್ತಿಪಟ್ಟುಕೊಳ್ಳುತ್ತಾನೆ. ಕೆಟಕಿಯ ಮೂಲಕ ಎಲ್ಲಿ ಮತ್ತು ದೇಸಾಯಿಯರನ್ನು ಕಂಡಾಗ ಅವನು ಅಸೂಯೆಪಡುವುದು ಸಹಜವಾಗಿದೆ. ಹಣದ ಕೊರತೆಯಿಂದಾಗಿ ಅವರಂತೆ ಮಾಡುವ ಸಾಮರ್ಥ್ಯವಿಲ್ಲವಲ್ಲಾ ಎಂದು ಒಳಗೊಳಗೇ ಕುದಿಯುತ್ತಾನೆ. ಹಣವಿರುತ್ತಿದ್ದರೆ ದೇಸಾಯಿಯನ್ನೂ ಮೀರಿಸಿಬಿಡುತ್ತಿದ್ದನೇನೋ ? ಸದಾ ಕಾಮುಕ ವಿಚಾರಗಳಿಂದ ಕೂಡಿದ ಅವನ ಮಾನಸಿಕ ದುರ್ಬಲತೆಯನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ ಲೇಖಕರು.

ಪರನಿಂದೆಮುನ್ನೇ ಜೀವನ ಧ್ಯೇಯವಾಗಿಟ್ಟುಕೊಂಡವರಿಗೇನೂ ಸಮಾಜದಲ್ಲಿ ಕೊರತೆಯಿಲ್ಲ. ಡೊಂಕು ನೋಟದ ತೀನು ಈ ಜಾತಿಗೆ ಸೇರಿದವನು. ಅವನ ನೋಟ ಮಾತ್ರವಲ್ಲ ಬುದ್ಧಿಯೂ ಡೊಂಕೇ. ಅವನು ಬಯಲಾಟಕ್ಕೆ ಬಂದುದಾದರೂ ಏಕೆ ? ಆಟ ನೋಡುವುದಕ್ಕಲ್ಲ. ಜನರ ಮೇಲಿನ ಟೀಕೆ ಟಪ್ಪಣಿಗಳನ್ನು ಪ್ರಚಾರ ಮಾಡುವುದಕ್ಕೆ. ' ಕಲ್ಲಿಗೆ ಮದುವೆಯಾದ ಎಂಟು ತಿಂಗಳಲ್ಲಿ ಕೂಸು ಹುಟ್ಟಿದ್ದು ' ಅವನ ರಿಕಾರ್ಡಿನಲ್ಲಿ ಸೇರಿದೆ. ಹೆಂದರದ ಸುತ್ತ ತನ್ನ ಗೃಧ್ರದೃಷ್ಟಿಯನ್ನು ಬೀರುತ್ತಾನೆ. ' ಎಲ್ಲಿಯ ಬಾಗಿಲು ತೆರೆಯುತ್ತದೋ ಇಲ್ಲವೋ, ನಿಂಗಿಗೆ ಯಾರು ಬಣ್ಣ ಹಚ್ಚುತ್ತಾರೆ ? ' ಇವೆಲ್ಲಾ ಈ

ಸುದ್ದಿಗಾರನಿಗೆ ಮೆಚ್ಚಿನ ಹಾಗೂ ಮಹತ್ವದ ವಿಷಯಗಳು. ದೇಸಾಯಿ, ಕಲ್ಲಿ, ಮೊದಲಾದವರಲ್ಲಿಯೂ ಪರನಿಂದಾ ಸ್ವಭಾವ ಕಂಡುಬರುತ್ತದೆ. ರಾಗಣ್ಣ ಮತ್ತು ಮಲ್ಲಿ ಹತ್ತಿರ ನಿಂತುದನ್ನು ಕಂಡು ತಾತ್ಸಾರ ಮಾಡಿ ವರ್ಣಿಸುವ ದೇಸಾಯಿಗೆ ತನ್ನ ಕೊರತೆ ಕಾಣುವದಿಲ್ಲವೇನೋ? ಕಲ್ಲಿನ ದೃಷ್ಟಿಯಲ್ಲಿ, ನಿಂದೆಯ ನಂಜಿನೊಡನೆ ಅಸೂಯೆಯ ಕಿಡಿಯೂ ಸಿಡಿಯುತ್ತದೆ.

ಕೈಹಿಡಿದ ಹೆಂಡತಿಯ ಪ್ರೇಮದ್ರೋಹದಿಂದ ಬಗೆ ಬೇಸತ್ತು ಆಟಕ್ಕೆ ಸೇರಿದ. ಒನಪುಯೆಲ್ಲನ ಬಗೆಗೆ ವಾಚಕರಲ್ಲಿ ಸಹಾನುಭೂತಿಯುಂಟಾಗದಿರದು. ಹೆಣ್ಣು ಸಾತ್ಪನನ್ನಭಿನಯಿಸಿ ಕೀರ್ತಿಪಡೆದಿದ್ದರೂ 'ದುಃಖದ ಗೆದ್ದಲು' ಅವನನ್ನು ಒಳಗೊಳಗೇ ಕೊರೆದು ನಾಶಮಾಡುತ್ತದೆ. ಅಂಗಡಿಯನ್ನು ಬಿಟ್ಟು ನಿಂಗಿಯ ಪೈಯಾರ ನೋಡಲು ಬಂದುದು ಅಪ್ಪಯ್ಯನ ತಿಳಿಗೇಡಿತನವನ್ನು ಸಾರುತ್ತದೆ. ತಬಲಜಿ ಅಣ್ಣಪ್ಪ, ಪಿಟೀಲು ನಾಗಪ್ಪ ಇವರದು ಯಥಾರ್ಥ ಚಿತ್ರಣವಾಗಿದೆ. ಆಧುನಿಕ ಆಢ್ಯಮಹಿಳೆಯರ ಪ್ರತೀಕವಾದ ಗೌರು 'ವಿನಯ ಮೃದುಮಾತು, ಸಹನಶೀಲತೆ ಹೇಡಿಯ ಲಕ್ಷಣಗಳು' ಎಂದು ತಿಳಿದಿದ್ದವರಲ್ಲಿ ಆಶ್ಚರ್ಯವಿಲ್ಲ. ಅವರು ಗುಂಪಿನಲ್ಲಿ ನುಗ್ಗಿದ್ದೆ ಎದೆಯುಬ್ಬಿ ನಡೆಯುತ್ತ ಜನರನ್ನೇಲೆ ಹರಿಹಾಯುತ್ತಿರುವುದು ಸ್ವಾಭಾವಿಕವಾಗಿದೆ.

ಪ್ರಸಿದ್ಧ ನಟಿಯೆಂದು ಹೆಸರಾಂತ ನಿಂಗಿ ಕತೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾಳೆ. ಅವಳ ನಾಟ್ಯದ ಸಮ್ಮೋಹನಶಕ್ತಿ ಜನರನ್ನು ಮರುಳುಗೊಳಿಸಿ ಪೈಮರೆಸುತ್ತದೆ. ಅವಳ ದರ್ಶನಕ್ಕಾಗಿ ಹಲವರು ಕಾತರರಾಗಿದ್ದಾರೆ.' ಪಂಚನ ಮುಂಗೈನೇಲಿಪ್ಪ ರೂಪಾಯಿಯನ್ನು ಹಣೆಯಿಂದೆತ್ತುವ ಅವಳ ಸಾಹಸವನ್ನು ಕಂಡ ಜನರು 'ಅದ್ಭುತ ಘಟನೆ' ಎಂದು ಬೆರಗಾಗುತ್ತಾರೆ. ಇತರ ಪಾತ್ರಗಳ ಮೇಲೂ ಆಕೆ ಪ್ರಭಾವ ಬೀರುತ್ತಾಳೆ. ಆಟ, ನಾಟಕ ಮೊದಲಾದ ಕಲಾಸಂಘಗಳಲ್ಲಿ ಸೇರಿ ದುಡಿಯುತ್ತಿರುವ ತರುಣಿಯರ ಗುಣ ನಡತೆ, ಅವರನ್ನು ಸಮಾಜ ನೋಡುವ ದೃಷ್ಟಿ, ಅದರ ಪರಿಣಾಮ ಮೊದಲಾದವುಗಳನ್ನು ಈ ಪಾತ್ರದ ಮೂಲಕ ಲೇಖಕರು ಸ್ಪಷ್ಟವಾಗಿ ನಿರೂಪಿಸಿದ್ದಾರೆ.

ನಿಂಗಿ ಮತ್ತು ಒನಪುಯೆಲ್ಲನ ಹೆಂಡತಿ—ಇವರ ಸ್ವಭಾವಗಳಲ್ಲಿ ಹೆಚ್ಚಿನ ಅಂತರವೇನೂ ಇಲ್ಲ. ಮೊದಲನೆಯವಳು ಕಲಾಸೇವೆಯ ಸೋಗಿನಲ್ಲಿ ವೇಶ್ಯಾವೃತ್ತಿ ನಡೆಸುತ್ತಿದ್ದರೆ, ಎರಡನೆಯವಳು ಕೈಹಿಡಿದ ಗಂಡನನ್ನು ಬಿಟ್ಟು ಗೋಂದ್ಯಾನೆಂಬ ಇನ್ನೊಬ್ಬ ತರುಣನನ್ನು ಕೂಡಿಕೊಳ್ಳುತ್ತಾಳೆ. ಇತರ ಪಾತ್ರಗಳಾದ ಎಲ್ಲಿ, ಪುಲ್ಲಿಯರೂ ಪಾತರಗಿತ್ತಿಯರೇ ಆಗಿದ್ದಾರೆ. ಎಲ್ಲಿ ದೇಸಾಯಿಯ ಪ್ರೇಯಸಿಯಾಗಿದ್ದು ಆ ಸ್ಥಾನವನ್ನು ನಿಂಗಿ ಆಕ್ರಮಿಸಿದೊಡನೆ ಹೊರಟುಹೋಗುತ್ತಾಳೆ. ರಾಗಣ್ಣನ ಪೈಗೆ ತಾಗಿ ನಿಂತುಕೊಳ್ಳುವಲ್ಲಿ ಪುಲ್ಲಿಯ ಚರಿತ್ರಹೀನತೆ ಎದ್ದುಕಾಣುತ್ತದೆ.

ಸಮಾಜದ ಕುತ್ಸಿತ ಒಲವು, ಕುರೀತಿಗಳ ಕಡೆಗೂ ಲೇಖಕರು ಸಂಕೇತ ಮಾಡಿದ್ದಾರೆ. ಹೆಣ್ಣೆಂದೊಡನೆ ಜನರು ಬಾಯಿಬಿಟ್ಟು ನೋಡುವುದು ಮಾತ್ರವಲ್ಲ ಅವಳ ಒಲವು ಪಡೆಯಲು ಹಲವು ಬಗೆಯಲ್ಲಿ ಯತ್ನಿಸುತ್ತಾರೆ: ನಿಂಗಿಯ ದರ್ಶನಾಕಾಂಕ್ಷಿಗಳಾದ ಜನರು ಅವಳಿಗಾಗಿ ಗುಲಾಲು, ಮಾಲೆ, ರೇಷ್ಮೆ ಸೀರೆ ಇತ್ಯಾದಿಗಳನ್ನು ತರುತ್ತಾರೆ. ಹಿಮ್ಮೇಳದವರಿಂದ ಮೊದಲ್ಗೊಂಡು ಪ್ರೇಕ್ಷಕರವರೆಗೆ ಪ್ರತಿಯೊಬ್ಬರೂ ನಿಂಗಿಯನ್ನು ಹೊಗಳುವರೇ. ನಿಂಗಿಯ ಬದಲಾಗಿ ನೃತ್ಯ ಪ್ರವೀಣನಾದೊಬ್ಬ ಪುರುಷನು ಎಷ್ಟೇ ಒಳ್ಳೆಯ ಕುಣಿತವನ್ನು ಅಲ್ಲಿ ಪ್ರದರ್ಶಿಸಿದ್ದರೂ ಅಷ್ಟು ಜನ ಸೇರಬಲ್ಲರೇ ಎಂಬುದನ್ನು ನಾವು ಯೋಜಿಸಬೇಕು. ಆಗ ಸತ್ಯತೆಯ ಅರಿವಾಗದಿರದು. ಗಂಡು ಹೆಣ್ಣಿನ ಪವಿತ್ರ ಸಂಬಂಧ, ಕಟ್ಟುನಿಟ್ಟುಗಳಿಲ್ಲದ ಸಮಾಜದಲ್ಲಿ ಎಷ್ಟು ನಿಕೃಷ್ಟಾವಸ್ಥೆಗಿಳಿದಿದೆ ಎಂಬುದಕ್ಕೆ ಒನಪುಯೆಲ್ಲನ ಹೆಂಡತಿಯ ಸ್ವೇಚ್ಛಾಚಾರವೇ ಸಾಕ್ಷಿ. ಎಲ್ಲಿ ಮತ್ತು ನಿಂಗಿಯರೊಡನೆ ದೇಸಾಯಿಯು ಅನೈತಿಕ ಸಂಬಂಧ, ರಾಗಣ್ಣ ಮಲ್ಲಿಯರ ಲಜ್ಜಾಹೀನ ವರ್ತನೆ ಪಶು ಜೀವನದ ದ್ಯೋತಕಗಳಾಗಿವೆ. ಸಮಯ ಸಾಧಿಸಿ ಅಪ್ಪಯ್ಯನ ಅಂಗಡಿಯಿಂದ ಸಾಮಾನು ಕದಿಯುತ್ತಿರುವ ಘಟನೆ, ಜನರ ನೈತಿಕ ಮಟ್ಟ ಎಷ್ಟು ಕೆಳತರಗತಿಯಲ್ಲಿದೆ ಎಂಬುದನ್ನು ತೋರಿಸಿಕೊಡುವುದಲ್ಲದೆ ಧಾರ್ಮಿಕ ಭಾವನೆಯ ಅಭಾವವನ್ನೂ ಸೂಚಿಸುತ್ತದೆ. ಕ್ಷುದ್ರ ಸ್ವಾರ್ಥಸಾಧನೆಗಾಗಿ ಅವರು ಏನು ಮಾಡಲೂ ಸಿದ್ಧರು. "ನೋಡ್ರೋ ನೋಡ್ರಿ ಕಳ್ಳಸೂಳಿಮಕ್ಕಳ್ನ ಅಂಗಡೀ ಸಾಮಾನು ಕದೀತಾರ." ಎಂದು ಇತರರನ್ನು ಬೈಯುತ್ತಾ ಅಂಗಡಿಯ ಕಡೆಗೆ ಧಾವಿಸಿ, ಸಭ್ಯನಂತೆ ನಟಿಸಿ, ಪೆಟ್ಟಿಗೆಯಿಂದ ಹಣವನ್ನೆಲ್ಲಾ ಜೇಬಿಗೆ ಸೇರಿಸಿಕೊಂಡ ರಾಗಣ್ಣನು ತಪ್ಪೋಸಗಾರರನ್ನು ಸಮಾಜಘಾತುಕರೆನ್ನದೆ ಮತ್ತೇನೆನ್ನಬೇಕು?

ಬಯಲಾಟ ನೋಡಲು ಬಂದ ಜನರ ನೂಕುನುಗ್ಗಲು ಲೇಖಕರ ಲೇಖನಿಯಿಂದ ಸ್ವಾಭಾವಿಕವಾಗಿ ಹರಿದುಬಂದಿದೆ. ನೇಪಥ್ಯದಲ್ಲಿರುವ ಪಾತ್ರಧಾರಿಗಳು ಪರದೆಯ ಎಡೆಯಲ್ಲಿ ಇಣಿಕಿನೋಡುವುದರ ಕಡೆಗೆ ಬೆಟ್ಟು ತೋರಿಸಿ ಅವನ್ನು ಪರೋಕ್ಷವಾಗಿ ಖಂಡಿಸಿದ್ದಾರೆ.

ಆರಿಸಿಕೊಂಡ ವಿಷಯಕ್ಕೆ ಅನುಗುಣವಾಗಿರುವ ಸುಂದರವಾದ ಸರಳ ಶೈಲಿ, ಚಿಕ್ಕದಪ್ಪಟ್ಟ ವಾಕ್ಯಗಳು ಕತೆಯ ಜೀವಾಳವೆನ್ನಬಹುದು. ಸರಳವಾದ ಕೆಲವೇ ವಾಕ್ಯಗಳಲ್ಲಿ ಆಗಾಧ ಅರ್ಥವನ್ನು ಹಿಡಿದಿಟ್ಟಿದ್ದಾರೆ ಲೇಖಕರು. 'ಹುಟ್ಟಿದ ಜಾತಿಯೇ ಅವರ ಯೋಗ್ಯತೆಗೆ ಅಳತೆಗೋಲು ಹುಟ್ಟುವುದು ಬೆಳೆಯುವುದು-ಇವೇ ಅವರ ಜೀವನದಗುರಿ; ಜನಸಂದಣಿಯೇ ಅವರ ನಿತ್ಯದ ಮಂತ್ರ? 'ಜನರು ಆಕೆಯನ್ನು ನೆಟ್ಟ ನೋಟದಿಂದ ಕುಡಿಯುತ್ತಿದ್ದರು' ಇತ್ಯಾದಿ ವಾಕ್ಯಗಳಲ್ಲಿ ಸಂಪೂರ್ಣ ಕತೆಯ ತಿರುಳೇ ಅಡಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಕತೆಯ ಆರಂಭದಂತೆಯೇ ಅಂತ್ಯವೂ ಬಲು ಜುಟುಕಾಗಿದ್ದು ಕಲಾತ್ಮಕವಾಗಿದೆ. ಸಕ್ಕನೆ ಎಲ್ಲಿಂದಲೋ ಆರಂಭವಾಗಿ ವಿವಿಧ ಮುಖಿಗಳನ್ನು ತೋರಿಸಿ ಅನಂತರ ಎಲ್ಲಿಯೋ ಕರಗಿ ಲೀನವಾದಂತೆ ಕೊನೆಗೊಳ್ಳುತ್ತದೆ. ಒಟ್ಟಿನಲ್ಲಿ ಅನಾಗರಿಕ ಸ್ಥಿತಿಯಲ್ಲಿರುವ ಹೆಳ್ಳಿಯೊಂದರ ಚಿತ್ರಣ ಈ ಕಥೆ ಎನ್ನಬಹುದು. ನವನಾಗರಿಕರೆಂಬ ಅಭಿಮಾನದಿಂದುಬ್ಬಿ ಮೆರೆಯುತ್ತಿರುವ ಈ ಶತಮಾನದಲ್ಲಿಯೂ ಇಂತಹ ಸಮಾಜವನ್ನೊಳಗೊಂಡ ನೂರಾರು ಹಳ್ಳಿಗಳನ್ನು ನಾವು ಕಾಣಬಹುದು. ಆದುದರಿಂದ ಈ ಸಜೀವ ಚಿತ್ರವನ್ನು ಬರೆಯುವುದರಲ್ಲಿ ಶ್ರೀ ಆರ್. ಪಿ. ಕುಲಕರ್ಣಿಯವರು ಯಶಸ್ವಿಗಳಾಗಿದ್ದಾರೆ ಎನ್ನಲಡ್ಡಿಯಿಲ್ಲ.

ಬಯಂ:

ತೋಬಾಟೇಕಸಿಂಗ್ ಎಲ್ಲಿದೆ ?

(ಅನುವಾದಿತ ಕತೆಯ ವಿಮರ್ಶೆ)

ಕುಮಾರಿ, ಸಿ. ಎಚ್. ಲಕ್ಷ್ಮಿ—ಸಾಡಿ, ಮುಟ್ಟುತ್ತೋಡಿ

ಭಾರತೀಯ ಸ್ವಾತಂತ್ರ್ಯ ಸಂಗ್ರಾಮವು ಕಳೆದ ಶತಮಾನದ ಪ್ರಾರಂಭವಾದುದು 'ನೌಖಾಲಿದಂಗೆ' ಭಾರತದ ವಿಭಜನೆಗಾಗಿ ಹಿಂದೂ–ಮುಸ್ಲಿಮರೊಳಗೆ ಬದ್ಧದ್ವೇಷ, ಹಿಂಸಾತ್ಮಕ ನಿತ್ಯಹೋರಾಟಗಳು ನಡೆದು, ಎಷ್ಟೋ ಜನರ ಆತ್ಮಬಲಿದಾನವಾಗಿರಬಹುದು. ಆ ಬಲಿದಾನದ ತಳಹದಿಯಮೇಲೆ ರೂಪಿತವಾಗಿ ನಿಂತಿತು. ಹಿಂದುಸ್ಥಾನದಿಂದ ವಿಭಜಿಸಿದ ಪಾಕಿಸ್ತಾನ್–ಪ್ರಜಾಶಾಹಿ ! ಈ ಘಟನೆಯು ಇನ್ನೆಷ್ಟು ಜನರ ಮತಿವಿಭ್ರಣೆಗೆ ಕಾರಣವಾಗಿದ್ದಿತೊ ? ಅದೇ ಕ್ರಾಂತಿ ಕಾಲದ ಸಂದರ್ಭವೊಂದನ್ನು ಕಲ್ಪಿಸಿ ಹೊಸೆದಿರುವುದು ಈ ಕಥೆ.

ಭಾರತದ ವಿಭಜನೆಯ ನಂತರ ಭಾರತ–ಪಾಕಿಸ್ತಾನ ಸರಕಾರಗಳ ನಿರ್ಣಯದಂತೆ ಎರಡೂ ದೇಶಗಳ ಆಸ್ಪತ್ರೆಯ ಹುಚ್ಚರನ್ನು ಹಿಂದೂ–ಮುಸ್ಲಿಮ್ ಜನಾಂಗಕ್ಕನುಸರಿಸಿ ಸ್ಥಳಾಂತರಿಸುವ ಬಿರುಸಿನ ರಾಜಕಾರಣ ನಡೆದಿತ್ತು. ಇದನ್ನರಿತು ದಂಗುಬಡಿದ ಲಾಹೋರ್ ಆಸ್ಪತ್ರೆಯ ಹುಚ್ಚರಲ್ಲಿ ಸಿಖ್ಖ ಜನಾಂಗಕ್ಕೆ ಸೇರಿದ ಬಿಸನ್ ಸಿಂಗ್ ಎಂಬಾತನೂ ಒಬ್ಬ. ತನ್ನ ಹುಟ್ಟು ಭೂಮಿಯಾದ 'ತೋಬಾಟೇಕಸಿಂಗ್' ಹಿಂದುಸ್ಥಾನದಲ್ಲಿದೆಯೋ, ಪಾಕಿಸ್ತಾನದಲ್ಲಿದೆಯೋ ಎಂದು ತಿಳಿಯದೆ, ಬಗೆಹರಿಯದ ದೇಶಗಳ ಗಡಿಪ್ರದೇಶದ ಮಧ್ಯದ ಜಾಗವನ್ನೇ ತನ್ನ ನೆಚ್ಚಿನ ನೆಲವೆಂದು ನೆನೆದು, ಹದಿನೈದು ವರುಷಗಳಿಂದಲೂ ಮಲಗಿರದಿದ್ದ ಆತ ಅಲ್ಲೇ ಪ್ರಾಣವನ್ನಪ್ಪಿ ಮಲಗಿದ ರುದ್ರಕರುಣಾಜನಕ ಚಿತ್ರವನ್ನೊಳಗೊಂಡ ಕಥೆಯಿದು.

ಈ ಕಥೆಯ ಮುಖ್ಯ ವ್ಯಕ್ತಿಯೂ 'ತೋಬಾಟೇಕಸಿಂಗ್ ಎಲ್ಲಿದೆ ?' ಎಂಬ ಸಮಸ್ಯೆಯನ್ನು ಬಿಡಿಸಲಾರದವನಾಗಿ ಪ್ರಶ್ನಿಸುತ್ತಿರುವ ಬಿಸನ್ ಸಿಂಗನೇ ಲಾಹೋರ್ ಆಸ್ಪತ್ರೆಯ ಹುಚ್ಚರೊಳಗೆಲ್ಲಾ ಅಪನೊಬ್ಬ ವಿಚಿತ್ರ ವ್ಯಕ್ತಿಯಾಗಿದ್ದು ಪಾಚಕರ ಗಮನವನ್ನು ತನ್ನತ್ತ ಸೆಳೆಯುತ್ತಾನೆ "ಊಪಡದೀ ಗಡಗಡದೀ.... ಇತ್ಯಾದಿ ಅವನ ಅರ್ಥವಾಗದ ಮಾತುಗಳು ಅವನ ವೈಚಿತ್ರ್ಯಕ್ಕೆ ಕಾರಣವಾಗಿವೆ. ಅವನು ಆಸ್ಪತ್ರೆಗೆ ಸೇರಿದ ಹದಿನೈದು ವರುಷಗಳಿಂದಲೂ ಒಮ್ಮೆಯೂ ಮಲಗದೆ ಒಂದು ಬಾರಿಯೂ ಕುಳಿತುಕೊಳ್ಳದ ಅವನ ಅತೀ ವಿಚಿತ್ರ ವರ್ತನೆಯ ಹಿನ್ನೆಲೆಯಲ್ಲಿ—ಅವನ ಬುದ್ಧಿಭ್ರಮಣೆಗೆ ಏನೋ ಒಂದು ಬಲವಾದ ಹೃದಯಸಂವೇದನೆಯು ಇದ್ದಿರಬಹುದೆಂದು ವ್ಯಕ್ತವಾಗುತ್ತದೆ. ಅದರೆ ೧೫ ವರ್ಷವನ್ನೂ ಕುಳಿತರೆ, ಮಲಗದೆ ಕಳೆದುದು ತುಸು ಆಶ್ಚರ್ಯವೇ ಎನ್ನಬಹುದು !

ತನ್ನ ಹುಟ್ಟೂರಿನ ಪರವಾದ ಅನನ್ಯ ಪ್ರೇಮವು ಸರ್ವ ಸಾಮಾನ್ಯರಲ್ಲೂ ರಕ್ತಗತವಾಗಿ ಬಂದಿರುತ್ತದೆ. ತನ್ನ ಸಂಸ್ಕೃತಿ, ಆಚಾರಗಳಿಗೊಗ್ಗದ ಬೇರೊಂದು ರಾಜ್ಯದೊಡನೆ ಅದನ್ನು ವಿಲೀನಗೊಳಿಸುವುದೆಂದರೆ ಯಾವ ಸ್ವಾಭಿಮಾನಿಗೆ ಅದು ಪ್ರಿಯವಾದೀತು ? ಇಂದಿನ ಕಾಶ್ಮೀರಗೋಡ ಸಮಸ್ಯೆ, ಸೊಲ್ಲಾಪುರ ಸಮಸ್ಯೆಗಳಲ್ಲಿ ಅಂತೆಯೇ ಎಷ್ಟು ಜನ ನೊಂದಿಲ್ಲ !

ಹೆಚ್ಚು ಕಡಿಮೆ ಬಿಸನ್ ಸಿಂಗನೂ ಅದೇ ಸ್ಥಿತಿಯಲ್ಲಿದ್ದ. 'ತೋಬಾಟೇಕಸಿಂಗ್' ಜಮೀನ್‌ದಾರರ ಮನೆತನಕ್ಕೆ ಸೇರಿದ ಅವನಲ್ಲಿ ತನ್ನ ಜನ್ಮಭೂಮಿಯ ಬಗ್ಗೆ ವಿಶೇಷವಾದ ಅಭಿಮಾನವಿತ್ತೆಂಬುದಕ್ಕೆ ಕತೆಯ ಉತ್ತರಾರ್ಧದಲ್ಲಿ ಅವ್ಯಾಹತವಾಗಿ ನಡೆದಿರುವ 'ತೋಬಾಟೇಕಸಿಂಗ್ ಎಲ್ಲಿದೆ ?' ಎಂಬ ಅವನ ಪ್ರಶ್ನೆಯೇ ನಿದರ್ಶನ. ಅದನ್ನುಳಿದು ಅವನಿಗೆ ತನ್ನ ಮಿತ್ರನೊಡನೆ ಮಾತುಕತೆಯಾಗಲೀ, ಹಿಂದುಸ್ಥಾನಕ್ಕೆ ವರ್ಗಾಂತರಗೊಳ್ಳುವುದಾಗಲೀ ಬೇಕಾಗಿರಲಿಲ್ಲ. ಅಲ್ಲದೆ "ತಾನೇ 'ಖುದಾ' ಅಂದುಕೊಳ್ಳುವ ಮುಸಲ್ಮಾನ" ನೊಡನೆ ವಿನೀತನಾಗಿ 'ತೋಬಾಟೇಕಸಿಂಗ್ ಎಲ್ಲಿ ?' ಎಂಬುದರ ಬಗ್ಗೆ ಬೇಗನೇ ಹುಕುಮನ್ನು ಕೊಟ್ಟುಬಿಡೆಂದು ಬೇಡುತ್ತಾನೆ—ಅದಕ್ಕೂ ಅವನ ಹುಟ್ಟು ನೆಲದ ಪ್ರೀತಿಯೇ ಕಾರಣ.

ಕಥೆಯ ಆಂತ್ಯವಾದರೋ ಅತ್ಯಂತ ಹೃದಯ ಸ್ಪರ್ಶಿಯಾಗಿದೆ. ಇಕ್ಕಡೆಯ ಆಫೀಸರರೂ ಹುಚ್ಚರನ್ನು ಸ್ಥಳಾಂತರಗೊಳಿಸುವ ಕಾರ್ಯವನ್ನು ಪ್ರಯಾಸದಿಂದ ಪೂರೈಸಿದಂತಾಗಿದ್ದರೂ—ಬಿಸನ್ ಸಿಂಗ್ ತನ್ನ ಸಮಸ್ಯೆ ಬಗೆಹರಿಯದೆ ಇಕ್ಕಡೆಗಳ ಮಧ್ಯಪ್ರದೇಶವನ್ನೇ ತನ್ನ ನೆಚ್ಚಿನ ನೆಲವೆಂದು ಅಚಲನಾಗಿ ನಿಂತಲ್ಲೇ ನಿಂತಿದ್ದ. ಅವನ ಸಾಧುತ್ವವನ್ನರಿತ ಆಫೀಸರರು ಅವನನ್ನು ಹೆಚ್ಚು ತೊಂದರೆಗೊಳಿಸಿರಲಿಲ್ಲ. ಆದರೆ ಮರುದಿನ ಸೂರ್ಯೋದಯಕ್ಕೆ ಮೊದಲೇ ಎದೆ ಇರಿಯುವ ಕೂಗಿನೊಂದಿಗೆ, ಹದಿನೈದು ವರ್ಷಗಳಿಂದಲೂ ಮಲಗಿರದಿದ್ದ ತನ್ನ ಮೈಯನ್ನು ಆ 'ಅನಾಮಿಕ' ನೆಲದಮೇಲೆ ಚಾಚಿ ಪ್ರಾಣತೊರೆದಿದ್ದ! ಎರಡೂ ದೇಶಗಳಲ್ಲಿ ತನ್ನ ಜನ್ಮಭೂಮಿಗೆ ನೆಲೆಯಿಲ್ಲವೆಂಬ ಕೊರಗಿನಿಂದ ಅಲ್ಲೇ ತನ್ನ ಪ್ರೀತಿಯ 'ತೋಬಾಟೇಕಸಿಂಗ್'ನ್ನು ಕಲ್ಪಿಸಿಕೊಂಡಿದ್ದ ಅವನ ಆತ್ಮವಲ್ಲೇ ಅವನ ಸಮಸ್ಯೆಗೆ ಉತ್ತರ ದೊರಕಿರಬೇಕು. ಅಲ್ಲದೆ, ಹದಿನೈದು ವರ್ಷಗಳನ್ನೂ ನಿಂತೇ ಕಳೆದ ಪರಿಶ್ರಮದಿಂದ ಊದಿಕೊಂಡಿದ್ದ ಅವನ ಕಾಲಿನ ಖಾಸಗಂಡಗಳು ಕುಳ್ಳಿರುವ, ಮಲಗುವ ಅಭ್ಯಾಸವನ್ನೇ ಮರೆತಿದ್ದು, ಅಕಸ್ಮಾತ್ತಾಗಿ ಮಲಗುವಾಗ ಅತೀವ ಯಾತನೆಯನ್ನು ಕೊಟ್ಟಿರಬಹುದು. ಕಥೆಯಲ್ಲಿ ಬಳಸಿದ 'ಎದೆ ಇರಿಯುವ ಕೂಗು' ಎಂಬ ಶಬ್ದ ಸಮುಚ್ಚಯವೇ ಇವೆಲ್ಲವನ್ನು ಪಾಚಕರ ಹೃದಯದಲ್ಲಿ ಧ್ವನಿಸುತ್ತದೆ. ಭಯ–ಕರುಣ ರಸಮಿಶ್ರಣದ ಭಾವನೆ. ಪಾಚಕರನ್ನು ಸ್ತಂಭಿತಗೊಳಿಸುವ ಕಥಾರಚನೆಯ ಚಾತುರ್ಯವೇ ಇಲ್ಲಿ ರೂಪುಗೊಂಡಿದೆ.

ಕಥೆಯಲ್ಲಿ ಬಿಸನ್ ಸಿಂಗನನ್ನುಳಿದು ಬರುವ ಹಲವಾರು ಚಿಕ್ಕ-ಪುಟ್ಟ ಪಾತ್ರಗಳಲ್ಲಿ ಫಜಲ್‌ದೀನನದ್ದು ಮುಖ್ಯವಾಗಿದೆ. ಅವನು ಬಿಸನ್ ಸೊಡನೆ ಸ್ನೇಹದಿಂದ ಮಾತುಕತೆಯಾಡಿ ವಿಶ್ವಾಸದಿಂದ ಕೊಟ್ಟ ಮಿಠಾಯಿ ಪೊಟ್ಟಣವನ್ನು ಬಿಸನ್ ಸಿಪಾಯಿಗೇಕೆ ಕೊಟ್ಟ ? ಅನುಮಾನದಿಂದಲೋ ಸ್ವಭಾವ ಸಹಜತೆಯಿಂದಲೋ ತಿಳಿಯದಾಗಿದೆ.

ಸಾದರ ಸ್ವೀಕಾರ

೩೫ ಮೂರುಮುಖ (ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. 'ನಾರಾಯಣ.' ಪ್ರಕಾಶಕರು ರಾಜೀವ ಪ್ರಕಾಶನ ಮಂದಿರ, ಗದಗ. ಕ್ರೌ. ಅ. ೧೫೨ ಪುಟಗಳು. ಬೆಲೆ ೧.೫೦.

೩೬ ರಾಗ-ವಿರಾಗ (ಭಾಗವತದಲ್ಲಿಯ ಲಘು ಕಥೆಗಳ ಸಂಕಲನ). ಬರೆದವರು ಪಂಡಿತ ಶ್ರೀ. ಸಂಘರೀನಾಥಾಚಾರ್ಯ ಗಲಗಲಿ ಅವರು. ಪ್ರಕಾಶಕರು ರಾವಜೀ ಪ್ರಕಾರನ ಮಂದಿರ, ಗದಗ. ಕ್ರೌ. ಅ. ೧೫೨ ಪುಟಗಳು. ಬೆಲೆ ೧.೫೦.

೩೭ ಸೌರವ್ಯೂಹ (ಖಗೋಲ ಪರಿಚಯಾತ್ಮಕ ಲಘುಗ್ರಂಥ) ಬರೆದವರು ಶ್ರೀ. ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. ಕರ್ನಾಟಕ ವಿ. ವಿದ್ಯಾಲಯದ ಪ್ರಚಾರ ಪುಸ್ತಕ ಮಾಲೆಯ ಪ್ರಕಟನೆ. ಪೂ. ಕ್ಯಾ. ಅ. ೧೦೦ ಪುಟಗಳು. ಬೆಲೆ ೦೦.೮೫.

೩೮ ಗಾದೆಗಳ ಗೀತಗಳು (ಪರಂಪರೆಯ ಕನ್ನಡ ಗಾದೆಗಳನ್ನು ಹೊಂದಿಸಿ ಬರೆದ ಹಾಡುಗಳ ಸಂಕಲನ). ಗೀತಕಾರರು ಶ್ರೀ. ಎಚ್. ಎಂ. ರಾಮಾರಾಧ್ಯ (ವಾಗೀಶ), ಮಲ್ಲೇಶ್ವರಂ-ಬೆಂಗಳೂರು. ಪ್ರಕಾಶಕರು ಸುದರ್ಶನ ಬುಂಡ್ ಕಂಪನಿ, ಅವಿನ್ಯೂ ರೋಡ್, ಬೆಂಗಳೂರು-೨. ಕ್ರೌ. ಅ. ೧೪೨ ಪುಟಗಳು. ಬೆಲೆ ೧.೫೦.

೩೯ ಯುಗಪುರುಷ (ದಸರಾ ವಿಶೇಷ ಸಂಚಿಕೆ). ಸಂಪಾದಕರು ಶ್ರೀ. ಕೆ. ಅನಂತನಾರಾಯಣ ಉಡುಪ. ಪ್ರಕಾಶಕರು 'ಯುಗ ಪುರುಷ' ಕಾರ್ಯಾಲಯ, ಕಿನ್ನಿಗೋಳಿ. (ದ. ಕ.) ಕ್ರೌ. ೧ ದ ೧೨೦ ಪುಟಗಳು. ಬೆಲೆ ೧.೫೦.

ನಾಡಿನಲ್ಲಿಯ ಅನೇಕ ಜನ ಪಳಗಿದಗೈಯ ಲೇಖಕರ ಲೇಖನಗಳು, ಕವಿತೆ-ಕಥೆಗಳು ಇವರಲ್ಲಿ ಪ್ರಕಟವಾಗಿವೆ. ಎಂದಿಗಿಂತಲೂ ಹೆಚ್ಚಾದ ಬಾಹ್ಯಾಂಗ ಸೌಂದರ್ಯವನ್ನು ನಾವಿಲ್ಲಿ ಕಾಣಬಹುದು. ಒಳ್ಳೆಯ ಸಂಚಿಕೆ.ಎಲ್ಲರೂ ಕೊಂಡು ಓದಬೇಕು.

೪೦ ಗುರುಗಾನಾಮೃತ (ಶ್ರೀ. ರಾಘವೇಂದ್ರ ಸ್ವಾಮಿಗಳವರ ಮಾಹಾತ್ಮ್ಯ-ಸ್ತೋತ್ರಗಳನ್ನೊಳಗೊಂಡ ಕೀರ್ತನಗಳ ಸಂಕಲನ; ಹರಿದಾಸರ ರಚನೆಗಳು). ಪ್ರಕಾಶಕರು ಉಪಾಧ್ಯಾಯ ಪ್ರಕಾಶನಾಲಯ, ನಂ. ೧೬, ಓಬಯ್ಯನ ಗಲ್ಲಿ, ಬೆಂಗಳೂರು ಸಿಟಿ. ಕ್ರೌ. ಅ. ೬೪ ಪುಟಗಳು. ಬೆಲೆ ೦೦.೫೫.

೪೧ ಜನಾಂಗದ ಜೀವಾಳ (ಕನ್ನಡ ಜಾನಪದ ಸಾಹಿತ್ಯ ವಿಮರ್ಶನಾತ್ಮಕ ಗ್ರಂಥ) ಬರೆದವರು : ಶ್ರೀ. ಸಿಂಪಿ ಲಿಂಗಣ್ಣ, ಚಡಚಣ. ಧಾರವಾಡದ ಮಿಂಚಿನ ಬಳ್ಳಿಯ ೨೩ನೆಯ ವರ್ಷದ ೧೧ನೆಯ ಕುಡಿ. ಕ್ರೌ. ಅ. ೧೬೪ ಪುಟಗಳು. ಬೆಲೆ ಒಳ್ಳೆಯ ಪ್ರತಿಗೆ ೨.೫೦; ಸಾಮಾನ್ಯ ಪ್ರತಿಗೆ ೨.೦೦.

೪೨ ಸಂದೇಶ (ವಾರವ್ಯಯ ಪತ್ರಿಕೆಯ ದೀಪಾವಳಿ ಸಂಚಿಕೆ.) ಸಂಪಾದಕರು ಶ್ರೀಮಾನ್ ಗೋ. ಅ. ದೇಶಪಾಂಡೆ, ಸಂದೇಶ ಕಾರ್ಯಾಲಯ, ಹನುಮನ ಬೀದಿ, ಬೆಳಗಾಂವಿ. ಡೆ. ೧೫ ಪುಟಗಳು. ಬೆಲೆ ೦೦.೫೦.

ಕನ್ನಡ ಪತ್ರಿಕೆಗಳ ದೃಷ್ಟಿಯಿಂದ, ಈ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿರುವ ಜಾಹೀರಾತುಗಳನ್ನು ನೋಡಿದರೆ; ಸಂಪಾದಕರ ಈ ಪ್ರಯತ್ನವು ಅಭಿನಂದನೀಯವೆಂದೇ ಹೇಳಬಹುದು.ವಿಶೇಷ ಸಂಚಿಕೆಯ ವ್ಯಾವಹಾರಿಕ ಗುರಿಯನ್ನು ಸಂಪಾದಕರು ಯಶಸ್ವಿಯಾಗಿ ಸಾಧಿಸಿಕೊಂಡಿದ್ದಾರೆ.

ಕತೆಯಲ್ಲಿ ಬರುವ ಇತರ ಪಾತ್ರಗಳೆಲ್ಲವೂ ಸನ್ನಿವೇಶದ ವಾಸ್ತವ ಚಿತ್ರಣವನ್ನು ರೂಪಿಸೆಲೋಸುಗ ಬಳಸಿಕೊಂಡವುಗಳೆನ್ನಬಹುದಾಗಿದೆ. ಕಥೆಯ ಪೂರ್ವಾರ್ಧವು ಆ ಸನ್ನಿವೇಶದ ಚಿತ್ರಣವನ್ನೂ ವಿವಿಧ ರೀತಿಯ ಹುಚ್ಚರ ಗೊಂದಲಗಳನ್ನು ತುಂಬಿಕೊಂಡು ಓದುಗರನ್ನೇ ಹುಚ್ಚುಹೊಳೆಯಲ್ಲಿ ಹರಿಯಗೊಡುತ್ತದೆ.

ಲೇಖಕರು ಆರೆಹುಚ್ಚರ ಮನಸ್ಥಿತಿಯನ್ನು ಬಹಳ ಚೆನ್ನಾಗಿ ನಿರೂಪಿಸಿದ್ದಾರೆ. 'ಈಗ ಪಾಕಿಸ್ಥಾನದಲ್ಲಿದ್ದರೆ-ಇಷ್ಟು ದಿನ ಇಲ್ಲಿಯೇ ಇದ್ದು ಹಿಂದುಸ್ಥಾನದಲ್ಲಿದ್ದುದು ಹೇಗೆ ?' ಎಂಬಿತ್ಯಾದಿ, ಅವರಿಗೆ ಕಗ್ಗಂಟುಗಳಾಗಿ ಉಳಿದ ಪ್ರಶ್ನೆಗಳು 'ಮೊದ್ವು'ಗಳ ಸಮಸ್ಯಾ ರೀತಿಗಳನ್ನಿರುಹುವಂತಿದ್ದು, ಹಾಸ್ಯಪ್ರದವೂ ಆಗಿದೆ. ಜೊತೆಗೆ-ಸರಕಾರದಿಂದ ಹೊರಡುವ ಹೊಸ ಹೊಸ ಕಾನೂನುಗಳು ಜನಸಾಮಾನ್ಯರನ್ನು ಹೇಗೆ ಮಂಕರನ್ನಾಗಿ ಮಾಡುವುದೆಂಬುದನ್ನೂ ಗೂಢವಾಗಿ ಮನಗಾಣಿಸಿದ್ದಾರೆ.

ಕಥಾನಾಯಕ ಬಿಸನ್ ಸಿಂಗನ ವ್ಯಕ್ತಿತ್ವ ನಿರೂಪಣೆಯು ಬಹಳ ಯಶಸ್ವಿಯಾಗಿದೆ. ಪಾತ್ರಸ್ವಭಾವದ ಔಚಿತ್ಯಪರಿತು ತಕ್ಕಷ್ಟೇ ಮಾತುಗಳನ್ನು ಆಡಿಸಿದ್ದಾರೆ. ಮೇಲ್ನೋಟಕ್ಕೇ-ಅವನು ಕೇವಲ ಅರೆಹುಚ್ಚನೆಲ್ಲ-ಭಾವನೆಗಳ ಬಡಿದಾಟದಿಂದ ಮತಿ ವಿಭ್ರಮಣೆಗೊಂಡ ಭಾವುಕಜೀವಿ ಎಂಬುದು ಪೂರ್ಣ ಮನವರಿಕೆಯಾಗುತ್ತದೆ.

ಸರಳ ರೀತಿಯಲ್ಲಿ ಅರ್ಥಪೂರ್ಣ ಮಾತುಗಳಲ್ಲಿ ಕಥೆಯು ಕಳೆಗಟ್ಟಿದೆ....ಶಿರೋನಾಮವು ಉಚಿತವಾಗಿದೆ. ಕಥೆಯ ಮೇಲೆ ಮುಖ್ಯ ಪ್ರಭಾವವನ್ನು ಬೀರಲಶಕ್ಯವಾದ ಇತರ ಹುಚ್ಚರ ಪಾತ್ರಗಳ ವಿವರಣೆಯು ತುಸು ಚುಟುಕಾಗಿದ್ದರೂ ಸಾಕೆನಿಸುತ್ತಿತ್ತು.

ಒಟ್ಟಿನಲ್ಲಿ ಕಥೆ ಉತ್ತಮವಾಗಿದೆ. ಇಂತಹ ಕಥೆಗಳು ಸಾಹಿತ್ಯದಲ್ಲಿ ಕಂಡುಬರುವುದು ಅಪರೂಪವಾದ್ದರಿಂದ, ಪ್ರಸ್ತುತ ಕತೆಯ ಲೇಖಕರು ಈ ನವೀನ ರೀತಿಯ ಕುಸುಮವನ್ನು 'ಸಾಹಿತ್ಯ ಸರಸ್ವತಿ'ಗೆ ಅರ್ಪಿಸಿರುವುದು ಶ್ಲಾಘನೀಯವೇ ಸರಿ!

ಜಯ ಹಿಂದ್

ಶರತ್ ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಹೊಸಕಾಲಕ್ಕೆ ತಕ್ಕ

ಮುದ್ರಣ–ಬಂಧನಗಳ ಬಿಡಗಿನೊಂದಿಗೆ ಇದೀಗ ಬಿಳಿಕಗೆ ಬಂದಿದೆ.

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತದ್ರೂಪ ಚಿತ್ರಣವಾಗಿರಬೇಕು. ವಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇವೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇವೆ—ಎನಿಸಬೇಕು. ಪಾತ್ರಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯವಹರಿಸಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ.

ಎಂತಲೇ ಇದು ಹುಟ್ಟಿ ೨೫ ವರ್ಷಗಳಾದರೂ, ವಾಚಕರಿಗೆ ಹೊಸ ಹೊಸದೇ ಎನಿಸುತ್ತದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರೌ. ಅ. ೧೪೦ ಪುಟಗಳು. ● ಬೆಲೆ : ೨ ರೂ. ೨೫ ನಯೇಪೈಸೆ

ನಮ್ಮ ಮಂದಿರದ ಬೇರೆ ಪ್ರಕಟನೆಗಳು

ಮಗಳ ಮದುವೆ

(ಸಾಮಾಜಿಕ ಕಾದಂಬರಿ)

ಕ್ರೌ. ಅ. ೩೫೦ ಪುಟ * ಬೆಲೆ : ೪ ರೂ.

ಕಾರಹುಣ್ಣಿವೆ

(ಕವನಸಂಕಲನ)

ಕ್ರೌ. ಅ. ೧೨೫ ಪುಟ * ಬೆಲೆ : ೨ ರೂ.

ಳವತಿ ಮಲ್ಲಮ

(ರೂಪಕ ಸಂಕಲನ)

ಕ್ರೌ. ಅ. ೧೨೫ ಪುಟ * ಬೆಲೆ : ೧.೫೦

ಬೆಂದ ಹೃದಯ

(ರೂಪಕ ಸಂಕಲನ)

ಕ್ರೌ. ಅ. ೧೨೫ ಪುಟ * ಬೆಲೆ : ೧.೨೫

ನಲ್ವಾಡುಗಳು

(ಪ್ರೀತಿ ಗೀತ ಸಂಕಲನ)

ಕ್ರೌ. ಅ. ೭೨ ಪುಟ ● ಬೆಲೆ : ೧.೨೫

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ!

ಶರತ್ ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)


ದೀಪಾವಳಿಯ
ಅಭಿನಂದನೆಗಳು
ಮಫತ್‌ಲಾಲ್
ಗ್ರುಪ್ ಕಡೆಯಿಂದ
MAFATLAL
GROUP

ಜಯಂತಿ

ಜಯಂತಿಗೆ ಚಂದಾದಾರರಾಗಿರಿ!

ಜಯಂತಿಯಂತಹ ಸಭಿರುಚಿ-ಸಂಸ್ಕೃತಿ ಪ್ರಚಾರಕ ಮಾಸಪತ್ರಿಕೆಯನ್ನು ಬಹುಕಾಲ ಬದುಕಿಸುವುದು ಕನ್ನಡ ಜನತೆಯ ಕರ್ತವ್ಯವಾಗಿದೆ.

* * * * *

ಕನ್ನಡ ನಾಡಿನಲ್ಲಿಯ ಪ್ರತಿಯೊಂದು ವಿದ್ಯಾಶಾಲೆಯೂ ಪ್ರತಿಯೊಂದು ವಾಚನಾಲಯವೂ ಜಯಂತಿಯನ್ನು ಬರಮಾಡಿಕೊಳ್ಳಬೇಕು. ಹಿಂದಿನ ಕಾಲದ—ಕನ್ನಡ ಪ್ರದೇಶವನ್ನು ಒಳಗೊಂಡ—ಎಲ್ಲ ರಾಜ್ಯ ಸರಕಾರಗಳೂ ಜಯಂತಿಗೆ ಮನ್ನಣೆಯನ್ನು ಕೊಟ್ಟಿದ್ದುವು.

ಮೈಸೂರ ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರ

No. F. Dis. G. L. 4250-48/49, D. 3rd Aug 1948 ರ ಪ್ರಕಾರ,

ಜಯಂತಿಯನ್ನು ರಾಜ್ಯದಲ್ಲಿಯ ಎಲ್ಲ ಹೈಸ್ಕೂಲ್, ಮಿಡಲ್ ಸ್ಕೂಲ್, ಟ್ರೇನಿಂಗ್ ಸ್ಕೂಲ್‌ಗಳಿಗೆ ತರಿಸಿಕೊಳ್ಳಬಹುದೆಂಬ ಮನ್ನಣೆಯ ಒಪ್ಪಿಗೆ ಬಂದಿದೆ.

ಎಲ್ಲ ಪಾಠಶಾಲೆಗಳ ಮುಖ್ಯಾಧ್ಯಾಪಕರೂ ಈ ಸಂಗತಿಯನ್ನು ಲಕ್ಷ್ಯದಲ್ಲಿ ಇರಿಸಿಕೊಂಡು, ತಮ್ಮ ತಮ್ಮ ಶಾಲೆಯ ವಾಚನಾಲಯಗಳಿಗೆ ಜಯಂತಿಯನ್ನು ತರಿಸಿಕೊಳ್ಳಬೇಕು.

ವಿದ್ಯಾರ್ಥಿಗಳಲ್ಲಿ ಸುಸಂಸ್ಕೃತಿಯನ್ನು ಬೆಳೆಸಿ, ಅವರನ್ನು ನಾಗರಿಕರನ್ನಾಗಿ ಮಾಡಬಲ್ಲ ಮಾಸಪತ್ರಿಕೆ—'ಜಯಂತಿ.'

ಪು ೨೩ | ಡಿಸೆಂಬರ್ ೧೯೬೦ | ಸಂಚಿಕೆ ೬

JAYANTI

ಈ ಸಂಚಿಕೆಯಲ್ಲಿ

ಹುಟ್ಟುತ್ತಿರುವ ಹೊಸ ಕವನಸಾಹಿತ್ಯ (ಸಂಪಾದಕೀಯ)

ಸಂಪಾದಕರು ೧೪೧

ಗಿರಿಕಾ (ಮಹಾಭಾರತದ ಕಥೆ)

ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ ೧೪೫

ಅರುವತ್ತರ ಆನಂದಕಂದರು (ಪ್ರತಿಪ್ರಬಂಧ)

ಶ್ರೀ. ಚಂದ್ರಶೇಖರ ಕಂಬಾರ ಬಿ. ಎ. (ಆನರ್ಸ್), ಧಾರವಾಡ ೧೯೧

ಸಾವ-ಸಿಲುಬೆ (ಕವನ)

ಶ್ರೀ. ಬಿ. ಆರ್. ನಾಹುಲಿ, ಬಿ. ಎಸ್ ಸಿ. ಪುಣೆ ೧೯೫

ಕೀಚಕನ ಕೊಂದವನು ಭೀಮನಲ್ಲ (ಕವನ)

ಶ್ರೀ. ಬಿ. ಬಿ. ಹಿಂಗಮಿರೆ ಬಿ. ಎ., ಅಥಣಿ ೧೯೬

ಸಾವೋ ? ಬದುಕೋ ? (ನವ್ಯಕಥೆ)

ಶ್ರೀ. ಆರ್. ಪಿ. ಕುಲಕರ್ಣಿ, ಎಂ. ಎ., ಬೆಳಗಾಂವಿ ೧೯೭

ಭಟ್ಟ ನಾರಾಯಣನ ವೇಣೀಸಂಹಾರ (ಸಂಸ್ಕೃತ ನಾಟಕದ ಪರಿಚಯ)

ಶ್ರೀ ರಂಗರಾವ ದೇಶಪಾಂಡೆ, ಆಲದಕಟ್ಟಿ ೨೦೧

ಕಿಡಿಗೇಡಿ ಮಕ್ಕಳನ್ನು ಹೇಗೆ ಹಾದಿಗೆ ತರಬೇಕು ? (ಒಂದು ವಿಚಾರ ವಿವೇಚನೆ)

ಶ್ರೀಮತಿ ಸೌ. ರಾಧಾಬಾಯಿ ಕಮಲಾಪುರ, ಧಾರವಾಡ.... ೨೦೬

ಪ್ರತಿಫಲ (ಪೌರಾಣಿಕ ರೂಪಕ) ೩ ನೆಯ ದೃಶ್ಯ

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೨೦೮

ಸಾಹಿತ್ಯ ನಿಮರ್ಶೆಯ ಶಿಕ್ಷಣರಂಗ

ಶ್ರೀ. ಕಳೆಯತ್ತೋಡಿ ನರಸಿಂಹಭಟ್ಟ, ಕಾಸರಗೋಡು ೨೧೫

ಶ್ರೀ. ಬಿ. ಆರ್. ನಾಹುಲಿ, ಪುಣೆ ೧೪೩

ಸಾದರಸ್ವೀಕಾರ (ಕವ್ವರ್ ೩ ನೆಯ ಪುಟದಲ್ಲಿ)

ಜಯಂತಿ

ಸಂಪುಟ ೩೩] [ಸಂಚಿಕೆ ೬

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು
ಕೊಡಬಯಸುವವರು ದರಗಳಿಗಾಗಿ
ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ
ಮಾರುವ ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಪುಟ್ಟುತ್ತಿರುವ ಹೊಸ ಕವನಸಾಹಿತ್ಯ

ಜಯಂತಿಯ ಸಂಪಾದಕರ ಕಡೆಗೆ ದಿನದಿನದ ಅಂಚೆಯಿಂದಲೂ ಹೊಸ ಹೊಸ ಕವಿಗಳ ಕವನಗಳು ತುಂಬ ಬರುತ್ತಿರುವುವು. ಕವನಗಳೊಂದಿಗೆ, ಜಯಂತಿಯಲ್ಲಿ ಪ್ರಕಟಿಸಬೇಕೆಂದು ವಿನ್ನವಿಸಿಕೊಂಡ ಪತ್ರಗಳೂ ಇರುವುವು. ಜಯಂತಿಯ ಕಾರ್ಯಾಲಯಕ್ಕೆ ಬರುವ ಲೇಖನಗಳಲ್ಲಿ ಗದ್ಯಕ್ಕಿಂತ ಪದ್ಯ (?) ಗಳೇ ಹೆಚ್ಚಾಗಿರುವುವು.

ತರುಣರು ಹೆಚ್ಚುಹೆಚ್ಚಾಗಿ ಕವನನಿರ್ಮಿತಿಯ ಕಡೆಗೆ ಮನಸ್ಸು ಕೊಡುತ್ತಿರುವುದು ಸಂತೋಷಪಡಬೇಕಾದ ಸಂಗತಿಯೇ ಸರಿ; ಆದರೆ ಬರೀ ಬರೆಯಬೇಕೆಂದು ಮನಸ್ಸಾಗಿ ಕವನ ಬರೆಯಲು ತೊಡಗಿದರೆ, ಅವು ಕವನಗಳೆನಿಸಿಕೊಳ್ಳಲಾರವು. ಕವಿಯಾಗಬೇಕಾದವನಿಗೆ ವಿಶಿಷ್ಟ ಅಭ್ಯಾಸ, ಲೋಕನಿರೀಕ್ಷಣೆ, ಸಂವೇದನೆಗೊಳ್ಳುವ ಹೃದಯ, ವಿಷಯವಿಶ್ಲೇಷಕ ಬುದ್ಧಿ, ತ್ರಿಕಾಲವಿವೇಕಿಯಾದ ಮನಸ್ಸು — ಇವೆಲ್ಲ ಬೇಕಾಗುವುವು.

ಹಿಂದಿನ ಕಾಲದ ಕವಿಗಳು ಸಾಂಪ್ರದಾಯಿಕ ಕಾವ್ಯಲಕ್ಷಣ ಶಾಸ್ತ್ರಗಳನ್ನು ಅಭ್ಯಾಸ ಮಾಡಿ ಅರಿತುಕೊಂಡಿರುತ್ತಿದ್ದರು. ಎಂತಲೇ ಅವರ ಕವನಗಳು ವಿಷಯಚಮರ್ತ್ಕೃತಿ, ಕಲ್ಪಕತೆ ಇವುಗಳ ದೃಷ್ಟಿಯಿಂದ ಸಾಮಾನ್ಯವೆನಿಸಿದರೂ, ಅವು ಪರಿಶುದ್ಧ ಭಾಷೆಯಲ್ಲಿರುತ್ತಿದ್ದುವು; ಯಾವುದಾದರೊಂದು ಛಂದೋಲಯವನ್ನು ಅನುಸರಿಸಿರುತ್ತಿದ್ದುವು. ಆದುದರಿಂದಲೇ ಅವು ಕವಿತೆಗಳೆಂದು ಕರೆಯಿಸಿಕೊಳ್ಳುತ್ತಿದ್ದುವು. ವಸ್ತುವೈಶಿಷ್ಟ್ಯ, ಕಲ್ಪಕತೆ, ನವವಿಚಾರಗಳಿಂದ ಅವುಗಳನ್ನು ಅಳೆಯುತ್ತಿರಲಿಲ್ಲ; ಅಳೆಯುವವರೂ ಇರಲಿಲ್ಲ.

ಭಾರತದಲ್ಲಿಯ ಪ್ರತಿಯೊಂದು ಲಲಿತಕಲೆಗಳೂ ಇಂದು ನವೀನ ಸೌಂದರ್ಯಾಪೇಕ್ಷಿಗಳಾಗಿವೆ; ಎಂತಲೇ ನವೀನ ಸ್ವರೂಪದುವುಗಳಾಗಿವೆ. ಕಾವ್ಯವೂ ಒಂದು ಪ್ರಾಮುಖ್ಯವಾದ ಲಲಿತಕಲೆ. ಇದರ ಸೌಂದರ್ಯಸ್ವರೂಪವು ಇಂದು ತೀರ ಬದಲಾಗಿದೆ. ಇದಕ್ಕೆ ಕಾರಣ ಪಾಶ್ಚಾತ್ಯರೊಂದಿಗೆ ಬಂದ ನಮ್ಮ ಘನಿಷ್ಠವಾದ ಸಾಂಸ್ಕೃತಿಕ ಸಂಬಂಧ. ನಮ್ಮ ಸಾಂಪ್ರದಾಯಿಕ ಕಾವ್ಯಕಲೆ, ಲೋಕದ ಸಾಮಾನ್ಯ ಜನಜೀವನದ ಕಡೆಗೆ ಹೆಚ್ಚಾಗಿ ಲಕ್ಷ್ಯ ಕೊಡುತ್ತಿರಲಿಲ್ಲ. ಇಂದಿನ ನಮ್ಮ ಕಾವ್ಯಕಲೆ ಸಾಮಾನ್ಯರ ಜೀವನವನ್ನೆ ಲಕ್ಷ್ಯದಲ್ಲಿರಿಸಿಕೊಂಡು ಹೊರಟಿರುವುದು. ಹಿಂದಿನ ಕವಿಗಳಿಗೆ ದೈವಭಕ್ತಿ-ತತ್ತ್ವಜ್ಞಾನ-ಸಾಮಾನ್ಯನೀತಿಗಳು ಬಂಡವಾಳವಾಗಿರುತ್ತಿದ್ದುವು. ಇಂದಿನ ಕವಿಗಳಿಗೆ ವ್ಯಕ್ತಿ-ಸಮಾಜಗಳ ಜೀವನದ ವಿವಿಧತೆಗಳು ಬಂಡವಾಳವಾಗಿರುವುವು. ಇಂದಿನ ಸಾಮಾಜಿಕ ವೈಷಮ್ಯ, ಅರ್ಥನೀತಿ, ರಾಜಕೀಯ ಅಶಾಂತಿ, ನೈತಿಕಜೀವನಚ್ಯುತಿ—ಮೊದಲಾದುವಂತೂ ನಮ್ಮ ನವಕವಿಗಳನ್ನು ನೆಲದ ಮೇಲೆಯೇ ಓಡಾಡಿಸುತ್ತಿವೆ; ನಿರಾಶೆಯ ಫೂತ್ಕಾರಗಳನ್ನು ಹೊರಗೆ ಹಾಕುತ್ತಲಿವೆ.

ಕಾಲಧರ್ಮ! ಹೊಸ ಕವಿತೆ ಈ ರೂಪತಳೆದು, ಪರಿಣಾಮಕಾರಿಯಾಗಿ ಕಾರ್ಯಮಾಡತೊಡಗಿದರೆ ಅದು ಇಷ್ಟವಾದುದೆ! ಆದರೆ ಇಂತಹ ಕವನಗಳನ್ನು ಬರೆಯಲಿಕ್ಕೂ ಕವಿಗಳು ಒಂದು ವಿಶಿಷ್ಟವಾದ ಸತ್ಯದೃಷ್ಟಿಯನ್ನು ಪಡೆದಿರಬೇಕಾಗುತ್ತದೆ. ಇದಕ್ಕೆ ಜನಜೀವನದ ಸೂಕ್ಷ್ಮವಾದ ನಿರೀಕ್ಷಣೆ ಬೇಕಾಗುವುದು; ವ್ಯಕ್ತಿಗಳ ಮನೋಧರ್ಮ, ಸ್ವಭಾವ, ಪರಿಸ್ಥಿತಿಯ ಮೂಲಕ ವ್ಯಕ್ತಿ ವ್ಯಕ್ತಿಗಳಲ್ಲಿ ತಲೆದೋರುವ ಆಶೆ-ಆಕಾಂಕ್ಷೆ, ಅವುಗಳ ಬೆಳೆವಣಿಗೆಯ ರೀತಿ, ಅವುಗಳ ಪರಿಣಾಮ ಇವೆಲ್ಲವುಗಳ ನಿಚ್ಚಳವಾದ ತಿಳಿವಳಿಕೆ—ಇವೆಲ್ಲ ಬೇಕಾಗುವುವು. ಇವಕ್ಕಾಗಿ ಕವಿ ಭೂತಕಾಲದ ಚರಿತ್ರೆಯನ್ನು ಅಭ್ಯಾಸ ಮಾಡಿಕೊಳ್ಳಬೇಕು, ವರ್ತಮಾನಜೀವನವನ್ನು ವಿಶ್ಲೇಷಣ ಮಾಡಿ ನೋಡುವ ಚತುರನಾಗಬೇಕು. ಭವಿಷ್ಯ ಶುಭವಾಗಿ ಪರಿಣಮಿಸುವುದಕ್ಕೆ ಯಾವ ದಾರಿಯಿಂದ ನಡೆಯಬೇಕೆಂಬುದನ್ನು ಅರಿತ ದೈವಜ್ಞನಾಗಿರಬೇಕು. ಇವಾವುವೂ ಇಲ್ಲದೆ, ಹೊಸ ಕವಿತೆಳಗ ಬರೆಯಬೇಕೆಂಬ ಬರುಹೆಂಬಲದಿಂದ ಹೊರಟ ಕವಿಗಳ ಕೃತಿಗಳು ಅನುಕರಣಗಳಾಗುವುವು; ಇಲ್ಲವೆ ನೀರಸ ಪದಮಾಲೆಗಳಾಗುವುವು.

ಇಂದಿನ ನಮ್ಮ ಕವಿಗಳಿಗೆ ಸತ್ಯವ ವಾಸ್ತವ ಸ್ವರೂಪವನ್ನು ಇದ್ದುದಿದ್ದಂತೆ ಕಾಣುವ ಬೌದ್ಧಿಕ ಅಂತರ್ದೃಷ್ಟಿ ಬೇಕು; ಕಂಡ ವಾಸ್ತವನನ್ನು ಬಣ್ಣಬಣ್ಣಗಳಿಂದ ಹೊರಹಾಕುವ ಲೋಲಕದಂತಹ ಪ್ರತಿಭಾಶಕ್ತಿಯೂ ಬೇಕು. ಬಣ್ಣಬಣ್ಣಗಳಿಂದ ಕೂಡಿರದ ವಾಸ್ತವ ಸತ್ಯ ಕವನವೆನಿಸಿಕೊಳ್ಳದು, ಸತ್ಯವ ಆಧಾರ ಆಶ್ರಯಗಳಲ್ಲದ ಬಣ್ಣ-ಬಣ್ಣಗಳ ಲೋಲಕಕ್ರಿಯೆಯೂ ಕವಿತೆಯೆನಿಸಿಕೊಳ್ಳದು. ಇವೆರಡೂ ಇರದ ಮಾತಿನ ಮಾಲೆಗಳಂತೂ ನಿರರ್ಥಕವೆನಿಸುವುವು.

ಜಯಂತಿಯ ಕಾರ್ಯಾಲಯಕ್ಕೆ ಬರುವ ಮುಕ್ಕಾಲುಮೂರು-ವೀಸಪಾಲು ಕವನಗಳು ಇಂತಹ ಉಸುರಿನ ವ್ಯರ್ಥವ್ಯಯವಾಗಿರುವುವು. ಅನೇಕ ಕವಿಗಳು ತಮ್ಮ ಕೃತಿಗಳನ್ನು ಪದ್ಯಗಳಾಗಿ ಕಾಣುವಂತೆ ಬರೆದಿರುವರು; ಆದರೆ ಆ ಪದ್ಯಗಳು ಯಾವ ಛಂದೋಲಯವ ಸಂಬಂಧವನ್ನೂ ಪಡೆದಿರುವುದಿಲ್ಲ. ಕೆಲವರು ಪ್ರಾಸಗಳನ್ನು ಸಾಧಿಸಿರುವೆನೆಂಬ ಭ್ರಮೆಯಲ್ಲಿರುವರು; ಆದರೆ ಅವರ ಪ್ರಾಸಸಾಧನೆ ಅವರ ಪದ್ಯಗಳಿಗೆ ಯಾವ ಶಬ್ದಾಲಂಕಾರವನ್ನು ತೊಡಿಸಲೂ ಸಮರ್ಥವಾಗಿರುವುದಿಲ್ಲ. ಅನೇಕರು 'ಭಾವಗೀತ' ಎಂಬ ಹೆಸರಿನಿಂದ ಕವನಗಳನ್ನು ಕಳುಹುವರು; ಆದರೆ ಆ 'ಭಾವಗೀತ'ಗಳಲ್ಲಿ ಭಾವವ ಅಭಾವವಿರುವುದು; ಸಂಗೀತದ ಮುಖಪರಿಚಯವಿಲ್ಲದೆ ರಚಿಸಿದುದರಿಂದ ಗೇಯಗುಣವು ಮಾಯವಾಗಿರುವುದು. ಆದುದರಿಂದಲೇ ಇಂತಹ ಹೊಸಕವಿಗಳಿಗೆ ನಮ್ಮ ಬಿನ್ನಹ: ತಮ್ಮ ಕವಿತೆಗಳನ್ನು ಪದ್ಯದಲ್ಲಿ ಬರೆಯಬೇಕೆಂದು ಆಶೆಯಿದ್ದರೆ, ಛಂದಶ್ಶಾಸ್ತ್ರದ ಪರಿಚಯವನ್ನು ಸ್ವಲ್ಪವಾದರೂ ಮಾಡಿಕೊಳ್ಳಿರಿ. ಗುರು-ಲಘುವಿಚಾರ, ಗಣನಿಯಮ ಮಾತ್ರಾಗಣಗಳಿಂದ ಹೊಸಬನೆಯ ವೃತ್ತಗಳನ್ನು ರಚಿಸುವ ಬಗೆ, ಅಂಶಗಣ ಅಥವಾ ಗೇಯಗಣಗಳ ಗುಟ್ಟು—ಇವುಗಳನ್ನು ಅರಿತುಕೊಂಡು, ನಮ್ಮ ಹೊಸಕವಿಗಳು ಪದ್ಯರಚನೆಗೆ ತೊಡಗಿದರೆ ಹೆಚ್ಚು ಪ್ರಯೋಜನವಾದೀತು.

ನವ್ಯಕವಿಗಳ ನವ್ಯಕವನಗಳ ಅನಿರ್ಬಂಧ ಲಯಗತಿಗಳ ರೀತಿ, ನಮ್ಮ ಅನೇಕ ಹೊಸಕವಿಗಳಿಗೆ ಆದರ್ಶವಾಗಿ ನಿಂತಿದೆ. ತಮಗೆ ತೋರಿದ ಅಭಾಸಪೂರ್ಣ ನೀರಸ ವಿಚಾರಗಳನ್ನು ತಮಗೆ ಗೊತ್ತಿರುವ ಪರಿಮಿತ ಶಬ್ದಗಳಲ್ಲಿ, ನೃತ್ಯ-ಲಯಗಳ ಜ್ಞಾನವಿಲ್ಲದೆ, ಮನಸ್ಸಿಗೆ ಬಂದ ರೀತಿಯಲ್ಲಿ ಸಾಲುಸಾಲಾಗಿ ಬರೆದು, ನವ್ಯಕವಿತೆಯೆಂದು ಹೆಸರಿಟ್ಟು ಕಳುಹುವ ಕವಿಗಳೂ ಈಗ ಅನೇಕರು. ನವ್ಯಕವಿತೆಗೆ ಅಗತ್ಯವಾದ ಗಂಭೀರವಿಚಾರಗಳಿರುವುದಿಲ್ಲ; ಸ್ಫುರಿಸುವುದೆಂದರೆ ಏನೆಂಬುದನ್ನೂ ಇವರು ಅರಿತಿರುವುದಿಲ್ಲ. ಗಂಭೀರ ವಿಚಾರಗಳಿಲ್ಲದ ಕವಿತೆಯ ಭಾಷಾ ಶೈಲಿಯು ಗಾಂಭೀರ್ಯವನ್ನು ಜೀಗೆ ಪಡೆದೀತು? ಕೇವಲ ತಮಗೆ ಛಂದಸ್ಸಿನಲ್ಲಿ ಪದಗಳನ್ನು ಕೂಡಿಸಲು ಬಾರದುದರಿಂದ ಇವರು, 'ನವ್ಯ ಕವನ'ಗಳನ್ನು ಬರೆಯುವವರಾಗಿರುವರು. ಇವುಗಳನ್ನು ಏಕೆ ಪ್ರಕಟಿಸಬೇಕು? ಯಾವ ಬಗೆಯ ಪ್ರಗತಿಯನ್ನೂ ಇವುಗಳ ಪ್ರಕಟನೆಯಿಂದ ನಾವು ನಿರೀಕ್ಷಿಸುವಂತಿಲ್ಲ.

ಇನ್ನು ಈ ಹೊಸ ಕವನಗಳ ಭಾಷೆ: ನಮ್ಮ ತರುಣ ಕವಿಗಳಿಗೆ ಸುವ್ಯವಸ್ಥಿತವಾದ ಭಾಷಾಜ್ಞಾನವೇ ಇರುವುದಿಲ್ಲ. ಕವನೋಚಿತ ಪದ ಸಂಗ್ರಹ ಇವರಿಗಿರುವುದಿಲ್ಲ; ಕವನರಚನೆಗೆ ಶಬ್ದಸಂಗ್ರಹ ಅತ್ಯಗತ್ಯವೆಂಬ ವಿಷಯವನ್ನು ಇವರು ಅರಿತಂತೇ ಕಾಣುವುದಿಲ್ಲ. ವ್ಯವಹಾರ ಭಾಷೆಯಲ್ಲಿ ಬರುವ ಪದಗಳಷ್ಟು ಇವರಿಗೆ ಗೊತ್ತು. ಪಾಠಶಾಲೆಯಲ್ಲಿ ಅನಿವಾರ್ಯವಾಗಿ ಓದಿದ ಕವನಭಾಗಗಳಲ್ಲಿ ಬಳಸಿದ ಶಬ್ದಗಳ ಕಿವಿಚುಟಿಕೆಯ ಪರಿಣಾಮವನ್ನೂ ಇವರ ಕೃತಿಗಳಲ್ಲಿ ನಾವು ಕಾಣುವೆವು. ಆ ಕವನಭಾಗಗಳಲ್ಲಿಯ ಶಬ್ದಗಳನ್ನೇನೋ ಇವರು ಬಳಸಿಕೊಂಡಿರುತ್ತಾರೆ; ಆದರೆ ಆ ಶಬ್ದಗಳ ಉಚಿತಾರ್ಥಜ್ಞಾನವನ್ನು ಮಾಡಿಕೊಂಡವರು ಇವರಲ್ಲಿ ನೂರಕ್ಕೆ ಒಬ್ಬರೋ ಇಬ್ಬರೋ! ಕೃತಿಯ ಭಾಷೆಯಲ್ಲಿ ಉಸಿರನ್ನು ತುಂಬುವ— ಅಂದದ ತೊಡಿಗೆಗಳನ್ನು ತೊಡಿಸುವ ಸುಡಿಯದೇ ಪಡೆನುಡಿ ಇವುಗಳ ಅಭಾವ ಎಲ್ಲರ ಕೃತಿಗಳಲ್ಲಿಯೂ ಕಾಣುವುದು.

ಹೊಸ ಕವನಗಳಲ್ಲಿ ಕಂಡುಬರುವ ಇನ್ನೂ ಒಂದು ಮಹಾ ದೋಷವೆಂದರೆ, ವಿದೇಶೀಯ ವಿಚಾರಗಳನ್ನು—ತಾವು ಸರಿಯಾಗಿ ತಿಳಿದುಕೊಂಡಿರದಿದ್ದರೂ—ಅವುಗಳನ್ನು ಅಸಮರ್ಥವಾದ ಶಬ್ದ-ಶೈಲಿಗಳಲ್ಲಿ ಮೂಡಿಸಲು ಹಪಹಪಿಸುತ್ತಿರುವುದು. ಯಾವ ಭಾಷೆಯು ಮೇಲೂ ಪ್ರಭುತ್ವವಿಲ್ಲದ ಇಂತಹ ಕವಿಗಳ ಕವನಗಳು, ಬರೆದವರಿಗೇ ತಿಳಿಯುವಂತಿರುವುದಿಲ್ಲ; ಪಾಚಕರು ಈ ಅಸ್ಪಷ್ಟ ಬುಡುಬುಡಿಕೆಗಳಿಂದ ಅರ್ಥ ಗ್ರಹಿಸಿಕೊಂಡು ಕಾವ್ಯಾನಂದ ಪಡೆಯುವುದು ಹೇಗೆ ಸಾಧ್ಯವಾದೀತು?

ಭಾಷೆಯ ಜ್ಞಾನವಿಲ್ಲದ ನಮ್ಮ ಹೊಸಕವಿಗಳ ಕವನದ ಭಾಷೆ, ಪದಪ್ರಯೋಗದ ವಿಷಮತೆಯ ಮೂಲಕ ಕೃತ್ರಿಮ ಸ್ವರೂಪದ್ದಾಗಿ ಕಾಣುವುದು. ಇವರ ಕವನಗಳಲ್ಲಿ ಸಂಪ-ರನ್ನವ ಕಾಲದ ಹಳಗನ್ನಡ ಪದಗಳೂ ಕಾಣುವುವು. ಸುಧ್ಯಕಾಲದ ಕವಿಗಳ ನಡುಗನ್ನಡದ ಪದಗಳೂ ಕಾಣುವುವು. ನಾಗರಿಕ—ಜಾನಪದಗಳೆಂಬ ಪರವೆಯಿಲ್ಲದೆ ಇಂದಿನ ಬಳಕೆಗನ್ನಡ ಪದಗಳ ಬಳಕೆಯೂ ಕಾಣುವುದು. ಶಬ್ದಗಳೆ ಮೂಲಸ್ವರೂಪ, ಅವುಗಳ ಶುದ್ಧರೀತಿಯ ಪ್ರಯೋಗ ಇವುಗಳನ್ನು ಸರಿಯಾಗಿ ಕಂಡುಕೊಂಡ ಕವಿಗಳು ಇಂದಿನ ಕಾಲದಲ್ಲಿ ಮಳೆಗಾಲದ ಮಾವಿನಂತೆ; ಚಳಿಗಾಲದ ತಾವರೆಯಂತೆ. ಕೃತಿಯಲ್ಲಿಯ ವಸ್ತು, ವ್ಯಕ್ತಿ, ವಾತಾವರಣಗಳ ಔಚಿತ್ಯವನ್ನರಿತು ಭಾಷೆಯನ್ನು ಬಳಸುವುದು ನಮ್ಮ ಹೊಸ ಕವಿಗಳಿಗೆ ಗೊತ್ತೇ ಇಲ್ಲ.

ದಿನದಿನಕ್ಕೆ ನಮ್ಮಲ್ಲಿ ಸಾಕ್ಷರತೆ ಬೆಳೆಯುತ್ತಿದೆ; ಆದರೆ ಕಲಾ-ಸಿರ್ಮಾಣಯೋಗ್ಯ ಸಂಸ್ಕೃತಿ ಬೆಳೆಯುತ್ತಿಲ್ಲ ಆದರೆ ಸಾಕ್ಷರರೆಲ್ಲರೂ ಕೀರ್ತಿಕಾಮನೆಯಿಂದ ಇಂದು ಕವನಸಿರ್ಮಿತಿಗೆ ತೊಡಗಿದ್ದಾರೆ. ಇಂತಹ ಕವನಸಾಹಿತ್ಯ ಎಷ್ಟು ಸಿರ್ಮಾಣವಾದರೂ ನಮ್ಮ ಜೀವನಕ್ಕೆ ಅವುಗಳಿಂದ ಪ್ರಯೋಜನವಿಲ್ಲ; ಸಾಹಿತ್ಯಪ್ರಗತಿಗವು ಸಾಧನವಾಗುವಂತಿಲ್ಲ. ಸಮಾಜದ ಹೃದಯಸಂತೃಪ್ತಿಗೂ ಉಪಯುಕ್ತವೆನಿಸುವಂತಿಲ್ಲ.

ನಮ್ಮ ಈ ಎಚ್ಚರಿಕೆಯ ನುಡಿ, ಹೊಸಕವಿಗಳ ಸಹಾನುಭೂತಿಗೆ ಪಾತ್ರವಾಗಿ, ಅವರು ಇವುಗಳಿಂದ ಪ್ರಯೋಜ ಪಡೆದೆ ನಮಗೆ ತುಂಬ ಸಂತೋಷ. ನಮಸ್ತೇ!

— ಸಂಪಾದಕರು

[೨೧೬ ನೆಯ ಪುಟದಿಂದ ಬಂದುದು].

ಪ್ರತೀಕ್ಷೆ

(ಅನುವಾದಿತ ನವ್ಯಕತೆಯ ವಿಮರ್ಶೆ)

ಶ್ರೀ. ಬಿ. ಆರ್. ಮಾಹುಲಿ ಬಿ. ಎಸ್ಸಿ. (ಆನರ್ಸ್) **ಪುಣೆ**

ಶ್ರೀ ಪೋತಿನಂದಿಯವರ 'ನಾಡೂ' ಕತೆಯ ನೆನಪು ಇನ್ನೂ ಅಳಿಸುವುದಕ್ಕಿಂತ ಮುಂಚೆಯೇ ಶ್ರೀ ರಾಘವೇಂದ್ರ ಖಾಸನೀಸರು ಈ ಎರಡನೆಯ ಅನುವಾದವನ್ನು ನಮಗಿತ್ತಿದ್ದಾರೆ. ಫೇಬ್ರುವರಿ ತಿಂಗಳ 'ಜಯಂತಿ'ಯಲ್ಲಿ ಅಚ್ಚಾದ "ನಾಡೂ" ಅವರ ನವ್ಯತೆಯಿಂದ ಖಂಡಿತವಾಗಿಯೂ ಬಹುಜನರ ಮನಸ್ಸನ್ನೆಳೆಯಿತು. ಆ ನವ್ಯತೆಯ ದಾರಿ ಹಿಡಿದು ಸಾಗಿದ ಇನ್ನೊಂದು ಕತೆ ಈ "ಪ್ರತೀಕ್ಷೆ".

ತೀರ ವಿರಳವಾದ ಕಥಾವಸ್ತುಗಳನ್ನೊಳಗೊಂಡ ಈ "ಪ್ರತೀಕ್ಷೆ" ಯನ್ನು ನಾವು ಮೊದಲು ಓದುವಾಗ 'ಇದೂ ಒಂದು ಕತೆಯೆ?' ಎಂದು ನಮಗೆ ಭಾಸವಾಗುತ್ತದೆ. ಯಾಕೆಂದರೆ ಸಾಂಪ್ರದಾಯಿಕವಾಗಿ ಇರಬೇಕಾದ "ಕಥಾವಸ್ತು" ಇದಕ್ಕಿಲ್ಲ; ಇದನ್ನು ಬರೀ "ಮನೋವಿಶ್ಲೇಷಣಾತ್ಮಕ ಕತೆ" ಎಂದೂ ಕರೆಯುವಂತಿಲ್ಲ. ಯಾಕೆಂದರೆ, ಮನಸ್ಸನ್ನು ವಿಶ್ಲೇಷಿಸಿ ತೋರಿಸಬೇಕಾದಂತಹ ಭಾವನೋತ್ಕಟತೆ ಇಲ್ಲಿಯ ಈ ಪಾತ್ರಗಳಲ್ಲಿಲ್ಲ. ತೀರ ಸಾಮಾನ್ಯವಾದ ಎರಡು ಪಾತ್ರಗಳು ಅತಿ ಸಾಮಾನ್ಯವಾದ ಹಿನ್ನೆಲೆಯಲ್ಲಿ ನಮ್ಮಿದಿರು ನಿಲ್ಲುತ್ತವೆ. ಅವರ ಮಾತು, ಅವರ ಚಲನವಲನ, ಅವರ ನಿರೀಕ್ಷಣೆ--ಇವೇ ಕತೆಯ ಹಾಸುಹೊಕ್ಕಾಗಿ ನಿಂತಿವೆ. ಒಟ್ಟನಲ್ಲಿ ಈ ಕತೆ ಎರಡು ಪಾತ್ರಗಳ "ಲಹರಿ"ಯ ಕತೆಯಾಗಿದೆ. (story of moods) ಒಂದೇ ಲಹರಿ, ಒಂದೇ ವಾತಾವರಣ. ಅಂತಹವರಲ್ಲಿಯೂ ಒಂದೇ ದೇಟಿನ ಎರಡು ಹೂಗಳು ಹೇಗೆ ಭಿನ್ನವಾಗಿ ರೂಪತಾಳಿವೆ ಎಂಬುವನ್ನು ತೋರಿಸುವುವೆ ಈ ಕತೆಯ ರಸವಂತಿಕೆ.

ಮನೆಬಿಟ್ಟು ಓಡಿಹೋಗಲೆಂದು ಬಂದ ಅಕ್ಕ-ತಂಗಿಯರಿಬ್ಬರು ಹೌರಾ ಸ್ಟೇಶನ್ನಿಗೆ ಬರುತ್ತಾರೆ. - ತೀರ ನಿಸ್ಸಿಪ್ತವಾದ ಜಗತ್ತೊಂದು ಅವರಿಗಾಗಿ ಆ ಸ್ಟೇಶನ್ನಿನಲ್ಲಿ ಕಾಯ್ದಿದೆ. ಮನುಷ್ಯರು, ಬೆಳಕು, ಸಪ್ಪಳ, ನಾಸನೆ—ಆ ನಿಸ್ಸಿಪ್ತಜಗತ್ತಿನ ಅಂಗಗಳಾಗಿ ಅವರಿಗೆ ಕಾಣುತ್ತವೆ. ಸುಖ-ದುಃಖ, ಆಶೆ-ನಿರಾಶೆ, ಬೆಳಕು-ಕತ್ತಲೆ, ಇನ್ನೆಲ್ಲದರ ಬಿರುಗಾಳಿಯಲ್ಲಿ ಹೊಯ್ದಾಡುತ್ತಿರುವ ಜೀವಗಳೆರಡು.ದಡವನ್ನು ಹೇಗೆ ಕಾಣಬೇಕು--ಎಂದು ಹೌಹಾರಿ ಕುಳಿತಿರುವಾಗ, ಕತೆ ಮುಗಿಯುತ್ತದೆ. ಓಡಿ ಹೋಗಬೇಕೆಂದು ಮನಸ್ಸು ಗಟ್ಟಿಮಾಡಿಕೊಂಡು ಬಂದ ಅವರು ಎಲ್ಲಿ ಓಡಿಹೋಗಬೇಕೆಂಬುವನ್ನು ನಿರ್ಧರಿಸಲಿಕ್ಕಾಗದೆ ಹತಾಶರಾಗಿ ಕೈಯೊಗೆದು ಕೂಡುವವೇ ಕತೆಯ ಕೊನೆಯಾಗಿ ಪರಿಣಮಿಸುತ್ತದೆ.

ಅಕ್ಕ-ತಂಗಿ ಇವೆರಡೇ ಕತೆಯ ಪ್ರಮುಖ ಪಾತ್ರಗಳು. ತೀರ ಭಿನ್ನ ದಿಕೆಯಲ್ಲಿ ಬೆಳೆದ ಅವರ ವ್ಯಕ್ತಿತ್ವವು ಒಂದು ಜೀವನದ ಎರಡು ಮುಖಗಳಾಗಿ ರೂಪುಗೊಂಡಿದೆ. ಭಗ್ನಪ್ರಣಯಿನಿ ಅಕ್ಕ ಬಾಳಿನ ನಿರಾಶಾವಾದದ ಪ್ರತೀಕವಾದರೆ, ಜೀವನದ ವಿವಿಧ ಬಣ್ಣಗಳನ್ನು ಕಣ್ಣು ಕುಕ್ಕಿ ಕಣ್ಣು ತಿಕ್ಕುವ ತಂಗಿಯು, ಬಾಳಿನ "ರೋಮಾಂಚಕತೆ" (Romantic) ಯ ಸಂಕೇತವಾಗಿದ್ದಾಳೆ. ಒಬ್ಬಳಿಗೆ ಜನಜಂಗುಳಿ ನಿಸ್ತೇಜವಾಗಿ ತುಕ್ಕುಹಿಡಿದ ಟ್ರಂಕಿನಂತೆ ಕಾಣಿಸಿದರೆ, ಇನ್ನೊಬ್ಬಳಿಗೆ ಆ ಜಗತ್ತು ನಗುನಗುತ್ತ ಯಾವುದೋ ಅಲ್ಲಾವುದ್ದೀನನ ಅದ್ಭುತ ಪ್ರಪಂಚದ ಕಡೆಗೆ ಧಾವಿಸುವಂತೆ ಕಾಣುತ್ತದೆ. ಇಲ್ಲಿ ಇಬ್ಬರೂ "ಕಳೆದುಕೊಂಡು" ಹೋಗಲು ಬಂದಿದ್ದಾರೆ; ನಿಜ. ಆದರೆ ಅಕ್ಕ ಬಂದದ್ದು "ಜೀವನ"ದಿಂದ ಪರಾಜ್ಮುಖವಾಗಲು, ತನ್ನ ಬದುಕಿನ ದುಃಖದಿಂದ ದೂರ ಹೋಗುವುದೇ ಅವಳ ಧ್ಯೇಯ. ಆದರೆ ತಂಗಿಯ ಹವ್ಯಾಸ "ಜೀವನ"ದಿಂದ ಪರಾಜ್ಮುಖತೆಯಲ್ಲ; ಈ ನೀರಸವಾದ ಬಾಳಿನಿಂದ ಇನ್ನೊಂದು ರೋಮಾಂಚಕಾರಿಯಾದ ಪ್ರಪಂಚಕ್ಕೆ ಹೋಗುವ ತವಕ ಅವಳಿಗೆ, ಅಕ್ಕನಿಗೆ ಈ "ಚಿಕ್ಕ ಪ್ರಪಂಚ"ದಲ್ಲಿ ಬರೀ ದುಃಖವೇ ಕಣ್ಣಿಗೆ ಬಿದ್ದಿದೆ; ದುಃಖವೇ ನೆನಪಾಗಿದೆ. ಗಾಡಿಯ ಕೆಳಗೆ ಸಿಕ್ಕು ಸತ್ತು ಹೋದವರ ಫೋಟೋಗಳು; ಲಗ್ನ ಮಾಡಲಿಕ್ಕಾಗದೆ, ನೌಕರಿಯೂ ಸಿಕ್ಕದೆ ತಲೆ ಹಿಡಿದು ಕುಳಿತ ದಾದಾ, ಸ್ಮಶಾನಕ್ಕೆ ಸಾಗಿಸಲ್ಪಟ್ಟ ತಂದೆ ...ಇವೇ ಅವಳು ಇದುವರೆಗೆ ನಡೆದು ಬಂದ ದುಃಖದ ದಾರಿಯಲ್ಲಿಯ ಮೈಲುಗಲ್ಲುಗಳು. ಆದರೆ ತಂಗಿಯ ಪ್ರಪಂಚ ಇದಲ್ಲ. ಸ್ಟೇಶನ್ನಿನ ನಿಯಾನ್ ದೀಪಗಳ ಬೆಳಕಿನಲ್ಲಿ ರುಗ ರುಗಿಸುವ ನೂರಾರು ಬಣ್ಣಗಳಾಗಿ ಕಂಗೊಳಿಸುವ, ಚಾಕಲೇಟ್ ವಾಸನೆಯಿಂದ ಘಮಘಮಿಸುತ್ತಿರುವ ಅವಳ ಜಗತ್ತು ಅಲ್ಲಾವುದ್ದೀನನ ಪ್ರಪಂಚದಂತೆ ಅದ್ಭುತರಮ್ಯವಾಗಿದೆ. ಮುಂದೆ ಅವಳು ಸೇರಬೇಕೆನ್ನುವ "ಸಿನೇಮಾ ಪ್ರಪಂಚ" ಕೂಡ ಅವಳ ದೃಷ್ಟಿಯಲ್ಲಿ — ಈ ಅದ್ಭುತರಮ್ಯತೆಯ ಅಂತಿಮಗುರಿಯಾಗಿದೆ. ಅಂತೆಯೇ ಪುನಃ ಪುನಃ ಮನೆಬಿಟ್ಟು ಓಡಿ ಹೋಗುತ್ತಾಳೆ. "ಕಳೆದುಕೊಂಡು" ಹೋದಾಗ ಅವಳಿಗೆ "ಮಜಾ" ಎನಿಸುತ್ತದೆ. ಇಳಿಹೊತ್ತಿನಲ್ಲಿ ಗಂಗೆಯ ಘಟ್ಟದಲ್ಲಿ ಕಂಡ ದೋಣಿಗಳು, ತಂದೆಯೊಡನೆ ಹೋಗಿದ್ದ ನೋಟಾರ್‌ಬೋಟು, ರಂಜು ಊದಿದಂತೆ ಹೊಡೆದ ಸಿಳ್ಳು—ಇಂಥ ಸವಿನೆನಪುಗಳನ್ನುಂಡೇ ಈ "ಭಾವಜೀವಿ" ಬೆಳೆದು ಬಂದಿದ್ದಾಳೆ. ಪ್ರವಾಸದಲ್ಲಿ ರೋಮಾಂಚಕತೆಯಿದೆ. ಬಾಲ್ಯದ ಸ್ವಪ್ನಸುಂದರವಾದ ಸುಖಕ್ಕಾಗಿ ಹಾತೊರೆಯುವ ಅವಳು ಅದನ್ನು ಪಡೆಯಲೆಂದು 'ಸಿನೇಮಾ ಕಂಪನಿಗೆ' ಸೇರುವವಳಿದ್ದಾಳೆ. ಬಾಲ್ಯದ ಸವಿನೆನಪು ಚಲನಚಿತ್ರದಷ್ಟೇ ಮಧುರವಾಗಿದೆ. 'ದಿಲ್ಲೀ ದೇಖೋ! ಆಗ್ರಾ ದೇಖೋ!' ಎಂದು ಗರ್ ಗರ್ ಹ್ಯಾಂಡಲ್ ತಿರುಗಿಸುವ ಆ ವ್ಯಕ್ತಿ ಅವಳಿಗೆ ಬಾಲ್ಯದಲ್ಲಿ ಆ ಸುಂದರ ಪ್ರಪಂಚದ ದರ್ಶನ ಮಾಡಿಸಿದ್ದಾನೆ. ತಾಜಮಹಲ್, ಕುತುಬ್‌ಮಿನಾರ್, ಹವಾಯಿ ಜಹಾಜ್—ಬಾಲ್ಯದ ಆ ಅನಿರ್ವಚನೀಯ ಸೌಂದರ್ಯವನ್ನು ದೊಡ್ಡವಳಾದಾಗ ಅನುಭವಿಸಬೇಕಾದರೆ ಪ್ರವಾಸ ಮಾಡಬೇಕು. ಕೊನಾರ್ಕ್, ಬನಾರಸ,

ಮುಂಬೈ— ದೇಶವನ್ನೆಲ್ಲ ಸುತ್ತಾಡಬೇಕು. ಇಂಥ ಅತೃಪ್ತದಾಹದಿಂದ ಪ್ರೇರಿತಳಾದ ಅವಳಿಗೆ ತನ್ನ ಕೌಟುಂಬಿಕ ಯಾವ ಜಂಜಡವೂ ಬಾಧಿಸಿಲ್ಲ. ಅಕ್ಕನ ನೀರಸತೆ ವಾಸ್ತವವಾಗಿದ್ದರೂ, ತಂಗಿಯ ಆ 'ರೋಮಾಂಚಕಾರಿ' ಯಾವ ಬಾಳೇ ನಮಗೆ ಹೆಚ್ಚು ಆಕರ್ಷಣೀಯ ವೆನಿಸುತ್ತದೆ.

ಕತೆಯ ತಂತ್ರವು ಪಾತ್ರಪರಿಪೋಷಣೆಗೆ ಅನುಗುಣವಾಗಿ ಬಂದಿದೆ. ಹಿಂದಿನ ನೆನಪು (Flash backs) ಕೇಳಿ ಆರೆನೆನಪಿನಲ್ಲುಳಿದ ಸಂಭಾಷಣೆಗಳು, ಫೋಟೋಪಾಫರನ ನಿರ್ಲಿಪ್ತ ವರ್ಣನೆ, ಬೆಳಕು, ಶಬ್ದ, ಬಣ್ಣ, ವಾಸನೆ— ಇವುಗಳಿಂದೊಡಗೂಡಿದ ಮೋತಿನಂದಿಯ "ಪೇಟೆಂಟ್" ಶೈಲಿ ಚಲನಚಿತ್ರದಂತೆ ಮೋಹಕವಾಗಿದೆ. ಅವರ 'ನಾಡೂ' ಕತೆಯನ್ನೋದಿದವರಿಗೆ ಇಲ್ಲಿ ಯಾವುದೂ ಹೊಸದೆನಿಸುವದಿಲ್ಲ. ಕತೆಯು ಬೇರೆ ಬೇರೆ ಘಟನೆಗಳ ಸರವಾದ್ದರಿಂದ, ಇಲ್ಲಿ ಆಯಾ ಘಟನೆಗಳನ್ನು ಭಿನ್ನ ಭಿನ್ನವಾಗಿ ಕೂಡ ಪರಿಶೀಲಿಸಬಹುದು. ಅಕ್ಕ ಕಂಡ ಸ್ಟೇಶನ್ನು, ತಂಗಿ ಕಂಡ ಸ್ಟೇಶನ್ನು ಇವೆರಡು ಭಿನ್ನವಾಗಿದ್ದು, ಅವರವರ ಸ್ವಭಾವಚಿತ್ರವನ್ನು ಕತೆಗಾರರು ಸನ್ನಿವೇಶಗಳ ಮೂಲಕ ಅದ್ಭುತವಾಗಿ ಮೂಡಿಸಿದ್ದಾರೆ. ಸ್ಟೇಶನ್ನಿನ ಕಂಬದ ಮೇಲೆ ಚಿತ್ರವನ್ನು ನೋಡಿ ತಂಗಿಗೆ ಬಾಲ್ಯದ 'ದಿಲ್ಲಿ-ಆಗ್ರಾವಾಲಾ'ನ ನೆನೆಸುವ ದೃಶ್ಯ— ಸುಂದರವಾಗಿದೆ. ಇದಕ್ಕೂ ಹೆಚ್ಚು ಪರಿಣಾಮಕಾರಿಯಾದ ದೃಶ್ಯವೆಂದರೆ ಅಕ್ಕ ನೋಡಿದ ಸಂಜೆಯ ವರ್ಣನೆ. 'ಬಸ್ಸಿನಲ್ಲಿ' ಆಫೀಸಿನಿಂದ ತಿರುಗುವ ಮುಖಗಳು. ನಿಸ್ತೇಜವಾಗಿ ಜಂಗುತಿಂದ ಟ್ರಂಕಿನಂತೆ ಕಾಣಿಸುತ್ತಿವೆ. ಹೌರಾಬ್ರಿಜ್ಜಿನ ಮೇಲೆ ಹಳದೀ ಬಣ್ಣದ ಕ್ಷೀಣವಾದ ಬಿಸಿಲು ಜರಿದು ಅಸ್ತವ್ಯಸ್ತವಾಗಿ ಬಿದ್ದಿದೆ." ಅದು ನವ್ಯತೆ. ಅದು ಶ್ರೇಷ್ಠತೆಯ ಲಕ್ಷಣ. ಬಾಳಿನ ನಿರ್ಜೀವತನವನ್ನು, ನೀರಸತನವನ್ನು ಇಷ್ಟು ವಿಷಣ್ಣವಾಗಿ, ಇಷ್ಟು ಭವ್ಯವಾಗಿ ಕೃತಿಯಲ್ಲಿ ಧ್ವನಿಸಿದವರು ಸಾಹಿತ್ಯದಲ್ಲಿ T. S. Eliot ನಂತಹ ಕೆಲವೇ ಜನರು. ಹಳದೀ ಬಣ್ಣದ ಕ್ಷೀಣವಾದ ಬಿಸಿಲು ಜರಿದು ಬಿದ್ದ ಕಲ್ಪನೆ. ರಕ್ತರಹಿತವಾದ (anaemic) ನಮ್ಮ "ಮುದುಕು" ಬಾಳು ಅಸ್ತವ್ಯಸ್ತವಾಗಿ ನಾಗಿದ್ದರ ಸೂಚನೆ ಕೊಡುತ್ತದೆ. ಇದಾದನಂತರ ಬರುವ ಇನ್ನೊಂದು ಚಿರಸ್ಮರಣೀಯವಾದ ಸನ್ನಿವೇಶವೆಂದರೆ—ಅಕ್ಕ-ತಂಗಿಯರು ಲಗ್ನವಾದ ವರನನ್ನು ನೋಡಿದ್ದು. ಭಗ್ನಪ್ರಣಯಿನಿ ಅಕ್ಕ ನೀರಸ ನಗೆ ನಕ್ಕು ತಂಗಿಗೆ ಅದೇ ಲಗ್ನವಾಗಿ ಸಿಂಗಾರದಲ್ಲಿ ಹೊರಟ ವರ-ಕನ್ಯೆಯರನ್ನು ತೋರಿಸುತ್ತಾಳೆ. ಇಲ್ಲಿಯೂ ಅದೇ ಅಕ್ಕನ ಮೂಕವೇದನೆ ಧ್ವನಿತವಾಗಿದೆ. ಆ ವಿಶಾಲವಾದ ಹಾಗೂ ಜನಪಟ್ಟಣಿಯಿಂದ ನಿಬಿಡವಾಗಿ ಸ್ಟೇಶನ್ನಿನಲ್ಲಿ ಗಂಡ-ಹೆಂಡಿರ ಆ ವಿಚಿತ್ರ ಸಿಂಗಾರ, ಗೊಂಬೆಯೊಟ್ಟಣದಂತೆ ಭಾಸವಾಗುವುದು. ಕೊನೆಗೂ ಬಾಳು ಇಷ್ಟೇನೆ? 'ನಮ್ಮ ಸುಖ ಇನ್ನೊಬ್ಬರ ನಗೆಯ ಸಾಧನೆಯೇ' ಎಂದೆನಿಸಿಬಿಡುತ್ತದೆ.

ಕತೆಯ ಕೊನೆ ರಹಸ್ಯಮಯವಾಗಿ ಉಳಿದಿದೆ. ಅಕ್ಕ-ತಂಗಿಯವರಿಗೇನೇ ತಾವು ಎಲ್ಲಿಗೆ ಹೋಗುವವರಿದ್ದೇವೆಂಬ ಕಲ್ಪನೆ ಇಲ್ಲದಿರುವಾಗ ಕತೆಗಾರ ಅದನ್ನೇಕೆ ಸೂಚಿಸಬೇಕು? ಅದು ಆಗಿನ ಅವರಿಬ್ಬರ ಮನಸ್ಥಿತಿ, ನಿರಾಸೆ, ಅಸಹಾಯಕತೆ, ದುಃಖ! — ಅಂತೆಯೇ ಕತೆಗಾರರು ಅಲ್ಲೆಯೇ ಅವರಿಬ್ಬರನ್ನು ಬಿಟ್ಟುಬಿಡುತ್ತಾರೆ.

ಇಷ್ಟೆಲ್ಲ ಒಳ್ಳೆಗುಣಗಳಿಂದ ತುಂಬಿದ್ದರೂ, ಕತೆಯನ್ನು 'ಪರಿಪೂರ್ಣ' ಕತೆ ಎನ್ನಲಾಗುವುದಿಲ್ಲ. ಯಾಕೆಂದರೆ ಕತೆಯು ದೋಷಗಳಿಂದ ಮುಕ್ತವಾಗಿಲ್ಲ. ಶ್ರೀ. ಮೋತಿನಂದಿಯವರ ಮನೋವಿಶ್ಲೇಷಣೆಯ ರೀತಿಯಲ್ಲಿ ಒಮ್ಮೊಮ್ಮೆ ದೋಷಗಳು ನುಸುಳುತ್ತವೆ. ಕತೆಯಲ್ಲಿ ಬರುವ 'ಮಾಂಶಿಯ ಮಾತುಗಳು,' ನಡುವೆ ಬರುವ "ನೌಕರಿ ನುಗಿಯಿತು" ಎನ್ನುವ ವಾಕ್ಯ— ಮುಂತಾದ ವಾಕ್ಯಗಳು ಕತೆಯ ಬೆಳೆವಣಿಗೆಗೆ ಯಾವರೀತಿಯಿಂದಲೂ ಪ್ರೇಪಕವಾಗುವುದಿಲ್ಲ. ಅವುಗಳ ಅಸ್ಪಷ್ಟತೆಯಿಂದ ಕತೆಗೆ ಕ್ಲಿಷ್ಟತೆ ಬರುತ್ತದೆ." ಅಸ್ಪಷ್ಟವಾಗಿ ಪಾತ್ರಗಳಿಗೆ ಹೊಳೆಯುವ ವಿಚಾರಗಳನ್ನು ಅಸ್ಪಷ್ಟವಾಗಿ ಮೂಡಿಸುವುದೇ "ವಾಸ್ತವ" ವೆಂಬ ವಾದ ಕತೆಗಾರರದಾದರೆ, ಅದರಿಂದ ಕತೆಗೆ ಯಾವ ಸಹಾಯವೂ ಆಗದೆ, ಕತೆಗೆ ಅನಾವಶ್ಯಕವಾದ ಕ್ಲಿಷ್ಟತೆಯುಂಟಾಗುವುದೆಂದು ನನ್ನ ಮತ. ಕತೆಯ ಇನ್ನೊಂದು ದೋಷವೆಂದರೆ ಅಲ್ಲಿ ಬರುವ ವಿವರ— ಹಾಗೂ ಒಮ್ಮೊಮ್ಮೆ ವಿವರದ ಪುನರುಕ್ತಿ. ಬರೆದದ್ದನ್ನು ಪುನಃ ಪುನಃ ಬರೆಯುತ್ತ ಹೋದರೆ, ಕೊಟ್ಟ ವಿವರಗಳನ್ನು ಮತ್ತೆ ಉಚ್ಚರಿಸುತ್ತ ಹೋದರೆ ಓದುಗನಿಗೆ ರಸಭಂಗವಾಗುತ್ತದೆ. ಶ್ವಾಸ ತೆಗೆದುಕೊಂಡದ್ದನ್ನು ನಮಗೆ ಒಮ್ಮೆ ಹೇಳಿದ ಕತೆಗಾರ, ಆನಳು ಶ್ವಾಸ ಬಿಟ್ಟದ್ದನ್ನು ಮತ್ತೆ ಬರೆದು ತಿಳಿಸುವ ಅವಶ್ಯಕತೆಯಿಲ್ಲವೆಂದು ನನಗೆನಿಸುತ್ತದೆ ಸೂಕ್ಷ್ಮ ನಿರೀಕ್ಷೆ, ಸೂಕ್ಷ್ಮ ವಿವರ. ಸಾಹಿತ್ಯದ ಒಳ್ಳೆಯ ಲಕ್ಷಣಗಳಾಗಿದ್ದರೂ ಪುನಃ "ಅಡಿದ್ದನ್ನೇ ಅಡುವ" ವಾಸನವೃತ್ತಿ, ಕತೆಗೆ ಇಲ್ಲಿ ಖಂಡಿತ ಹಾನಿಕಾರಕವಾಗಿದೆ.

ಕತೆಯನ್ನು ಇಡಿಯಾಗಿ ನೋಡಿದಾಗ, ಕತೆಗಾರರ ಜೀವನ ದೃಷ್ಟಿಗೊಳಗಾಗುವ ಅಭಿಪ್ರಾಯವೆಂದರೆ, ಜೀವನದಿಂದ "ಪಲಾಯ್ನಮತೆ" (Escapism). "ನಾಡೂ" ಕತೆಯಲ್ಲಿ ವ್ಯಕ್ತವಾದದ್ದೂ ಇದೇ. ಎಲ್ಲಿಯಾದರೂ "ಕಳೆದುಕೊಂಡು" ಹೋಗಬೇಕು. ಎಲ್ಲಿಯಾದರೂ "ಓಡಿಹೋಗಬೇಕು" ಇರುವಿಕೆ ಒಂದು ಶಾಪ; ಅದರಿಂದ ಪಾರಿದುಹೋಗಬೇಕು; ಎಂಬುದನ್ನು ಇಷ್ಟು ಸಂವೇದನಾಯುಕ್ತವಾಗಿ ಕತೆಗಾರರು ಹೇಳುವಂತಾದರೆ, ಆ ಕತೆ ಶ್ರೇಷ್ಠ ಕತೆಯಾಗದೆ ಇನ್ನೇನಾದೀತು?

ಕತೆಯಲ್ಲಿ ಏನೆಲ್ಲವನ್ನೂ ಮರೆತರೂ ಕ್ಷೀಣ ಬಿಸಿಲಿನ ಆ ಪ್ರತಿಮೆ ನಮ್ಮ ಮನಃ ಸ್ವಾಸ್ಥ್ಯವನ್ನು ಬಹಳ ಹೊತ್ತು ಕದಡಿಸಿ ಬಿಡುತ್ತದೆ:

"ಹಳದಿ ಬಣ್ಣದ ಕ್ಷೀಣವಾದ ಬಿಸಿಲು ಜರಿದು ಅಸ್ತವ್ಯಸ್ತವಾಗಿ ಬಿದ್ದಿದೆ."

ಗಿರಿಕಾ!

(ಮಹಾಭಾರತದ ಕಥೆ)*

ಡಾ. ಮುದೇನೂರ ಸಂಗಣ್ಣ, ಚಿಗಟೇರಿ, (ಹರಪನಹಳ್ಳಿ)

ಬಲಾತ್ಕಾರಸಂಪರ್ಕದಿಂದ ಹುಟ್ಟಿದ ಸಂತಾನ ಸಾಮಾಜಿಕನೀತಿಯ ಹಾಲನೆಗಾಗಿ ತಿರಸ್ಕೃತವಾದರೂ, ಅದೇ ಸಂತಾನ ಹೇಗೋ ಬೆಳೆದು, ರೂಪ-ಗುಣಗಳಿಂದ ಕೂಡಿದುದಾಗಿ ಪ್ರಯೋಜನಕಾರಿಯೆನಿಸಿದರೆ, ಮೊದಲು ತಿರಸ್ಕರಿಸಿದ ಸಾಮಾಜಿಕನೀತಿಯೇ ಅದನ್ನು ಪುರಸ್ಕರಿಸುವುದು. ಇದು ಸರಿಯೆ?

ಶತ್ರುಗಳನ್ನು ಸೋಲಿಸಿ ವಿಜಯೋತ್ಸವವನ್ನು ಸಮಾಪ್ತಗೊಳಿಸಿದ ನಂತರ ಮೃಗಯಾಭಿಲಾಷೆಯಿಂದ ಕಾನನವನ್ನು ಪ್ರವೇಶಿಸಿದ ಚೇದಿಪತಿ ವಸುರಾಜ.

ಸುರಪತಿ ಇಂದ್ರನ ಅನುಗ್ರಹದಿಂದ, ಸಮೃದ್ಧಿಯಿಂದ ತುಂಬಿ ತುಳುಕುವ ಚೇದಿರಾಜ್ಯದ ಪ್ರಭುತ್ವವನ್ನು ಪಡೆದಿದ್ದ ಅವನು. ಅವನ ಕೊರಳಲ್ಲಿ ಸುರಪತಿಯ ಸೌಹಾರ್ದದ ಉಡುಗೊರೆಯಾದ ಬಾಡದ ಪಂಕಜ ಕುಸುಮಗಳ ವೈಜಯಂತಿ ಮಾಲೆ ಶೋಭಿಸುತ್ತಿತ್ತು. ಇಂದ್ರನೇ ಕೊಟ್ಟ ಸ್ಫಟಿಕನಿರ್ಮಿತ ವಿಮಾನರಥಾರೂಢನಾಗಿ ವಸುರಾಜ ಗಗನಾಂಗಣದಲ್ಲಿ ಮೈದಳೆದ ದೇವತನಂತೆ ಸಂಚರಿಸುತ್ತಿದ್ದ. ಶಿಷ್ಟಪ್ರತಿಪಾಲನೀ ವೇಣು ಯಷ್ಟಿಯನ್ನೂ ದಾನಗೈದಿದ್ದ ಸುರಪತಿ ಇಂದ್ರ. ಈ ವೇಣುಯಷ್ಟಿಯ ಗೌರವದ ರಕ್ಷಣೆಯೆಯುವುದರಲ್ಲಿ ಯಾವ ತಪ್ಪನ್ನೂ ಮಾಡದು ವಸುರಾಜ. ಆಪತ್ತಿಗೊಳಗಾದವರನ್ನು ಮತ್ತು ಶರಣಾಗತರಾದವರನ್ನು ರಕ್ಷಿಸಲು ಚೇದಿಪತಿಯ ವಿಸ್ತಾರಬಲದಿಂದ ಗರ್ವಿತವಾಗಿರುವ ಬಾಹುದ್ವಯ, ಸರ್ವದಾ ಕಾತರವಾಗಿರುತ್ತಿದ್ದುವು.

ಕುಟಜ ಸೌಗಂಧದಿಂದ ಅಭಿಭೂತವಾದ ಕಾನನದ ವಾಯು. ಸದ್ಯೋಜಾಗೃತ ವಿಹಗಗಳ ಚಿಲಿಪಿಲಿ ಕಲರವದಿಂದ ರೋಮಾಂಚಿತಗೊಂಡಿತ್ತು; ಸವಾರುಣ ಕಿರಣಗಳೂ ಆ ಸ್ತುತಿಗಾನಕ್ಕೆ ಜಂಜಲಗೊಳ್ಳತೊಡಗಿದ್ದುವು. ಕೆಂಜಲ್ಕರಾಗದಿಂದ ರಂಜಿತವಾಗಿತ್ತು ವನಸರಸಿಯ ನೀರು. ಸುಗಂಧದಿಂದ ಆಕರ್ಷಿಸುವ ಮಲರುಗಳ ಮುಗುಳ್ವತ ಜಾಗೃತಗೊಂಡಿತ್ತು. ಸೂರೆಯಾದ ಪರಾಗದಿಂದ ಪಾಟಲ ವರ್ಣ ತಳೆದಿತ್ತು ವನಭೂಭಾಗ. ವಸುರಾಜ ಮುಗ್ಧನಾಗಿ ನಿಂತ. ಅವನ ಎರಡೂ ಕಣ್ಣುಗಳು ಇಬ್ಬನಿಯಲ್ಲಿ ಮಿಂದ ಪುಷ್ಪಲತೆ ಮತ್ತು ವನಸ್ಪತಿಗಳ ಆಂತರ್ಯದಲ್ಲಿ ಸಂಚರಿಸುವ ಮಾಧುರ್ಯದ ಅಭಿಷೇಕವನ್ನು ಪಡೆಯಲು ಉತ್ಸುಕವಾಗತೊಡಗಿದುವು.

ಬೆಳಕಿನಿಂದ ತುಂಬಿತುಳುಕುತ್ತಿತ್ತು ಪೂರ್ವಗಗನದ ಲಲಾಟ. ಸೂಕ್ಷ್ಮ ಅಂಶುಕದ ನೀಹಾರದಂತೆ ಮೆಲ್ಲಮೆಲ್ಲನೆ ಹಿಂದೆ ಸರಿಯುತ್ತಿತ್ತು ಬಿಸ್ನ ಮಂಜು. ಕಳಚಿ ಬಿದ್ದ ದುಕೂಲದ ಕಾಮಿನಿಯಂತೆ ಶರೀರ ಶೋಭೆಯನ್ನು ಪ್ರಕಟಗೊಳಿಸುತ್ತಾ, ಪ್ರಸ್ಫುಟನಾಗಿ ಹರಿಯುತ್ತಲಿತ್ತು ಕುಲಮಾಲಿನಿಯೆಂಬುದೊಂದು ನದಿ.

ಈ ನೋಟದೊಂದಿಗೇ ವಸುರಾಜನಿಗೆ ನೆನಪು ಬರತೊಡಗಿತು. ಅದೇ ನದಿಯ ಕೆಲದಲ್ಲಿಯೇ ಇರುವ ಶೈಲಕಂದರದ ಅಂಧಕಾರಮಯ ಏಕಾಂತದಿಂದ ಹಾತಾತ್ತಾಗಿ ಹೊರಟುಬಂದ ಆರ್ತನಾದವನ್ನು ಕೇಳಿ ಒಂದು ದಿನ, ಅವನ ಕರದಲ್ಲಿದ್ದ ಶಿಷ್ಟ ಪ್ರತಿಪಾಲನೀ ವೇಣುಯಷ್ಟಿ ಚಂಚಲಗೊಂಡಿತ್ತು.

ಶುಕ್ತಿಮತಿ ಎಂಬ ಹೆಸರಿನ ಪರಿಪೂರ್ಣ ಯೌವ್ವನೆಯಾದ ಒರ್ವ ಕುವರಿ ಸ್ನಾನಾಭಿಲಾಷೆಯಿಂದ ಆ ನದಿಯ ಬಳಿಗೆ ಬಂದು ನಿಂತಿದ್ದಳು. ಕೋಲಾಹಲನೆಂಬ ಹೆಸರಿನ ಒರ್ವ ಲಾಲಸಾಮೂಢ, ಕಾಮಾಂಧ, ಶುಕ್ತಿಮತಿಯ ಸಕಲ ಅನುನಯ ಮತ್ತು ವಿರೋಧಗಳನ್ನು ಒರಟು ಆಕ್ರಮಣದಿಂದ ಸ್ತಬ್ಧಗೈದು, ಆ ಕುಮಾರಿಯ ತನುವಿನ ಯೌವ್ವನವನ್ನು ಹಿಂಸ್ರಪ್ರಾಣಿಯಂತೆ ಉಪಯೋಗಿಸಿದ್ದನು.

ಆದರೂ ಕರ್ತವ್ಯಪಾಲನೆಗೈದಿದ್ದ ಶರಣ ಚೇದಿಪತಿ-ವಸುರಾಜ ನಿಷ್ಪತ್ತಿಗೆ ಒಳಗಾಗಿದ್ದ ಅಬಲೆಯನ್ನು ಕಾಪಾಡಿದ್ದ: ಮತ್ತು ತನ್ನ ವಿಪುಲ ಬಲಕುರಲಪಾದ ಬಾಹುಗಳ ಒಂದೇ ಒಂದು ಆಘಾತದಿಂದ ಆ ಜಿತ್ಯಾಚಾರಿಯ ಪ್ರಾಣವು ಚಿರಕಾಲದವರೆಗೆ ಸ್ತಬ್ಧನಾಗಿರುವಂತೆ ಮಾಡಿದ್ದ. ಜಿತ್ಯಾಚಾರದ ಉನ್ಮಾದ ಪೂರ್ಣ ಕಟ್ಟಾಸೆಗೆ ತುತ್ತಾಗಲಿದ್ದ ನಾರಿಯನ್ನು ಆ ದಿನ ಮುಕ್ತಗೊಡಿದ್ದ ವಸುರಾಜ. ಅವಳು ತಿರುಬಾಗಿಸಿ ಚರಣಸ್ಪರ್ಶಗೈದು ಅವನನ್ನು ಪಿತೃಸಂಬೋಧನೆಯಿಂದ ಸನ್ಮಾನಿಸಿದ್ದಳು. ಅನಂತರ ಒಂದಾವನಂತರ ಒಂದೊಂದರಂತೆಯೇ ಎಷ್ಟು ನೂರು ಅಮವಾಸ್ಯೆ, ಪೂರ್ಣಿಮೆ ಪಾಗೂ ಚತುರ್ದಶಿ-ಪ್ರತಿಪದಾಯುಕ್ತ ಅನುನಾಸ್ಯೆಗಳ ಇರುಳುಗಳು ಈ ನದಿಯ ಮಳಲಿನಲ್ಲಿ ವಿವಿಧ ಸ್ನೇಹಭಾರವನ್ನು ಸಮರ್ಪಿಸಿ ಗತಿಸಿಹೋಗಿವೆ! ಒಂದೊಂದರಂತೆಯೇ ಋಷ್ಯಾದರವರ್ಷಗಳು ಕಳೆದಿವೆ! ಎಲ್ಲಿ ಹೋದಳು ಆ ನಾರಿ? ಎಲ್ಲಿ ಆ ಶುಕ್ತಿಮತಿ?

ಆ ದಿನ ಏನನ್ನೋ ಹೇಳಹೋಗಿ ಶುಕ್ತಿಮತಿ ಹೇಳಲಾರದಾದದ್ದು ಅವನ ನೆನಪಿಗೆ ಬಂತು. ಕ್ರೂರಕಿರಾತನ ಬಿಲ್ಲಿನಿಂದ ಹತಗೊಂಡ ವೃಗುವಧುವಿನಂತೆ, ಧೂಳಿಯಲ್ಲಿ ಹೊರಳಾಡುವ ದೇಹದೊಂದಿಗೆ, ವಸುರಾಜನ ಚರಣಸ್ಪರ್ಶಮಾಡುತ್ತಾ ಭಯವಿಹ್ವಲವಾದ ಮತ್ತು ಶೋಕಾರ್ತವಾದ ಕಣ್ಣುಗಳಿಂದ ನೋಡುತ್ತಲಿದ್ದಳು ಶುಕ್ತಿ-

* ಸಂಗಸಾಹಿತಿ ಶ್ರೀ ಸುಬೋಧಘೋಷರ ಕಥೆಯೊಂದರ ಅನುವಾದ.

—ಸಂ.

ಮತಿ. ವಸುರಾಜ ವಿಸ್ಮಿತನಾಗಿ ಪ್ರಶ್ನಿಸಿದ್ದ:— ಮತ್ತೇಕೆ ಭಯ ನಾರಿ? ಅದೋ ನೋಡು, ನಿನ್ನ ಕುಮಾರೀ ಜೀವನದ ಶುಚಿತ್ವವನ್ನು ಘಾತಗೊಳಿಸಿದ ಆ ಕಾಮಾಂಧನು, ನನ್ನ ಈ ಭೀಮಬಾಹುಪ್ರಹರದ ಒಂದೇ ಒಂದು ಆಘಾತದಿಂದ ಛಿನ್ನಭಿನ್ನವಾಗಿ ಬಿದ್ದಿದ್ದಾನೆ, ನಿಷ್ಪ್ರಾಣ-ರುಧಿರಾಕ್ತ ಶ್ವಾಪದದಂತೆ.

ಹೌದು, ಅಂದು ಆ ಅತ್ಯಾಚಾರಿಯ ದೇಹ ಆ ಶೈಲಕಂದರದ ಹತ್ತಿರ ಪ್ರಾಣವಿಲ್ಲದ ಹಾಗೂ ರಕ್ತಸಿಕ್ತ ಕಾಡುಮೃಗದ ದೇಹ-ದಂತೆಯೇ ಬಿದ್ದಿತ್ತು. ಶುಕ್ತಿಮತಿ ಹೆಸರಿನ ಓರ್ವ ವನ-ವಾಸಿನಿಯೂ ಕುಮಾರಿಯೂ ಆದ ನಾರಿಯ ಯೌವನವನ್ನು ಸೂರೆಗೊಂಡ ಕೋಲಾಹಲನೆಂಬ ಹೆಸರಿನ ಕಾಮಾಂಧ ದಸ್ಯುವಿನ ಶೋಣಿತ ಪ್ರವಾಹದಿಂದ ಶೈಲಕಂದರದ ಕಠಿಣ ಶಿಲಾತಲ ತೊಯ್ದುಹೋಗಿತ್ತು. ಆದರೂ, ಬಲಾತ್ಕಾರಮುತ್ತಮೂಢನ ಆ ಅಸುವಳಿದ ದೇಹಪಿಂಡವನ್ನು ನೋಡಿಯೂ ನಿಶ್ಚಿಂತಳಾದಂತೆ ಕಾಣ-ಲಿಲ್ಲ ಶುಕ್ತಿಮತಿ. ಅಶ್ರುಬಾಷ್ಪಗಳು ಮುಸುಕಿದ ನೇತ್ರಗಳಿಂದ ತರುಣ ವಸುರಾಜನನ್ನು ನೋಡುತ್ತಾ ಪ್ರಾರ್ಥಿಸಿದ್ದಳು! 'ತಂದೆಯೇ!'

ವಸುರಾಜ:-ನೀನೀಗ ಮುಕ್ತಳು. ಆದರೂ ನೀನೇಕೆ ಶಾಂತಳೂ ನಿರ್ಭಯಳೂ ಆಗಲೊಲ್ಲೆ ನಾರಿ?

ಶುಕ್ತಿಮತಿ ಹೇಳಿದಳು:— ಅತ್ಯಾಚಾರಿಯು ಹಿಂಸ್ರ ಕಾಳಿಂಗ-ನಮು ಬಹುಗಳ ಬಂಧನಗಳಿಂದ ನೀವು ನನ್ನನ್ನು ಮುಕ್ತ ಗೂಡಿ-ದ್ದೀರಿ ತಂದೆ; ಆದರೆ ಅವನ ಲಾಲಸೆಯ ವಿಷ ನನ್ನ ಈ ಕೌಮಾರ್ಯದ ದೇಹವನ್ನು ಮುಕ್ತವಾಡಲಾರದೆಂದು ತೋರುತ್ತದೆ!

ಅಚ್ಚರಿಗೊಂಡು ಕೇಳಿದ ವಸುರಾಜ:-ಈ ಮಾತಿನ ಅರ್ಥ?

ಶುಕ್ತಿಮತಿ- ಭಯವಾಗುತ್ತಲಿದೆ ತಂದೆ! ಈ ನನ್ನ ದೇಹದ ಶೋಣಿತದಲ್ಲಿ ಯಾವುದೋ ಒಂದು ಪ್ರಾಣದ ಬೀಜ ಈಜಾಡುತ್ತ-ಲಿರುವುದರ ಅನುಭವವಾಗುತ್ತಲಿದೆ.

ಮ್ಲಾನ ಹಾಗೂ ವಿಷಣ್ಣನಾಗಿ ವಸುರಾಜ ನುಡಿದ:- ತಿಳಿದೆ, ನನಗೂ ಭಯವಾಗಿದೆ ನಾರಿ, ನಿನ್ನ ಈ ಭಯ ನಿಥ್ಯಾಭಯವೇನಲ್ಲ.

ಕ್ರಂದನಗೈದಳು ಶುಕ್ತಿಮತಿ:- ಹಾಗಾದರೆ ಹೇಳಿರಿ ಪ್ರಜಾಪಾಲಕ ವಸುರಾಜ! ನನ್ನ ಯೌವನೋರ್ವರ ಶೋಣಿತದಲ್ಲಿ ಅತ್ಯಾಚಾರಿಯ ಲಾಲಸೆ ಬಿತ್ತಿಹೋದ ಪ್ರಾಣಾಂಕುರವು ಈ ವನಕುಸುಮದ ಸಮಾಗ-ದಂತೆ ಕಲುಷವಿಹೀನವೂ ಶುಚಿರುಚಿರವೂ ಮತ್ತು ಸುಂದರವೂ ಆಗಿ-ರುವುದಲ್ಲವೆ?

ಉತ್ತರಿಸಲಿಲ್ಲ ವಸುರಾಜ.

ಶುಕ್ತಿಮತಿ ನುಡಿದಳು:- ಹೇಳಿರಿ ಪ್ರಜಾಪಾಲಕ ವಸುರಾಜ! ನನ್ನ ಇಚ್ಛೆಯ ವಿರುದ್ಧವಾಗಿ ನನ್ನ ಅಂತರಾತ್ಮಕ್ಕೆ ಘಾತವನ್ನಿತ್ತು, ನನ್ನ ಬದುಕನ್ನು ಅಪಮಾನಗೊಳಿಸಿ, ಹತ್ಯಾಕಾಂಡದ ಉತ್ಪಾದದಂತೆ ಪ್ರಮತ್ತತೆಯೊಂದರ ಆಘಾತದಿಂದ ನನ್ನ ದೇಹದ ಸಕಲ ನ್ಯಾಯು-ತಂತು ಮತ್ತು ನಿಃಶ್ವಾಸ-ಇವುಗಳನ್ನು ಪೀಡಿಸಿ, ಪ್ರಣಯಹೀನವಾದ ಆನಂದಹೀನವಾದ ಮತ್ತು ಆರ್ತನಾದ ಪೀಡಿತವಾದ, ಎಷ್ಟೋ ಕಣ-ಗಳ ಅಭಿಲಾಷದ ಲೀಲೆಯ ಪರಿಣಾಮವಾಗಿ, ನನ್ನ ದೇಹದಲ್ಲಿ ಸಂಜ-ರಿಸುತ್ತಲಿರುವ ಆ ಪ್ರಾಣವು, ನಿಮ್ಮ ವಿಚಾರದಲ್ಲಿ ಯಾವ ಅಪರಾಧಿ ಪ್ರಾಣಿಯೆಲ್ಲವಷ್ಟೇ?

ಉತ್ತರಿಸಲಿಲ್ಲ ವಸುರಾಜ.

ಶುಕ್ತಿಮತಿ ಹೇಳಿದಳು:- ನೀವು ಅಭಿವಚನದ ದಾನ ನೀಡಿ ವಸುರಾಜ-ಈ ಪ್ರಣಯಹೀನ ಆನಂದಹೀನ ಮತ್ತು ಅಪಮಾನ-ಮಯ ಕೆಲವು ದಿನಗಳ ಆರ್ತನಾದದಲ್ಲಿ ಜನ್ಮಿಸಿದ ಸಂತಾನ, ನಿಮ್ಮ ರಾಜ್ಯದ ಸಕಲ ಪ್ರಣಯ ಜಾತ ಸಂತಾನದಂತೆಯೇ ಮಾನವೋಚಿತ ಸನ್ಮಾನನವನ್ನು ಪಡೆಯುವುದೆಂದು.

ಹುಬ್ಬುಗಳನ್ನು ಕುಂಚಿತಗೊಳಿಸುತ್ತಾ ವಿಸ್ಮಿತ ಭಾವದಲ್ಲಿ ಶುಕ್ತಿ-ಮತಿಯ ಮುಖವನ್ನು ಮಾತ್ರ ನಿಟ್ಟಿಸುತ್ತಲಿದ್ದ ವಸುರಾಜ.

ಶುಕ್ತಿಮತಿ ಹೇಳಿದಳು:-ನನಗೆ ಅಭಿವಚನದ ದಾನ ನೀಡಿರಿ ವಿಶ್ವಸ್ರಷ್ಟಿಪಾಲಕ ವಸುರಾಜ! ಹೀಗಾದನಂತರವೇ ನೀವು ನನ್ನನ್ನು ರಕ್ಷಿಸುವ ತಂದೆಯೆಂದು ಕರೆಯಲಿಕ್ಕೆ ನಾನು ವಿಶ್ವಾಸನಿಡಲು ಧೈರ್ಯ ಇಡಲು ಶಕ್ತಳಾಗುವೆ.

ವಸುರಾಜ ಹೇಳಿದ:-ಅಭಿವಚನ ನೀಡಲಾರೆ.

ಶುಕ್ತಿಮತಿ:-ಏಕೆ ನೀಡಲಾರಿರಿ ವಸುರಾಜ?

ವಸುರಾಜ- ನಿನ್ನ ಸಂತಾನ ಅತ್ಯದ್ಭುತವಾದೊಂದು ಜನ್ಮ-ಪರಿಚಯದೊಂದಿಗೆ ಭೂಮಿಗೆ ಬರುವುದು.ಅತ್ಯಾಚಾರಿಯ ಲಾಲಸೆಯ ಸೃಷ್ಟಿಯಾದ ನಿನ್ನ ಆ ಸಂತಾನ, ಈ ಪೃಥ್ವಿಯ ಒಂದು ಪ್ರಾಣಿ ರೂಪನಾಗಿ ಮಾತ್ರ ಪರಿಗಣಿಸಲ್ಪಡುವುದು. ಇದಕ್ಕಿಂತ ಹೆಚ್ಚಿನ ಮರ್ಯಾದೆ ಮಾತ್ರ ಅದಕ್ಕೆ ದೊರೆಯದು.

ರೋಮಾಂಚನವಾಯಿತು ಶುಕ್ತಿಮತಿಗೆ-'ಏಕೆ ವಸುರಾಜ?'

ವಸುರಾಜ ಕಠೋರಭಾವದಲ್ಲಿ ನುಡಿದ- 'ಶ್ವಾಪದದ ಸೃಷ್ಟಿ ಶ್ವಾಪದನೇ ಆಗಬಲ್ಲದು!'

ಅತ್ಯಾಚಾರಿ ಕೋಲಾಹಲನ ಪ್ರಾಣಹೀನ ದೇಹದಿಂದದತ್ತ ಬೆರಳು ತೋರಿಸುತ್ತ ಶುಕ್ತಿಮತಿ ಹೇಳಿದಳು:- ಆದರೆ ಮಾನವ ಪ್ರಣಯಜಾತ ಸಂತಾನವೂ ಶ್ವಾಪದವಾಗಬಲ್ಲುದು ವಸುರಾಜ.

ತಡೆಗಟ್ಟುತ್ತಾ ಕಠೋರಸ್ವರದಲ್ಲಿ ನುಡಿದ ವಸುರಾಜ 'ಕುತರ್ಕ-ಗೈಯದಿರು ನಾರಿ!'

ಶುಕ್ತಿಮತಿ- ಆ ಶ್ವಾಪದವನು ಲಾಲಸಾಂಧ ಕೋಲಾಹಲ, ನಿಮ್ಮದೇ ರಾಜ್ಯದ ಮಾನವದಂಪತಿಗಳ ಪ್ರಣಯಜಾತ ಸಂತಾನ, ಓರ್ವ ನಾರಿ ಮತ್ತು ಓರ್ವ ಪುರುಷ ಇವರೀರ್ವರ ದೇಹ-ಮನಸ್ಸುಗಳ ಮಿಲನ ಮತ್ತು ಆನಂದಗಳಿದೇ ಸೃಷ್ಟಿಯಲ್ಲವೆ ಈ ಕೋಲಾಹಲ?

ವಿಗ್ಲಾನಗೊಂಡ ಭಾವದಲ್ಲಿ ವಸುರಾಜ ನುಡಿದ:— ವಿಚಿತ್ರ-ವಾಗಿದೆ ನಿನ್ನ ಮನ! ಕಿವಿದೆರೆಯ ಮೇಲೆ ಬಿದ್ದು ನನ್ನನ್ನು ವಿಚಲಿತ-ನನ್ನಾಗಿ ಮಾಡಿದ ನಿನ್ನ ಆ ಆರ್ತನಾದ, ನಿಜವಾಗಿಯೂ ಕಪಟನಯ-ವಾದೊಂದು ದುಃಖದ ಪ್ರತಿಧ್ವನಿಯಾಗಿದೆಯೆಂದು ನನಗೆ ಸಂದೇಹ-ವಾಗುತ್ತದೆ.

ಶುಕ್ತಿಮತಿ ಕರುಣಾಸ್ವರದಲ್ಲಿ ಹೇಳಿದಳು:—ಈ ಸರಿಯ ಭಯಾ-ನಕ ಸಂದೇಹಕ್ಕೊಳಗಾಗದಿರಿ ವಸುರಾಜ!

ವಸುರಾಜ-ಹಾಗಾದರೆ ನೀನೇಕೆ ನಿನ್ನ ಈ ದುಃಸಹವಾದೊಂದು ಅಪಮಾನದ ಸೃಷ್ಟಿಯ ಪಾಲನೆಗಾಗಿ ಮತ್ತು ಅದರ ಭವಿಷ್ಯತ್ತಿಗಾಗಿ

ಚಿಂತಿಸುತ್ತಾ ಇಷ್ಟೊಂದು ಆಳುಲಗೊಳ್ಳುತ್ತಲಿರುವಿ? ದಸ್ಯು ಸ್ಪರ್ಶ-ದೂಷಿತ ಕುಮಾರಿ!

ಇನ್ನಷ್ಟು ವ್ಯಥಿಗಳಾಗಿ ಅಳತೊಡಗಿದಳು ಶುಕ್ತಿಮತಿ:—ನಿಜವಾಗಿಯೂ ತಿಳಿಯಲೊಲ್ಲದಾಗಿದೆ ನನಗೆ ತಂದೆ! ಇದೇನಾದರೂ ನನ್ನ ಮನೋವಿಕಾರವೇನು? ಅತ್ಯಾಚಾರಿಯಾದ ಕೋಲಾಹಲ ಆ ಲಾಲಸಾಕ್ಷುಬ್ಧ ಮುಖ-ಅವಯವಗಳು ಕಲ್ಪನೆಗೆ ಬಂದೊಡನೆಯೇ ತಿರಸ್ಕಾರ ಮೂಡುತ್ತದೆ; ಆದರೆ ನನ್ನ ರಕ್ತದಲ್ಲಿ ಸಂಚರಿಸುತ್ತಲಿರುವ ಒಂದು ಜೀವಿಯನ್ನು ಎಳ್ಳಿನಿತೂ ತಿರಸ್ಕರಿಸಲಾರದಾಗಿರುವೆ.

ವಸುರಾಜ—ಆದರೆ ನಾನು ನಿನ್ನ ರಕ್ತದಲ್ಲಿ ಸಂಚರಿಸುತ್ತಿರುವ ನೀರೀಕ್ಷಿತ ಹೊಲಸು ಅಂಕುರವಾವ ಆ ಜೀವಿಯ ಕಲ್ಪನೆ ಮಾಡಲಿಕ್ಕೆ ಕೂಡಾ ಜುಗುಪ್ಸೆಪಟ್ಟುಕೊಳ್ಳುತ್ತೇನೆ.

ಶುಕ್ತಿಮತಿ ಹೇಳಿದಳು— ನಿಮ್ಮ ಈ ಭಯ ಮತ್ತು ಜಿಗುಪ್ಸೆಗಳ ಹೇತುವನ್ನು ತಿಳಿಯಲಾಗಲೊಲ್ಲದು ನನಗೆ, ವಸುರಾಜ! ನಿಮ್ಮ ಈ ರಾಜ್ಯದಲ್ಲಿ ಯಾವ ಕುಮಾರಿಯ ಗೂಢೋತ್ಪನ್ನ ಸಂತಾನವೂ ಇಲ್ಲವೆ?

ವಸುರಾಜ—ಇದೆ.

ಶುಕ್ತಿಮತಿ—ನಿಮ್ಮ ರಾಜ್ಯದಲ್ಲಿ ಬಹುವಲ್ಲಭಾನಾರಿ ಇಲ್ಲವೆ? ಅಂಬಳ ಸಂತಾನವಿಲ್ಲವೆ?

ವಸುರಾಜ—ಇದ್ದಾರೆ,

ಶುಕ್ತಿಮತಿ—ನಿಮ್ಮ ರಾಜ್ಯದಲ್ಲಿ ಮನೆಯಿಂದ ದೂರದಲ್ಲಿರುವ ಪತಿಯು ಸತಿಯೊರ್ವಳ ಗರ್ಭದಿಂದ ಯಾವ ಸಂತಾನವೂ ಆವಿರ್ಭವಿಸಿಲ್ಲವೇನು?

ವಸುರಾಜ—ಹುಟ್ಟಿದ್ದಾರೆ.

ಶುಕ್ತಿಮತಿ—ನಿಮ್ಮ ರಾಜ್ಯದಲ್ಲಿ ಕೌಲಟೇಯನಾವನೂ ಇಲ್ಲವೆ?

ವಸುರಾಜ—ಇದ್ದಾರೆ.

ಶುಕ್ತಿಮತಿ—ನಿಮ್ಮ ರಾಜ್ಯದಲ್ಲಿ ಯಾವ ವಿವಾಹಿತ ನಾರಿಯು ಪರಪುರುಷನ ಸಂಗದಿಂದ ಪ್ರಜಾಯಿನಿಯಾಗಿ ಕ್ಷೇತ್ರಜ ಸಂತಾನವನ್ನು ಗರ್ಭದಲ್ಲಿ ಹೊತ್ತಿಲ್ಲವೆ?

ವಸುರಾಜ—ಹೊತ್ತಿದ್ದಾರೆ.

ಶುಕ್ತಿಮತಿ—ಅಮ್ಮುತವಿಧಿ ಸುವಿಧಿಗಳ ವಶೀಭೂತವಾದ ಈ ಸರ್ವಮಿಲನದ ಯಾರದೋ ಸಂತಾನವನ್ನು ನೀವು ನಿಮ್ಮವೇ ಪ್ರಜೆಯೆಂದು ಭಾವಿಸಿಲ್ಲವೆ?

ವಸುರಾಜ—ಭಾವಿಸಿರುವೆ.

ಶುಕ್ತಿಮತಿ—ನಿಮ್ಮ ಅಭಿಪ್ರಾಯದಲ್ಲಿ ಇವರೆಲ್ಲರೂ ಮನುಷ್ಯರೆಂಬುದು ನಿಶ್ಚಯವಲ್ಲವೆ?

ವಸುರಾಜ—ಮನುಷ್ಯರಲ್ಲದೆ ಇನ್ನೇನು!

ಶುಕ್ತಿಮತಿ—ಇವರ ಮನುಷ್ಯತ್ವ ನಿಮಗೆ ಗೌರವಯುತವಾದುದಲ್ಲವೆ?

ವಸುರಾಜ—ಅವಶ್ಯವಾಗಿ ಗೌರವಾರ್ಹವಾದದ್ದು.

ಶುಕ್ತಿಮತಿ—ಹಾಗಾದರೆ ನನ್ನ ಸಂತಾನನೇಕೆ, ಶಿಷ್ಟಪರಿಪಾಲಕ ಚೇದಿಪತಿ ವಸುರಾಜನ ವಿಚಾರದೃಷ್ಟಿಯಲ್ಲಿ ತ್ಯಾಜ್ಯವೆಂದು ನಿರ್ಣೀತವಾಗುವುದು?

ವಸುರಾಜ—ನೀನು ತಪ್ಪು ತಿಳಿದಿರುವಿ ನಾರಿ. ನನ್ನ ರಾಜ್ಯದ ಪ್ರತಿಯೊಬ್ಬ ಗೂಢೋತ್ಪನ್ನ ಹಾಗೂ ಕೌಲಟೇಯನೂ ಒರ್ವ ಮಾನವ ಮತ್ತು ಒರ್ವ ಸ್ತ್ರೀಯ ಸ್ವಯಾನೇಶದಿಂದ ಕೂಡಿದ ಪ್ರಗಲ್ಭ ನಿಲವಿನ ಆನಂದ ಪುತ್ತು ಅಸಕ್ತಿಗಳ ಸೃಷ್ಟಿ; ಆರ್ತನಾದದ ಸೃಷ್ಟಿಯಲ್ಲ. ಎಂಥ ಭಯಂಕರ ಕರ್ಕಶ ಸಂಸ್ಕಾರವನ್ನು ಪಡೆದು ನಿನ್ನ ಸಂತಾನ ಜನ್ನ ತಾಳುವುದೆಂಬದನ್ನು ಕಲ್ಪನೆ ಮಾಡಲಿಕ್ಕೆ ಕೂಡಾ ನನಗೆ ಭಯವಾಗುತ್ತಲಿದೆ! ಎಷ್ಟು ಭಯಾನಕ ಅಂತಃಕರಣ ವಿಹೀನತೆಯೊಂದಿಗೆ ನಿನ್ನ ಸಂತಾನ ಭೂಮಿಯ ಮೇಲೆ ಬೀಳುವುದೆಂಬ ಬಗ್ಗೆ ಊಹಿಸುತ್ತಿರುವಂತೆಯೇ ತಿರಸ್ಕಾರ ಮೂಡುತ್ತದೆ! ನೆನೆಯುತ್ತಿರುವಂಯೇ ಸಡುಕವನ್ನಿತ್ತು ಸಕಲ ಚಿಂತೆಯೂ ಮುಳ್ಳಾಗಿ ಚುಚ್ಚತೊಡಗುತ್ತದೆ. ಯಾರು ಬಲ್ಲರು, ಎಂತಹ ಬೀಭತ್ಸತೆಯೊಂದಿಗೆ ನಿನ್ನ ಸಂತಾನದ ಅಂಗಾಂಗಗಳು ಆತ್ಮಪ್ರಕಾರ ಗೈಯವುವೋ! ಎಂದೆಂದಿಗೂ ನಿನ್ನ ಸಂತಾನ ಸಮಾಜದ ಮಾನವನಾಗಲಾರದು. ಅದಾಗುತ್ತದೆ. ಈ ಜನದ್ದೇ ಒಂದು ಪ್ರಾಣಿ. ಬಲಾತ್ಕೃತಳಾದ ನಾರಿಯ ಒಡಲಿಂದ ಜನಿಸಿದ ಸಂತಾನವೇ ಈ ಜಗದಲ್ಲಿ ಅಂತ್ಯ ಜಾಘನ್ಯವೆಂದು ನಾನು ಭಾವಿಸುವೆ.

ಶುಕ್ತಿಮತಿ ವಿಸ್ಮಿತಳಾಗಿ ನುಡಿದಳು — ಇದೇಯೇನು ಶಿಷ್ಟ ಪ್ರತಿಪಾಲಕನ ನ್ಯಾಯವಿಧಿ?

ವಸುರಾಜ—ಹೌದು.

ಶುಕ್ತಿಮತಿ—ನಿಜವಾಗಿಯೂ ಇದು ಅನ್ಯಾಯವ ವಿಧಿ ವಸುರಾಜ! ನೀವು ಬಲಾತ್ಕಾರಕ್ಕೀಡಾದ ನಾರಿಯ ತಾಯ್ತನಕ್ಕೆ ಶಿಕ್ಷೆಯನ್ನೀಯುತ್ತಲಿರುವಿರಿ.

ವಸುರಾಜ—ನಾನು ಚಕಿತನಾಗಿರುವೆ, — ನಾರಿಯಾವಳು ತನ್ನ ಧರ್ಮಾಪಹಾರಕ ದಸ್ಯುವಿನ ಹೆಲಲಾಲಸದ ಸೃಷ್ಟಿಯನ್ನು ತಿರಸ್ಕರಿಸಲಾರದವಳಾದದ್ದೇಕೆ? ಯಾರದೀ ಮೋಹ?

ಶುಕ್ತಿಮತಿ—ನನ್ನ ಶೋಣಿತದ ಸ್ನೇಹದ ಉತ್ತಾಪದಲ್ಲಿ ನಶ್ಯಮಾಸ, ದಶದಿನ ಲಾಲಿತನಾಗುವ ಜೀವನವನ್ನು ಹೇಗೆ ತಿರಸ್ಕರಿಸಲಿ ವಸುರಾಜ?

ವಸುರಾಜ—ಅಪಜಾತ ಪ್ರಾಣವೊಂದನ್ನು, ನಿನ್ನ ಯೌವನದ ಸಕಲ ರುಚಿತ್ವವನ್ನು ಕೊಲೆಗೈದ ಒರ್ವ ದಸ್ಯುವಿನ ಮತ್ತತೆಯ ಸೃಷ್ಟಿಯನ್ನು, ನೀನು ತಿರಸ್ಕರಿಸಲಾರೆಯಾದರೆ ಆ ಅಪರಾಧ ನಿನ್ನದು. ತ್ಯಾಜ್ಯವಾದುದನ್ನು ಒಂದು ಸಕ್ಷ ಪರಿತ್ಯಜಿಸಲಾರೆಯಾದರೆ ಆಗ ಆ ಅಪರಾಧದ ಶಾಸ್ತಿಯನ್ನು ನೀನೇ ನಿನ್ನ ಬಾಳಿನುದ್ದಕ್ಕೂ ಅನುಭವಿಸುವೆ.

ನಾನು ಪ್ರಜೆಯಲ್ಲದವರನ್ನು ಪಾಲನೆಗೈಯಲಾರೆ ನಾರಿ.

ಶುಕ್ತಿಮತಿ ಹೇಳಿದಳು—ಇನ್ನೊಂದು ಮಾತನ್ನು ಹೇಳುವುದಿತ್ತು; ಅದನ್ನು ಹೇಳಲಾರದವಳಾಗಿದ್ದೇನೆ ನಮುರಾಜ.

* * *

ಕುಟಜಗಂಧದಿಂದ ಅಭಿಭೂತನಾದ ಸ್ಪರ್ಶದಿಂದ ಆ ದಿನದಂತೆ ಇಂದು ಕೂಡ ವಸುರಾಜನ ಚಿಂತನೆ ರೋಮಾಂಚನಗೊಂಡಿತು. 'ಎಲ್ಲಿ ಹೋದಳು ಆ ನಾರಿ, ಶುಕ್ತಿಮತಿ ಎಂಬ ಹೆಸರಿನ ಆ ಕುಮಾರಿ?' ಕಲ್ಪನೆಗೈದುಕೊಂಡ; ಈ ಕಲ್ಪನೆಯೊಂದಿಗೇ ವಿಷಣ್ಣತೆಯೊಂದರ ಛಾಯೆಯು ಅವನ ಚಕ್ಷುಗಳ ವೃಷ್ಟಿಯಲ್ಲಿ ಸಂಚರಿಸಿತು–

ಈ ನದಿಯ ಸಲಿಲದಲ್ಲಿಯೇ ಆ ದಿನ ತನ್ನ ದೇಹವನ್ನು ವಿಸರ್ಜಿಸಿ ಸಕಲ ಶಾಸ್ತ್ರಿ, ಸಂತಾಪ ಮತ್ತು ಮೋಹಗಳ ಅವಸಾನಗೈದಿರಬೇಕೆಂದು ತೋರುತ್ತಲಿದೆ. ಒಳ್ಳೆಯದೇ ಆಯಿತು. ಅತ್ಯಾಚಾರಿಯ ಲಾಲಸಾಜಾತ ಸಂತಾನದ ಮಾತೆಯಾಗುವ ದುರ್ಭಾಗ್ಯವನ್ನು ಆ ನಾರಿಗೆ ಸಹಿಸಲಾಗಿಲ್ಲ; ಏನು ಆಶ್ಚರ್ಯ! ಎಷ್ಟು ಉದ್ಬುತವಾಗಿತ್ತು ಆ ನಾರಿಯ ಮನಸ್ಸು! ನಮುರಾಜನ ಪ್ರಹರಣಾಘಾತದಿಂದ ಕೊಲ್ಲಲ್ಪಟ್ಟ ಓರ್ವ ಅತ್ಯಾಚಾರಿಯ ರಕ್ತಸಿಕ್ತ ದೇಹಸಿಂಡವನ್ನು ನೋಡಿ ನಗತೊಡಗಿದ್ದ ಆ ನಾರಿಯ ಚಕ್ಷುಗಳೇ ಮತ್ತೆ ಆ ಅತ್ಯಾಚಾರಿಯಿಂದಲೇ ಜನಿಸುವುದರ ಪರಿಣಾಮದ ಬಗ್ಗೆ ಚಿಂತಿಸುತ್ತಾ ಸಜಲಗೊಂಡಿದ್ದುವು. ಒಂದೊಂದೇ ಆಗಿ ಗತಿಸಿವೆ ಆಷ್ಟಾದಶ ವರ್ಷಗಳು; ಆ ಶೈಲಕಂದರದ ನಿಕಾಂತದಿಂದ ಹೊರಬಿದ್ದ ನಾರೀಕಂಠದ ಆ ಆರ್ತನಾದ ಯಾವ ಸ್ಮೃತಿ ಚಿಹ್ನೆಯನ್ನು ಇಟ್ಟುಳಿಸದೆ ಕಾಲಸ್ರೋತದಲ್ಲಿ ಚಿರಕಾಲದ ವರೆಗೆ ಲುಪ್ತವಾಗಿವೆ.

ಕಾನನಭೂಮಿಯ ಅಂತರಾಳದಲ್ಲಿ ಮತ್ತೊಮ್ಮೆ ಸಂತಸಚಿತ್ತದಿಂದ ಪುತ್ಕಾತುತ್ತಲಿದ್ದ ನಮುರಾಜ. ಅನೇಕ ಹಸುರು ವೃಕ್ಷಗಳು ಶಾಂತನವೀಥಿಕೆಯ ಧೂಳಿಯನ್ನು ನೆರಳಿನಿಂದ ಮುಚ್ಚಿ ನಿಂತಿದ್ದುವು. ಆದರೆ ಕ್ರಮೇಣ ಕ್ರಮೇಣ ಉತ್ತಪ್ತವಾಗತೊಡಗಿದುವು– ಸೂರ್ಯಕರನಿಕರ. ಬಾಯಾರಿ ನೀರಡಿಸಿದ ನಮುರಾಜ. ಛಾಯಾಮಯವಾದ ಶಾಂತ ತರುತಲದಲ್ಲಿ ನಿಂತುಕೊಂಡೇ ದಣಿವಾರಿಸಿಕೊಂಡ. ಅನಂತರದಲ್ಲಿಯೇ ಕೇಳಿಸಿತೆವನಿಗೆ ಎಲ್ಲಿಯೋ ಹತ್ತಿರದಲ್ಲಿಯೇ ನಾರಸಸಪ್ತಸ್ವರ ಕಲರವಧ್ವನಿತವಾಗುತ್ತಲಿದೆ; ಜಲೋತ್ಪಲದ ಸೌರಭದಿಂದ ಅಭಿಭೂತವಾದ ಭೃಮರತತಿಯ ಗುಂಜಾರವವಾಗುತ್ತಲಿದೆ. ಇಪ್ಪತ್ತಿಪ್ಪತ್ತು ದೂರ ನಡೆದುಹೋಗಿ ನೋಡಿದಾಗ ಕಾಣಿಸಿತು ನಮುರಾಜನಿಗೆ– ಅವನ ಊಹೆ ಸುಳ್ಳಲ್ಲ; ಅಜಸ್ರನಿಳಿಚ ತಾಮರಸ ಪುಷ್ಪಗಳಶೋಭೆಯನ್ನು ಪಕ್ಷದಲ್ಲಿ ಧರಿಸಿಕೊಂಡಿದೆ ಸ್ನಿಗ್ಧಸಲಿಲದ ಒಂದು ಸರಸಿ. ಜಲಪಾನಗೈದು ತೃಷೆಯನ್ನು ದೂರವಾಡಿಕೊಂಡ ನಮುರಾಜ.

ಅನಂತರ ಅಲ್ಲೇ ಮುಹೂರ್ತದಲ್ಲಿಯೇ ವಿಪುಲತೃಷೆಯುಂಟಾಗಿ ವಿಚಲಿತನಾದುವು ವಸುರಾಜನ ಎರಡೂ ನೇತ್ರಗಳು.

ಸರೋನರದ ತಟದ ನಿಕಾಂತದಲ್ಲಿ ವಿಕಸಿತ ಕಮಲಾಂಗಗಳಿಂದ ಆಚ್ಛಾದಿತವಾದ ಹೊನ್ನೆಯ ಮರದ ನೆರಳಿನಲ್ಲಿ, ನವೀನ ಶಾಡ್ವಲದ ಮೇಲೆ ಕಾಂಚನ ಲತಿಕೆಯಂತೆ, ಸಿಡಿದಾಗಿ ಮಲಗಿರುವ ಓರ್ವ ನಾರಿಯ ಆಲಸ್ಯಮಯ ದೇಹ ನಿದ್ರಾಮಗ್ನವಾಗಿದೆ. ಆ ನಾರಿಯ ಹಾಸ ಜ್ಯೋತಿರ್ಲಿಪ್ತ ಅಧರದಲ್ಲಿ ಇಂದುಕರನಿಕರ ನಿದ್ರಿಸುತ್ತಲಿರುವಂತೆ ಭಾಸವಾಗುತ್ತಲಿದೆ. ಊರ್ಧ್ವಾಕಾಶದ ಮೇಘವು ನವೀನ ಶಾದ್ವಲದ ಹೆಸರು ವಕ್ಷವನ್ನು ಚುಂಬಿಸಲಿಕ್ಕಾಗಿಯೇ ಈ ನಾರಿಯ ಕೇಶರಾಶಿಯಲ್ಲಿ ಅಡಗಿಕೊಂಡಿರುವಂತೆ ಕಾಣುತ್ತಲಿದೆ. ಆ ರೂಪಾಭಿರಾಮ ರಮಣೀಯ ನಾಭಿಯ ಕುಣಿ ಮತ್ತು ತ್ರಿವಳಿರೇಖೆಗಳನ್ನು ತೃಷ್ಣಾಭಿಮಾನಿತ ನಯನಗಳಿಂದ ಅವಳ ನಡುಕಟ್ಟಿನ ಪದಭ್ರಷ್ಟ ಅಸ್ತವ್ಯಸ್ತ ವಲ್ಕಲವೂ ನಿಟ್ಟಿಸಿ ನೋಡುತ್ತಲಿರುವಂತೆ ನೋಡಿ ವಿಸ್ಮಿತನಾದ ವಸುರಾಜ,—ರೂಪಮಯನಿಖಿಲ ನಿಸರ್ಗದ ಸಕಲ ಸ್ಪಂದನ, ಅವ್ಯಂತ ಸುಚಾರು ಮಾಟ, ಸಕಲ ಮುಂಜುಳ ಶೋಭೆ ಮತ್ತು ಸಮಸ್ತ ಮತ್ತ ಕೋಮಲ ಕಾತರತೆ—ಇವುಗಳಿಂದ ರಚಿತವಾದಂತಿದೆ ಈ ವರಯೌವನನಾನಾರಿಯ ತನು. ಕವಿಕಲ್ಪನೆಯ ನಾರಿಯ ಮುಖಮುದಸ್ಪರ್ಶದಿಂದ ಪ್ರಸ್ಫುಟವಾಗುವುದಂತೆ ಬಕುಲ ಕೋರಕ; ಅವಳ ಆಲಿಂಗನದಿಂದ ಜಾಗೃತಗೊಳ್ಳುತ್ತದಂತೆ ಕುರುವಕ ಕುಟ್ಮಲ; ಅವಳ ಚರಣ ಧ್ವನಿಯಿಂದ ಮುಗುಳಿಡುವುದಂತೆ ರಕ್ತಾಶೋಕ-ಮತ್ತು ಅವಳ ಕಪೆಗಣ್ಣ ಓರೆನೋಟಕ್ಕೆ ಪುಷ್ಪಿತವಾಗುವುದಂತೆ ತಿಲಕವೃಕ್ಷ. ಅಂಥ ಕವಿ ಕಲ್ಪನಾ ನಾರಿ ಇವಳೇ ಎಂದು ಅವನು ಭಾವಿಸಿದ.

ವಸುರಾಜನ ಚಂಚಲ ನಿಃಶ್ವಾಸದ ಆಘಾತದಿಂದ ನಾರಿಯ ನಿದ್ರಾಭಂಗವಾದಂತೆ ತೋರಿತು. ಸ್ವಪ್ನದಿಂದೆಚ್ಚೆತ್ತವಳಂತೆ ಹಠಾತ್ತಾಗಿ ತೆರೆದ ಚಕ್ಷುದ್ವಯಗಳ ವಿಸ್ಮಯಮೊಂದಿಗೆ ವಸುರಾಜನತ್ತ ನೋಡಿದಳು; ವಿಪುಲ ಲಜ್ಜಾಸಿಕಂಪಿತ ಹಸ್ತಗಳಿಂದ ತ್ವರಿತ ಗತಿಯಲ್ಲಿ ನಲ್ಕಲ ಮತ್ತು ಉತ್ಪಲ ನೀಳಿಲಿಗಳನ್ನು ಕವಿಯವರೆಗೆ ಎಳೆದು ಕೊಂಡು, ತನ್ನ ಸುಂದರ ಶರೀರದ ವಿಕಚಶೋಭೆಯನ್ನು ಮುಚ್ಚಿಕೊಂಡಳು ಆ ನಾರಿ.

ವಿಸ್ಮಿತ ವಸುರಾಜ ಪ್ರಶ್ನಿಸಿದ—ಯಾರು ನೀನು ಭದ್ರೆ?

ನಸುವಿಕಸಿತ ಉತ್ಪಲಕಲಿಕೆಯಂತೆ ನಸುಹಾಸದೊಂದಿಗೆ ತುಟಿ ನಡುಗಿಸುತ್ತ ಉತ್ತರವಿತ್ತಳು ತರುಣಿ:—ನನ್ನ ಪರಿಚಯವನ್ನರಿಯೆ ನಾನು, ನೀವು ಯಾರು?

ನಮುರಾಜ—ನಾನು ಚೇದಿಪತಿ ನಮುರಾಜ.

ನಾರಿಯ ಭ್ರೂರೇಖೆಗಳು ವಿಸ್ಮಯದಿಂದ ಕಂಪಿಸಿದವು—ನೀವು ಈ ರಾಜ್ಯದ ಅಧೀಶ್ವರ, ಸುರಪತಿ ಇಂದ್ರನಿಂದ ಅನುಗ್ರಹೀತನಾದ ಶಿಷ್ಟಪ್ರತಿಪಾಲಕ ವಸುರಾಜ?

ವಸುರಾಜ: – ಹೌದು; ಆದರೆ ನೀನಾರು?

ನಾರಿ—ನಾನೊಂದು ವನಚರ ಪ್ರಾಣಿ ಮಾತ್ರ.

ವ್ಯಥಿತನಾದ ವಸುರಾಜ—ಲೋಕಲಲಾಮಾ ನಾರೀ, ಯಾವ ಉದ್ದೇಶದಿಂದ ಸತ್ಯವನ್ನು ಈ ಮಿಥ್ಯಾ ಕಠಿಣಭಾಷೆಯುಂದ ನಿಂದಿಸುತ್ತಲಿರುವೆ ನೀನು?

ನಾರಿ– ಸತ್ಯವಾಗಿಯೂ ನನ್ನ ಪರಿಚಯವನ್ನರಿಯೆ ನಾನು ವಸುರಾಜ.

ವಸುರಾಜ—ನಾನು ಊಹಿಸಬಲ್ಲೆ.

ನಾರಿ—ಊಹಿಸಿರಿ ಹಾಗಾದರೆ.

ವಸುರಾಜ—ನೀನು ಯಾರೋ ದೇವತನಯೆ. ಇಲ್ಲದಿದ್ದರೆ ದೇವರಾಜ ಇಂದ್ರನಿಂದ ಪಡೆದ ಈ ವೈಜಯಂತೀಮಾಲೆಯ ಬಾಡದ ಪಂಕಜ ಕುಸುಮಗಳಿಗಿಂತಲೂ ಪ್ರಫುಲ್ಲವಾದ ಮತ್ತು ಸುಂದರವಾದ ಆ ಮುಖಕಾಂತಿಯು ಯಾರದಾದರೂ ಮರ್ತ್ಯನಾರಿಯದಾಗಲು ಸಾಧ್ಯವೆ? ಎಂದಿಗೂ ಇಲ್ಲ.

ನಾರಿ ನುಡಿದಳು:— ಅಲ್ಲ ವಸುರಾಜ, ಬಹಳ ತಪ್ಪು ಊಹಿಸಿರುವಿ ನೀನು.

ವಸುರಾಜ— ನಿನಗಾವುದೂ ಹೆಸರಿಲ್ಲವೆ?

ನಾರಿ:—ಇದೆ ನಿಮ್ಮ ಈ ಕಾನನಭೂಮಿಯ ಸಕಲ ಪ್ರಾಣಿ, ಲತೆ ಮತ್ತು ಪುಷ್ಪಗಳಿಗೆ ಹೆಸರಿರುವಂತೆಯೇ ನನಗೂ ಒಂದು ಹೆಸರಿದೆ.

ವಸುರಾಜ—ಏನು ಹೆಸರು?

ನಾರಿ—ಗಿರಿಕಾ.

ವಸುರಾಜ—ತಿಳಿದೆ ಗಿರಿಕಾ, ನೀನು ಇದೇ ಕಾನನದ ಗಡಿಯಲ್ಲಿ ವಾಸಿಸುವ ಯಾರೋ ಋಷಿಯ ತನಯೆ.

ಗಿರಿಕಾ ಹೇಳಿದಳು:—ಏನನ್ನು ನೋಡಿ ಅರಿತುಕೊಂಡಿರಿ ವಸುರಾಜ?

ವಸುರಾಜ—ನಿನ್ನ ಈ ಸ್ನಿಗ್ಧಹಾಸ, ವಚನಮಾಧುರ್ಯ ಮತ್ತು ಶಾಂತ ಸಂಭಾಷಣೆಗಳೇ ನಿನ್ನ ಪರಿಚಯವನ್ನು ಪ್ರಕಟಿಸಿವೆ ಗಿರಿಕಾ! ಋಷಿಪಿತನ ಆಶ್ರಮದ ನೆರಳಿನಲ್ಲಿ ಲಾಲಿತವಾದ ಪುಷ್ಪಲತೆಯಂತೆ ನಿನ್ನ ತನುವಿನ ಅಪೂರ್ವಸೌಂದರ್ಯ ನನ್ನನ್ನು ಮುಗ್ಧಗೊಳಿಸಿದೆ ಗಿರಿಕಾ!

ಗಿರಿಕಾ—ತಪ್ಪು ತಿಳಿದಿರುವಿರಿ ವಸುರಾಜ! ನನಗೆ ಯಾವ ತಂದೆಯೂ ಇಲ್ಲ.

ಆಶ್ಚರ್ಯಗೊಂಡ ವಸುರಾಜ:—ಪಿತನಿಲ್ಲ? ನಿನಗೆ ನಿನ್ನ ಪಿತನ ಪರಿಚಯವಿಲ್ಲವೆ?

ಗಿರಿಕಾ—ಇಲ್ಲ.

ಕೆಲವು ಕ್ಷಣ ಚಿಂತಾಸ್ಥಿತನಂತೆ ನಿಂತೇ ಇದ್ದ ವಸುರಾಜ. ನಂತರ ಸ್ಮಿತಹಾಸವೊಂದಿಗೆ ಪುಲಕಿತ ಸ್ವರದಲ್ಲಿ ನುಡಿದ:–ತಿಳಿದೆ ನಾನು ಗಿರಿಕಾ; ನೀನೊರ್ವ ಅಪ್ಸರಿಯ ಸಂತಾನ.

ಗಿರಿಕಾ—ಇಂತೇಕೆ ನಿರ್ಧರಿಸಿದಿರಿ ವಸುರಾಜ!

ವಸುರಾಜ—ಹೌದು, ನಿನ್ನ ಆ ವಿಹ್ವಲಮಯ ಎರಡು ನಯನ ತಾರಕೆಗಳನ್ನು ನೋಡಿಯೇ ಅರಿತುಕೊಳ್ಳಬಲ್ಲವನಾದೆ ನಿನ್ನ ಜನ್ಮ ಪರಿಚಯವನ್ನು. ನೀನೊರ್ವ ಅಪ್ಸರಿಯ ಪ್ರಣಯಜಾತ ಸಂತಾನ. ನಿನ್ನ ನಯನಗಳಲ್ಲಿಯ ಆ ಪ್ರಣಯದ ಉದ್ಭಾಸ, ನಿನ್ನ ಓಷ್ಠಮುದ್ರೆಯ ಆ ಮಿಲನ ಕಾತರದ ಆನಂದದ ಸ್ಮೃತಿಯು ಸುಂದರ ರೇಖೆ ಅವುಗಳಿಂದಲೇ ಜನ್ಮಲಾಭ ಪಡೆದಿವೆ.

ಗಿರಿಕಾ—ಇಲ್ಲ ವಸುರಾಜ, ಅಪ್ಸರತನಯೆಯಲ್ಲ ನಾನು. ದಿಙ್ಮೂಢನಂತೆ ನೋಡುತ್ತಲೇ ಇದ್ದ ವಸುರಾಜ:–ಹಾಗಾದರೆ ಯಾರು? ನೀನು.

ಗಿರಿಕಾ—ಊಹಿಸಿರಿ ವಸುರಾಜ.

ವಸುರಾಜ—ನೀನೇನಾದರೂ ನಿರ್ವಾಸಿತಳಾದ ರಾಜತನಯೆಯೇನು?

ಗಿರಿಕಾ ನಗತೊಡಗಿದಳು:—ಅಲ್ಲ ವಸುರಾಜ.

ವಸುರಾಜ—ಹಾಗಾದರೆ ನೀನು ಯಾರಾದರೊಬ್ಬ ಅವಿವಾಹಿತ ಕುಮಾರಿಯ ಗುಪ್ತಪ್ರಣಯದ ಸೃಷ್ಟಿಯೇನು?

ಗಿರಿಕಾ—ಅಲ್ಲ ವಸುರಾಜ.

ವಸುರಾಜ ವಿಷಣ್ಣಭಾವದಲ್ಲಿ ನುಡಿದ:–ಪರಾನುರಾಗಿಣಿಯಾದ ಹೆಳ್ಳಿಯು ನಾರಿಯೊರ್ವಳ ಸಂತಾನ ನೀನೆಂದುಕೊಳ್ಳುವೆ. ಲೋಕಾಪವಾದದ ಭೀತಿಯಿಂದ ಆದೇ ಆಗ ಭೂಮಿಗೆ ಬಿದ್ದ ನಿನ್ನ ಶಿಶುದೇಹವನ್ನು ಈ ವನಭೂಮಿಯ ತರುವಿನ ಛಾಯಾತಾಣದಲ್ಲಿ ತೊರೆದು ಹೊರಟುಹೋಗಿದ್ದಾಳೆ ಆ ನಿಷ್ಕರುಣಾಂ.

ಗಿರಿಕಾ—ಅಲ್ಲ ವಸುರಾಜ.

ವಸುರಾಜ—ಇನ್ನು ಊಹಿಸುವ ಶಕ್ತಿ ಇಲ್ಲ ನನಗೆ. ನೀನೇ ನಿನ್ನ ಜನ್ಮಪರಿಚಯವನ್ನು ತಿಳಿಸು.

ಗಿರಿಕಾ—ಆದರೆ....ನನ್ನ ಪರಿಚಯವನ್ನರಿತು ನಿಮಗೇನು ಲಾಭವಾಗಬೇಕಾಗಿದೆ ವಸುರಾಜ!

ವಸುರಾಜ—ಯಾವ ಲಾಭವೂ ಇಲ್ಲ, ಕುತೂಹಲ ಮಾತ್ರ.

ಗಿರಿಕಾ—ಕುತೂಹಲವೇಕೆ ವಸುರಾಜ?

ವಸುರಾಜ—ಈ ರಾಜ್ಯದ ಅಧೀಶ್ವರ ನಾನು. ನನ್ನ ರಾಜ್ಯದ ವನಮಯ ಪ್ರದೇಶದಲ್ಲಿ ಸಕಲ ವನಶೋಭೆಯನ್ನು ಇನ್ನಷ್ಟು ದೀಪ್ತಗೊಳಿಸಿ ಮತ್ತು ಸುಂದರಗೈದು ಈ ತರುಚ್ಛಾಯಾತಲದಲ್ಲಿ ನಿಂತಿರುವ ನೀನಾರೆಂದು ಕೇವಲು ಮತ್ತು ತಿಳಿದುಕೊಳ್ಳುವ ಅಧಿಕಾರ ನನಗಿದೆ; ಇದು ನನ್ನ ಕರ್ತವ್ಯವೂ ಆಗಿದೆ. ಅದಕ್ಕಾಗಿಯೇ ಈ ಕುತೂಹಲ.

ಗಿರಿಕಾ—ನೀನೇನಾದರೂ ನನಗಾವುದಾದರೂ ಉಪಕಾರಗೈಯಬಯಸುವಿರಾ ವಸುರಾಜ?

ಗಿರಿಕಾಳ ಹತ್ತಿರಕ್ಕೆ ನಡೆದುಬಂದು ಕಾತರ ವಿಹ್ವಲ ಮತ್ತು ಮುಗ್ಧ ನಯನಧ್ವಯಗಳ ದೃಷ್ಟಿಯನ್ನು ಬೀರುತ್ತಾ, ಸ್ವಪ್ನ ಸಂಗೀತದಂತೆ ಸಾಕಾಂಕ್ಷಾಸ್ವರದಲ್ಲಿ ವಸುರಾಜ ಹೇಳುತ್ತಲಿದ್ದ:—ನನ್ನ ಜೀವನಕ್ಕೇ ಉಪಕಾರ ಮಾಡಿಕೊಳ್ಳಬಯಸುವೆ ಗಿರಿಕಾ. ಯಾರೇ ಆಗಿರು ನೀನು, ಚೇದಿಸತಿ ವಸುರಾಜನ ಆಕಾಂಕ್ಷಿತಳು ನೀನು. ನೀನು

ನನ್ನ ಪ್ರೇಹಣೀಯಳು, ವಶಣನೀಯಳು, ಮತ್ತು ಸ್ತವನೀಯಳು. ನಾನು ನಿನ್ನ ಆ ಓಷ್ಠಪುಟದಲ್ಲಿ ಸಂಚಿತನಾಗಿರುವ ಮಕರಂದದ ಪಿಪಾಸಿ. ನೀನೇ ನನ್ನ ಜೀವನದ ತೃಷೆಯನ್ನು ದೂರಗೈಯಬಲ್ಲೆ. ಗಿರಿಕಾ. ಸಾರ್ಥಕವಾಗುವುದು ನನ್ನ ಜೀವನ ಆ ಚಿಕುರತಿಮಿರ ಛಾಯೆಯನ್ನು ಈ ಕ್ಷಣದಲ್ಲಿಯೇ ನನ್ನ ಈ ವಕ್ಷದಲ್ಲಿ ಜಿಲ್ಲಿ ಹೊರಳಾಡಿಸಿದರೆ. ವಸುರಾಜನ ಜೀವನಸಂಗಿನಿಯಾಗು ಗಿರಿಕಾ.

ಹತಾತ್ತಾಗಿ ಬಾಷ್ಪಾರ್ದ್ರವಾಗತೊಡಗಿದುವು ಗಿರಿಕಾಳ ಎರಡೂ ಕಣ್ಣುಗಳು. ಕಂಪಿತ ಕಂಠದಿಂದ ನುಡಿದಳು:—ಆದರೆ.....

ವಸುರಾಜ:—ಈ ನಿಷ್ಠ್ಯಾಸಂದೇಹವೇಕೆ ಗಿರಿಕಾ ?

ಗಿರಿಕಾ:—ಸುಳ್ಳು ಸಂದೇಹವಲ್ಲ ವಸುರಾಜ.

ವಸುರಾಜ ಚಕಿತನಾಗಿ ಪ್ರಶ್ನೆ ಮಾಡಿದ:— ನನ್ನ ಜೀವನ ಸಂಗಾತಿಯಾಗಲು ನಿನ್ನ ಮನದಲ್ಲಾವ ಆಕ್ಷೇಪಣೆ ಇದೆ ಗಿರಿಕಾ ?

ಗಿರಿಕಾ: ಹೇಳಿರಿ ನೀವು ವಸುರಾಜ, ಈ ಪರಿಚಯಹೀನ ನಾರಿ ಜಗತ್ತಿನ ಯಾವ ಮನುಷ್ಯನ ಪ್ರಿಯತಮೆಯಾದರೂ ಆಗಬಲ್ಲಳೇನು ?

ಗಿರಿಕಾಳ ಈ ಪುಷ್ಪಸೃಗಾಸಕ್ತ ಎದೆಯ ಅಂತರಾಳದಲ್ಲಿ ಯಾವ ಸ್ನೇಮಹೀನ ಹೃಪ್ತಿಂಡ ಅಡಗಿಕೊಂಡಿರಬಲ್ಲುದೆಂಬ ಬಗ್ಗೆ ನಿಮಗೆ ಸಂದೇಹವಾಗುವುದಿಲ್ಲವೇನು ? ಗಿರಿಕಾ ಎಂಬ ಹೆಸರಿನ ಈ ವನಚರೀ ನಾರಿಯ ಶರೀರದ ನೆತ್ತರಿನಲ್ಲಿ ಭಯಂಕರನಾದೊಂದು ನಿಷಮಯ ಸಂಸ್ಕಾರ ಜವಿತುಕೊಂಡಿರಬಲ್ಲುದೆಂದು ಭಯವಾಗುತ್ತಲಿಲ್ಲವೇನು ? ಇದನ್ನರಿಯಲು ಮರೆತಿರುವಿರೇನು ?

ಹತಾತ್ತಾಗಿ ಚಂಚಲಗೊಳ್ಳತೊಡಗಿತು ವಸುರಾಜನ ವಕ್ಷವ ನಿಃಶ್ವಾಸ. ಎವೆಯಿಕ್ಕದ ನೇತ್ರಗಳಿಂದ ಗಿರಿಕಾಳ ಮುಖವನ್ನು ನಿಟ್ಟಿಸತೊಡಗಿದ ಅವನು. ಅಷ್ಟಾದಶ ವರ್ಷಗಳ ಪೂರ್ವದಲ್ಲಿಯ ಘಟನೆಯು ಸ್ಮೃತಿಯೊಂದು ಅವನ ಕಲ್ಪನಾಪ್ರಪಂಚದಲ್ಲಿ ಒಮ್ಮೆಗೆ ಆರ್ತನಾದ ಮೂಡತೊಡಗಿತು. ಚೀತ್ಕಾರದ ಧ್ವನಿಯಂತೆ ನಿಚಲಿತ-ಸ್ವರದಲ್ಲಿ ಪ್ರಶ್ನಿಸಿದ ವಸುರಾಜ:-ನಿನ್ನ ಜನ್ಮಪರಿಚಯವನ್ನು ತಿಳಿಸು ಅಪರಿಚಿತೆ ! ಹೇಳು ಯಾರು ನಿನ್ನ ತಾಯಿ ?

ಗಿರಿಕಾ:—ನನ್ನ ತಾಯಿ ಶಕ್ತಿಮತಿ.

ಎರಡೂ ಕಣ್ಣುಗಳನ್ನು ಮುಚ್ಚಿಕೊಂಡು ಸ್ತಬ್ಧನಾಗಿ ನಿಂತೇ ಇದ್ದ ವಸುರಾಜ. ಗಿರಿಕಾಳ ಒಂದೇ ಒಂದು ಮಾತಿನ ಆಘಾತದಿಂದ ಒಮ್ಮೆಗೇ ಅಂಧನಾಗಿಬಿಟ್ಟಿತು ವಸುರಾಜನ ಜಿಜ್ಞಾಸೆ ಸರ್ವಸ್ವವೂ. ಶಿಷ್ಟಪ್ರತಿಪಾಲಕ ವಸುರಾಜನ ಕೈಯಲ್ಲಿದ್ದ ವೇಣುಯಷ್ಟಿ ಥರ-ಥರ ಕಂಪಿಸತೊಡಗಿತು. ಯಾವುದೋ ಒಂದು ವ್ಯಂಗ್ಯದ ಅಟ್ಟಹಾಸದ ಆಘಾತದಿಂದ ಅವನ ಕಠೋರನ್ಯಾಯಶಾಸನವಿಧಿಯು ಗೋಡೆ ಜೀರ್ಣವಾಯಿತು. ಹೀಗಾದುದರ ಶಬ್ದ ಅವನ ಕಿವಿಗೆ ಕೇಳಿಸಿತು. ಹದಿನೆಂಟು ವರ್ಷಗಳ ಹಿಂದೆ ಒಂದು ಪ್ರಭಾತದ ಕ್ರಂದನನಿರತಳಾದ ನಾರಿಯೋರ್ವಳ ಜಲ್ಪುಪೂರ್ಣ ಚಕ್ಷುಗಳ ಪ್ರಾರ್ಥನೆಯು ಇಷ್ಟು ದಿನಗಳ ನಂತರ ವಸುರಾಜನ ಸಮ್ಮುಖಕ್ಕಾಗಮಿಸಿ ಸ್ಪರ್ಶಿಸುತ್ತಲಿದೆ—ಈಗ ಹೇಳು ಶಿಷ್ಟಪ್ರತಿಪಾಲಕ ವಸುರಾಜ, ಈ ಜೀವನವೀಗ ಸತ್ಯ:—ನಾಗಿಯೂ ಅಂತ್ಯಜಾಧಮ ಜೀವನೆ ?

ಅರಿಯಲಾಗಲಿಲ್ಲ ವಸುರಾಜನಿಗೆ – ಅವನ ಭಾವನಾಭಿಭೂತ ಹಾಗೂ ವ್ಯಥಿತ ಚಕ್ಷುದ್ವಯದಿಂದ ಹರಿದ ಮಣಿಸರದಂತೆ ಅಶ್ರುಧಾರೆ ನೆಲದ ಮೇಲೆ ಜಿಲ್ಲಿಬಿದ್ದಿದೆ.

ಆದರೆ ಇದನ್ನು ಕಂಡ ಗಿರಿಕಾ ಆಶ್ಚರ್ಯಗೊಂಡಳು. ವಿಚಲಿತ ಭಾವದಿಂದ ಆ ಕಂಬನಿಯ ಮುತ್ತುಗಳನ್ನಾಯ್ದು ಧರಿಸಲಿಕ್ಕೇನೋ ಎನ್ನುವಂತೆ ಕೈಚಾಚುತ್ತಾ ವಸುರಾಜನ ಹತ್ತಿರ ಬಂದು ನಿಂತಳು. ವ್ಯಥಿತ ಸ್ವರದಲ್ಲಿ ನುಡಿದಳು:- ಇದೇನು ವಸುರಾಜ ?

ತೊಯ್ದು ಹಾಗು ಮುಚ್ಚಿದ ಕಣ್ಣುರೆಪ್ಪೆಗಳನ್ನರಳಿಸುತ, ಗಿರಿಕಾಳ ಮುಖವನ್ನು ನಿಟ್ಟಿಸಿ ನೋಡುತ್ತಲಿದ್ದ ಅವನು, ಮರುಕ್ಷಣದಲ್ಲಿ ಕಾಂಚನ ಲತೆಯಂತೆ ಲಾಲಿತವಾದ ತನುವಿನ ಗಿರಿಕಾಳನ್ನು ಎರಡೂ ಬಾಹುಗಳ ಆಲಿಂಗನದಲ್ಲಿ ಬಂಧಿಸಿ ಹಿಡಿದು ಎದೆಗೊತ್ತಿಕೊಂಡ; ಅವನ ಹುಸಿ ನ್ಯಾಯವಿಧಿಯ ಅಂಧಕಾರವನ್ನು ಚೂರ್ಣಗೈದುಬಿಟ್ಟು, ಅದ್ಭುತವಾದೊಂದು ಸತ್ಯದ ಸುಸ್ವಪ್ನವು ಶರೀರಧಾರಿಣಿಯಾಗಿ ಇಷ್ಟು ದಿನಗಳ ನಂತರ ಅವನ ನೆರೆಯಲ್ಲಿ ಕಾಣಿಸಿಕೊಂಡಿತು.

ಗಿರಿಕಾ ನುಡಿದಳು:—ತಪ್ಪು ಮಾಡಿದಿರಿ ವಸುರಾಜ. ನಾನು ಒರ್ವ ನಿರ್ಗೃಹೀತಳ ನಿರಾನಂದ ಜೀವನದ ಆರ್ತನಾದದಿಂದ ಹುಟ್ಟಿದವಳು. ನಿಮ್ಮ ನ್ಯಾಯವಿಧಿಯ ಫೃಣತ್ಸ ನಾನು, ನಿಮ್ಮ ನ್ಯಾಯ ಸಧಿಯಿಂದ ನಿಂದಿತಳಾದವಳು ನಾನು!

ವಸುರಾಜ:— ನೀನು ಮೋಕ್ಷಸರ್ವಸ್ವ, ನಿರ್ಮಲೆ ! ನೀನ ಪುರಸ್ಕೃತೆ, ಅನಿಂದಿತ ಗೀತೆ.

ಗಿರಿಕಾ—ಈ ಜಗದ ಒಂದು ಮುರ್ಖಟನೆ ನಾನು; ಅಭಿಲಾಷೀನ ಸೃಷ್ಟಿ ನಾನು. ನನ್ನ ಜನ್ಮ ಪರಿಚಯವನ್ನು ಬಲ್ಲಿರಿ ನೀವು.

ಗಿರಿಕಾಳ ಪ್ರತಿವಾದವನ್ನು ಚಕಿತ ಮೂಂಬನದ ಆಘಾತದಿಂ ಸ್ತಬ್ಧಗೈಯುತ್ತಾ ವಸುರಾಜ ನುಡಿದ:- ನೀನರಿಯೆ. ನಿನ್ನ ತಾಯಿ ಶಕ್ತಿಮತಿಯೂ ನಿನ್ನ ಜನ್ಮಪರಿಚಯವನ್ನರಿಯಳು. ನಾನೂ ಅರಿ ತಿರಲಿಲ್ಲಿ ಗಿರಿಕಾ. ಇದರಿಂದು ಅರಿತೆ ನಾನು.

ಈ ಮಾತಿನ ತಿರ್ಥವನ್ನರಿಯದೆ ಸ್ಪುಟ್ಟಾಕುಲ ನಯನನಗಳಿಂ ಸ್ಪರಣಿಯ ನಿನರ ವಸುರಾಜನ ಮುಖವನ್ನು ನೋಡುತ್ತಲಿದ್ದಳು ಗಿರಿಕಾ.

ವಸುರಾಜ ಹೇಳಿದ:—ಈ ನಿಖಿಲಾಂಡದ ಸಕಲ ಪ್ರಾಣಿಗಳ ತಂದೆಯಾರೋ ಅವನವೇ ಅಭಿಲಾಷೆಯ ಸೃಷ್ಟಿ ನೀನು.

ಅರುವತ್ತರ ಆನಂದಕಂದರು

(ಪತ್ರಪ್ರಬಂಧ)

ಶೀ ಚಂದ್ರಶೇಖರ ಕಂಬಾರ ಬಿ. ಎ. (ಆನರ್ಸ್), ಧಾರವಾಡ

ಪ್ರಿಯ ಅಪ್ಪಾಸಾಹೇಬ,

ಆನಂದಕಂದರಿಗೆ ಅರುವತ್ತು ತುಂಬಿತು. ನಾಡಿನ ಇಡಿಯಲ್ಲದಿದ್ದರೂ ಪುಡಿಭಾಗದವರಾದರೂ ಅವರನ್ನು ಗೌರವಿಸಿದರು. ೫೫-೩೦ ವರ್ಷಗಳಿಂದ ಪುಷ್ಟಿಗೊಂಡ ಅವರ ತಪಸ್ಸಿಗೆ ನಾಡು-ನುಡಿ-ಸಾಹಿತ್ಯಾರಾಧಕರೂ ರಸಿಕರೂ ಕೊಟ್ಟ ಸಾಸ-ಮರ್ಯಾದೆ ಫನತೆ-ಗೌರವಗಳೇನೂ ಕಡಿಮೆಯವಲ್ಲ. ನೆಗಹಲಾರದಷ್ಟು—ತಿಣುಕಿದರೂ ನುಸುಕಾಡದಷ್ಟು — ನೋವು ಸಂಕಟ!—ಇನ್ನೇನಯ್ಯಾ ಬೇಕು? ಅವನ್ನು ಸಹಿಸುವ ಅವರ ಧೈರ್ಯದಷ್ಟೇ ಬಲಶಾಲಿಯಾದುದು, ನೋಡುತ್ತ ನಿಲ್ಲುವ ನಮ್ಮ ಎದೆ ಕೂಡ. ಏನೇ ಆದರೂ ದೇವನೆಂಬೊಬ್ಬ ನಿಜವಾಗಿ ಇದ್ದುದೇ ಆದರೆ, ಅವರಿಗೆ ಅವನೇ ಆಯುರಾರೋಗ್ಯವನ್ನು ಅವಶ್ಯವಾಗಿ ಕೊಡಬೇಕು.

ಕವಿ ಆನಂದಕಂದರ ಪರಿಚಯವನ್ನಾಗಲಿ, ಸಂಶೋಧಕ ಬೆಟಗೇರಿಯವರ ಬಗೆಗಾಗಲಿ, ಅಥವಾ ಕಾದಂಬರಿಕಾರ ಕೃಷ್ಣಶರ್ಮರ ವಿಷಯವಾಗಲಿ ಹೇಳಹೋಗುವ ಅಧಿಕಪ್ರಸಂಗತನ ಈಗ ಬೇಡ, ನಾವು ಪ್ರಾಥಮಿಕಶಾಲೆಯಲ್ಲಿರುವಾಗ 'ಎನಿತು ಇನಿದು ಈ ಕನ್ನಡ ನುಡಿಯು' ಎಂದು ರಾಗಬದ್ಧವಾಗಿ ಹಾಡಿ ನಲಿದುದು ನಿನಗೆ ನೆನಪಿರಬೇಕು. "ಕುರಿಯ ಮರಿ ಬೇಕೇನು ಕುರಿಯ ಮರಿ" ಎಂದು ಆಡಿದ್ದು, "ಏರಿತು ಗಗನಕೆ ನಮ್ಮ ಧ್ವಜಾ" ಎಂದು ಒದರಿದ್ದು—ಎಲ್ಲಾ ಎಲ್ಲಾ ನಿನಗೆ ನೆನಪಿರಬೇಕು. ನಾವು ಮರೆಯುತ್ತೇವೆಂದರೂ ಅವು ಮರೆಯಿಸಿಕೊಳ್ಳಬೇಕಲ್ಲ! ತಿಳಿವು ಮೂಡಿದಾಗಲೇ ಆನಂದಕಂದರ ಅಪ್ರತ್ಯಕ್ಷ ಪರಿಚಯ ನಮಗಾಯ್ತು. ಅಂದಿನ ಆ ನಾದದ ನೋಡಿಯು ಇಂದಿಗೂ ನನ್ನ ಕಿವಿಯಲ್ಲಿದೆ—ಸ್ಪಬುದ್ಧನಾದಾಗ ಸಹ ಈಗಲೂ "ಎನಿತು ಇನಿದು ಈ ಕನ್ನಡ ನುಡಿಯು"—ಎಂದು ಯಾರಾದರೂ ಹಾಡಿದರೆ, ಪದಗೂಡಿಸದಿರಲು ನನ್ನಿಂದ ಸಾಧ್ಯವೇ ಇಲ್ಲ; ಅಥವಾ ಕವಿಯೊಬ್ಬನ ಯಶಸ್ಸೆಂದರೆ ಇದೇ ಇದ್ದರೂ ಇದ್ದೀತು.

'ಜಯಂತಿ' ಅವರ ದಿನಚರಿಯ ಬಹುಭಾಗವನ್ನಾಕ್ರಮಿಸುವ ನೊಷ್ಟ ಹೊಣೆ. ಆ ಹೊಲೆ ಅಭ್ಯಾಸ—ಸಂಶೋಧನೆ—ಕವಿತೆ ಇತ್ಯಾದಿ. ಇದೀಗ ಅವರ ದಿನಚರಿಯ ಹೊಸಮುಖ. ಇನ್ನು ಹೊಲೆ ಅವರ ವಕ್ತೃತ್ವದ—ನನಗೆ ಕಂಡು ಬಂದ ಮುಖಗಳನ್ನು ನೋಡೋಣ. ಕಂಡುಬಂದ ಮುಖಗಳೂ ತಮ್ಮ ಅಂತಃಸತ್ತ್ವವನ್ನೆಲ್ಲ ನನ್ನ ಮುಂದೆ ತೆರೆದಿಟ್ಟು ತೋರಿಸೆಯೆಂದು ಹೇಳುವ ಧೈರ್ಯವೂ ನನಗಿಲ್ಲ. ಅಥವಾ ಕನ್ನಡಕದ ನನ್ನ ಕಣ್ಣು ಅವುಗಳ ಇಡಿಬಣ್ಣವನ್ನು ಕಂಡಿರಲಿಕ್ಕಿಲ್ಲ. ಮಾತ್ರವಿಷ್ಟೇ—ಕಾಣಬೇಕೆಂಬಾಸೆ ನನ್ನಲ್ಲಿ ಬಹಳ. ಕಂಡಷ್ಟೂ ಇದೆ. ಅಲ್ಲಿ—ಎಂಬುದು ನನ್ನ ಪ್ರಾಮಾಣಿಕ ನಂಬುಗೆ.

ಸಂಪಾದಕ ಬೆಟಗೇರಿ ಕೃಷ್ಣಶರ್ಮರು

ಕನ್ನಡದಲ್ಲಿ ಎರಡುಬಗೆಯ ಪತ್ರಿಕೆಗಳನ್ನು ಹೊರಡಿಸುಸುವುದು ಸಾಧ್ಯವಿದೆ. ಒಂದು—ನಿಜವಾಗಿಯೂ ಒಳ್ಳೆಯ ಸಾಹಿತ್ಯವನ್ನೊಳಗೊಂಡು ಸುಸಂಸ್ಕೃತ ಮನಸ್ಸುಗಳಿಗೆ ಪೌಷ್ಟಿಕ ಆಹಾರ ಒದಗಿಸುವುದು; ಎರಡನೆಯದಾಗಿ—ಸಾಹಿತ್ಯದ ಸೋಗಿನಲ್ಲಿ ರಾಜಕೀಯದ ಕೊಳೆ ತುಂಬಿ—ಎಬಡಾ ತಬಡಾ ಜನರನ್ನಾಕರ್ಷಿಸಿ ನೆರೆಯುವುದು. ಒಂದನೆಯದಕ್ಕೆ ಪ್ರಚಾರ ಕಡಮೆ, ಕೊಳ್ಳುವವರಿಲ್ಲ. ಎರಡನೆಯದು ತದ್ವಿರುದ್ಧ, ಸಾಕಷ್ಟು ಪ್ರಚಾರ, ಬೇಕಾದಷ್ಟು ಚಂದಾದಾರರು! ಈ ಎರಡರ ಸೌಲ್ಯ ಎಷ್ಟೋ ಹೇಗೋ ಒತ್ತಟ್ಟಿಗಿರಲಿ. ಉದ್ದೇಶ—ಸಲು—ಸರಿಯಾಮ—ಈ ದೃಷ್ಟಿಯಿಂದ ವಿಚಾರಿಸಬೇಕು. ಇವು ಜನತೆಯ ಅಭಿರುಚಿ—ಸಂಸ್ಕೃತಿಗಳಿಗೇನಾದರೂ ಕಾಣಿಕೆಯನ್ನೀಯಬಲ್ಲ ಶಕ್ತಿ ಹೊಂದಿವೆಯೇ?—ಎಂಬುದನ್ನು ನೋಡಲು ನೋಡಬೇಕು. ಈ ಕಲ್ಲಿಗೆ ಉಜ್ಜುವುದಾದರೆ—ನೊದಲಿನ ಪತ್ರಿಕೆಯೇ ನೋಲೆಸಿಕಾವುದಿಲ್ಲವೆ? ಹಾಗಿದ್ದರೆ ಇದ್ದೇ ಇದೆ—ಪ್ರಚಾರವಿಲ್ಲ—ಕೊಳ್ಳುವವರಿಲ್ಲ. ಈ ನೊದಲನೆಯ ಎಲ್ಲ ಲಕ್ಷಣಗಳನ್ನೊಳಗೊಂಡುದು "ಜಯಂತಿ". ಬರೆಯುವ ಜನ ನಮ್ಮವರಿರಲಿ—ಯಾರವರೇ ಇರಲಿ, ಮುಖ್ಯವಾಗಿ ಗುಣ ಇಷ್ಟೆಯೇ—ಎಂಬುದು ನೊದಲ ಪ್ರಶ್ನೆ. ಈ ಪ್ರಶ್ನೆಯನ್ನು ಕನ್ನಡದ ಎಷ್ಟು ಪತ್ರಿಕೆಗಳು ಅನುಸರಿಸುತ್ತಿವೆ? ಹೊಸ ಲೇಖಕನೊಬ್ಬನ ಪರಿಚಯ ಮಾಡಿಕೊಡಲು—ಎಷ್ಟು ಪತ್ರಿಕೆ?—ಏನು ಕತೆ? ಇಂಥ ಮಾತುಗಳು ಜಯಂತಿಯ ಬಗೆಗಂತೂ ನನ್ನ ಕಿವಿಯ ನೋಲೆ ಎಂದಿಗೂ ಬಿದ್ದಿಲ್ಲ. ಇದಕ್ಕೆ ಹತ್ತಾರು ಹೊಸಬರನ್ನು ಉದಾಹರಣೆಯಾಗಿ ಕೊಡಬಹುದು. ಒಬ್ಬ ವಿದ್ಯಾರ್ಥಿಯ ಕವಿತೆಗೆ ತುಸುವಾದರೂ ತೂಕವಿದ್ದರೆ, ತಿದ್ದಿಯಾದರೂ ಅದನ್ನು ಪ್ರಕಟಿಸಿಯಾರು—ಪ್ರೋತ್ಸಾಹಿಸಿಯಾರು. ಇದೀಗ ನಿಜವಾದ ಸಂಪಾದನ ಕಾರ್ಯ.

ಜಯಂತಿಯಲ್ಲಿ ಬರುವ ವಿಮರ್ಶಾವಿಭಾಗವನ್ನೇ ಕೆದರಿ ನೋಡಿದರೆ, ಅದೊಂದು ಬಗೆಯ ವಿಮರ್ಶಾಶಿಕ್ಷಣವೇ ಎಂಬುದರಲ್ಲಿ

ಯಾವ ಸಂಶಯವೂ ಇಲ್ಲ. ಅದರ ಪರಿಣಾಮ ಎಷ್ಟು ಕಾಣದಿದ್ದರೂ ಅಭಿರುಚಿಯನ್ನು ಶ್ರೀಮಂತವಾಗಿಸುವಲ್ಲಿ ಅದು ಎಂತಹ ಮಹತ್ತ್ವದ ಪಾತ್ರ ವಹಿಸುತ್ತದೆಂಬುದನ್ನು ನೆನೆಯಬೇಕು. ಸಂಪಾದಕ ಬೆಟಗೇರಿಯವರು ಮಾಡಿದ ಇನ್ನೊಂದು ಮಹತ್ತ್ವದ ಕಾರ್ಯ–ನವ್ಯ ಕವಿತೆಗೆ ಕೊಟ್ಟ ಪ್ರೋತ್ಸಾಹ. ಅರುವತ್ತರ ಈ 'ಮುಟ್ಟಾಳ ಮುದುಕನ' ನವ್ಯತೆಯ ಪ್ರೀತಿ ಮುದುಕರಂತಹ ಮಡಿವಂತ ತರುಣರಿಗೊಂದು ಪ್ರಶ್ನಾರ್ಥಕ ಚಿಹ್ನೆ! ಒಂದು ಮಾಸಿಕವನ್ನು ಆದರ್ಶವಾಗಿ ನಡೆಸಬಯಸುವವರು, ಬೆಟಗೇರಿಯವರ ಕೈಕೆಳಗೆ ಕೆಲಕಾಲವಾದರೂ ಶಿಕ್ಷಣ ಹೊಂದಬೇಕು.

ಕಾದಂಬರಿಕಾರ–ಕತೆಗಾರ ಕೃಷ್ಣಶರ್ಮರು.

ಸಾಹಿತ್ಯಕೃಷಿಯಲ್ಲಿ ಅದೊಂದು ಬಗೆಯ "ಅನಿವಾರ್ಯ" ಎಂಬುದು ಬರುವುದುಂಟು. 'ಒಬ್ಬಾಕೆಯ ಗಂಡ ಸತ್ತಾಗ ಅವಳನ್ನು ಹೇಗಾದರೂ ಮಾಡಿ ಅಳಲಿಕ್ಕೆ ಹಚ್ಚಬೇಕು—ಎಂದು ತುಂಬ ಪ್ರಯತ್ನ ಮಾಡಿದರು ಜನ.'—ಹೀಗೆಂದು ಇಂಗ್ಲಿಷ್ ಕವಿತೆಯನ್ನು ಓದಿದ್ದೀವಲ್ಲವೇ ನಾವು? ಹಾಗೇ ಕೂತಿದ್ದರೆ ಅವಳಿಗೆ ಹುಚ್ಚು ಹಿಡಿಯುತ್ತದೆ. ಹುದುಗಿದ ದುಃಖ ಅಳುವಿನ ರೂಪದಿಂದ ಹೊರಬಂದು ಎದೆಹಗುರಾಗಬೇಕು. ಇಲ್ಲಿ ಜೀವಿಸಬೇಕೆಂದಿದ್ದರೆ ಅಳು—ಅನಿವಾರ್ಯ. ಕಂಡುಂಡು ಮರೆಯಲಾಗದ ಅನುಭವಗಳಿಂದ ಬಿಡುಗಡೆ ಹೊರೆಯಬೇಕಾದರೆ, ನಿಜವಾದ ಕವಿಗೆ ಕಲೆಗಾರನಿಗೆ ಅವುಗಳ ಅಭಿವ್ಯಕ್ತಿಯೂ ಅನಿವಾರ್ಯ. ಕೃಷ್ಣಶರ್ಮರ ಕೃಷಿಯೆಲ್ಲಾ ಇಂತಹ ಅನಿವಾರ್ಯವೇ ಈ ಮಾತಿಗೆ ಅವರ ಕತೆಗಳನ್ನು ನೋಡಬಹುದು. ಹಾಗೇ ಕಾದಂಬರಿಗಳನ್ನು ಕವಿತೆಗಳನ್ನು–ಇನ್ನುಳಿದ ಅವರ ಸಾಹಿತ್ಯವನ್ನು ಸಹ. ಅವರ ಹುಟ್ಟುವ್ದು ಜೇಳಿಕೇಳಿ, ಹಳ್ಳಿಯಲ್ಲಿ ಉಂಡಮ್ಟು ಬೆಳೆದದ್ದು ಹಳ್ಳಿಯ ಮಣ್ಣಿನಲ್ಲಿ. ಹೀಗಾಗಿ ಅವರ ವ್ಯಕ್ತಿತ್ವ ಕೃತಿಗಳಲ್ಲೆಲ್ಲಾ ಒಂದು ಬಗೆಯ ಮಣ್ಣಿನ ವಾಸನೆ ಇಡಗಿರುವುದುಂಟು ನೆಲದ ಮೇಲೆ ಕುಳಿತು ಕಾಣದ ಸ್ವರ್ಗವನ್ನು ಬಣ್ಣಿಸುವ ಲೇಖಕರು ಎಷ್ಟು ಜನ ನಮ್ಮಲ್ಲಿಲ್ಲ? ಅದಾಗಬಾರದು. ಕಂಡುದನ್ನೇ ಉಂಡುದನ್ನೇ ಚಿತ್ರಿಸಬೇಕು. ಅಂದಾಗ ಮಾತ್ರ "ಸಾಹಿತ್ಯ ಸಂಜೆನೆ" ಎಂಬ ಅಪವಾದನೆಯಿಂದ ಬಿಡುಗಡೆಯಾದೀತು. ಬಿಡಿಸಿದ ಚಿತ್ರಕ್ಕೊಂದು ಬೆಲೆ ಬಂದೀತು. ಈ ಬಗೆಗೆ ಅವರೇ ಹೀಗೆ ಹೇಳಿದ್ದಾರೆ—"ನನ್ನ ಸಣ್ಣ ಕತೆಗಳಲ್ಲಿ ನನ್ನ ಜೀವನದ ಅನುಭವದ ಛಾಯೆ ಪುಟಪುಟದಲ್ಲಿಯೂ ಮೂಡಿನಿಂತಿದೆ. ಹಳ್ಳಿಗರ ಬಾಳಿನ ಕಷ್ಟನಷ್ಟಗಳನ್ನೂ ಸಂಸ್ಕೃತಿ ಸೌಂದರ್ಯಗಳನ್ನೂ ನೊಂದಲಿಗೆ ತಂದವನೆ ನಾನು"—(ಸಾಹಿತ್ಯಜ್ಞರ ಆತ್ಮಕಥನ ಪು. ೯೯).

ಹೀಗೆ ಅವರ ಕತೆಗಳಿಗೊಂದು ಐತಿಹಾಸಿಕ ಮಹತ್ತ್ವವೂ ಇದೆ. ಅವರ ಕತೆಗಳ ಬಗೆಗೆ ನನಗೆ ನೊಂದಲಿನಿಂದಲೂ ಇದ್ದ ಅಭಿಮಾನ ಎಂಥದು? ಮತ್ತು ಯಾಕೆ? ಎಂಬುದು ನನಗೀಗ ಗೊತ್ತಾಗಿರಬೇಕು. ಮಣ್ಣಿನ ಹಿನ್ನೆಲೆಯಲ್ಲೇ ಅವರ ವ್ಯಕ್ತಿತ್ವದ ಬೆಳವಣಿಗೆಯಾಯ್ತು; ಆದ್ದರಿಂದಲೇ ಆ ಜೀವನವನ್ನು ಜೀವಂತವಾಗಿ ಚಿತ್ರಿಸಬಲ್ಲ ಸಮರ್ಥ ಶಕ್ತಿಯನ್ನವರು ಪಡೆದಿದ್ದಾರೆ. ಇಲ್ಲಿ ಅವರ ಮಾತುಗಳು ತುಂಬ ಮನನೀಯವಾಗಿವೆ:

"ಮುಡಿಯುವ ಎತ್ತುಗಳು, ಕಟ್ಟಿ ಮೇಯಿಸುವ ಹೋರಿಗಳು, ಹೈನದ ಬನಗಳು, ಎಳಗರುಗಳು, ನೀರಿಗಾಗಿ ಲಗಳಿ ಹೇರುವ ಕೋಣ, ಇವೆಲ್ಲವುಗಳ ಪರಿಚಯ ಗೆಳೆತನಗಳಿಂದ ನನ್ನ ಮನಸ್ಸು ಅದಿಷ್ಟೋ ಸಂಸ್ಕಾರ ಪಡೆದಿರಬಹುದು. ಮನೆಯಲ್ಲಿ ಕೆಲಸಕ್ಕೆ ಇರುವ—ಆಗಾಗ ಕೆಲಸಕ್ಕೆ ಬರುವ—ಅಳುಗಳು; ಹೊಲ ಮಾಡಿದ ರೈತರು; ಹತ್ತಿ ಬಿಡಿಸಲಿಕ್ಕೆ, ಹತ್ತಿ ಆರಿಯಲಿಕ್ಕೆ,—ಬರುವ ಹಳ್ಳಿಯ ಹೆಂಗುಸರು, ನಟ್ಟು ಕಡಿಯಲಿಕ್ಕೆ ಬರುವ ಕೂಲಿಯಾಳುಗಳು—ಇವರೊಂದಿಗೆ ಕಳೆದ ಕಾಲ, ನನ್ನ ಅಂತಃಕರಣದ ಅರಳಿಕೆಗೆ ಕಾರಣವಾಗದೇ ಇಲ್ಲ.—(ಸಾಹಿತ್ಯಜ್ಞರ ಆತ್ಮಕಥನ ಪು. ೧೦೦)

ಆಯ್ದುಕೊಂಡ ವಸ್ತು ಎಲ್ಲಿಯದೇ ಎಂದಿನದೇ ಆಗಿರಲಿ—ಅದನ್ನು ಕಲೆಯಲ್ಲಿ ಎರಕ ಹೊಯ್ದಾಗ ಜೊತೆಲಿಗೆ ಗಮನಕ್ಕೆ ತೆಗೆದುಕೊಳ್ಳಬೇಕಾದುದು--ಅದು ಕಲಾತ್ಮಕವಾಗಿದೆಯೇ--ಆ ಮೇಲೆ ಲೇಖಕನ ಉದ್ದೇಶ ಈಡೇರಿದೆಯೇ? ಕಲಾತ್ಮಕವೆನ್ನುವಲ್ಲಿ ಇನ್ನೊಂದು ಪ್ರಶ್ನೆ ಏಳುತ್ತದೆ: ಕಲಾತ್ಮಕವಾಗಿದ್ದರೂ ಬರೀ ಅದ್ಭುತ ಕಲ್ಪನೆಗಳ ಹೆಣಿಕೆಯಲ್ಲೇ ಬೆಳಗಾದರೆ? ಅದೂ ಒಂದು ಬಗೆಯ ವಂಚನೆಯೇ. ಇಷ್ಟೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಅವರ ಐತಿಹಾಸಿಕ ಕಾದಂಬರಿಗಳನ್ನು ಈಕ್ಷಿಸಬೇಕು. ನಮ್ಮಲ್ಲಿ ಐತಿಹಾಸಿಕ ಕಾದಂಬರಿ ಇವೆ—ಇಲ್ಲವೆಂದಲ್ಲ, ಆದರೆ ಐತಿಹಾಸಿಕವ ಪುಡಿವಸ್ತುಸಿಗೆ ಆ—ಈ ಪಲವು ಹದಿನೆಂಟು ಕಲ್ಪನೆಗನ್ನೆಲ್ಲಾ ಬೆರಸಿ, ಒಂದು ಬಗೆಯ ಜಾದೂ ಮಾಡಿದಂತೆ ಬರೆನರೆ–ಅದು ಒಳ್ಳೆಯ ಕೃತಿಯೇ? ಅಥವಾ ಸಿಕ್ಕಷ್ಟು ವಿಸ್ತುನಿನಲ್ಲಿ ತಾದಾತ್ಮ್ಯ ಹೊಂದಿ ಸಂಶೋಧಕನಾಗಿ ವಿಮರ್ಶಕನಾಗಿ ಬರೆದ ಕಾದಂಬರಿ ಒಳ್ಳೆಯದೆ?– ಎಂಬುದನ್ನು ಇದೀಗ ನಿರ್ಣಯಿಸುವ ಕಾಲ ಬಂದಿದೆ. ಒಂದು ಸೇಳೆ ಆ ಜಾದೂಗಾರಿಕೆ ಬಹಳ ಜನರನ್ನು ಆಕರ್ಷಿಸಬಹುದಾದರೂ, ಬಹುಕಾಲ ಬದುಕುವ ದಾರ್ಢ್ಯವನ್ನು ಹೊಂದಲಾರದು. ಪ್ರತಿಯಾಗಿ ಜನತೆಯ ಒಂದು ಕಾಲದ ಅಭಿರುಚಿಯನ್ನು ಮುಂದಿನವರಿಗೆ ತೋರಿಸೀತು, ಅಷ್ಟೆ. ಐತಿಹಾಸಿಕ ಕಾದಂಬರಿಕಾರ ಮುಕ್ಕಣ್ಣನಾಗಿರಬೇಕು. ಒಂದು ಇತಿಹಾಸವನ್ನು ಕೂಲಂಕಷವಾಗಿ ತಿಳಿದಿರಬೇಕು, ಇನ್ನೊಂದರಿಂದ ಸಂಶೋಧನೆ ಸಾಗಬೇಕು. ಇಷ್ಟಾಗಿಯೂ ಮೂರನೆಯ ಕಣ್ಣಿನಲ್ಲಿ ಸದಾ ಜಾಗೃತವಾದ ಸತ್ಯ ಪ್ರಜ್ಞೆಯುಳ್ಳ ವಿಮರ್ಶನ ಶಕ್ತಿ ಇದ್ದಿರಬೇಕು. ಪ್ರತಿಫಿ—ಕಲೆಯಂತೂ ಸರಿಯೇ ಸರಿ. ಇಂದಿಗೆ ಮೂರು ವರ್ಷಕ್ಕೆ ಮುನ್ನ ಅವರ ಕಾದಂಬರಿಗಳನ್ನೋದಿದಾಗ ನಾನಲ್ಲಿ ಕಂಡುಮು ಏನನ್ನೇ. ಅದಕ್ಕಾಗಿ ಅವರ ಐತಿಹಾಸಿಕ ಕಾದಂಬರಿಗಳನ್ನು ನಾನು ಮೆಚ್ಚಿಕೊಂಡಿದ್ದೇನೆ.

ಸಂಶೋಧಕ ಬೆಟಗೇರಿಯವರು

ಶ್ರೀ. ಮುಗಳಿಯವರ ಸಾಹಿತ್ಯಚರಿತ್ರೆಯ ಮುನ್ನ ಬೆಟಗೇರಿಯವರು ಸಂಶೋಧಕರೂ ಹೌದೆಂಬ ಮಾತು ನನಗೆ ಗೊತ್ತಿರಲಿಲ್ಲ. ಬಹಳ ಕಡೆಗೆ ಅವರ ಹೆಸರು ಬಂದಿರುವುದರಿಂದ, ಕುತೂಹಲಿಯಾಗಿಯೇ

ಅವರ "ಕರ್ನಾಟಕ ಜನಜೀವನ" ವನ್ನು ಓದಿದೆ. ಅದರಿಂದ ನನಗೆ ಮನದಟ್ಟಾದ ಸಂಗತಿಗಳು ಎರಡು: ಒಂದು—ಅವರ ಸಂಶೋಧಕ ಶಕ್ತಿ; ಎರಡನೆಯದು ಕನ್ನಡ ಸಾಹಿತ್ಯದ ಮೇಲಿನ ಅವರ ಗಟ್ಟಿ ಪ್ರಭುತ್ವ. ಅಲ್ಲಿಯ ಸಂಶೋಧನೆಯ 'ವಜನ' ಎಷ್ಟೆಂದು ನನ್ನನ್ನು ಕೇಳಬೇಡ. ಅದರಲ್ಲಿಯ "ಕೋಟಿಗಾಳಗ" ಓದಿ "ರಾಯಚೂರು ಕೋಟೆಯನ್ನು ಹತ್ತು ಸಲ ನೋಡಿದ್ದೀನಾದರೂ ಹೇಗೆ ನೋಡಬೇಕೆಂಬದು ಗೊತ್ತಿರಲಿಲ್ಲ. ಆದರೆ ನಿಮ್ಮ ಪ್ರಬಂಧ ನೋಡಿದ ಸಂತರ ಅದರ ಪೂರ್ತಿ ಅರ್ಥವಾಯಿತು,"—ಎಂದು ಬಿ. ಎಂ. ಶ್ರೀ. ಉದ್ಗಾರ ತೆಗೆದಂತೆ! ಸಂಶೋಧಕನ ಮೂಗು ಸದಾ ಹರಿತವಾಗಿರಬೇಕು. ಏನಾದರೊಂದು ಪದವೋ, ಪ್ರಯೋಗವೋ ವಿಲಕ್ಷಣವಾಗಿ—ಒಮ್ಮೊಮ್ಮೆ ವಿಕಾರವಾಗಿ—ಕಂಡಾಗೆಲ್ಲಾ ಅದರ ಮೂಲವಾಸನೆಯನ್ನು ಹುಡುಕತೊಡಗುತ್ತಾನೆ. ಅಗಯಬೇಕಾದಲ್ಲಿ ಅಗಿದು—ಬಗಿದು ಅದರ ಸುಳುಹು ಹಿಡದು ಹೊರಡುತ್ತಾನೆ. ಎಂತಹ ತಾಳ್ಮೆ ಬೇಕು? ಈ ಎಲ್ಲಾ ಗುಣಗಳು ಅವರಲ್ಲಿವೆಯೆಂದು ನನ್ನ ಪ್ರಾಮಾಣಿಕ ನಂಬುಗೆ. ಸೊನ್ನೆ ಸೊನ್ನೆ ಅವರನ್ನು ಭೆಟ್ಟಿಯಾಗಿದ್ದೆ. ಅಂದಿನ ಅವರ ಮುಖದಲ್ಲಿಯ ಸಂತೋಷದಷ್ಟೇ ಸಂತೋಷವನ್ನು ಪ್ರದರ್ಶಿಸಬೇಕಾದರೆ, ನನಗೆ ಹತ್ತು ಸಾವಿರ ರೂಪಾಯಿ ಸಿಗಬೇಕು! ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ "ಪಾಸಣ್ಯಾ" ಎಂದು ಒಂದು ಶಬ್ದ ಇದೆಯಲ್ಲಾ—ಅದು ಮರಾಠೀ ಶಬ್ದವೆಂದೂ ಈ ಪರಿಗೆ ಅವರ ಕಲ್ಪನೆಯಾಗಿತ್ತು. ಈಗ ಅದು ಸಂಸ್ಕೃತ "ಪ್ರಾಹುಣ" ಎಂಬುದರಿಂದ ಪ್ರಾಕೃತಕ್ಕೆ ಬಂದು, ಅಲ್ಲಿಂದ ಕನ್ನಡಕ್ಕೆ ನುಣುಚಿ ಬಂದ ಶಬ್ದವೆಂದು ಕಂಡು ಹಿಡಿದಿದ್ದಾರೆ. ಮುಟ್ಟಾಸ ಮುಮುಕಸ ಈ ಕ್ರಿಯಾಶಕ್ತಿ ಕಂಡು, ಚಿಗುರುಮೀಸೆಯ ಸನಗೆ ನಿಜವಾಗಿಯೂ ನಾಚಿಕೆಯಾಯ್ತು. ಒಂದೆರಡು ಪಠ್ಯಪುಸ್ತಕಗಳನ್ನು ಬಾಯಪಾಠ ಮಾಡಿ ಡಿಗ್ರಿ ಹೊಡೆಸ ನಾವೆಲ್ಲಾ ಸಾಚ್ಗಿ ಪಟ್ಕೊಳ್ಳಬೇಕಾದ್ದೇ. ಅಲ್ಲೇನು?

ಕವಿ ಆನಂದಕಂಪರು—

(೧) ಛಂದಸ್ಸಿನ ಮೇಲಿನ ಹಿಡಿತ (೨) ಜಾನಪದ ಪ್ರಯೋಗ ಮತ್ತು ನಾಟಕೀಯತೆ ಇವಿಷ್ಟರಿಂದ ಅವರ ಕವಿತೆಗಳನ್ನು ನೋಡೋಣ.

ಇವರ ಕವಿತೆ ಓದಿದವರಿಗೆಲ್ಲಾ ಒಡೆದುಕಾಣುವ ಒಂದು ಗುಣ, ಛಂದಸ್ಸಿನ ಮೇಲಿನ ಬಿಗಿಯಾದ ಹಿಡಿತ. ಈ ಕೆಳಗಿನ ಪದ್ಯವನ್ನು ನೋಡು—

ಪ್ರೀತಿ ಅಂಬುದನೇಸು ಈ ಬಾಯಿ ಹೊಗಳೀತು
ಅದು ಎದೆಯ ಬದುಕು.

ಮೊದಲ ಸಾಲಿನಲ್ಲಿ ೫ ಮಾತ್ರೆಯ ನಾಲ್ಕು ಗಣ–ಕೆಳಗಿನವರಲ್ಲಿ ೫–೩ ಬೀಗಿದೆ. ಓದುತ್ತ ಹೋದ ಹಾಗೆ ಕೂಡ ಎಲ್ಲೂ ಲಯಭಂಗನಾಗುವು ಕಂಡುಬರುತ್ತದೆ. ಸಪ್ಯಕವಿತೆಗಳಲ್ಲಿ ಇಂಥ ಪ್ರಯೋಗ ಮಾಡಬಹುದಾದರೂ ಮೊದಲ ಸಾಲಿನ ಕ್ರಮವನ್ನಾದರೂ ತಪ್ಪಿಸಿದರೆ ಓದು ಸಮಾಧಾನವಾಗುತ್ತದೆ. 'ಅದು ಎದೆಯ ಬದುಕು'–ಎಂದು ಓದಿದ ಕೂಡಲೇ, ಇನ್ನಷ್ಟು ಏನಾದರೂ ಬೇಕೆನಿಸುತ್ತದೆ. ಅದರ ಮುಂದೆ "ಗೆಳೆಯ" ಅಥವಾ ಇನ್ನು ಯಾವುದಾದರೂ ಪದವಿಟ್ಟು ಓದಿದರೆ ಅಷ್ಟೇ ಸಮಾಧಾನವಾಗುತ್ತದೆ. ಅಂದರೆ ಇಂಥ "ಛಂದೋ ನೀರೀಕ್ಷೆ" ಮಾಡುವ ಪ್ರಸಂಗ ಬರದಿರಬೇಕಾದರೆ, ಕವಿಗೆ ಛಂದಸ್ಸಿನ ಮೇಲೆ ಬಲವಾದ ಹಿಡಿತ ಬೇಕು. ಆ ಹಿಡಿತ ಆನಂದಕಂದರಿಗೆ ಇದೆ ಎಂದು ಧೈರ್ಯವಾಗಿ ಹೇಳಬಹುದು. ಅದರಲ್ಲಿಯೂ ಜಾನಪದ ಪದ-ಪ್ರಯೋಗಗಳನ್ನು ಉಪಯೋಗಿಸಲು ಪ್ರಯತ್ನಿಸಿದಷ್ಟೂ ಗುರುಲಘುಗಳ ಎಣಿಕೆ ಹಿಗ್ಗುವುದುಂಟು—ಅಥವಾ ಕುಗ್ಗುವುದುಂಟು. ಇಂಥಲ್ಲಿ ಕವಿ ಅಂಥ ಪ್ರಯೋಗಗಳನ್ನು ಸಂಪೂರ್ಣ ಬಿಡಬೇಕು. ಹಿಡಿಯುವಂತಿದ್ದರೆ ಅಂಥ ಸಾಮರ್ಥ್ಯವನ್ನಾದರೂ ಪಡೆದಿರಬೇಕು—

ಉಳಿದಿರತೈತಿ ಹೊತ್ತು ಕೈಮಾರಾ–
ಆವಾಗ ಬೆಳಸಿ ತೈಯಾರಾ–
ಕುಂತ ತಿಂತೀವ ನಾವೆದರಾಬದರಾ–
ಏನು ರುಚಿಯವ್ವ ಬಿಳಜೋಳ ಫಲಕ....
ಬುತ್ತಿ ತೊಗೊಂಡು ಹೋಗ್ತೀನಿ ಹೊಲಕ.

(ನಲ್ವಾಡುಗಳು ಪು. ೪೧)

ಹೆಣ್ಣೊಂದರ ವರ್ಣನೆಯ ಪದ್ಯವಿದು:

ಶಾಮಂತಿಗಿ ಹೂ ಮೈಮ್ಯಾಗಿಟ್ಟರ ಬಣ್ಣವಿಲ್ಲ ಬದಲಾ
ಅಣ್ಣಾ ಬಣ್ಣವಿಲ್ಲ ಬದಲಾ....
ಸೈಯ ಬಣ್ಣದೊಳಗೆದ್ದು ಕಾಣತಾವ
ಹಣಿಯ ಸುತ್ತು ಕರುಳಾ!

(ನಲ್ವಾಡುಗಳು ಪು. ೩೧)

ನಾನು ಮೇಲೆ ಹೇಳಿದ ಎಲ್ಲ ಗುಣಗಳೂ ಇವರಲ್ಲಿ ಒಡೆದುಕಾಣಿಸುತ್ತವೆ. ಮೊದಲ ಪದ್ಯದ ರಕಾರದ ಅಂತ್ಯಪ್ರಾಸದ ಸಹಜ ಸೊಬಗು, ಎರಡನೆಯ ಪದ್ಯದ ಆ (ಬದಲಾ ಕುರುಳಾ) ಧೀರ್ಘಪ್ರಾಸ–ಎಷ್ಟು ಚೆಂದಾಗಿ ಮೂಡಿನೆಯೆಂದರೆ, ಅದನ್ನು ತೆಗೆದರೆ ಪದ್ಯಕ್ಕೊಂದು ದೊಡ್ಡ ಕೊರತೆಯೆನಿಸುತ್ತದೆ. ಅಂದರೆ ಹಳ್ಳಿಯ ಛಂದಸ್ಸಿನ ಒಳನಾಡಿಯನ್ನು ಎಷ್ಟು ಸೂಕ್ಷ್ಮವಾಗಿ ಅಧ್ಯೈಸಿಕೊಂಡಿದ್ದಾರೆ–ಎಂದು ತಿಳಿಯುವುದಿಲ್ಲವೆ?

ಬಡವರ ಮಗಳಿವಳಾದರು ಏನೋ
ಹುಡುಗಿ ರೂಪವಂತಿ–ಹೊಂದ್ಯಾವ
ನನ್ಮ ನನ್ಮ ಪ್ರೀತಿ–
ಬೆಡಗಿಯರನ ನಾ ಭಾಳ ನೋಡಿದಿನೊ
ಬ್ಯಾರೆ ಇವಳ ರೀತಿ–ಬರಿ ಹೊರ–
ಹೊಳಪ ಏನು ಮಡತಿ?

(ನಲ್ವಾಡುಗಳು ಪು. ೨೨)

'ಬಡವರ ಮಗಳಿವಳಾದರು ಏನೋ ಹುಡುಗಿ ರೂಪವಂತಿ' ಇವ್ವನ್ನು ಹಳ್ಳಿಯಲ್ಲಿ ಹುಟ್ಟಿದ ನಿಜವಾದ ಯಾವನೇ ಕವಿಯೊಬ್ಬ ಸಾಧಿಸಬಲ್ಲ; ಆದರೆ "ಹೊಂದ್ಯಾವ" ಎಂಬಂಥ ಒಂದು ೪ ಇಲ್ಲವೆ ೫ ಮಾತ್ರೆಗಳ

ತುಂಡೊಂದರಿಂದ "ನಮ್ಮ ನಮ್ಮ ಪ್ರೀತಿ" ಎನ್ನುವ ಸಾಲಿಗೊಂದು ಸೇತುವೆ ಕಟ್ಟಿರುವುದು ನಿಜಕ್ಕೂ ಜಾಣ್ಮೆಯ ಮಾತು. ಹಾಗೆಯೇ ಹೊಂದ್ಯಾವ-ಎಂಬ ಪದ ಬಿಟ್ಟು ಹೇಳಿದರೂ ಆ ಪದಕ್ಕೊಂದು ಲಯ ಇದ್ದೇ ಇದೆ. ಆದರೆ ಇವನ್ನು ಸೇರಿಸಿಯಾವ ಮೇಲೆ ಬರುವ ಸೊಗಸು ಮೊದಲಿನದಕ್ಕಿಲ್ಲ. ಇಲ್ಲಿ ಬರುತ್ತದೆ ಪಿಡಿತ, ಪ್ರಯೋಗಬುದ್ಧಿ, ಅಭಿರುಚಿಯ ಪ್ರಶ್ನೆ. ನಲ್ವಾಡುಗಳನ್ನೋದಿದವರು ನಿರಾಶಲಾಗಲಾರರು.

೩ ಜಾನಪದ ಪ್ರಯೋಗ, ನಾಟಕೀಯತೆ—

ಆಯ್ದುಕೊಂಡ ಛಂದಸ್ಸು ಜಾನಪದವಾಯ್ತು. ಬರೆಯಬೇಕಾದ ವಸ್ತು ಜಾನಪದವಾಯ್ತು. ಇಷ್ಟಕ್ಕೆ ಕವಿಯ ಜವಾಬ್ದಾರಿ ಮುಗಿಯಲಿಲ್ಲ. ಒಂದು ಬಗೆಯ ಔಚಿತ್ಯ ಪ್ರಜ್ಞೆ ಸದಾ ಕಣ್ಣು ತೆರೆದಿರಬೇಕಾಗುತ್ತದೆ ವಸ್ತುವಿನ ಜಾತಿ-ಗುಣ-ಕ್ರಿಯಾದಿಗಳಿಗನುಗುಣವಾಗಿ ವರ್ಣನೆ, ಉಪಮೆ-ರೂಪಕ ಇತ್ಯಾದಿ ಇರಬೇಕಾಗುತ್ತದೆ. ಇದಕ್ಕೊಂದು ಉದಾಹರಣೆಯೆಂದು ಶ್ರೀಮಾನ್ ಬೇಂದ್ರೆಯವರ "ಹುಬ್ಬಳ್ಳಿಯಾಂವಾ" ಪದ್ಯವನ್ನು ನೋಡೋಣ:—

ಚಹಾವ ಜೋಡಿ ಚೂಡಾದ್ಹಾಂಗ
ನೀ ನನಗಂದಾಂವಾ
ಕಣ್ಣೀನಾಗಿನ ಗೊಂಬೀಹಾಂಗs ಎದ್ಯಾಗ ನಟ್ಟಾಂವಾ

(ಸಖೀಗೀತ ಪು. ೯೨)

ಇನ್ನೂ ಅನೇಕ ಉಪಮೆ ಇಲ್ಲವೇ? ನಾವಾಗಿದ್ದರೆ "ಹೂವಿನ್ಯಾಗಿನ ಪರಿಮಳ" ಅಂತಾದರೂ ಹೇಳ್ತೇವು. ಆ ಕಡೆ ಈ ಕಡೆಯಿಲ್ಲದೆ 'ನನ್ನ ಜೂಲಿಯೆಟ್' ಎಂದಾದರೂ ಒದರೇವು. ಹೀಗೆ ಇನ್ನೂ ಏನೇನೋ-ಆದರೆ ಒಬ್ಬ ವೇಶ್ಯೆಯ ಲೋಕ ನಾವು ತಿಳಿದಷ್ಟು ಸುಸಂಸ್ಕೃತವೇ?-ವಿಶಾಲವೇ-? ಎಂಬ ಪ್ರಶ್ನೆ ಬರುತ್ತದೆ. ಇವರು ದಿನಾಲು ನೋಡುವ ವಸ್ತು ಚಹಾ-ಚೂಡಾ ಚೂಡಾ ! ಇದ್ದರೆ ಚಹಕ್ಕೆ ಸಿಹಿ. ಚಹ ಇಲ್ಲದೆ ಚೂಡಾಕ್ಕೆ ಬೆಲೆ ಇಲ್ಲ. ಹೂವು ಪರಿಮಳಗಳ ಸಂಬಂಧವನ್ನು ಅಗೆಯುವಲ್ಲಿ ಅವರ ದಪ್ಪ ಬುದ್ಧಿ ಒಪ್ಪದು. ಅಂದರೆ ಔಚಿತ್ಯ ಪ್ರಜ್ಞೆ ಎಂಥದೆಂದು ನಾನು ತಿಳಿದಿದ್ದೇನೆ-ಎಂದು ಹೇಳಿದೆ ಅಷ್ಟೆ. ಆನಂದಕಂದರ ಕವಿತೆಗಳಲ್ಲೂ ಇದೇ ಬಗೆಯ ಔಚಿತ್ಯ ಪ್ರಜ್ಞೆಯನ್ನು ಕಂಡುಕೊಳ್ಳಬಹುದು. ಹೆಣ್ಣೊಂದರ ಸೊಬಗಿದು:—

ಕಣ್ಣನೋಟ ಕಾಮನ ಬಿಲ್ಲಾ,
ಕಪ್ಪಿಬಿರಡು ಕನಡೀ ಹಳ್ಳಾ
ತುಂಡಿ ಜರದ ಕುಬಸ ನಾಜೂಕಾ
ಎದಿ ಮ್ಯಾಗಿನ ಸೆರಗಿನ ಝೋಕಾ
ಎದಿಗಿರಿದ್ಹಾಂಗಾದಿತು ಬಾಕಾ

(ಒಡನಾಡಿ ಪು. ೧೨)

ಕೆನ್ನೆಗಳನ್ನು "ಕನಡಿ ಹಳ್ಳಾ" ಎಂಬುವಲ್ಲಿಯ ಔಚಿತ್ಯವೆಚ್ಚುವಂಥದು ಹಾಗೇ ಇಗೇ ಹುಣ್ಣಿಮೆಯ ಈ ವರ್ಣನೆಯನ್ನು ನೋಡು—

ಮುಂಗಾರಿನ ನೆಲ ಹೊಂದೆಸಿದಂಟಿನ ಹಂಪರಹಾಕೆಯ್ತೆ-
ಹೆಸರು ಹುರುಳಿ ಅಲಸಂದಿ ಅವರಿಬಳ್ಳೆ-
ತ್ಯಾರಣ ಬಿಗಿದಯ್ತೆ-
ಹುಚ್ಚೆಳ್ಳಿನ ಹೊಲ ಹೂಗಳ ಅರಳಿಸಿ
ಕುಚ್ಚನು ಕಚ್ಚಿಯ್ತೆ-

....

ಹತ್ತಿಯ ಎಳಬಿಳಿ ಹಚ್ಚಹಸುರಿನಾ
ಪತ್ತಲ ನೆಯ್ವಾನ-
ಎಳ್ಳು ಪುಂಡಿ ಹೂ ನುಗ್ಗಿ ಹೆಣಿದದಕ
ಕಸೂತಿ ತೆಗೆದಾನ
ಕುಸುಬಿ ಗೋದಿ ಸಸಿ ಬಸುರಿಗೊಪ್ಪುವಾ
ಕುಪ್ಪಸ ಹೊಲದಾವ

ಇಗೇ ಹುಣ್ಣಿಮೆಯ ಕಾಲಕ್ಕೆ ಹೊಲವಲ್ಲಿ ಕಂಡುಬರುವ ಬೆಳೆಗಳಲ್ಲೀ ಈ ಬಗೆಯ ಸುಂದರವಾವ ಹಂದರ ಬಿಗಿದದ್ದು, ನಿಜವಾಗಿಯೂ ಹೊಗಳುವಂಥದು.

ಇವರ ಪ್ರಯೋಗಗಳ ಸೊಗಸೂ ಹೊಗಳುವಂಥದು. ಬೇತು, ಬಡಿವಾರ, ಬ್ಯಾಲ, ಖಾತ್ರಿ ಕೊಂಬಣಸು, ಖಬರ ಮುಂತಾದ ಪದಗಳ ಧೈರ್ಯಸ್ಥ ಉಪಯೋಗವನ್ನು ನೋಡಬೇಕು. ತರಾತುರಿ, ಕೈಮಾರಾ, ಎದುರಾಬದರಾ, ಹಾಕೆಯ್ತೆ, ಬಿಗಿದಯ್ತೆ-ಮುಂತಾದ ಪ್ರಯೋಗಗಳ ಔಚಿತ್ಯವನ್ನು ನೋಡಬೇಕು.

ನಾಟಕೀಯತೆ ನಲ್ವಾಡುಗಳಲ್ಲಿ ಬಂದ ಇನ್ನೊಂದು ಅದ್ಭುತ ಗುಣ. ಭಾವತನ್ಮಯತೆ ಕವಿಗಿರಬೇಕಾದಂತೆ ಭಾಷಾತನ್ಮಯತೆಯೂ ಇರಬೇಕಾದುದು ಮುಖ್ಯ. ದೇಸಿಯನ್ನು ಮಾರ್ಗದಲ್ಲಿಟ್ಟಿ ಹಿಡಿದುದೂ ಪಂಪನ ಯಶಸ್ಸಿಗೊಂದು ಕಾರಣವೆಂಬುದನ್ನು ಈ ಹಿಂದೆ ಸೋದಾಹರಣವಾಗಿ ಹೇಳಿದ್ದೇನಷ್ಟೆ ? ಕವಿತೆಯಲ್ಲಿ ಬಂದ ಭಾಷೆ ಭಾವಕ್ಕನುಗುಣವಾಗಿರಬೇಕು. ಹಳ್ಳಿಯಲ್ಲಿಯ ವಸ್ತುಭಾವನಾಗಿ ನೂಡಿ ಬಂದಾಗ-ಅಲ್ಲಿಯ ಭಾಷೆಯನ್ನು ಕಸಗತನಮಾಡಿಕೊಂಡವನಿಗೆ ಮಾತ್ರ ಆದರ ಅಭಿವ್ಯಕ್ತಿಯಲ್ಲಿ ಯಶ ಸಿಕ್ಕೀತು. ಬೇಂದ್ರೆಯವರ ಸಮರ್ಥ ಪ್ರಯೋಗಗಳನ್ನು ಅನುಕರಿಸಹೋಗಿ ಕೆಲ ನಾಯಿಕೊಡೆಗಳು ಬೇಸಗೆಯಲ್ಲಿ ಬತ್ತಿದ್ದುದೂ ನಿನಗೆ ಗೊತ್ತಿರಬೇಕು. ಆನಂದಕಂದರ ಇಂಥ ಉಚಿತ ಪ್ರಯೋಗ-ಭಾಷೆಯಂತೆ ಭಾವತನ್ಮಯತೆ, ಇದಕ್ಕಾಗಿ ಬಂದ ಒಳ್ಳೆಯ ನಾಟಕೀಯತೆ-ಇವಕ್ಕಾಗಿ ನಾನು ನಿಜವಾಗಿಯೂ ಮೂರು-ಹೋಗಿದ್ದೇನೆ. ಈ ಮಾತಿಗೆ ನಲ್ವಾಡುಗಳು-ಶ್ರೇಷ್ಠ ಉದಾಹರಣೆಯಾಗಿವೆ.

ಇವಳು ಯಾರೆಂದು ಆಕೆ-ಈಕೆಯನ್ನು ಕೇಳುತ್ತಾಳೆ-ಆಗ ಈಕೆ ಹೇಳುತ್ತಾಳೆ:—

ಗೊತ್ತಿಲ್ಲೇನs ಗೌಡರ ಮನಿ ಸೊಸಿ
ಮೊನ್ನೆ ಮೊನ್ನೆಯೇ ಬಂದಾಕೆ:
ಸುತ್ತುಮುತ್ತಿನ ಹಳ್ಯಾಗೆಲ್ಲಾ
ಚೆಲುವಿಯಂತ ಹೆಸರಾದಾಕೆ.

ಇನ್ನು ಆಕೆಯ ಪ್ರತಿಕ್ರಿಯೆ:—

ಅಯ್ ನನ ಶಿವನ್ಕ, ಗೌಡರ ಸೊಸಿಯ ?
ಪೆರ್ತ ನೋಡಿಪಳ ಚೆಲುವೀಕೆ
ಮೊದಲ ಜನ್ಮದಾಗ ಮಾಡಿದ ಪಾಪ
ಬಿಟ್ಟೀತ್ಪಾಯಂಗದು ಕಿಡಿಬೆಂಕ!

'ಗೊತ್ತಿಲ್ಲೀನ್ಕ'–'ಅಯ್ ನನ ಶಿವನ'–ಈ ಪದಗಳಲ್ಲಿನ ನಾಟಕೀಯತೆ. ಯಂತೂ ಅದ್ಭುತವಾದುದು. ಬರೆದಷ್ಟೂ ಇದೆ—ಓದಿದಷ್ಟೂ ಇದೆ—ಇದೆಯೆಂದು ತಿಳಿದಷ್ಟು ಇನ್ನೂ ಇದೆ. "ಜಾನಪದವಾದರೂ ಅದೊಂದು ವಿಶಿಷ್ಟ ಬಗೆಯ ವ್ಯಾಕರಣ ನಿಯಮಕ್ಕೆ ಒಳಗಾದುದೇ ಆಗಿದೆ. ಅದರ ಗತಿಯು ಶಕ್ತಿ ಸತ್ತ್ವಗಳಿಂದ ತುಂಬಿಕೊಂಡಿದೆ. ಶಬ್ದ ಚಿತ್ರನನ್ನು ಬರೆಯಬಲ್ಲ ವಾಸ್ತವ್ಯಂಜಕ ಧರ್ಮ ಈ ಜಾನಪದ ಕನ್ನಡದಷ್ಟು ಅಭಿಜಾತ ಕನ್ನಡದಲ್ಲಿದೆಯೇ ?" ಎಂದು ಕೇಳಿದ್ದಾರೆ ಅವರೇ ತುಂಬ ಅಧಿಕಾರದಿಂದ. ಹೌದು ಆ ಅಧಿಕಾರ ಅವರಿಗಿದೆ.

ಇಷ್ಟಾಗಿಯೂ ಒಮ್ಮೊಮ್ಮೆ ನನಗೆನ್ನಿಸುತ್ತದೆ:–ಈ ವ್ಯಕ್ತಿಯಿಂದ ತೆಗೆದುಕೊಳ್ಳಬೇಕಾದಷ್ಟನ್ನೆಲ್ಲಾ ನಾವು ತೆಗೆದುಕೊಂಡಿದ್ದೇವೆಯೇ–ಎಂದು. ಅವರೇ ನನಗೊಂದು ಸಂದರ್ಶನದಲ್ಲಿ ಹೇಳಿದರು:–"ನೋಡಿ, ಈ ದೀನ ನನ್ನ ಆದರ್ಶ. ಇವರ ಹಾಗೆ ಉರಿಯೋದು ನನ್ನ ಕರ್ತವ್ಯ. ಬೇಕಾದವರು ಇದರಿಂದ ಬೆಳಕು ಪಡೆಯಲಿ–ಬೇಡವಾದವರು ಬಿದಲಿ" ಇವಕ್ಕೇನಂತಿ ? ಇನ್ನೂ ಹತ್ತು "ಕರ್ನಾಟಕ ಜನಜೀವನ"ದಷ್ಟು ಸಂಶೋಧನೆ ಅವರಲ್ಲಿದೆ; ಹ. ಸ್ಮೃ. ಕವಿತಾ ಸಂಕಲನ ಇವೆ. ಇಷ್ಟು ದಪ್ಪವಾಗಬಹುದಾದ ಕಥಾ ಸಂಪುಟವುಂಟು ! ಅದನ್ನೆಲ್ಲಾ ಹೊರಬೇಳಿಸಬೇಕೆಂಬಷ್ಟು ಕನ್ನಡದ ಎಬಡ ನಾನು!ನೀನು?

ಪತ್ರ ತುಂಬ ಉದ್ದವಾಯ್ತು, ಕ್ಷಮಿಸು! ಕೊನೆಗೆ ಅವರೇ ಹೇಳಿದ ಒಂದು ಮಾತಿನಿಂದ ಮುಗಿಸುತ್ತೇನೆ—

"ಇಂದಿನ ನನ್ನ ಹಂಬಲ ದೇವನನ್ನು ಕಾಣಬೇಕೆಂದಲ್ಲ....ಸುಖಮಯವಾದ ಬಾಳು ಬಿಕ್ಕಬೇಕೆಂಬುದಲ್ಲ. ಜಗತ್ತಿನಲ್ಲಿ ನಿಜವಾದ ಮಾನವತೆ ತಲೆದೋರಬೇಕು—ಎಂದು. ಪ್ರತಿಯೊಬ್ಬನ ಜೀವನ ಯೌಗಿಕ ಜೀವನವಾಗಬೇಕು ಎಂದು. ಅಧ್ಯಾತ್ಮ ಅಧಿಭೂತಗಳ ಸಮನ್ವಯದ ಸಂಪೂರ್ಣ ಜ್ಞಾನ ಲೋಕದಲ್ಲಿ ನೆಲೆಗೊಳ್ಳಬೇಕು–ಎಂದು."

ನಿನ್ನ
—ಚಂ. ಕಂ.

ಸಾವ—ಸಿಲುಬೆ

ಶ್ರೀ ಬಿ. ಆರ್. ಮಾಹುಲಿ, ಪುಣೆ.

(೧)

ನೀಲಿಯಾಕಾರದಲಿ
ಸತ್ತು–ಹುಟ್ಟುವೆ ಮೋಡ;
ಕೆಂಪು–ಕರಿ,
ಕಂದು–ಬಿಳಿ,
ಹಲವಾರು ಬಣ್ಣಗಳು, ನೂರಾರು ರೂಪ.
ಕ್ಷಣದ ಬದುಕಿಗೆ ಹುಟ್ಟು–ಸಾವಿನ ಶಾಪ.

(೨)

ಹಸಿರುಗದ್ದೆಯ ಮೇಲೆ
ಅರಳಿ–ಉದುರಿವೆ ಹೂವು:
ಶುಭ್ರತೆಗೆ, ಸೌರಭಕ್ಕೆ,
ಇಬ್ಬನ್ನಿಯ ಸ್ನಾನ,
ನಿತ್ಯ ಮ್ಲಾನತೆಗೇಕೋ ಸೌರಭದ ವೈಭವ ?
"ಸಾವಿಗೇತಕೆ" ಬದುಕು ಬಣ್ಣದ ಬೆಡಗು ?

(೩)

ಜಬ್ಬರದ ಸಾಗರದಿ
ಎದ್ದು ತೋರುತಿವೆ ತೆರೆ:
ಬಿಂಕದಲಿ, ವೈಯಾರದಲಿ,
ತಬ್ಬುತಿವೆ ದಂಡೆಯಾ.
ಕ್ಷಣದಿ ಮಾಯವಾಗುವುದಕ್ಕೇತಕೆ ಸಂಭ್ರಮ ?
"ಘೋರ ಆಕ್ರೋಶಗೇತಕೆ" ಅಬ್ಬರದ ಕಂತ ?

(೪)

ಹುಟ್ಟಿದೊಡೆ ಹೆಗಲಮೇಲ್
ಸಾವ–ಸಿಲುಬೆಯ ಹೊರಿಸಿ
ಹೊರಬಿಟ್ಟ ದೊರೆ, ನೀನು,
ಬದುಕಿನಾಸೆಯನೇಕೆ ಕೊಟ್ಟೆ ನನಗೆ ?
ಅಂತವಿಲ್ಲದ ದಾರಿ, ಅತಿ ವಿರಳ ಪಾಥೇಯ.
ಹುಟ್ಟೇ ಬೇಡದ ನನಗೆ ಸಾಯ್ವ ಸಂಭವವೇಕೆ ?

ಕೀಚಕನ ಕೊಂದವನು ಭೀಮನಲ್ಲ....

(ದಿ. ಟಿ. ಪಿ. ಕೈಲಾಸಂ ಅವರ ನೆನಹಿಗೆ,—ಅರ್ಪಣೆ)

ಶ್ರೀ. ಬಿ. ಬಿ. ಹಿಂಗಮಿರೆ ಬಿ. ಎ., ನ್ಯೂ ಹೈಸ್ಕೂಲ್, ಅಥಣಿ

❋

ಒಂದು ಪ್ರೀತಿಯ ತಾರೆ :
ವರುಷ-ವರುಷಗಳಿಂದ ಕೊರೆಯಿತ್ತು, ವೀರ ಕೀಚಕನೆದೆಯ
ಕಣ್ಣು ಕರಗಸಧಾರೆ,
—ಒಂದು ಪ್ರೀತಿಯ ತಾರೆ :

ಜಟಿಲ ಭಾರತ ಕತೆಯ ನೆನಪು ಬಾಗಿಲು ತೆರೆಯಿಃ—
ಯಾರದೋ ನರಳಾಟ ಕೇಳಿಸುವುದು;
ಒಡಕು ಮನಸಿನ ಭಾಸೆ ಅಗ್ನಿಯುಂಡೆಗಳಾಗಿ,
ಮೌನಿದ್ದಿ ನನನೊಡೆದು ಧೀಂಕಿಡುವುದು :
ಯಾರದೋ ನರಳಾಟ ಕೇಳಿಸುವುದು.

ಮುಳ್ಳು-ಹಾಸಿಗೆ ತುಂಬ
ಭಗ್ನ ಕನಸು;
ತೋಳ ತಿಕ್ಕೆಯ ತುಂಬ
ನಗ್ನ ಮನಸು !

ಸುತ್ತಿರುವ ಮದನ ಮನೆ ತರುಣ ವೀರ
ರತಿಯ ಹಣ್ಣಿಗೆ ಸೋತ ಸವಿಗಾರ ಶೂರ:
ಇವನುಂಡ ಪಕ್ವಾನ್ನ ಹಗಲಿರುಳು ಕ್ಷಾರ,
ಸುತ್ತಿರುವ ಮದನ ಮನೆ ತರುಣ ವೀರ.
ಜಟಿಲ ಭಾರತ ಕತೆಯ ನೆನಪು ಬಾಗಿಲು ತೆರೆಯಿಃ—

ದುಃಖವುಕ್ಕುವ ನೆಲ, ವಿಡಾಟ ನಗರ
ಶೋಕ ಒಕ್ಕುವ ಜಲ-ವಿಲಾಸ ಮಧುರ.
ಕೀಚಕನ ಕಣ್ಣೆದುರು—
ಸೈರಂಧ್ರಿ ಮಧುಬಾಲೆ:
ನೆನಪು ನೆನಪೇ ನೆನಪು, ಸುರುಳಿ ಸುರುಳಿ;
ಅವೇ ಕಣ್ಣು, ಅದೆ ಮೂಗು
ಅದೇ ರೂಪ ದೀಪ;
ಅದೆ ದಿಟ್ಟಿ, ನಾಗ ಜಡೆ
ನಗೆಮುಗುಳು ಲಾಸ,
ಖಡ್ಗಜಡೆ ತುಟಿ ವಸಂತವಿಲಾಸ.

ನೆನಪು ನೆನಪೇ ನೆನಪು, ಸುರುಳಿ ಸುರುಳಿ,
ಕೀಚಕನ ಕಣ್ಣೆದುರು :
ಪಾಂಚಾಲಿ ಕದಪು-ಒನಪು-ಜೋಕಾಲಿ
ಸೈರಂಧ್ರಿ ಮಧುಬಾಲೆ.
ಸುತ್ತಿರುವ ಮದನನುನೆ ತರುಣ ವೀರ
ರತಿಯ ಹಣ್ಣಿಗೆ ಸೋತ ಸವಿಗಾರ ಶೂರ.

ಎದೆಯ ಮುಸಣವನ್ನಗಿದಗಿದು
ಪಾಂಚಾಲಿಯಡಿಯರ್ಪಿಸಿದ ಪವಿತ್ರ ಸ್ನೇಹ;
ಸುಟ್ಟು ಕರಿಕಾಗಿಸಿತು ದ್ರೌಪದಿಯ ವ್ಯಾಮೋಹ
ಕೀಚಕನ, ಪ್ರಣಯ.
ದ್ರೌಪದಿಯ ದಿಟ್ಟಿಯಾರತಿಗಾಹುತಿ—ಅಚಲ
ಕೀಚಕ ಪತಂಗ :
ಕೀಚಕ-ನಾಲಗೆ ಚಪಲ, ಮುಧುಪಾನ, ಅವಳ
ಮೋಹ ತರಂಗ
ದ್ರೌಪದಿಯ ದಿಟ್ಟಿಯಾರತಿಗಾಹುತಿ—ಅಚಲ
ಕೀಚಕ ಪತಂಗ.

ಕೀಚಕನ ಕೊಂದವನು ಭೀಮನಲ್ಲ:
ಕೀಚಕನ ನುಂಗಿತ್ತು ಭೀಮ ಭೀಮೆಯ ನೋಹ,
ಕೀಚಕನ ಕೊಂದಿತ್ತು—ಅವಳ ದಾಹ.

ಒಂದು ಪ್ರೀತಿಯ ತಾರೆ:
ವರುಷ-ವರುಷಗಳಿಂದ ಕೊರೆಯಿತ್ತು ವೀರ ಕೀಚಕನೆದೆಯ
ಕಣ್ಣು ಕರಗಸ ಧಾರೆ,
—ಒಂದು ಪ್ರೀತಿಯ ತಾರೆ—!

ಸಾವ್ವೋ? ಬದುಕ್ವೋ?

(ನವ್ಯ ಕತೆ)

ಶ್ರೀ. ಆರ್. ಪಿ. ಕುಲಕರ್ಣಿ, ಎಂ. ಎ. ಬೆಳಗಾಂವಿ.

ಇಂದು ನಾಗರಿಕಲೋಕದಲ್ಲಿಯ ಪ್ರತಿಯೊಬ್ಬ ಮಾನವನೂ ಪ್ರವಾಹಪತಿತ; ಎಂತಲೇ ಅತ್ಯಸ್ತ. ಹೊಟ್ಟೆಗಾಗಿ ಎಲ್ಲಿಯೋ ಹೇಗೋ ದುಡಿಯುತ್ತಾನೆ. ಅವನ ಮನಸ್ಸಿನ ಬಯಕೆ ಒಂದು ದಾರಿಯದಾದರೆ, ಪ್ರವಾಹ ಮತ್ತೊಂದು ದಾರಿಯಿಂದ ಎಳೆದೊಯ್ಯುತ್ತಿರುತ್ತದೆ. ಆದುದರಿಂದಲೇ ಶಾಂತಿ-ಸಮಾಧಾನದ ಬಾಳು ನಾಟಕದ ನಟನ ಅಭಿನಯದಂತಾಗಿದೆ.

ಕಲ್ಲೂರಿಗೂ ರೈಲುನಿಲ್ದಾಣಕ್ಕೂ ಐದಾರು ಮೈಲು. ಊರಿಗೆ ಬರುವವರೆಲ್ಲರೂ ದಾರಿಯ ಧೂಳನ್ನು ಮೈಗೆ ಮೆತ್ತಿಕೊಂಡೇ ಬರಬೇಕು. ಊರ ಜನಸಂಖ್ಯೆ ನಾಲ್ಕೈದು ಸಾವಿರದಷ್ಟು. ಮನೆಗಳೆಲ್ಲ ಚೀನೀಯರ ಮೂಗುಗಳಂತೆ ಚಪ್ಪಟೆ. ಅಲ್ಲಿಯ ಜನವೂ ಅಂಥದೆ!

ಹನುಮನ ಗುಡಿಯನ್ನು ದಾಟಬೇಕು ಊರ ಚಾವಡಿ ಕಾಣುವುದು. ಅಲ್ಲಿಂದ ಬಲಕ್ಕೆ ತಿರುಗಿದರೆ ಊರ ಇಂಗ್ಲೀಷ ಶಾಲೆಯ ಕಟ್ಟಡ. ಅದು ಒಂದು ಅರ್ಧ ಮುರುಕು ಮನೆಯಲ್ಲಿ. ಹದಿನಾರು ವರ್ಷಗಳ ಹಿಂದೆ ಅಲ್ಲಿ ಮದ್ಯದಂಗಡಿ ಇತ್ತು. ಶಾಲೆಗಾಗಿ ಈಗ ಹೊಸ ಕಟ್ಟಡ ಕಟ್ಟಿಸುವ ವಿಚಾರವಿದೆ. ಅದಕ್ಕೆ ಇನ್ನೂ ಕೆಲವು ವರ್ಷ ಬೇಕು.

ಇಲ್ಲಿಯ ಶಿಕ್ಷಣವೂ ನುಂಗಣತಿಯಿಂದ ಸಾಗುತ್ತಿದೆ. ಶಾಲೆಯ ಸುತ್ತಲೂ ನೋಣಿಗೆ ಮೆತ್ತಿದ ಸೊಣಗಳಂತೆ ಕೂಲಿಕಾರರ ವಸತಿ. ಶಾಲೆಯ ಮಕ್ಕಳಾದರೂ ಎಲುವಿನ ಹಂದರಕ್ಕೆ ಅಂಟವ ತೊಗಲಿನ ಚೀಲಗಳು. ಆಗಾಗ ಬೀದಿಯ ನಾಯಿಗಳ ಕಾಟ. ಕಟ್ಟಡಕ್ಕೆ ಹತ್ತು ಆಟದ ಬೈಲು. ಬೈಲಿನಲ್ಲಿದ್ದ ಎರಡು ಮಾಮರಗಳು ಮುಂಗಗಳಿಗೆ ಆಶ್ರಯಸ್ಥಾನ.

ಶಾಲೆ ಬಿಡುವುದೇ ತಡ. ಮನೆಗೆ ಹೋಗಲು ಮಕ್ಕಳಲ್ಲಿ ಬುಟ್ಟಿಯ ಕೆಳಗೆ ಮುಚ್ಚಿಟ್ಟ ಕೋಳಿಯ ಮರಿಗಳ-ಹೊರಗೆ ಬರುವ ಆತುರ. ತಾವು ವಿಶಾಲ ಜಗತ್ತಿನಲ್ಲಿ ಮುಂಬರುವ ನಾಗರಿಕರಾಗುವ ಕಲ್ಪನೆ ಇಲ್ಲ. ಮುಖಗಳ ಮೇಲೆ ನಿರ್ಜೀವದ ಚಿನ್ಹ. ಮನಸ್ಸು ಕುರುಡು. ಎಷ್ಟು ಅನಾಸಕ್ತಿಯಿಂದ ಶಾಲೆಗೆ ಬರುವರೋ ಅಷ್ಟೇ ಅನಾಸಕ್ತಿ ಮನೆಗೆ ಹೋಗುವಾಗ. ಬತ್ತಿದ ಹೂವಿನ ಪಕಳೆಗಳುದುರುವಂತೆ ಅವರ ದಿನಗಳುರುಳುತ್ತಿವೆ. ಸೊನ್ನೆಗೆ ಸೊನ್ನೆ ಕೂಡಿಸಿದಂತೆ ಅವರ ಜ್ಞಾನದ ಬೆಳೆಕಾಣೆಗೆ.

ಅಲ್ಲಿಯ ಶಿಕ್ಷಕರದು ಯಾವ ಫಲಾಪೇಕ್ಷೆ ಇಲ್ಲದೆ ದುಡಿಯುವ ತೆರನಾದ. ಅಡ್ಡಮಳೆ ಹೊಲಸು ಕೊಚ್ಚಿಕೊಂಡು ಹೋಗಿ ಯಾವುದೋ ಪ್ರವಾಹದಲ್ಲಿ ಅದನ್ನು ಬಿಡುವಂತೆ, ಇವರು ಶಿಕ್ಷಣಪ್ರವಾಹದಲ್ಲಿ ಬಿದ್ದರು. ಅವರ ಜೀವನದಲ್ಲಿಯ ದಿನಗಳು ಹಣ್ಣೆಲೆಗಳಂತೆ ಉದುರುತ್ತಿರುತ್ತವೆ.

ಮಧ್ಯಾಹ್ನದ ಬಿಡುವಿನಲ್ಲಿ ಶಿಕ್ಷಕರು ತಾವು ಕೂಡ್ರುವ ಕೋಣೆಯ ಗೂಡು ಸೇರುವರು. ಈಗ ಅಲ್ಲಿ ರಾಮಾನುಜ, ಕೃಷ್ಣ ಸ್ವಾಮಿ, ನಾಗರಾಜ, ಪದ್ಮನಾಭ, ರಾಮಸ್ವಾಮಿ, ರಮಾನಂದ, ಈಶ್ವರನ್ ನಾಯಕ, ಗೋಪಾಲರಾವ-ಎಲ್ಲರೂ ತಮ್ಮ ತಮ್ಮ ನಿತ್ಯದ ಸ್ಥಳವನ್ನು ಆಕ್ರಮಿಸಿರುವರು.

ರಾಮಾನುಜ ಯಾವಾಗಲೂ ವಿಚಾರಮಗ್ನನಾದವನಂತೆ ತೋರುತ್ತಾನೆ. ಆತ ಕುಳಿತಾಗ, ನೀರುಗೋಳಿಯ ದಡಕ್ಕೆ ಇಣಚಿಯ ರುಂಡ ಜೋಡಿಸಿದಂತೆ ಕಾಣುತ್ತಾನೆ. ಅವನು ತಾನಾಗಿಯೇ ಎಂದೂ ಮಾತಾಡಲು ಆರಂಭಿಸುವುದಿಲ್ಲ. ಯಾರಾದರೂ ಮಾತಾಡಿಸುವುದೇ ತಡ. ಹಳೆಯ ಗ್ರಾಮೋಫೋನಿನ ಹಾಡಿನಂತೆ ಎಂದೂ ತಾನೇ ಸುಮ್ಮನಾಗುವುದಿಲ್ಲ. ಎಲ್ಲರಿಗೂ ತನ್ನ ಮನೆಯ ವೃತ್ತಾಂತ ಗೊತ್ತಿರಬೇಕೆಂದು ಅವನ ಅಪೇಕ್ಷೆ. ಆತ ಎಲ್ಲರಿಗಿಂತ ಶ್ರೇಷ್ಠನೆಂದು ಜನರು ನಂಬುವಂತೆ ಮಾಡಲು ತನ್ನ ಕಾರ್ಯಕ್ಷಮತೆಯನ್ನು ತಾನೇ ಹೊಗಳಿಕೊಳ್ಳುತ್ತಾನೆ. ಆತ್ಮಸ್ತುತಿಯಷ್ಟು ಅವನಿಗೆ ಮತ್ತೊಂದು ಯಾವುದೂ ಪ್ರಿಯವಲ್ಲ! ಕೃಷ್ಣಸ್ವಾಮಿ ಕುತ್ಸಕತನದಿಂದ ಮುತ್ತಷ್ಟೂ ಮಾತನಾಡಲು ಅತನನ್ನು ಪ್ರೇರಿಸುತ್ತಾನೆ. ಇದರಿಂದ ರಾಮಾನುಜ, ತನ್ನ ಬುದ್ಧಿವಂತಿಕೆ ಎಲ್ಲರನ್ನೂ ಬೆರಗುಗೊಳಿಸುವಂಥದೆಂದು ತಿಳಿದಿದ್ದಾನೆ. ಜೇಡನ ಹುಳುವಿನಂತೆ ವಿಚಾರಗಳ ಜಾಳಿಗೆಯನ್ನು ತನ್ನ ಸುತ್ತಲೇ ಹೆಣೆಯುತ್ತಾನೆ. ಅವನ ಜೀವನ ಹೊಲಸುಬಟ್ಟೆಯನ್ನು ಕಲಕುನೀರಿನಲ್ಲಿ ಅದ್ದಿದಂತಾಗಹತ್ತಿದೆ. ಆತನ ಗೆಳೆತನ ಕೊಳಚೆ ತುಳಿದಂತೆ.

"ಏನು ಎಟ ಬಿಗತಾ ಬಿಗದೆ ಅಂತೀರಿ.ಆ ಡ್ಯಾಂಬಿಸ್ ಹುಡಗ್ಗ!" ಎಂದು ರಾಮಾನುಜ ತನ್ನ ನಿತ್ಯದ ವರದಿಯನ್ನು ಎಲ್ಲರಿಗೂ ಒಪ್ಪಿಸುತ್ತಾನೆ.

ನಾಗರಾಜ ಏನೂ ಮಾತಾಡುವುದಿಲ್ಲ, ಹುಡುಗರನ್ನು ಹೊಡೆಯುವುದನ್ನು ಬಿಟ್ಟು ಈತ ಮತ್ತೇನನ್ನೂ ಮಾಡಲಾರನೇ?-ಎಂದು

ತನ್ನಷ್ಟಕ್ಕೆ ತಾನೇ ಕೇಳುವನು. ತಾನೇ ಏಟು ತಿಂದವನಂತೆ ಮುಖ ತಿರುಚುವನು. ರಾಮಾನುಜನನ್ನು ತರಾಟೆಗೆ ತೆಗೆದುಕೊಳ್ಳುವ ಆಶೆ.

"ಮಗಾ, ಹುಡಗೋರ್ನ ಹೊಡಿತಾನ! ಅದ್ಕಽ ಮಕ್ಳ ಆಗಿಲ್ಲ ಅವಗ! ತಾಸೇ ಬಾರಸವ ಆರೆ ಆದ್ರ, ಅವನ ಕೈ ತಿಂಡಿ ಸಮಾಧಾನ ಆದೀತು!" ಈ ಮಾತಿನ ಕಾರಿಕೆಯನ್ನು ನುಂಗುತ್ತಾನೆ.

ನಾಗರಾಜ ತನ್ನ ತಕ್ಷಣದ ಸ್ವಭಾವಕ್ಕೆ ಆದರ್ಶವಾದದ ಹುಲಿಯ ಸೋಗು ಹಾಕುತ್ತಾನೆ. ಆತ ಪೋಲೀಸ ಖಾತೆ ಸೇರಬಯಸಿದ್ದ. ಆದರೆ ಸಾಧ್ಯವಾಗಲಿಲ್ಲ. ಈ ಶಾಲೆಯಲ್ಲಿ ಕೆಲಸ ದೊರೆತ ಕೆಲವು ದಿನಗಳ ವರೆಗೆ ಅಚ್ಚುಕಟ್ಟಾಗಿ ಬಟ್ಟೆ ಧರಿಸುತ್ತಿದ್ದ. ಎಣ್ಣೆ ಹಚ್ಚಿ ಬೂಟು ಧರಿಸುತ್ತಿದ್ದ; ಆದರೆ ಈಗ ತನ್ನ ಕೆಂಪು ಬುಶ್‌ಶರ್ಟು ಮತ್ತು ನೀಲೀ ಚಿಣ್ಣವನ್ನು ಎಂಟು-ಹತ್ತು ದಿನಗಳ ವರೆಗೆ ತೆಗೆಯುದಿಲ್ಲ ಒಮ್ಮೊಮ್ಮೆ ಈ ಶಿಕ್ಷಣವೃತ್ತಿಯ ತಗ್ಗಿನಲ್ಲಿ ಬಿದ್ದದ್ದು ನೆನಪಾಗಿ, ಚೇಡನ ಬಲೆಯಲ್ಲಿ ಸಿಕ್ಕ ನೊಣದ ಕಷ್ಟವನ್ನು ಅನುಭವಿಸುತ್ತಾನೆ. ತಾನು ಶ್ರೀಮಂತನಾಗಬೇಕು; ನೋಟರಿನಲ್ಲಿ ತಿರುಗಾಡಬೇಕು; ಜನರಿಂದ ಮಾನಪಡೆಯಬೇಕು–ಎಂಬ ಆಶೆಗಳೆಲ್ಲ ಕಮರಿದುವು. ಇವನ್ನೆಲ್ಲ ತತ್ಪ್ರಸಿದ್ಧಿಯ ತಗ್ಗಿನಲ್ಲಿ ಮುಚ್ಚಿ ಬಿಡಬೇಕೆಂದು ಹಂಬಲ ಆದರೆ ಅವನ ತತ್ಪ್ರಸಿದ್ಧಿಯ ನಟನೆ ಬೇರೆಯನತೊಡನೆ ಕಲಹಕ್ಕೆ ಮಾತ್ರ ಕಾರಣವಾಗಿದೆ. ಅದು ಬಹುರೂಪಿಯು ಸೋಗೆಂದು ಎಲ್ಲರಿಗೂ ಗೊತ್ತು ಜನರು ಕುಷ್ಟರೋಗಿಯನ್ನು ಕಂಡಂತೆ ಅವನಿಂದ ಹಿಂಜರಿಯುತ್ತಾರೆ.

"ಚಹಾ ತಾರೋ!" ಎಂದು ರಮಾನಂದ ಶಾಲೆಯ ಸಿಪಾಯಿಗೆ ಒದರುತ್ತಾನೆ ಸಿಪಾಯಿ ಚಹದ ಕಪ್ಪು ತುಂಬಲು ಅರಂಭಿಸುತ್ತಾನೆ. ಆವರೆ ರಮಾನಂದ ಅಧಿಕಾರದ ಮುದ ತೋರಿಸುತ್ತ "ಎಷ್ಟೊತ್ತೋ!" ಎಂದು ಕಣ್ಣು ಕಿಸಿಯುವನು. ರಮಾನಂದನದು ತಾನು ಶ್ರೇಷ್ಠ ಮಾತುಗಾರನೆಂದು ಪ್ರಾಸಾಣಿಕ ತಿಳಿವಳಿಕೆ ಬೇರಿಯವರನ್ನು ಮಾತಿನ ಕತ್ತರಿಯಲ್ಲಿ ಹಿಡಿಯುವ ಹೀನ ಚಟವಿದೆ ಆವನಲ್ಲಿ. ತನ್ನ ಮೂಗನ್ನು ನೀರಿನಿಂದ ಹೊರಬಂದ ಕಪ್ಪೆಯ ಹೊಟ್ಟೆಯಂತೆ ಮೇಲೆ ಕೆಳಗೆ ಮಾಡುತ್ತ ಮಾತಾಡುತ್ತಾನೆ. ಒಮ್ಮೆ ಆತ ಸಿಪಾಯಿಗೆ ಐದು ರೂಪಾಯಿ ಕೈಗಡ ಕೊಟ್ಟಿದ್ದ. ಅದಕ್ಕೆ ಸಿಪಾಯಿ ಅವನ ಮನೆಗೆ ಮೂರು ಸಾರೆ ಸುಣ್ಣ ಹಚ್ಚಿಕೊಟ್ಟ. ಐದು ರೂಪಾಯಿ ಕೊಟ್ಟ ಸುದ್ದಿಯನ್ನು ಐದು ನಿಮಿಷುಗಳಲ್ಲಿ ಶಾಲೆತುಂಬ ಬಿತ್ತರಿಸಿದ.

"ಹೀಂಗ ಅಡಚಣ್ಯಾಗ ಒಬ್ಬರಿಗೊಬ್ಬರು ಆಗಬೇಕು" ಎಂದು ಆಂದಿನಿಂದ ಇಂದಿನ ತನಕ ಹೇಳುತ್ತಾನೆ. ಆದರೆ ಹಣೆಯ ಮೇಲಿನ ಗಾಯದಂತೆ ಅವನ ಸ್ವಭಾವದ ಸ್ಪಷ್ಟ ಕಲ್ಪನೆ ಎಲ್ಲರಿಗೂ ಇದೆ.

ಸಿಪಾಯಿಯು ಚಹ ತಂದಿಡುತ್ತಾನೆ. ರಮಾನಂದ ಗಡವ ಮೇಲಿನ ಮಂಗನಂತೆ ಕೂಡ್ರುತ್ತಾನೆ. "ಸೊರ್, ಸೊರ್" ಸಪ್ಪಳ ಮಾಡುತ್ತ ಚಹ ಕುಡಿಯುವನು. ಈಶ್ವರನ್ ರಮಾನಂದನಿಂದ ಬೇರೆ ಕಡೆಗೆ ನೋಡುತ್ತಾನೆ. ನಾಗರಾಜನಿಗೆ ಕಣ್ಣುಪಿಳುಕಿಸಿ ರಮಾನಂದನ ಕಡೆಗೆ ಸನ್ನೆಮಾಡುತ್ತಾನೆ. ಈಶ್ವರನ್ನನು ನಾಗರಾಜನಿಗೆ ರಮಾನಂದ ಕುಳಿತ ರೀತಿಯನ್ನು ತೋರಿಸಬೇಕಾಗಿದೆ. ಈಶ್ವರನ್ ಗಿರಣಿಯಂತೆ ಸಪ್ಪಳಮಾಡಿ ನಗುತ್ತಾನೆ. ರಮಾನಂದನಿಗೆ ತನ್ನನ್ನು ಕುರಿತೇ ಏನೋ ನಡೆದಿದೆ ಎಂಬ ಸಂಶಯ. ಅಲ್ಲಿ ಕುಳಿತ ಎಲ್ಲ ಶಿಕ್ಷಕರೂ ರಾಕ್ಷಸರಂತೆ ಕಾಣುತ್ತಾರೆ. ಇದರಿಂದ ಅವನ ದರ್ಪಕ್ಕೆ ಬಲವಾದ ಪೆಟ್ಟು ಬಿದ್ದರೂ ಅದು ರಕ್ತಬೀಜನ ಸಂತತಿಯಂತೆ ಹೆಚ್ಚಾಗುತ್ತದೆ.

ನಾಗರಾಜನಿಗೆ ಈಶ್ವರನ ಜೋಕ್ಸೆ ಸರಿಬರಲಿಲ್ಲ. "ತಾ ನೋಡಿದ್ರ ಮಾಸ್ತರು! ಎರಡನೆಯವರ ಚಾಷ್ಟೀ ತಾನ ಮಾಡಿದರ, ಹುಡಗೋರು ಏನು ಮಾಡ್ಯಾರು? ಏನು ಬಿಟ್ಯಾರು? ಮಕ್ಕಳನ್ನ ತಂದು! ಹುಡಗೋರಿಗೆ ಜನಾ ಬಡದ್ಹಾಂಗ ಬಡೀತಾರ!" ಎಂದು ಮನಸ್ಸಿನಲ್ಲಿ ವಿಚಾರಿಸಿದ.

ತನ್ನನ್ನು ಬಿಟ್ಟು ಉಳಿದವರ ಮಾತುಕತೆಗಳಲ್ಲಿ ನಾಗರಾಜನಿಗೆ ಯಾವ ತತ್ತ್ವವೂ ತಾತ್ತ್ವಿಕ ಸೃಷ್ಟಿಯೂ ಕಂಡುಬರುವದಿಲ್ಲ. ಅವನು ಈಶ್ವರನ್ನನತ್ತ ತಿರಸ್ಕಾರದಿಂದ ನೋಡುತ್ತ, ನಾಯಕನಿಗೆ ಮೊಳ ಕೈಯಿಂದ ತಿವಿಯುವನು. ನಾಗರಾಜನಿಗೆ ಈಶ್ವರನ್ನನು ಹೇಗೆ ಬೇರೆಯವರ ದೋಷಗಳನ್ನು ಹುಡಕುತ್ತಾನೆಂಬುದನ್ನು ಹೇಳುವುದಿದೆ.

ನಾಯಕನಿಗೆ ಇದಾವುದರಲ್ಲಿಯೂ ಆಸಕ್ತಿ ಇಲ್ಲ. "ಶಾಲೆಯಲ್ಲಿ ಒಂದು ಸಣ್ಣ ಅಂಗಡಿಬೇಕು. ಅದರಲ್ಲಿ ವಿದ್ಯಾರ್ಥಿಗಳಿಗೆ ಬೇಕಾಗುವ ಎಲ್ಲ ಸಾಮಾನುಗಳನ್ನಿಡಬೇಕು. ಮುಂದೆ ಅದನ್ನು ಬೇಸಿ ಶಿಕ್ಷಕರಿಗೆ ಬೇಕಾಗುವ ಎಲ್ಲ ಕಿರಾಣಿ ಸರಕುಗಳನ್ನು ಅಲ್ಲಿ ಮಾರಬೇಕು. ಈ ಅಂಗಡಿಯನ್ನು ಹುಡುಗರೇ ನಡೆಸಬೇಕು. ಒಬ್ಬ ಶಿಕ್ಷಕ ಅವರಿಗೆ ಸಹಾಯ ಮಾಡಬಹುದು" ಎಂಬ ಪ್ರಚಾರವನ್ನು ಆತ ಆರಂಭಿಸಿದ್ದಾನೆ. ವರ್ಗದಲ್ಲಿಯೂ ಇದೇ ಮಾತು. ಆತನಿಗೆ ಯಾವಾಗಲೂ ಹಣವ ಕೊರತೆ. ಇಂಥ ವ್ಯವಸ್ಥೆಯಿಂದ ತನ್ನ ತೊಂದರೆ ಕಡಿಮೆಯಾಗಬಹುದೆಂದು ಆತ ನಂಬಿದ್ದಾನೆ. ಅಂಗಡಿ ಮಾತ್ರ ಇನ್ನೂ ಆರಂಭವಾಗಿಲ್ಲ. ಈ ವಿಚಾರದಲ್ಲಿ ಅವನು ಪಾಠ ಹೇಳುವುದನ್ನೇ ಮರೆತುಬಿಡಬಹುದೆಂದು ಗೋಪಾಲರಾವನ ಸಂಶಯ.

ಗೋಪಾಲರಾವ್ ತಾನು ವಿನೋದ ಸಾಮ್ರಾಟನೆಂದು ತಿಳಿದಿದ್ದಾನೆ. ಆತನ ವಿನೋದ ಯಾವಾಗಲೂ ಲೈಂಗಿಕ ವಿಷಯವನ್ನೇ ಕುರಿತದ್ದು ಅವನ ವಿನೋದದ ದುರ್ಗಂಧ ಕೇಳುವವರ ಮನಸ್ಸನ್ನು ಮುದುಡಿಸುತ್ತದೆ. ಆತ ಮದಬಂಡ್ಲಟಗರಿನಂತೆ ಊರಲ್ಲಿ ತಿರುಗುತ್ತಾನೆ. ಕಾಲೇಜಿನಲ್ಲಿ ತಾನು ಮಾಡಿದ ಹೇಯಗೆಲಸಗಳ ವರದಿಯನ್ನು ಅಭಿಮಾನದಿಂದ ಒಪ್ಪಿಸುತ್ತಾನೆ. ಅವನಿಗೆ ಕಾಲೇಜಿನಲ್ಲಿ ಕದಿಯುವ ಚಟವಿತ್ತು. ಕುರಿಯು ಬೇಕರಿಸುವಾಗ ತುಟಿಗಳನ್ನು ನಡುಗಿಸುವಂತೆ ಅವನು ತುಟಿಗಳನ್ನು ನಡುಗಿಸುತ್ತಾನೆ. ಆಗ ಇವನಿಗೆ ಯಾವುದೋ ವಿನೋದ ಮಾಡುವುದಿದೆ ಎಂದು ತಿಳಿಯಬೇಕು. ಅದನ್ನು ಎರಡೆರಡು ಸಾರೆ ಅನ್ನುತ್ತಾನೆ. ಮುಲಗಿದ ಕೋಣನನ್ನು ಬಾರುಕೋಲಿನಿಂದ ಹೊಡೆದೆಬ್ಬಿಸುವಂತೆ, ಒಮ್ಮೊಮ್ಮೆ ಆತನ ವಯಸ್ಸಾದ ತಾಯಿಯ ನೆನಪು ಅವನ ಮನಸ್ಸನ್ನು ಎಚ್ಚರಗೊಳಿಸುತ್ತದೆ. ಅವನ ತಂದೆ ತೀರಿ ನಾಲ್ಕು ವರ್ಷಗಳಾಗಿದ್ದವು. ಊರಲ್ಲಿ ತಾಯಿಯನ್ನು ಬಿಟ್ಟು ಬಂದಿದ್ದಾನೆ. ಅಲ್ಲಿ ಮತ್ತಾರೂ ಇಲ್ಲ. ಅವನು ಗಂಭೀರವಾಗಿ ಕೂಡ್ರುತ್ತಾನೆ. ಅವನ ವಿನೋದಪ್ರೇಮ ಒರೆತೆಗೆದಂತೆ ಮಾಯವಾಗುತ್ತದೆ. ಆಗ "ಹೀಂಗ ಯಾಕ್ರಿ? ಏನ ಆಗೇದ ನಿಮಗ?" ನಾಗರಾಜನ ಪ್ರಶ್ನೆ.

"ಈ ಮಗ್ಗ ಏನು ಮಾಡೋದದ ತಗೊಂಡು!" ಎಂದು ಗೋಪಾಲರಾವ್ ಪಟಪಟಿಸುತ್ತಾನೆ.

ನಾಯಕ ಮುಳ್ಳುಚುಚ್ಚಿದಂತೆ ಮುಖ ಮಾಡುತ್ತಾನೆ. ಒಬ್ಬ ಹುಡುಗ ಹತ್ತು ರೂಪಾಯಿ ಫೀ ತಂದು ಕೊಟ್ಟಿರುತ್ತಾನೆ. ಇಂದು ರಮಿ ಆಡಬೇಕೆಂದು ಅವನ ವಿಚಾರ. ಆ ಹುಡುಗ ರಶೀದಿ ಬೇಡಲು ಬರುತ್ತಾನೆ. ನಾಯಕ ತೀರ ಅಶ್ಲೀಲ ಬೈಗಳ ಕುಟ್ಟುತ್ತಾನೆ. ಕೊಂಚ ಕಾಲ ತನಗೆ ತಾನೇ ನಾಚುತ್ತಾನೆ.

ಶಾಲೆಯ ಹತ್ತಿರವೇ ಬಾವಿ ಇದೆ. ದಿನಾಲು ಹೆಣ್ಣುಮಕ್ಕಳು ಬಟ್ಟೆಯೊಗೆಯಲು ಬರುವರು. ಒಬ್ಬಪಳು ಬಟ್ಟೆಗಳನ್ನು ಒಗೆಯುತ್ತಿದ್ದಾಳೆ. ಅವಳ ಪೈಯಲ್ಲಿ ಕುಪ್ಪಸವಿಲ್ಲ. ಗೋಪಾಳರಾವ್ ಅತ್ತ ನೋಡುತ್ತಾನೆ. ಉಳಿದವರ ಕುತೂಹಲವೂ ಕೆರಳುತ್ತದೆ. ಎಲ್ಲರೂ ಅತ್ತ ನೋಡುತ್ತಾರೆ. ಎಲ್ಲರ ದೃಷ್ಟಿಯಲ್ಲಿ ಕಾಮುಕತೆ ತುಂಬಿದೆ. ಅತ್ತ ನೋಡಿದರೂ ನೋಡದಂತೆ ನಟಿಸುತ್ತಾರೆ. ಯಾರೂ ಮಾತಾಡುವುದಿಲ್ಲ. ಎಲ್ಲರ ವಿಚಾರಶಕ್ತಿ ಮೃತವಾಗಿದೆ. ಆಕೆ ಕಲ್ಲು ಮೇಲೆ ಬಟ್ಟೆ ಬಡಿಯುತ್ತಾಳೆ. ಗೋಪಾಲರಾವ್ ಯಾರಿಗೂ ಕಾಣದಂತೆ ಆ ಸದ್ದಿನೊಡನೆ ತನ್ನ ಪಾದವನ್ನು ನೆಲಕ್ಕೆ ಬಡಿಯುತ್ತಾನೆ. ಅವಳು ಬಟ್ಟೆ ಒಣಗುಪಾಕಲು ಶಾಲೆಯ ಬೇಲಿಯ ಹತ್ತಿರ ಬರುವಳು. ಆಕೆ ಸೆಗಣಿಯ ಮುದ್ದೆಯಂತೆ ಇರುವಳು. ಎಲ್ಲರೂ ನೆಲವನ್ನು ನೋಡುತ್ತ ಕೂಡುತ್ತಾರೆ.

ಮಾಲತೀಬಾಯಿ ಕೋಣೆಯೊಳಗೆ ಬರುತ್ತಾಳೆ. ಆಕೆ ಇಲ್ಲಿಯ ಗಣಿತ ಶಿಕ್ಷಕಿ. ಬಾಯಿ ತೆರೆದ ಅತ್ತರಿನ ಸೀಸೆಯಂತೆ ಅವಳಿಗೆ ವಾಸನೆ. ರೂಪದಲ್ಲಿ ಆಕೆ ಗೋಪಾಲರಾವನ ಹೆಂಡತಿಯಂತೆ ಕಾಣುತ್ತಾಳೆ. ಆಕೆಯದು ಸಂಗೀತದಲ್ಲಿ ಪುರಿತ ಕೈ. ಗಣಿತ ಅಷ್ಟಕ್ಕಷ್ಟೇ ತಾನು ಹೇಳಿದ್ದನ್ನು ತಿಳಿಯುವ ಶಕ್ತಿಯೇ ಹುಡುಗರಿಗಿಲ್ಲವೆಂಬುದು ಅವಳ ದೂರು. ತಾನು ರಸವತ್ತಾಗಿ ಹೇಗೆ ಗಣಿತ ಕಲಿಸುತ್ತಾಳೆಂದು ಹೇಳುತ್ತಾಳೆ. ಆದರೆ ಅವಳು ಕಲಿಸುವ ವಿಷಯವು ಅವಳಿಗೇ ಗೊತ್ತಿಲ್ಲ. ಅವಳು ಅತಿ ತೆಳುವಾದ ಬಿಳಿಯ ಸೀರೆ ಉಟ್ಟಿರುತ್ತಾಳೆ. ಹಳದಿ ಕುಪ್ಪಸ ದಿಂದ ಪೈಯ ಬಣ್ಣ ಪುಸಕಾಗಿ ಕಾಣುತ್ತದೆ. ಬಂಗಾರದ ಚೈನು ಎದೆಯ ಮೇಲೆ ಇಳಿಬಿದ್ದಿದೆ. ಮಾತಾಡುವಾಗ ಕುತ್ತಿಗೆ ಕೊಂಕು ಮಾತುತ್ತಾಳೆ. ಕಣ್ಣು ಬಹಳ ಚಂಚಲ. ಆದರೆ ಕಪ್ಪು ಬಣ್ಣ ಅವಳನ್ನು ದಿಗಿಲುಗೊಳಿಸುತ್ತದೆ. ಆಕೆ ಉರು ಗೂಟು ಎತ್ತರದ ಡೊಣ್ಣೆಗೆ ರೇಶಿಮೆಯ ಸೀರೆ ಸುತ್ತಿದಂತೆ ಕಾಣುತ್ತಾಳೆ. ಎಲ್ಲರಲ್ಲಿಯೂ ಅವಳ ಬಗ್ಗೆ ಅನಾಸಕ್ತಿ.

ಶೇಷಗಿರಿ ಮಾತ್ರ ಇವಳೊಡನೆ ಸಲುಗೆಯಿಂದ ನಡೆಯುತ್ತಿದ್ದ. ಹಾಗೆಂದರೆ ಅವನು ಹಾಗೆ ನಡೆದುಕೊಳ್ಳದ ಜನರೇ ಇದ್ದಿಲ್ಲ. ಎಲ್.ಎಲ್.ಬಿ. ಆಗಿ ವಕೀಲಿ ವೃತ್ತಿಯನ್ನು ಕೈಕೊಂಡಿದ್ದ. ವಕೀಲಿ ನಡೆಯಲಿಲ್ಲ. ಮುಂದೆ ಯಾವುದೋ ಔಷಧದ ಕಂಪನಿಯ ಪ್ರತಿನಿಧಿಯಾಗಿ ಕೆಲಸ ಮಾಡಿದ. ಅದೂ ನೀಗಲಿಲ್ಲ. ಆ ಮೇಲೆ ಪುಸ್ತಕದ ಅಂಗಡಿ ತೆಗೆದ; ಚೆನ್ನಾಗಿ ನಡೆಯಲಿಲ್ಲ. ಕಡೆಗೆ ನೌಕರಿ ಹಿಡಿದ. ಆರಂಭಕ್ಕೆ ಅವನು ಚರ್ಚೆಯ ವಿಷಯವಾಗಿದ್ದ. ಎಲ್ಲರೂ ಮರ್ಯಾದೆ ಮೀರಿ ನಡೆಯುತ್ತಿದ್ದರು. ಇವನಿಗೆ ಮರುಮಾತಾಡುವ ಧೈರ್ಯವಿದ್ದಿಲ್ಲ. ಶಾಲೆ ಕೊಡುವ ಸಂಬಳಕ್ಕಾಗಿ ಇದನ್ನು ಸಹಿಸುತ್ತಿದ್ದ. ವಾತಾವರಣಕ್ಕೆ ಹೊಂದಿಕೊಂಡ. ಮಾಲತೀಬಾಯಿ ಶಾಲೆಗೆ ಶಿಕ್ಷಕಿಯಾಗಿ ಬಂದಳು. ಮಾಲತಿಯನ್ನು ನೋಡಿ ತನ್ನ ಮಗಳ ನೆನಪಾಗುತ್ತಿತ್ತು. ಆಕೆ ಇವನಿಗೆ ಕೆಲಸ ದೊರೆಯುವ ಮೊದಲೇ ತೀರಿಕೊಂಡಳು. ಶೇಷಗಿರಿಯ ಹಳೆಯ ಗಾಯ ಮತ್ತೆ ಚಿಗುರಹತ್ತಿತು. ಒಮ್ಮೆ ಮಾಲತೀಬಾಯಿಯ ಕಡೆಗೆ ಹತ್ತು ರೂಪಾಯಿ ಬೇಡಿದ. ಆಕೆ ಯಾವ ಪ್ರಶ್ನೆಯನ್ನೂ ಕೇಳಲಿಲ್ಲ. ಹಣ ಮಾತ್ರ ಕೊಟ್ಟಳು. ಅವನು ಪಿರುಗಿಕೊಡಬೇಕೆಂಬ ಆಶೆ ಅವಳಲ್ಲಿದ್ದಿಲ್ಲ. ಮರುದಿನ ಆಕೆಯ ಹುಬ್ಬೆಹುಬ್ಬ. ಆಕೆಗೆ ಅವನು ಹದಿನೈದು ರೂಪಾಯಿಯ ಉಡುಗೊರೆಕೊಟ್ಟ. ಆಕೆಗೆ ಅವನ ಬಗ್ಗೆ ಹೇಗೋ ಆನ್ನಿಸುತ್ತಿತ್ತು. ರಮಾನಂದ ಅವರ ಬಗ್ಗೆ ಏನೇನೋ ಕಲ್ಪಿಸಬೇಕೆಂದ. ಆದರೆ ಸಾಧ್ಯವಾಗಲಿಲ್ಲ. ನಾಯಕ ಅವಳ ಹಿಂದೆ ಹಣಕ್ಕಾಗಿ ಸಲಿಗೆ ನಾಯಿಂತೆ ಕುಂಯಿಗುಟ್ಟಿದ. ಹಣ ದೊರೆಯಲಿಲ್ಲ. ಕೆಲವು ದಿನಗಳ ಮೇಲೆ ಶೇಷಗಿರಿ ತೀರಿಕೊಂಡ. ಅದು ಶಿಕ್ಷಕರ ಮನಸ್ಸಿನಲ್ಲಿ ದುಃಖದ ನೀರಗುಳ್ಳೆಗಳನ್ನು ಎಬ್ಬಿಸಲಿಲ್ಲ.

ನಾಗರಾಜನು ಎಲ್ಲ ಶಿಕ್ಷಕರು ಪ್ರನಾಸಕ್ಕೆ ಹೋಗಬೇಕೆಂದು ಸೂಚಿಸುತ್ತಾನೆ. ಅತ, ಪೊಸ ವಿಚಾರ ಎಂಥದೇ ಇರಲಿ, ಪ್ರಗತಿಯ ಲಕ್ಷಣವೆಂದು ತಿಳಿದಿದ್ದಾನೆ. ಪರೀಕ್ಷೆ, ಪುಸ್ತಕ, ಪಾಠಗಳೆಂದರೆ ಅಧೋಗತಿಯ ಲಕ್ಷಣಗಳೆಂದು ನಂಬಿದ್ದಾನೆ. ಅನಾವಶ್ಯಕ ಉತ್ಸಾಹ ಅವನನ್ನು ಎಷ್ಟೋಸಾರೆ ಕಠಿಣ ಪ್ರಸಂಗದಲ್ಲಿ ತಂದಿಡುತ್ತದೆ. ನಾಗರಾಜ ತನ್ನ ವೈಯಕ್ತಿಕ ಮತ್ತು ಸಾರ್ವಜನಿಕ ಜೀವನದಲ್ಲಿ ಯಾವ ಭೇದವನ್ನೂ ಮಾಡುವುದಿಲ್ಲ. ಹಾಗೆ ಮಾಡಬಾರದೆಂದೂ ಅವನು ಹೇಳುತ್ತಾನೆ. ಮಾಲತೀಬಾಯಿಯು ಅವನಿಗೆ ಸುಂಕುರೋಗದಂತೆ ಹೆದರುತ್ತಾಳೆ. ಆದರೆ ನಾಗರಾಜ ಕಿನಿಯಲ್ಲಿ ಗಾಳಿ ತುಂಬಿದ ಆಕಳ ಕರದಂತೆ ಎತ್ತ ಓಡುವನೆಂಬ ಕಲ್ಪನೆ ಮಾತ್ರ ಯಾರಿಗೂ ಇಲ್ಲ.

"ಮಾಲತೀಬಾಯಿ, ಇಂಥಾ ಹಳ್ಳಾ ್ಯಗ ನೋಕ್ರಿ ಯಾಕರೆ ಮಾಡ್ತೀರಿ? ನೀವು ತಪ್ಪು ತಿಳೀದಿದ್ರ ಒಂದ ಮಾತು ಹೇಳತೇನು. ಮದವೀ ಮಾಡಿಕೊಂಡು ದೊಡ್ಡ ಪಟ್ಟಣಾ ಹಿಡೀಬಾರದ!"

"ನಾಗರಾಜ, ಯಾಕ್ರಿ ನಿಮಗ ಊರ ಉಸಾಬರಿ?" ಮಾಲತೀಬಾಯಿಯ ಉತ್ತರ.

ಗೋಪಾಲರಾವ್ ತೀರ ಅಸಭ್ಯವಿನೋದ ಮಾಡಬೇಕೆನ್ನುತ್ತಾನೆ. ನಾಲಗೆಯ ತುದಿಗೆ ಬಂದ ಮಾತನ್ನು ನುಂಗುತ್ತಾನೆ.

ನಾಗರಾಜನಿಗೆ ಮಾತಾಡಲು ಕಾರಣ ದೊರೆಯುತ್ತದೆ. ಅವನು ಸುಶಿಕ್ಷಿತ ತರುಣಿಯರ ಬಗ್ಗೆ ಭಾಷಣವನ್ನು ಆರಂಭಿಸುತ್ತಾನೆ. ಅವನ ಮಾತು ಮುಗಿಯುವಾಗ, ಅರ್ಧ ತಲೆಕೂಲೆ ಸಿಂತಂತೆ ಮಾಲತೀಬಾಯಿಗೆ ಆನಂದ.

ರಾಮಾನುಜನಿಗೆ ಮುಖ್ಯಾಧ್ಯಾಪಕರಿಂದ ಕರೆಬರುತ್ತದೆ. ಸೌಮ್ಯವಾಗಿ ಅವನ ತಪ್ಪುಗಳನ್ನು ಹೇಳಿದರೆ ಅವು ಅವನ ಲಕ್ಷ್ಯಕ್ಕೆ ಬರುವುದಿಲ್ಲ. ತಾನು ಯಾವ ತಪ್ಪೂ ಮಾಡುವವನಲ್ಲವೆಂದು ಆತ ತಿಳಿದಿದ್ದಾನೆ. ಆತ ಏನೋ ತಪ್ಪು ಮಾಡಿದ್ದ. ಮುಖ್ಯಾಧ್ಯಾಪಕರು ಸಿಟ್ಟಿನ ಭರದಲ್ಲಿ ಚೀರಾಡಿದರು. ರಾಮಾನುಜ. ಬಾಯಿ ಪಡಿಲುಬಿಡುತ್ತಾನೆ. ಮುಖ್ಯಾಧ್ಯಾಪಕರು ಹಿಂಜರಿಯುತ್ತಾರೆ. "ನೋಡ್ರಿ, ನಾ

ಎಂದೂ ತಪ್ಪು ಮಾಡುವವನಲ್ಲ, ನಾ ಇಲ್ಲಿ ಹದಿನೈದು ವರ್ಷ ಕೆಲಸ ಮಾಡ್ತೇನೆ. ನೀವು ಮಾತ್ರ ಹೀಗೆ ಒದರಾಡೋದು ತಪ್ಪು'' ಎಂದು ರಾಮಾನುಜನು ಅನ್ನುತ್ತಾನೆ. ಆತ ಮಾತು ಮುಗಿಸಿದ್ದರಿಂದ ಮುಖ್ಯಾಧ್ಯಾಪಕರಿಗೆ ಸಮಾಧಾನವಾಗುತ್ತದೆ. ಅಷ್ಟರಲ್ಲಿ ಆತ ಇನ್ನೊಂದು ಭಾಷಣ ಆರಂಭಿಸುತ್ತಾನೆ.'' ನೀವು ಸಣ್ಣವರು. ಎಂ. ಎ. ಬಿ. ಟಿ. ಆದವರು ನಿಜ. ನಾ ಮಾತಾಡೋದ್ಕ ಸಿಟ್ಟಗೇಳಬ್ಯಾಡ್ರಿ. ಹೀಂಗ ಸಿಟ್ಟಿಗೆ ಏಳೋದ್ಕ ನಿಮ್ಮ ವಯಸ್ಸು ಕಾರಣ. ದಿನಾಹೋದ್ಹಾಂಗ ಎಲ್ಲಾ ತಿಳೀತದ. ಇರಲಿ. ಇಬ್ಬರೂ ಈ ಪ್ರಸಂಗ ಮರೆಯೋಣ. ನಿನುಗೆ ಅಪಮಾನ ಮಾಡೋದ್ಕ ನಾ ವಿರುದ್ಧ ಮಾತಾಡಲಿಲ್ಲ....'' ಎಂದು ಮಾತಿನ ಅರಳು ಹಾರಿಸುತ್ತಾನೆ.

ಮುಖ್ಯಾಧ್ಯಾಪಕರ ಕಣ್ಣಿರು ಒರಿಸುವುದು ಮಾತ್ರ ಉಳಿಯುತ್ತದೆ. ಆತ ಅವರ ಬೆನ್ನು ಮೇಲೆ ಕೈಯಾಡಿಸುವನೋ ಏನೋ ಎಂಬಂತೆ ಮುಖ ಮಾಡುತ್ತಾನೆ. ಹತ್ತು ನಿಮಿಷಗಳಲ್ಲಿ ಈ ನುದ್ದಿಯು ಬಿತ್ತರವಾಗುತ್ತದೆ.

'' ರಾಮಾನುಜ, ನೀವು ಮುಖ್ಯಾಧ್ಯಾಪಕರ ಕೆನ್ನೆಗೆ ಕುಟ್ಟಿದಿರಂತೆ'' ಕೃಷ್ಣಸ್ವಾಮಿ ಕೇಳುತ್ತಾನೆ.

ರಾಮಾನಂದ ಹವೆ ತುಂಬಿದ ಫುಟ್‌ಬಾಲಿನಂತೆ ಉಬ್ಬುತ್ತಾನೆ.

ಕೃಷ್ಣಸ್ವಾಮಿ ಕುಳಿತಲ್ಲಿಯೇ ನಿದ್ದೆಮಾಡುತ್ತಾನೆ; ಕಾಲೇಜಿನಲ್ಲಿಯ ಅನುಭವಗಳ ಅಷ್ಟಷ್ಟ ಕನಸು ಕಾಣುತ್ತಾನೆ. ಕನಸಿನಲ್ಲಿ ಅವನ ಸಹಪಾಠಿ ಲೀಲೆ ಬರುತ್ತಾಳೆ. ಕೃಷ್ಣಸ್ವಾಮಿಗಾಗಿ ಆಕೆ ತನ್ನ ಜೀವನವನ್ನು ನೀಲಲಾಗಿಟ್ಟಿದ್ದಳು. ಆಕೆಯೊಡನೆ ಅವನು ಎರಡು ವರ್ಷ ಕೂಡಿ ಕಲಿತಿದ್ದನು. ಅವರು ಟ್ರಿಪ್ಲಿಗೆ ಹೋಗಿದ್ದರು. ಆತ ಹಿಂದಿನಿಂದ ಸದ್ದಿಲ್ಲದೆ ಬಂದು ಅವಳ ಕಣ್ಣು ಮುಚ್ಚಿದ್ದ. ಆಕೆ ಸಿಟ್ಟಿಗೆದ್ದಳು. ಆದರೆ ಏಕೋ ಅವಳ ಮನಸ್ಸು ಕರಗಿ ನೀರಾಯಿತು. ಇಬ್ಬರೂ ಹತ್ತಿರ ಕುಳಿತರು. ಮುಂದೆ ಇಬ್ಬರಲ್ಲಿ ಅನಾಗ ಕಲಹವಾಗುತ್ತಿತ್ತು. ಈ ಕಲಹಗಳು ಅವನಿಗೆ ಜೀವನದಲ್ಲಿ ಉತ್ಸಾಹವನ್ನು ಕೊಡುತ್ತಿದ್ದುವು. ಒಂದು ದಿನ ಯಾವುದೋ ಕಾರಣಕ್ಕಾಗಿ ಈತ, ರೇಶಿಮೆಯ ಬಟ್ಟೆಯನ್ನು ಮುಳ್ಳುಬೇಲಿಯ ಮೇಲೆ ಹಾಕಿ ಎಳೆಯುವಂತೆ, ಇವಳ ಮೃದುಮನಸ್ಸಿಗೆ ವೇದನೆಯನ್ನು ಮಾಡಿದ. ಇಬ್ಬರೂ ತಮ್ಮ ಜೀವನದ ಮಾರ್ಗ ಬೇರೆ ಬೇರೆಯಾಗಿ ಹುಡುಕಬೇಕಾಯಿತು.

ಮಧ್ಯಾಹ್ನದ ಬಿಡುವು ಮುಗಿಯುತ್ತದೆ. ವರ್ಗಗಳು ಆರಂಭವಾಗುವ ಗಂಟೆಯಾಯಿತು. ಕೃಷ್ಣಸ್ವಾಮಿ ಎಚ್ಚೆತ್ತ. ಎಲ್ಲರೂ ತಮ್ಮ ತಮ್ಮ ವರ್ಗಗಳಿಗೆ ಮನಸ್ಸಿಲ್ಲದ ಮನಸ್ಸಿನಿಂದ ಹೋಗುತ್ತಾರೆ.

ಇವರೆಲ್ಲರ ಸಂಬಂಧ ಹೇಗಾಯಿತು ? ಈ ಒಟ್ಟು ಜೀವನವನ್ನು ಒತ್ತಟ್ಟಿಗೆ ಕಟ್ಟುವ ಕಟ್ಟಾವುದು ? ಇವರೆಲ್ಲರೂ ಬದುಕುವುದೇನೋ ನಿಜ ! ಆದರೆ ಹೇಗೆ ? ಅವರನುಭವಗಳು ಜೀವನಕ್ಕೆ ಆಕಾರವನ್ನು ಕೊಡುತ್ತಿವೆಯೇ ? ಇಂಥ ಜೀವನ–ಸಾವೋ ? ಬದುಕೋ ? ಜೀವನ ಪ್ರವಾಹದಲ್ಲಿ ತರಗೆಲೆಗಳಾಗಿ ಬಾಳಿದ ಬಾಳು ಬಾಳೇ ? ಇಂಥ ಜೀವನದಲ್ಲಿ ಗೆಲುವಾರಿಗೆ ? ಸೋಲಾರಿಗೆ ?

ಶಾಲೆ ಬಿಡುತ್ತದೆ. ಆಗ ಅಜ್ಞಾನದ ಮುಸುಡಿದ ಮುದ್ದೆಯಂತೆ ಅದು ನಿರ್ಜೀವನಿಯಾಗಿ ಕಾಣುತ್ತದೆ. ■

ದಿ ಸದ್ವೈದ್ಯ ಶಾಲಾ (ಪ್ರೈವೇಟ್) ಲಿಮಿಟೆಡ್,

— ನಂಜನಗೂಡು —

೪೦ ವರ್ಷಗಳಿಗೆ ಮೇಲ್ಪಟ್ಟು ಜನತಾಸೇವೆಯಲ್ಲಿ ತೊಡಗಿರುವ
ಈ ಔಷಧದ ಕಾರ್ಖಾನೆಯಲ್ಲಿ

ರೋಗಗಳನ್ನೆಲ್ಲ ನಾಶಗೊಳಿಸುವ

ಮತ್ತು

ಆರೋಗ್ಯವನ್ನು ಸಂರಕ್ಷಿಸುವ

ಚೂರ್ಣ, ಲೇಹ್ಯ, ತೈಲ, ಘೃತ, ಆಸವ, ಅರಿಷ್ಟ, ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ

ಮುಂತಾದ

ಸಿದ್ಧೌಷಧಗಳೂ

ಭಸ್ಮ, ಸಿಂದೂರ, ಕೂಪೀಪಕ್ವ ರಸಗಳೂ

ಅತ್ಯಾಧುನಿಕ ಕ್ರಮದಲ್ಲಿ

ಪೂರ್ಣ ಸತ್ವಯುತವಾಗಿ

ಭಾರತೀಯ ಆಯುರ್ವೇದರಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.

ಔಷಧದ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ

ಶಾಖೆಗಳು :

— ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ —

ಸೋಲ್ ಏಜೆಂಟರು: (ಟೂತ್-ಪೌಡರ್ ಮತ್ತು ಔಷಧಗಳಿಗೆ ಮಾತ್ರ)
(ಕನ್ನಡ ನೀಡು ಬಟ್ಟು)

ಯುನೈಟೆಡ್ ಕಸ್ಪರ್ಸ್, 54, ಬಂದರ್ ಸ್ಟ್ರೀಟ್, ಮದ್ರಾಸ್

ಭಟ್ಟನಾರಾಯಣನ

ವೇಣೀ ಸಂಹಾರ

(ಸಂಸ್ಕೃತ ನಾಟಕದ ಪರಿಚಯ)

ಶ್ರೀ. ರಂಗರಾವ ದೇಶಪಾಂಡೆ, ಅಲಬಕಟ್ಟಿ.

ಸಂಸ್ಕೃತ ನಾಟಕಸಾಹಿತ್ಯದಲ್ಲಿ ವೀರರಸಸ್ಥಾಯಿಯಾದ ನಾಟಕ 'ವೇಣಿಸಂಹಾರ'ಕ್ಕೆ ಸರಿದೊರೆಯೆನಿಸುವುದು ಇನ್ನೊಂದಿಲ್ಲ. ಈ ನಾಟಕಕ್ಕೆ ಕವಿ ಬಳಸಿಕೊಂಡ ಕಥಾವಸ್ತು ಮಹಾಭಾರತದಲ್ಲಿಯ ಯುದ್ಧಪರ್ವಗಳ ರೋಮಹರ್ಷಕಭಾಗ. ಕವಿಯು ತನ್ನ ಕಲಾಚಾತುರಿಯಿಂದ ಅದನ್ನು ಇನ್ನಿಷ್ಟು ರಂಜಿಸಿದ್ದಾನೆ

ಕವಿ (ಭಟ್ಟನಾರಾಯಣನು) ಒನೆಯ ಶತಮಾನದ ಕೊನೆಯ ಅಥವಾ ಎನೆಯ ಶತಮಾನದ ಆದಿಯಲ್ಲಿ–ಬಂಗಾಲ ದೇಶವನ್ನಾಳಿದ–ಸೇನವಂಶದ ಮೂಲಪುರುಷ ಆದಿಸೂರನೆಂಬ ರಾಜನಿಂದ ಆಹ್ವಾನಿತನಾಗಿ, ಕನ್ಯಾಕುಬ್ಜದಿಂದ ಬಂದವನೆಂದೂ, ಮೃಗರಾಜನೆಂಬುದು ರಾಜನಿಂದ ಬಂದ ಬಿರುದೆಂದೂ ವಿದ್ವಾಂಸರ ಅಭಿಪ್ರಾಯ. ವಿಶ್ವಕವಿ ಗುರುದೇವ ರವೀಂದ್ರನಾಥ ಠಾಕೂರರ ವಂಶದ ಮೂಲಪುರುಷನೂ ಇವನೇ ಎಂದೂ ಅಭಿಪ್ರಾಯಪಡುವರು.

ಪ್ರಸ್ತಾವನೆಯಲ್ಲಿ ತಾನು ಯಾವ ರಾಜಾಶ್ರಯದಲ್ಲಿದ್ದವನೆಂದು ಹೇಳಿಕೊಂಡಿಲ್ಲ. ನಾಟಕಸಮಾಪ್ತಿಯ ನಂತರ 'ಕಾವ್ಯಾಲಾಪ ಸುಭಾಷಿತವ್ಯಸನಿನಸ್ತೇ ರಾಜಹಂಸಾಗತಃ' ಎಂಬ ಪದ್ಯದಲ್ಲಿ ಕವಿಯು ತನ್ನ ಆಶ್ರಯದಾತರ ಬಗ್ಗೆ ವ್ಯಸನವನ್ನು ಮಾತ್ರ ವ್ಯಕ್ತಪಡಿಸಿರುವ.

ಪ್ರಾರಂಭದ ಸ್ವೇಷ್ಟ ದೇವತಾಕೀರ್ತನ ರೂಪೀ ನಾಂದೀಶ್ಲೋಕದಿಂದ ಕವಿಯು ವಿಷ್ಣುಭಕ್ತನೆಂದು ತಿಳಿಯುವುದು.

ನಾಟಕದ ಕಥಾವಸ್ತು ಮಹಾಭಾರತದ ಸುಪ್ರಖ್ಯಾತ ಪಾಂಡವರ ಕಥೆ. ನವರಸ ಸುಧಾಬ್ಧಿ ಎನಿಸಿದ ಮಹಾಭಾರತದ ಉಪಾಖ್ಯಾನಗಳನ್ನು ವಸ್ತುವಾಗಿಟ್ಟುಕೊಂಡು ರಚಿತವಾದ ಶಾಕುಂತಲಾದಿ ಶೃಂಗಾರರಸಪ್ರಧಾನವಾದ ನಾಟಕಗಳಿವೆ; ಆದರೆ ಮುಖ್ಯ ಆಖ್ಯಾನವನ್ನೇ ವಸ್ತುವಾಗಿಟ್ಟುಕೊಂಡು ' ವೀರರಸ ಪ್ರಧಾನವಾದ ಈ ನಾಟಕ ಅಪೂರ್ವವಾಗಿದೆ.

ನಾಟಕದ ಹೆಸರೇ ಸೂಚಿಸುವಂತೆ ಇದು ದುಃಖಾಂತವಾಗಬೇಕಿತ್ತು; ಆದರೆ ಕವಿಯು ಸಂಪ್ರದಾಯಾನುಸಾರ ಪಟ್ಟಾಭಿಷೇಕ ಮಹೋತ್ಸವದ ಮಂಗಳದಲ್ಲಿ ಸುಖಾಂತವಾಗಿ ಸರಿಸಮಾಪ್ತಿ ಮಾಡಿರುವ.

ಸಾಹಿತ್ಯ ಶಾಸ್ತ್ರಾಧಾರದಂತೆ ಕವಿಯು ಭಾರತಕಥೆಯಲ್ಲಿಯ ಸ್ಥಳ, ಕಾಲ, ಅವಕಾಶಗಳನ್ನು ತನ್ನ ರಚನಾತಂತ್ರಕ್ಕನುಗುಣವಾಗಿ ಬಳಸಿಕೊಂಡಿರುವ.

ಸಭಾಪರ್ವದ ದುರ್ದ್ಯೂತದಲ್ಲಿ ದುಃಶಾಸನನ ದೌರಾತ್ಮ್ಯದಿಂದ ಸಿಟ್ಟಿದ ದ್ರೌಪದಿಯ ಮುಡಿಯೇ ಇದರ ಬೀಜ; ಆ ಅನರ್ಥಕ್ಕೆ ಕಾರಣನಾದ ದುಃಶಾಸನನ ಎದೆ ಸೀಳಿ ಬಿಸಿರಕ್ತ ಕುಡಿದು, ದುರ್ಯೋಧನನ ತೊಡೆಯೊಡೆದು, ಸುರಿಯುತ್ತಿರುವ ರಕ್ತದಲ್ಲದ್ದಿದ ಕೈಯಿಂದ ಬಿಚ್ಚಿದ ಮುಡಿಯನ್ನು ಕಟ್ಟುವೆನೆಂದು ಮಾಡಿದ ಭೀಮನ ಪ್ರತಿಜ್ಞಾಪೂರ್ತಿಯೇ ಇದರ ಕಾರ್ಯ.

ಉದ್ಯೋಗ, ಭೀಷ್ಮ, ದ್ರೋಣ, ಕರ್ಣ, ಶಲ್ಯಪರ್ವಗಳ ಆರುನೂರಕ್ಕೂ ಮೇಲ್ಪಟ್ಟ ಅಧ್ಯಾಯಗಳಲ್ಲಿ ವರ್ಣಿತವಾದ ಯುದ್ಧಪ್ರಸಂಗದ ಕಥಾನಕವೇ ಆರು ಅಂಕುಗಳಲ್ಲಿ ಚಿತ್ರಿತವಾಗಿದೆ. ಯುದ್ಧ, ವಧೆ, ಅಂಬರಗೃಹಣಾದಿ ಪ್ರಸಂಗಗಳನ್ನು ಪ್ರತ್ಯಕ್ಷವಾಗಿ ರಂಗದ ಮೇಲೆ ನಿದರ್ಶಿಸಬಾರದೆಂಬ ಭರತಶಾಸ್ತ್ರವಚನದಂತೆ ಬಿಟ್ಟುಕೊಟ್ಟೂ, ಪಾತ್ರಗಳ ಭಾಷಣ ಅಭಿನಯಗಳ ದ್ವಾರಾ ಕರುಣೆ-ಭಯಗಳನ್ನು ಹುಟ್ಟಿಸುವಷ್ಟು ನಾಟಕ ಗಂಭೀರವಾಗಿದೆ.

ಪ್ರಸ್ತಾವನೆಯಲ್ಲಿ ಸೂತ್ರಧಾರನೆತ್ತಿಕೊಂಡ ಕೃಷ್ಣಸಂಧಾನದ ಪ್ರಸ್ತಾಪವನ್ನು ಪ್ರತಿಭಟಿಸುವ ಭೀಮನ ಪದ್ಯದ ಪ್ರತಿಯೊಂದು ಪದವೂ:—

ಲಾಕ್ಷಾಗೃಹಾನಲ ವಿಷಾನ್ನ ಸಭಾಪ್ರವೇಶೈಃ॥
ಪ್ರಾಣೇಷು ವಿತ್ತಸಿಚಯೇಷುಚ ನಃ ಪ್ರಹೃತ್ಯ॥
ಆಕೃಷ್ಟ ಪಾಂಡವವಧೂ ವರಿಧಾನ ಕೇಶಾಃ॥ ಇವು

ಕೌರವರಿಂದ ಪಾಂಡವರಿಗಾದ ದ್ರೋಹಗಳು. ಇವುಗಳ ಸ್ಪಷ್ಟ ಚಿತ್ರವನ್ನೇ ಕವಿಯು ಪ್ರಥಮತಃ ಪ್ರೇಕ್ಷಕರ ಚಿತ್ತಭಿತ್ತಿಯ ಮೇಲೆ ಮೂಡಿಸಿ ಅವು ಅಚ್ಚಳಿಯದಂತೆ ಮಹತ್ತ್ವದ ಹಂತಹಂತಗಳಲ್ಲಿ ದ್ರೌಪದೀ ಕೇಶಾಕರ್ಷಣದ ವಿಷಯವನ್ನೇ ಮತ್ತೆ ಮತ್ತೆ ಪ್ರಸ್ತಾಪಿಸಿ, ದ್ರೌಪದಿಯ ವಿಷಯಕ್ಕೆ ಸಹಾನುಭೂತಿಯನ್ನೂ ಕೌರವರ ಕೊನೆಗಾಲದ ವಿಷಯಕ್ಕೆ ಕುತೂಹಲವನ್ನೂ ಕೆರಳಿಸಿರುವ.

ಕ್ರೋಧಾವೇಶದಲ್ಲಿದ್ದ ಭೀಮ ಸಹದೇವನೊಡನೆ ಆಯುಧಾಗಾರದ ಬದಲು ದ್ರೌಪದಿಯ ಪತಿಃಶಾಲೆಯನ್ನು ಪ್ರವೇಶಿಸುವ ದೃಶ್ಯ ಅಪೂರ್ವವಾಗಿದೆ. ಅಲ್ಲಿ ದುಃಖಿಸುತ್ತಿರುವ ದ್ರೌಪದಿಯನ್ನು ಕಂಡು ಕಾರಣವನ್ನು ವಿಚಾರಿಸುವಲ್ಲಿ:–

"ಪಂಚಗ್ರಾಮಾಃ ಪ್ರಾರ್ಥ್ಯಂತೇ ಇತಿಶ್ರೂಯತೇ। ತತ್ಕಸ್ಯಾದಿದಾನೀಮಪಿ ತೇಕೇಶಾಸ ಸಂಯಮ್ಯಂತೇ!" ಎಂಬ ಭಾನುಮತಿಯ ಮರ್ಮೋದ್ಘಾಟನೆಯಿಂದಾದ ಅಸಮಾನವೇ ಕಾರಣವೆಂದು ದಾಸಿಯು

ಮುಖೇನ ಕೇಳಿಸುವುದರಲ್ಲಿ ಔಚಿತ್ಯವಿದೆ. ಈ ಅಪಮಾನದ ಪುನರಾವೃತ್ತಿ, ಕೆರಳಿದ ಭೀಮನಿಂದಃ—

ಚಂಚದ್ಭುಜಭ್ರಮಿತ ಚಂಡ ಗದಾಭಿಘಾತ।
ಸಂಚೂರ್ಣಿತೋರು ಯುಗಲಸ್ಯ ಸುಯೋಧನಸ್ಯ॥
ಸ್ತ್ರೀಣಾವನದ್ಧ ಘನಶೋಣಿತ ಶೋಣಪಾಣಿ।
ರುತ್ತಂಸಯಿಷ್ಯತಿ ಕಚಾಂಸ್ತವ ದೇವಿ ಭೀಮಃ॥ ಎಂದು

ಪೂರ್ವಪ್ರತಿಜ್ಞೆಯ ಪುನರಾವೃತ್ತಿಗೆ ಸಾಧನವಾಗಿದೆ.

ಭಾನುಮತಿಯ ವಿಷಯವಾಗಿ ಸಹದೇವ ತೆಗೆದ ಉದ್ಗಾರಃ—

ಸ್ತ್ರೀಣಾಂಹಿ ಸಾಹಚರ್ಯಾದ್ಭವಂತಿ ಚೇತಾಂಸಿ-
ಭರ್ತೃಸದೃಶಾನಿ।
ಮಧುರಾಪಿಹಿ ಮೂರ್ಛಯತೀ ವಿಷವಿಟಪಿ-
ಸಮಾಶ್ರಿತಾವಲ್ಲೀ॥

ಎಂಬ ಸುಭಾಷಿತ ಮನನೀಯವಾಗಿದೆ.

ಭೀಮನ ಧೀರೋದಾತ್ತ ಗುಣಚಿತ್ರಣದಲ್ಲಿ ಕವಿಯ ಪ್ರತಿಭೆ ಎದ್ದುಕಾಣುವುದು. ಸಂಧಾನದಿಂದ ಮರಳಿದ ಕೃಷ್ಣನಿಂದ ಸಂದೇಶ ತಂದ ಕಂಚುಕಿಯು, ಶ್ರೀಕೃಷ್ಣನನ್ನು ಕೌರವರು ಕಟ್ಟಡಬೇಕೆಂದರಂತೆ. ವಿಶ್ವರೂಪ ತೋರಿಸಿ ಜನರೆಲ್ಲರನ್ನೂ ಮೂರ್ಛೆಗೊಳಿಸಿ ಬಂದಿರುವನೆಂದು ಹೇಳಿದಾಗ, ಕೌರವರ ಮೇಲೆ ಕಿಡಿಕಾರಲಿಲ್ಲ ಭೀಮು, ಸಂತೃಪ್ತ ಮನಸ್ಸಿನಿಂದ ಪರಮಾತ್ಮನ ಮಹಿಮಾವಿಶೇಷ ಗಮನಿಸಿ ಭಕ್ತಿಯಿಂದ ಆಕಾಶದತ್ತ ನೋಡಿ "ಆಃ ದುರಾತ್ಮನ್ ಕುರುಕುಲ ಪಾಂಸ ಏವಮತಿಕ್ರಾಂತ ಮರ್ಯಾದೇತ್ಯಯಿ ನಿಮಿತ್ತಮಾತ್ರೇಣ ಪಾಂಡವ ಕ್ರೋಧೇನ ಭವಿತವ್ಯಂ!" ಎನ್ನುವ.

ದುರಾತ್ಮನಾದ ದುರ್ಯೋಧನ ಭಗವಂತನ ನಿಜಸ್ವರೂಪವನ್ನೂ ತಿಳಿಯನೇ- ಎಂದು ಸಹದೇವನೆಂದರೆ ಭೀಮಃ-ಪತ್ಸ ಜನನು ದುರಾತ್ಮನೇ ಆದ್ದರಿಂದ ಆ ಪುರಾಣಪುರುಷೋತ್ತಮನ ನಿಜಸ್ವರೂಪವನ್ನು ತಿಳಿಯಲಾರನೆಂದು ಹೇಳಿ, ಪರಮಾತ್ಮನ ನಿಜಸ್ವರೂಪದ ಜ್ಞಾನವಾಗಬೇಕಾದರೆ ಯೋಗ್ಯತೆ ಎಂತಹದಿರಬೇಕೆಂದೂ ವಿವರಿಸುವ. ಕೌರವರು ವೈರಿಗಳಾದರೂ ಅವರ ಅಜ್ಞಾನಕ್ಕಾಗಿ ಕನಿಕರ ಪಡುವ ಭೀಮು. ನಾಯಕನ 'ಶಾಸ್ತ್ರಚಕ್ಷುತ್ವ'ವನ್ನು ಪ್ರಕಟಿಸಿರುವ ಕವಿಯು.

ದ್ರೌಪದಿಯ ಪಾತ್ರಚಿತ್ರಣ ಇಲ್ಲಿಯೂ ೬ನೆಯ ಅಂಕದಲ್ಲಿಯೂ ತನ್ನದೇ ಆದ ಅನಿರ್ವಚನೀಯ ಭಾವಕಾಂತಿಯಿಂದ ಬೆಳಗುತ್ತಿದೆ. ದುಃಖ-ಸಂತಾಪಗಳನ್ನು ತೋಡಿಕೊಂಡು ಪತಿಗಳ ಶೌರ್ಯಕ್ಕೆ ಚೇತನದಾಯಿಯಾದ ರಣಚಂಡಿಯಲ್ಲ, ಶಾಲೀನತೆಯ ಪ್ರತ್ಯಕ್ಷಮೂರ್ತಿ. ಯುದ್ಧಕ್ಕೆ ಹೊರಟ ಭೀಮು-ಸಹದೇವರನ್ನು ಬೀಳ್ಕೊಡುವಾಗ 'ನಾಥ ಅಸುರ ಸಮರಾಭಿಮುಖಸ್ಯ ಹರೇರಿವ ಮಂಗಲಂ ಯುಷ್ಮಾಕಂ ಭವತು। ಪುನರಪಿ ಯುಷ್ಮಾಭಿಃ ಸಮರಾದಾಗತ್ಯಾಹಂ ಸಮಾಶ್ವಾಸಯಿತವ್ಯಾ ॥ ಎಂಬು ನುಡಿಯಲ್ಲಿ ಸೌಜನ್ಯ ಪೂರ್ಣ ಶಾಲೀನತೆ ವ್ಯಕ್ತವಾಗಿದೆ.

೬ನೆಯ ಅಂಕದ ಪ್ರಾರಂಭದಲ್ಲಿಯೇ ಪ್ರತಿನಾಯಕ ದುರ್ಯೋಧನನ ಸೈತಿಕ ಅಧಃಪತನದ ಚಿತ್ರಣ ಪ್ರಾರಂಭವಾಗಿದೆ. ಸೇವಾನಿಷ್ಠ ವೃದ್ಧಸೇವಕನ ಅಭಿಪ್ರಾಯ, ಯಜಮಾನನ ಪ್ರತಿಷ್ಠೆ ಜಘನ್ಯ ಅಪ್ರತಿಷ್ಠೆಗೆ ಉತ್ಕೃಷ್ಟ ಋಜುಮಾತು—ಕೌರವನ ವೃದ್ಧಸೇವಕ ಕಂಚುಕಿಯು "ಸಾಧು ಪತಿವ್ರತೇ ಸಾಧು, ಸ್ತ್ರೀ ಭಾವೇನಿ ವರ್ತಮಾನಾ ವರಂ ಭವತೀ ನ ಪುನರ್ಮಹಾರಾಜಃ। ಯೋಽಯಂ ಉದ್ಯತೇಷು × × × ಪಾಂಡುಮತ್ರೇಷು ಅದಿಷು ಅದ್ಯಾಸ್ಯಂತಃಪುರ ವಿಹಾರಮನುಭವತಿ। ಎಂದು ಭಾನುಮತಿಯನ್ನು ಹೊಗಳಿ, ದುರ್ಯೋಧನನನ್ನು ಅವನ ಅಯೋಗ್ಯ ವರ್ತನೆಗಾಗಿ ತೆಗಳುವ.

ಭೀಷ್ಮರ ಪತನಕ್ಕಾಗಿ ಎಳ್ಳಷ್ಟೂ ಮರುಗದಿರುವ, ಬಾಲಕ ಅಭಿಮನ್ಯುವಿನ ವಧೆಯಾಯಿತೆಂದು ಉಲ್ಲಸಿತನಾಗಿರುವ ದುರ್ಯೋಧನನ ದುರ್ವ್ಯಾಪಾರಕ್ಕೆ ಮನಸೊಂದ ಕಂಚುಕಿಯು, ದುರ್ಯೋಧನನೇ ಅಭಿಮನ್ಯುವಧೆಯ ಪ್ರಸ್ತಾಪ ತೆಗೆದಾಗ ನಿರ್ದಾಕ್ಷಿಣ್ಯವಾಗಿ "ದೇವ ನೇದಮುಚಿತಂ ದುಷ್ಕರ್ಮಣಾಯ ಶಸ್ತ್ರಪ್ರಭಾವಾಣಾಂ। ಕರ್ಣ ಜಯದ್ರಥಯೋರ್ವಾ। ಕಾನಾಮಾತ್ರಶ್ಲಾಘಾ" ಎಂದು ಸ್ಪಷ್ಟವಾಗಿ ಹೇಳಿಬಿಡುವ ಇಷ್ಟಾದರೂ ತನ್ನ ಮಾತನ್ನೇ ಸಮರ್ಥಿಸಿಕೊಳ್ಳುತ್ತ ಮಾತಿನ ಭರದಲ್ಲಿ ಅರಿವಿಲ್ಲದೇ " ಭ್ರಾತೃಬಾಂಧವ ಸುತ-ಸ್ನೇಹಿತ ಸಹಿತ ತನ್ನನ್ನೇ ಪಾಂಡವರು ಶೀಘ್ರದಲ್ಲಿ ಕೊಲ್ಲುವರೆಂ" ದು ನುಡಿಯುವ. ಇದು ಮನೋವಿಕಾರದ ಪರಾಕಾಷ್ಠತೆ! "ಶಾಂತಂ ಪಾಪಂ" ಎಂದು ಕಂಚುಕಿಯು ವಿಪರೀತ ನುಡಿದಪ್ಪನ್ನು ಗಮನಕ್ಕೆ ತಂದುಕೊಟ್ಟಾಗ, ಆ ಸೇವಕನೆದುರು 'ತನ್ನ ಹೆಂಡತಿಯು ನಸುಕಿನಲ್ಲಿ ಹೇಳಿದೇ ಕೇಳಿದೇ ಹಾಸಿಗೆಯಿಂದ ಎದ್ದು ಎಲ್ಲಿಗೋ ಹೋಗಿದ್ದರಿಂದ, ತನ್ನ ಮತಿ ವಿಭ್ರಮೆಯಾಗಿದೆ" ಎಂದು ಯಾರೆದುರೂ ಹೇಳಿಬಾರದ ಗೌಪ್ಯವನ್ನು ಬಿಚ್ಚಿಬೇಳುವ ನಿರ್ಲಜ್ಜ-

ಭಾನುಮತಿಯ ಸ್ವಪ್ನಸನ್ನಿವೇಶ, ದುರ್ಯೋಧನನ ದೋಷಾವಿಷ್ಕಾರಕ್ಕಾಗಿಯೇ ಕವಿಯು ಕಲ್ಪಿಸಿದುದು. ಆರ್ಯಸ್ತ್ರೀಧರ್ಮದ ಆವೃತ್ತಿಯಿಂದು ಭಾನುಮತಿಯ ಚಿತ್ರಣ—ಅಧಃಪತಿತ ಪುರುಷಪ್ರವರನದೇ ದುರ್ಯೋಧನನದು

ಸಖಿಯರೊಡನೆ ರಹಸ್ಯದಲ್ಲಿ ಮಾತಾಡುವುದನ್ನು ಮರೆಯಲ್ಲಿ ನಿಂತು ಕೇಳುವುದೂ, 'ದಿವ್ಯರೂಪಿಣೋ ನಕುಲಸ್ಯ ದರ್ಶನೋತ್ಸುಕಾ ಜಾತಾ'। ಎಂಬ ಭಾನುಮತಿಯ ಸ್ವಪ್ನವೃತ್ತಾಂತದ ತಪ್ಪಾರ್ಥ ಮಾಡಿಕೊಂಡು "ಆಃ ಪಾಪೇ ಪುತ್ರರಿಗ್ರಹಣಾಂಸುಲೇ" ಎಂದು ಅವಳ ಶೀಲದ ವಿಷಯಕ್ಕೆ ಸಂಶಯಮೂಡಿ ದುರುಕ್ತಿಯನ್ನಾಡುವುದೂ 'ತತಸ್ತೇನ ಪ್ರಣಯಾರ್ದ್ರಿತಕರೇಣಾಪಹೃತಂ ಮೇಸ್ತ್ರಸಾಂಶುಕಂ'। ಎಂದದ್ದನ್ನು ಕೇಳಿ ಕೋಪಾಟೋಪದಿಂದ ಒರೆಯಿಂದ ಖಡ್ಗವನ್ನೆಳೆದು "ಭವತು ತಾವತ್ ತಸ್ಯ ಪರವನಿತಾಸ್ತಂಜನ-ಪ್ರಗಲ್ಭಸ್ಯ ಪಾಪಸ್ಯ ಸುತಹಂತಕಸ್ಯ ಜೀವಿತಮಪಹರಾಮಿ" ಎಂದು ಹೆಜ್ಜೆ ಇಡುವುದೂ ದುರ್ಯೋಧನನ ದುರ್ವ್ಯಾಪಾರಗಳು. ಪರಸ್ತ್ರೀಯಭಿಮಾನಪೋರಪಾತಕಕ್ಕೆ ಮರಣದಂಡನೆಯೇ ಯೋಗ್ಯವೆಂಬುದನ್ನು ಕವಿಯು ಅವನ ಬಾಯಿಂದಲೇ ನುಡಿಸಿರುವ—

ಸ್ವಪ್ನವೃತ್ತಾಂತದ ಪ್ರತಿಕ್ರಿಯೆ ದುರ್ಯೋಧನನ ಮನಸ್ಸಿನ ಮೇಲಾಗದಿರಲಿಲ್ಲ. ಆದರೆ ಅಂಗಿರಸ ಮುನಿಗಳ ವಚನಾಧಾರದಿಂದ ಅದು

ಜಯಂತಿ

ಕಾಕತಾಲೀಯವೆಂದು ಸಮಾಧಾನ ತಂದುಕೊಳ್ಳುವ. ದುಃಸ್ವಪ್ನ ಶಾಂತ್ಯರ್ಥ ಧಾನುಮತಿಯು ಮಾಡಬೇಕೆಂದಿರುವ.ವ್ರತನಿಯನುಗಳಲ್ಲಿ ವಿಶ್ವಾಸವಿಲ್ಲ ಅವನಿಗೆ."ಆರ್ಯಪುತ್ರನ ಮನೋರಥಸಿದ್ಧ್ಯರ್ಥವೇ ತನ್ನ ವ್ರತಾಚರಣೆ "ಯೆಂದರೆ— "ನಿನ್ನ ಕೂಡ ಸ್ವೇಚ್ಛೆಯಿಂದ ವಿಹರಿಸುವು ದೊಂದೇ ನನ್ನ ಮನೋರಥ ಸಿದ್ಧಿ " ಎಂದು ಹೇಳುವ ಈ ಸ್ತ್ರೈಣ. ಚಂಡಮಾರುತನಿಂದ ರಥದ ಧ್ವಜಭಂಗವಾದರೂ ಏನೂ ಎನಿಸದು ಈ ಪಾಖಂಡಿಗೆ. ಪ್ರಿಯಾ ಸಂಗಮೋತ್ಸುಕನಾಗಿ ಬಂದ ದುರ್ಯೋಧನನಿಗೆ ದುರ್ನಿಮಿತ್ತಗಳೇ ಕಾದಿವೆ. ಸ್ಪಷ್ಟವೃಷ್ಟ್ಯಾಂತ, ಚಂಡಮಾರುತ ಉತ್ಪಾತಗಳಿಂದ, ಕವಿಯು, ಅದೃಷ್ಟದ ಕೈ ಪುರುಷನ ಭಾಗ್ಯದ ಏರಿಳಿತದಲ್ಲಿ ಇಲ್ಲದಿಲ್ಲಿ೦ಬ ಸತ್ಯವನ್ನು ಎತ್ತಿತೋರಿಸಿರುವ.

ಶೃಂಗಾರರಸ ಸನ್ನಿವೇಶದಲ್ಲಿಯೇ ದುರ್ಯೋಧನನ ಅಮಂಗಳ ಭವಿಷ್ಯತ್ತನ್ನೂ ಸೂಚಿಸುವ ಕವಿಯ ಕಲ್ಪನೆಯಲ್ಲಿ ನಾವೀನ್ಯವಿದೆ.

೩ನೆಯ ಅಂಕದ ಪ್ರಥಮಪ್ರವೇಶದ ರಾಕ್ಷಸ - ರಾಕ್ಷಸಿಯರ ಭೀಭತ್ಸ ಸಂಭಾಷಣೆ, ಮುಂದಿನ ವೀರ ರೌದ್ರ ಕರುಣಾರಸ ಪ್ರವಾಹದ ನೆರೆಗೆ ಕಾರಣವಾಗಿದೆ.

ಸಮರ ಮಹೋತ್ಸವನಿರ್ಭರನಾಗಿ ಹೊರಟ ಅಶ್ವತ್ಥಾಮ, ಸಮರದಿಂದ ಕಾಲ್ತೆಗೆಯುತ್ತಿರುವ ಕರ್ಣಾದಿ ಮಹಾರಥಿಕ ಪಡಾತಿಗಳಿಗೆ :

ಯದಿ ಸಮರಮುಪಾಸ್ಯ ನಾಸ್ತಿ ಮೃತ್ಯೋ-
ರ್ಭಯಮಿತಿ ಯುಕ್ತಮಿತೋಽನ್ಯತಃ ಪ್ರಯಾತುಂ।
ಅಥಮರಣಮವಶ್ಯಮೇವ ಜಂತೋಃ।
ಕಿಮಿತಿ ಮುಧಾಮಲಿನಂ ಯಶಃ ಕುರುಷ್ವೇ ॥ ಎಂದು ಯುಕ್ತಿಯುಕ್ತವಾಗಿ ಹೇಳುವ ವಾಣಿಯಲ್ಲಿ ಕ್ಷಾತ್ರ ತೇಜಸ್ಸಿದೆ; ವೀರ ಹೃದಯದ ಕೆಚ್ಚಿದೆ, ಪಕ್ಷಾಭಿಮಾನದ ತೀವ್ರತೆ ಇದೆ.

ಮಕ್ಕಳ ಹೃದಯಕ್ಕೆ ಮಾತಾಪಿತೃಗಳ ಮರಣವಾರ್ತೆ ಒಂದು ವಜ್ರಾಘಾತ; ನಾನಾ ಭಾವನೆಗಳ ಸನ್ನಿಪಾತ, ದುಃಖ, ಜಿಗುಪ್ಸೆ, ಉದ್ವೇಗ, ಉದ್ರೇಕ, ಪ್ರತೀಕಾರ, ಒಂದೊಂದಾಗಿ ಪ್ರಬಲವಾಗಿ, ವಿವೇಕ ಅಡಗಿ, ವಿಭ್ರಮೆಯ ಅಂಚಿನಲ್ಲಿ ನಿಂತ ಒರ್ವ ಪಿತೃಭಕ್ತ ವೀರಪುತ್ರನ ಚಿತ್ರಣವೇ ಅಶ್ವತ್ಥಾಮನ ಪಾತ್ರ.

ನಿವಾಪಾಂಜಲಿದಾನೇನ ಕೇತನೈಕಃ ಶ್ರಾದ್ಧಕರ್ಮಭಿಃ।
ತಸ್ಯೋಪಕಾರೇ ಶಕ್ತಸ್ತ್ವಂ ಕಿಂ ಜೀವನ್ನಿಮುತಾನ್ಯಥಾ॥ ಎಂದು ಶೃತ್ರಧರ್ಮದ ಸಮುಪದೇಶದಿಂದ ವಿವೇಕವನ್ನು ಜಾಗೃತಗೊಳಿಸಿ ಅನರ್ಥಮಾರ್ಗದಿಂದ ಪರಾವೃತ್ತಗೊಳಿಸುವ ಆಪ್ತಬಂಧುವಿನ ಪಾತ್ರ ಕೃಪಾಚಾರ್ಯರದು.

ಪಿತೃಶೋಕದಿಂದಾದ ಅಶ್ವತ್ಥಾಮನ ವಿಷಣ್ಣತೆಯನ್ನು ಕಳೆದು ವಿಷಘ್ನೋತ್ಕಾರ ಮಾಡುವ ಘಟಸರ್ಪದಂತೆ ಕೊನೆಯವರೆಗೂ ಕುದಿಸಿ-ಸಿಂದ ಹೆಡೆಯುಪ್ಪಳಿಸುವಂತೆ ಮಾಡಿದುದು ಕವಿಕಲ್ಪಿತ ನೇಪಥ್ಯವಾಣಿ.

ತಾತನ ಮರಣ ಸ್ವಾಭಾವಿಕ ವೀರ ಮರಣವಾಗಿರದೆ, ತನ್ನ ಮೇಲಿನ ವಾತ್ಸಲ್ಯದಿಂದ ಶಸ್ತ್ರ ಜೆಲ್ಲಿ ಶೋಕಮಗ್ನರಾಗಿ ಕುಳಿತಾಗ ಅನ್ಯಾಯದಿಂದ ಅವರ ತಲೆಕೂದಲನ್ನೆತ್ತಿ ಹಿಡಿದು, ದೃಷ್ಟದ್ಯುಮ್ನ ಕತ್ತಿಯಿಂದ ಕತ್ತನ್ನು ಹಾರಿಸಿದನೆಂದು ತಿಳಿದಾಗ, ಅಶ್ವತ್ಥಾಮನ ದುಃಖ ಅಳತೆಮೀರಿ, ತಾತನ ಅವಮಾನದ ಪ್ರತೀಕಾರಕ್ಕಾಗಿ ಒತ್ತಾಯ ಪಡಿಸುವುದು.

ಕೃಪಾಚಾರ್ಯರೂ ದ್ರೌಪದಿಯ ಕೇಶಕರ್ಷಣದ ಪ್ರಸಂಗವನ್ನು ನೆನೆಸಿಕೊಂಡು, ಅದೊಂದರಿಂದಲೇ ಈಗ ದುರ್ಧರ ಪ್ರಸಂಗ ನಡೆದಿದೆ. ಇದರಿಂದಂತೂ ಜಗತ್ತೇ ಲಯವಾಗುವ ಪ್ರಸಂಗ ಬಂದಿದೆ–ಎಂದು ಹಳಹಳಿಸುವರು.

ತಾತನ ಪರಿಭವದ ಪ್ರತೀಕಾರದ ಆತುರ ಹೆಚ್ಚಾಯ್ತು ಅಶ್ವತ್ಥಾಮನಲ್ಲಿ. "ಈ ಪರಿಭವದ ಪರಿಮಾರ್ಜನೆಗೆ ಸೇನಾಪತ್ಯ ಸ್ವೀಕಾರವೇ ಸೂಕ್ತ ಮಾರ್ಗ"ವೆಂದು ಸೂಚಿಸಿದ ಕೃಪ." ದುರ್ಯೋಧನ-ಕರ್ಣರ ಮೈತ್ರಿಯನ್ನರಿತ ಅಶ್ವತ್ಥಾಮ ' ಅದು ಸಾಧ್ಯವೇ ? ' ಎಂದು ಶಂಕಿಸಿದ. ' ಭೀಷ್ಮದ್ರೋಣರಿಲ್ಲದ ಕುರುಸೈನ್ಯಕ್ಕೆ ನೀನೇ ಯೋಗ್ಯಧುರಂಧರ; ಕೌರವರಾಜ ನಿನ್ನ ಪ್ರತೀಕ್ಷಣೆಯಲ್ಲಿಯೇ ಇರಬಹುದು, ಎಂದು ಸಮಾಧಾನ ಹೇಳಿದ ಕೃಪ. ಉಭಯತರೂ ಕುರುರಾಜನಲ್ಲಿಗೆ ಹೊರಟರು. ಅಷ್ಟರಲ್ಲಿ ಅಲ್ಲಿ ಒಂದು ಜೋಡ್ಯ ನಡೆದು ಹೋಗಿತ್ತು.

ಈ ಜೋಡ್ಯಕ್ಕೆ ಕಾರಣ ಮಹಾರಥಿಕರ್ಣ.

ಯಾವ ಪಾತ್ರವಿಲ್ಲದಿದ್ದರೆ ಭಾರತವು ಮಹಾಭಾರತವೇ ಆಗುತ್ತಿದ್ದಿಲ್ಲವೋ ಅಂಥ ಮಹತ್ತ್ವದ ಪಾತ್ರ ಕರ್ಣನದು. ಇದೊಂದೇ ಚಿಕ್ಕ ದೃಶ್ಯದಲ್ಲಿ ಅದನ್ನು ಯೋಜಿಸಿಕೊಂಡ ಕವಿಯ ಉದ್ದೇಶ ದ್ವಿಮುಖವಾಗಿದೆ. ಅಶ್ವತ್ಥಾಮನ ವೀರ್ಯಕ್ಕೂ ದುರ್ಯೋಧನನಲ್ಲಿಯ ದೋಷಕ್ಕೂ ಪೋಷಕಗಳಾದ ಗುಣಗಳವನಲ್ಲಿವೆ. ಜಾತಿಮತ್ಸರ ಮಹತ್ತ್ವಾಕಾಂಕ್ಷೆ, ಆತ್ಮಪ್ರತಿಷ್ಠೆಗಾಗಿ ಹಂಬಲ, ದುರಭಿಮಾನಗಳ ಸಾಕ್ಷಾತ್ ಮೂರ್ತಿಯೇ ಕರ್ಣ. ಆತ್ಮ ಪ್ರತಿಷ್ಠೆಯ ಭದ್ರತೆಗಾಗಿ ಸರ್ವದಾ ದ್ರೋಣ ಭೀಷ್ಮ ವಿಧುರರ ಸಚ್ಚರಿತ್ರೆಯ ಮೇಲೆ ಧೂಳೆಸ್ಸರಚಿ ಅವರ ವಿಷಯಕ್ಕೆ ದುರ್ಯೋಧನನ ಮನಸ್ಸನ್ನು ದೂಷಿತ ಮಾಡುವುದು ಅವನ ಸ್ವಭಾವ.

"ಮಗ ಶತ್ರುನೆಂಬು ಕೇಳಿ ಅವನ ಮೇಲಿನ ವಾತ್ಸಲ್ಯದಿಂದ ದ್ರೋಣ ಶಸ್ತ್ರ ಕೆಳಗಿಟ್ಟನೆಂಬ ಮಾತಿನಲ್ಲಿ ತಥ್ಯವಿಲ್ಲ, ಅಶ್ವತ್ಥಾಮ ನನ್ನು ಸಮ್ರಾಟ್ ಸಿಂಹಾಸನದಲ್ಲಿ ಕುಳ್ಳಿರಿಸಬೇಕಿತ್ತು ದ್ರೋಣನಿಗೆ. ಅವನೇ ಸತ್ತು ಹೋಗಲಿ ಮೇಲೆ · ಬ್ರಾಹ್ಮಣನಾದ ತನಗೆ ಇನ್ನೇಕೆ ಶಸ್ತ್ರ ' ಎಂದು ಸಿಂಹಾಸನ ಭರವಸೆಯ ಭರವಸೆಯಲ್ಲಿ ಶಸ್ತ್ರ ಜೆಲ್ಲಿ ಕೊಟ್ಟದ್ದು,–ಹೀಗೆ ಏನೇನೋ ಕಥೆಕಟ್ಟಿ ಹೇಳಿ, ದುರ್ಯೋಧನನ ಮನಸ್ಸನ್ನೇ ಕೆಡಿಸಿ ಇಟ್ಟದ್ದ ಕರ್ಣ. ಕೃಪಾಶ್ವತ್ಥಾಮರು ಬರುವಷ್ಟರಲ್ಲಿಯೇ ಇಷ್ಟೆಲ್ಲ ನಡೆದದ್ದರಿಂದ, ಕೃಪಾಚಾರ್ಯರ ಮಾತು ನಡೆಯಲಿಲ್ಲ. ಕರ್ಣ ದುರ್ಯೋಧನರ ಮೈತ್ರಿಯ ಭದ್ರ ನೇದಿಕೆಯ ಮೇಲೆ ಅಶ್ವತ್ಥಾಮನ ರಣೋತ್ಸಾಹದ ಬಲೂನಾಯ್ತು.

ಕರ್ಣ ಜೀವಿಸಿರುವ ತನಕ ಶಸ್ತ್ರ ಕೈಯಲ್ಲಿ ಹಿಡಿಯಲಿಕ್ಕಿಲ್ಲೆಂದು ಬಿಸುಟಿ ಹೋಗುವ ಅಶ್ವತ್ಥಾಮ.

ಕೊನೆಯ ದೃಶ್ಯದಲ್ಲಿ ಅಶ್ವತ್ಥಾಮನ ವೀರವೃತ್ತಿಗೆ ಔದಾರ್ಯದ ಕುಂದಣ ಕೂಡಿಸುವ ಕವಿ. ರಣ ಕೋಲಾಹಲವನ್ನು ಕೇಳಿ, ದುಃಶಾ-

ಸನನ ಆಪತ್ತಿನಲ್ಲಿ ನೆರವಾಗುವ ಹುಮ್ಮಸ್ಸಿನಿಂದ, ಬಿಸುಟದ ಖಡ್ಗಕ್ಕೆ ಕೈ-ಹಾಕುವ-ಪ್ರತಿಜ್ಞಾಭಂಗ ದೋಷದಿಂದ, ಆಶರೀರವಾಣಿ ತಡೆಯುವುದು. ಅನ್ಯವಸ್ಥಿತಚಿತ್ತಾತ್ಮರ ಸಂಗದೋಷದಿಂದ ಭರದಿಂದ ಅರಳುವ ವೀರಹೃದಯ ಮುದುಡಿಕೊಳ್ಳುವಂತಾಯಿತು. ಕವಿಯ ಪ್ರತಿಭಾಶಕ್ತಿ ಅಶ್ವತ್ಥಾಮನಾಡುವ ಒಂದೊಂದು ಪದದಲ್ಲಿಯೂ ವ್ಯಕ್ತಪಡಿಸಿದೆ ವೀರರಸವನ್ನು.

೪ನೆಯ ಅಂಕವಲ್ಲಿಯ ಸುಂದರಕನ ಸುದೀರ್ಘ ರಣವಾರ್ತೆ ಬೇಸರ ತರಿಸುವುದಾಗಿದೆ—

೫ನೆಯ ಅಂಕದಲ್ಲಿ ಕವಿಯ ಪ್ರತಿಭಾಸೃಷ್ಟಿ, ಒಂದೊಂದು ದೃಶ್ಯದಲ್ಲಿಯೂ ತನ್ನದೇ ಛಾಪ ಸೈಶಿಷ್ಟ್ಯದಿಂದ ಬೆಳೆದುಬಂದಿದೆ.

ಪುತ್ರಶೋಕದಿಂದ ಸಂತಪ್ತರಾದ ಧೃತರಾಷ್ಟ್ರ ಗಾಂಧಾರಿಲ್ಲಿಯರು, ಮಗನ ಮನ ಒಲಿಸಲು ಹಲುಬುತ್ತಿರುವ ದೃಶ್ಯ, ಹೃದಯಸ್ಪರ್ಶಿಯಾಗಿದೆ.

ಅಳಿವ ಪಿತನಿಗಾಗಿ ಆತ್ಮಬಲಿದಾನಕ್ಕೂ ಸಿದ್ಧನಾದ ಪಿತೃಭಕ್ತ ಪುತ್ರನ ಚಿತ್ರವನ್ನು ೩ನೆಯ ಅಂಕವಲ್ಲಿ ಅಶ್ವತ್ಥಾಮನ ಪಾತ್ರದಲ್ಲಿ ತೋರಿಸಿ, ಅಳಿದುಳಿದೊಬ್ಬನೇ ಮಗನ ಆಧಾರಕ್ಕಾಗಿ ಹಂಬಲಿಸಿ ಧಾವಿಸುತ್ತ ಬಂದ ನೋವ ಹೃದಯದ ಅಂಧ ಮಾತಾಪಿತೃಗಳ ಒಂದು ಮಾತನ್ನೂ ನಡಿಸಿಕೊಡಲು ಸಿದ್ಧನಿರದ ಅವಿಧೇಯ ಮಗನ ನೈತಿಕ ಅಧಃಪತನದ ಚಿತ್ರವನ್ನು ದುರ್ಯೋಧನನ ಪಾತ್ರದಲ್ಲಿ ತೋರಿಸಿರುವ ಕವಿಯು– ಈ ಅಂಕದಲ್ಲಿ.

ನೂರು ಮಕ್ಕಳನ್ನು ಕಳೆದುಕೊಂಡ ಗಾಂಧಾರಿ ದುರ್ಯೋಧನನಿಗೆ ' ಪ್ರಸೀದ ನಿಪತೇ ಶೀರ್ಷಾಂಜಲೀ। ನಿವರ್ತ್ಯತಾಂ ಸಮರವ್ಯಾಪಾರಾತ್ । ಅಪಶ್ಚಿಮಂ ಕುರು ಮೋಪಚಿತಂ। ' ಎಂದು ಕೈಜೋಡಿಸಿ ಹೇಳಿಕೊಂಡರೂ, " ಮಾನಂ ನೈರಿಷು ಮುಂಜ ತಾತ ಪಿತರಾವಂಧಾವಿಮೋ ಶಾಲಯ । " ಎಂದು ಧೃತರಾಷ್ಟ್ರ ಅಂಗಲಾಚಿ ಬೇಡಿಕೊಂಡರೂ " ಸಮರಾತ್– ಪ್ರತಿನಿವೃತ್ತ್ಯಕಂ ಮಯಾಕರ್ತವ್ಯಂ ! " ಎಂದು ಒರಟು ಉತ್ತರ; ಮಧ್ಯದಲ್ಲಿ ಬುದ್ಧಿ ಹೇಳಬಂದ ಸಂಜಯನಿಗೆ " ಶೃಣುಮ ತಾವತ್ ಭವತ ಏವ ಪ್ರಜ್ಞಾವತಃ । " ಎಂಬ ಸಂಭಾವನೆ.

ಅಂಧ ಮಾತಾಪಿತೃಗಳಿಬ್ಬರೂ " ಅಳಿದುಳಿದೊಬ್ಬ ನೀನೇ ಹೀಗೆ ಹಟ ಹಿಡಿದರೆ ಯಾರು ಗತಿಯೋ ನಮಗಿನ್ನು " ಎಂದರೆ " ಸಗರ ರಾಜನಂತೆ ಮಕ್ಕಳೆಲ್ಲ ಸತ್ತಮೇಲೆ ನೀವೂ ರಾಜ್ಯನಾಳಿ." ಎಂಬ ಕೊಕ್ಕೆಮಾತಿನಿಂದ ಪುರಸ್ಕಾರ.

ಇದು ದುರ್ಯೋಧನನ ಅವಿಧೇಯತೆಯ ಸ್ಪಷ್ಟ ಚಿತ್ರ.

ಇದರೊಟ್ಟಿಗೇ ಕವಿಯು, ತಂದೆ - ಧೃತರಾಷ್ಟ್ರನ ದುರ್ಹೃದಯದ ಅನಿಷ್ಕರಣವನ್ನೂ ಮಾಡದೆ ಬಿಟ್ಟಿಲ್ಲ. ಪುತ್ರಮೋಹದಿಂದ ಕಾಸಟ್ಯದ ಕೆಲಮಂತ್ರವನ್ನೂದುಸು ಮಾನವ ರಾಕ್ಷಸನೆಂಬುದನ್ನೂ ತೋರಿಸಿರುವ. ' ಯುದ್ಧಕ್ಕೆ ಹೊರಡಲು ಆಜ್ಞೆಕೊಡಿ ' ಎಂದು ಕೇಳಿದ ದುರ್ಯೋಧನನಿಗೆ " ಪತ್ಸ ಯದ್ಯಪಿ ಭವಾನ್ ಸಮರಾಯ ಕೃತ ನಿಶ್ಚಯಃ ತಥಾಪಿಮಾಂ ಅನುಸ್ರ-
ಎಂದು ಅಂಧ, ಆಶೀರ್ವದಿಸುವ.

ಮುಂದಿನ ದೃಶ್ಯ ಭೀಮಾರ್ಜುನರ ಪ್ರವೇಶ– ಸಂಕೋಚ, ಭಯ, ಉದ್ವೇಗದಿಂದ ಸರ್ವರೂ ನಿರೀಕ್ಷಿಸುತ್ತಿರುವ ಸನ್ನಿವೇಶ.

ಮಗನ ಮೃತ್ಯುರೂಪೀ ಭೀಮ ಹತ್ತಿರಕ್ಕೇ ಬರುವುದನು ಕಂಡು ಗಾಂಧಾರಿ ' ಅಯ್ಯೋ, ಇನ್ನೇನು ಗತಿ!' ಎನ್ನುವಳು.ಆದರೆ ದುರ್ಯೋ-
' ಧನ ಸನ್ನಿಹಿತೈನೇಯಂಗದಾ.' 'ಸ್ಯಾತ್ತೋಽಸ್ಮತ್ ಶೋಕಾಪನೋದ ಪ್ರಣಯಾಜನಃ । ' ಎಂದು ಸಮುಯೋಚಿತಧೈರ್ಯ ತೋರಿಸುವ.

ಭೀಮಾರ್ಜುನರ ಪರಸ್ಪರ ಸಂವಾದದಲ್ಲಿ ಹೃದಯದ ಮಾರ್ದವ-ಕಾಠಿಣ್ಯಗಳ ಸಂಗಮವಿದೆ. " ಅನುಲ್ಲಂಘನೀಯಃ ಸದಾಚಾರಃ ।" ಎಂಬ ಭೀಮನವಾಣಿಯಲ್ಲಿ ದುರ್ಭಾವನೆಯ ಲೇಶವಿಲ್ಲ. ಭೀಮಾರ್ಜುನರ ಅಭಿವಾದನೆಯಲ್ಲಿ ಕವಿಯು ಮಾಡಿದ ವ್ಯತಿಕ್ರಮ ಸನ್ನಿವೇಶೋಚಿತ ರಸಸೋಪಣೆಗಾಗಿ — ಪಾತ್ರಗಳ ಮನಸ್ಸಿನ ಭಯ ಹೆಚ್ಚಿಸಲಿಕ್ಕಾಗಿ. ಉದ್ವೇಗಗೊಂಡ ಧೃತರಾಷ್ಟ್ರ- " ಯಾವತ್ ಕ್ಷೇತ್ರಂ ತಾವತ್ ಸಮರ ವಿಜಯಿನೋ ಜಿತಾಹತಾಶ್ಚ ವೀರಾಃ । ತತ್ಕಿಮೇವಂ ವಿಕತ್ಥನಾಭಿಃ ಅಸ್ಮಾನ್ ಉದ್ವೇಜಯಸಿ " ಎಂದರೆ, ಅದಕ್ಕೆ ಭೀಮನ ಸಮರ್ಪಕ ಉತ್ತರ:—

ಕೃಷ್ಣಾಕೇಶೇಷು ಕೃಷ್ಣಾ ತಪಸದಸಿ ಪುರಃ ಪಾಂಡವಾನಾಂ
ನೃಪೈಃ ಯೈಃ ।
ಸರ್ವೇತೇ ಕ್ರೋಧನಸ್ಯಾ ಕೃತಶಲಭಕುಲಾವಜ್ಞಯಾ
ಯೇನ ದಗ್ಧಾಃ ॥
ಏತಸ್ಮಾಚ್ಚಾಪಯೇಽಹಂ ನಖಲುಭುಜ ಬಲ ಶ್ಲಾಘಯಾಸಾಪಿ
ನಸಾರ್ಯಾ ।
ತ್ಪತ್ಕೈಃಪೌತ್ರೈಶ್ಚ ಕರ್ಮಾಣ್ಯತಿ ಗುರುಣಿ ಕೃತೇ ತಾತ
ಸಾಕ್ಷೀತ್ಸಮೇವ ॥

ಅಹಂಕಾರದಿಂದಾಗಲೀ ಬಾಹುಬಲದರ್ಪದಿಂದಾಗಲೀ ಹೇಳಿಕೊಂಡಿಲ್ಲ ತಾತಾ ನಿಮ್ಮ ಸಭೆಯಲ್ಲಿ ದ್ರೌಪದಿಯ ಮುಡಿಹಿಡಿದು ಎಳೆದು ತರಲಿಲ್ಲವೇ, ಆ ಮಹತ್ಕಾರ್ಯ ಮಾಡಿದವರು, ನಿಮ್ಮ ಮಕ್ಕಳೂ ಮೂವ್ಮೆಕ್ಕಳು, ಅವೆಲ್ಲಕ್ಕೂ ನೀವೇ ಸಾಕ್ಷಿಯಾಗಿದ್ದೀರಿ. ಆ ಕಾರಣದಿಂದಲೇ ಅವರೆಲ್ಲರೂ ಕೋಪಾಗ್ನಿಯಲ್ಲಿ ಪತಂಗಗಳಂತೆ ಸುಟ್ಟುಹೋದರೆಂದು ಶ್ರುತಪಡಿಸಿದೆ– ಇಷ್ಟೇ " ಎಂದನು.

ಹತ್ತಿರದಲ್ಲಿಯೇ ಇದ್ದ ದುರ್ಯೋಧನನ ಮೇಲೆ ಪ್ರತಿಕ್ರಿಯೆ ಆಗದಿರಲಿಲ್ಲ–ಗ್ರಾಮ್ಯಪದ ಪ್ರಯೋಗದಿಂದ ಕೂಡುವ ಉತ್ತರವು ಕೃತಕರ್ಮಕ್ಕಾಗಿ ಎಳ್ಳಷ್ಟೂ ಪಶ್ಚಾತ್ತಾಪಪಡದೆ– ದುಷ್ಕರ್ಮದಲ್ಲಿಯೇ ಹೆಮ್ಮೆ ಪಡುವ ನಿರ್ಲಜ್ಜ ಆಸುರೀಸ್ವಭಾವಕ್ಕೆ ತಕ್ಕುದಾಗಿದೆ– ಒಂದೊಂದು ಪದದಲ್ಲಿಯೂ ಔದ್ಧತ್ಯದ ಹಾಲಾಹಲ ಹೆಸಿಹೆಸಿಯಾಗಿ ತುಂಬಿದೆ:

ಕೃಷ್ಣಾ ಕೇಶೇಷು ಭಾರ್ಯಾ ತವ ತವಚಪಶೋಸ್ತಸ್ಯ-
ರಾಜ್ಞಸ್ತಯೋರ್ವಾ ॥
ಪ್ರತ್ಯಕ್ಷಂ ಭೂಪತೀನಾಂ ಮಮಭುವನಪತೇ ರಾಜ್ಞಯಾ
ದ್ಯೂತದಾಸೀ ।

ಅಸ್ಮಿನ್ ವೈರಾನುಬಂಧೇ ವದಕಿಮಕೃತಂ ತೈರ್ಹತಾಯೇ-
ನರೇಂದ್ರಾಃ

ಬಾಹೋರ್ವೀರ್ಯಾತಿರೇಕ ವ್ರವಿಣಗುರುಮದಂ
ಮಾಮಜೈತ್ವೈವದರ್ಪಃ ॥

ಚಾರಿತ್ರ್ಯಹೀನ ನಿರ್ಲಜ್ಜನಿಗೆ ಭೀಮನ ಮರ್ಮಜ್ಞೇವಕ ಉತ್ತರ:—

ಶೋಕೈಃ ಸ್ತ್ರೀವನ್ನಯನ ಸಲಿಲಂ ಯತ್ ಪರಿತ್ಯಾಜಿತೋಸಿ ।
ಭ್ರಾತುರ್ವಕ್ಷಸ್ಥಲ ವಿಘಟನೇಯಚ್ಚ ಸಾಕ್ಷೀಕೃತೋಸಿ ॥
ಆಸೀದೇತತ್ತವ ಕುನೃಪತೇಃ ಕಾರಣಂ ಜೀವಿತಸ್ಯ ।
ತ್ರುದ್ಧೇಯುಷ್ಮತ್ ಕುಲಕಮಲಿನೀ ಕುಂಜರೇ ಭೀಮಸೇನೇ ॥

ಎಂದು.

ಹೆಂಗಳೆಯರಂತೆ ನೀನು ಕಣ್ಣೀರು ಸುರಿಸಬೇಕು- ನಿನ್ನ ತಮ್ಮ ದುಃಶಾಸನನ ಎದೆಯನ್ನು ನಾನು ಸೀಳುವಾಗ ನೀನು ಕಣ್ಣಾರೆ ನೋಡಬೇಕು- ಇವೆರಡು ಕಾರಣಕ್ಕಾಗಿಯೇ ಇಲ್ಲಿಯ ವರೆಗೆ ನಿನ್ನನ್ನು ಜೀವಿಸಿರಲು ಬಿಟ್ಟದ್ದು. ಆದರೆ ನಾಳೆ ನನ್ನ ಪ್ರತಿಜ್ಞೆಯಂತೆ ನನ್ನೀ ಗದೆಯಿಂದ ನಿನ್ನ ತೊಡೆಯೊಡೆದು ನೆಲಕ್ಕೆ ಕೆಡಹಿ ಕಾಲಿನಿಂದ ತಲೆಗೊದ್ದು ಆನಖಾಗ್ರ ನಿನ್ನ ರಕ್ತದಿಂದ ಸಿಂಗರಿಸಿಕೊಳ್ಳುವೆ, ಗೊತ್ತಿರಲಿ- ಎಂದು ಹೇಳಿ ಅರ್ಜುನನೊಡನೆ ತೆರಳುವ, ಭೀಮ..

ಇಲ್ಲಿ ನಾಯಕ ಪ್ರತಿನಾಯಕರು ಒಟ್ಟಿಗೆ ಸಂಧಿಸುವ ಸನ್ನಿವೇಶವನ್ನು ಕಲ್ಪಿಸಿ ಕವಿಯು ಅವರವರ ಸ್ವಭಾವ ವೈಚಿತ್ರ್ಯವನ್ನು ಬಹು ಹೃದ್ಯವಾಗಿ ಚಿತ್ರಿಸಿರುವ.

ಕೊನೆಯ ದೃಶ್ಯದಲ್ಲಿ ದುರ್ಯೋಧನನ ಚಲಸಾಧನೆಯ ಪುನರಾವೃತ್ತಿಯಲ್ಲಿ ಧೃತರಾಷ್ಟ್ರನ ಯುದ್ಧಾಸಕ್ತಿಯನ್ನೂ ಎತ್ತಿ ತೋರಿಸಿರುವ ಕವಿ. ಕರ್ಣನ ನಿಧನಾನಂತರ ಅಶ್ವತ್ಥಾಮ ಪುನಃ ಯುದ್ಧಭಾರವನ್ನು ವಹಿಸಿಕೊಳ್ಳಲು ಸಿದ್ಧನಾಗಿ ಬಂದರೂ, ಕರ್ಣನಿಂದಕನೆಂದು ಮತ್ತೂ ಒಮ್ಮೆ ನಿರಾಕರಿಸುವ ದುರ್ಯೋಧನ. ಮುನಿಸಿನಿಂದ ಹೋದ ಅಶ್ವತ್ಥಾಮನ ಮನವೊಲಿಸಿ ಯುದ್ಧಪ್ರವರ್ತನನ್ನಾಗಿ ಮಾಡೆಂದು ಸಂಜಯನನ್ನು ಕಳಿಸುವ ಧೃತರಾಷ್ಟ್ರ. ಇವರಿಂದ ಧೃತರಾಷ್ಟ್ರನ ದುರ್ಬುದ್ಧಿಯ ಮೇಲೆ ಬೆಳಕು ಕೆಡವಿರುವ.

೬ನೆಯ ಅಂಕದಲ್ಲಿ ಕವಿಯು ಮಾಡಿದ ಮಹತ್ತ್ವದ ಬದಲಾವಣೆ ನಾಯಕ ಪಾತ್ರದಲ್ಲಿ. ಭೀಮನ ಬದಲು ಯುಧಿಷ್ಠಿರನೇ ಇಲ್ಲಿ ನಾಯಕ. ಇದರಿಂದಲೇ ನಾಟಕ ಸುಖಾಂತವಾಗಿದೆ. ಪಾಂಡವರಲ್ಲಿ ಯುಧಿಷ್ಠಿರನೇ ಜ್ಯೇಷ್ಠನಾದ್ದರಿಂದ ಈ ಬದಲಾವಣೆ ಯುಕ್ತವೇ. ಮೂಲಕಥೆಯಲ್ಲಿ ಹಸ್ತಿನಾವತಿಯಲ್ಲಿ ಪಟ್ಟಾಭಿಷೇಕದ ಕಾಲಕ್ಕೆ ಬರುವ ಚಾರ್ವಾಕನ ಪಾತ್ರವನ್ನು ದುರ್ಯೋಧನ-ಭೀಮರ ಯುದ್ಧದ ಕಾಲಕ್ಕೇ ಎಳೆದು ತಂದನ್ನರಿಂದ, ಕಥಾಭಾಗಕ್ಕೇ ಹೊಸರೂಪ ತಂದಂತಾಗಿದೆ.

ಸ್ಯಮಂತಪಂಚಕ ಕೊಳದಲ್ಲಡಗಿದ ದುರ್ಯೋಧನ ಎದ್ದುಬಂದು ಭೀಮನೊಡನೆ ಯುದ್ಧ ನಡೆದಿದೆ. 'ಇನ್ನೇನು ದುರ್ಯೋಧನನ ವಧೆ ಆದಂತೆಯೇ ನುಂಗಳಕಾರ್ಯದ ಸಿದ್ಧತೆ ನಡೆಯಲಿ' ಎಂದು ಶ್ರೀಕೃಷ್ಣನಿಂದ ಬಂದ ಸಂದೇಶದಂತೆ ಕಾರ್ಯ ನಡೆಯುವಷ್ಟರಲ್ಲಿ ಚಾರ್ವಾಕನ ಪ್ರವೇಶದಿಂದ ಯುಧಿಷ್ಠಿರನ ಬಂಧುವಾತ್ಸಲ್ಯ ಧರ್ಮನಿಷ್ಠೆಗಳು ಪುಟಕ್ಕಿಟ್ಟ ಅಪರಂಜಿಯಂತಾಗಿವೆ. ಪಾತ್ರಾಪಾತ್ರ ವಿಚಾರವಿಲ್ಲದೆ ಅಯೋಗ್ಯರಲ್ಲಿ ಮಾಡಿದ ದಾನ- ಸತ್ಕಾರಗಳೂ ತೋರಿಸಿದ ದಯೆಯೂ ಅನರ್ಥಕ್ಕೆ ಕಾರಣವಾಗುವುದೆಂಬ ನಿದರ್ಶನವೂ ಇದೆ. ಋಣವಿಮೋಚನೆಯ ಜಲದಾನ ವೃತ್ಯದಲ್ಲಿ ಪಾಂಡವರಲ್ಲಿಯ ಅನ್ಯೋನ್ಯ ಬಂಧು ಪ್ರೇಮ, ಐಕ್ಯ, ದ್ರೌಪದಿಯ ಸತೀತ್ವಗಳು ಉಲ್ಲೇಖವಾಗಿವೆ.

ಪ್ರತಿಜ್ಞಾಪೂರ್ತಿಯ ನಂತರ ದುರ್ಯೋಧನನ ರಕ್ತದಿಂದ ಅನಖಶಿಖಾಂತಲಿಪ್ತನಾದ ಭೀಮನ ಪ್ರವೇಶ ಅದ್ಭುತಭೈರವವಾಗಿದೆ.

ಭೀಮ-ಯುಧಿಷ್ಠಿರರ ಗಾಢ ಆಲಿಂಗನವು ದೃಶ್ಯ ಹೃದಯಸ್ಪರ್ಶಿಯಾಗಿದೆ.

ದ್ರೌಪದಿಯ ಬಿಚ್ಚಿದ ಮುಡಿಯನ್ನು ಕಟ್ಟುತ್ತ ಕೃತಕೃತ್ಯನಾದ ಭೀಮ "ಬುದ್ಧಿಮತಿಕೇಕ್ಷ್ವಸಾಸಾಂಕೇ ಪ್ರತಿ ಭಾನುಮತಿಯೋಽಪಹಸತಿ ಪಾಂಡವದಾರಾನ್" ಎನ್ನುತ್ತಿರುವಾಗಲೇ ಆಕಾಶಮಾರ್ಗದಲ್ಲಿದ್ದ ಸಿದ್ಧಚಾರಣರು, ವೇಣೀಸಂಹಾರವನ್ನು ಅಭಿನಂದಿಸಿ ಸ್ವಸ್ತಿವಾಚನ ಮಾಡುವರು.

ಯುಧಿಷ್ಠಿರನ ಪಟ್ಟಾಭಿಷೇಕವಾಗಿ ಭರತವಾಕ್ಯದಿಂದ ನಾಟಕ ಸಮಾಪ್ತಿಯಾಗುವುದು. ಈ ನಾಟಕವು ರಂಗದ ಮೇಲೆ ಅಭಿನಯಿಸಲ್ಪಡಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಕವಿಯು ಅಭಿನಯಕ್ಕೆ ಯೋಗ್ಯ ಮಾರ್ಗದರ್ಶಕ ನಿರ್ದೇಶಗಳನ್ನು ಕೊಟ್ಟಿರುವ. ಪಾತ್ರಗಳ ಸಂಭಾಷಣೆ ಸಜೀವನವಾಗಿದೆ.

೩ನೆಯ ಅಂಕದಲ್ಲಿ ಅಶ್ವತ್ಥಾಮನ ಪಾತ್ರಪರಿಪೋಷಣೆಯಲ್ಲಿಯ ವೀರರಸದ ಪರಾಕಾಷ್ಠತೆ, ಕವಿಯ ರಸದೃಷ್ಟಿಯ ಯಶಸ್ಸಿಗೆ ಹೆಗ್ಗುರುತಾಗಿದೆ. ಸಂದರ್ಭಾನುಸಾರ ಶ್ಲೋಕನಾದ (ಸುಭಾಷಿತ) ವಾಕ್ಯಗಳು ಉಪಯೋಗಿಸಲ್ಪಟ್ಟಿವೆ.

ಕವಿಯು, ನಾಯಕನ ಧೀರೋದಾತ್ತ ಗುಣಗಳ ಅವಿಷ್ಕಾರಕ್ಕಿಂತಲೂ ಪ್ರತಿನಾಯಕ ದುರ್ಯೋಧನನ ದೋಷಾವಿಷ್ಕಾರಕ್ಕೆ ಹೆಚ್ಚು ಗಮನಕೊಟ್ಟಿರುವ.

ಕಿಡಿಗೇಡಿ ಮಕ್ಕಳನ್ನು ಹೇಗೆ ಹಾದಿಗೆ ತರಬೇಕು ?

(ಒಂದು ವಿಚಾರನಿವೇದನೆ)

ಶ್ರೀಮತಿ ಸೌ. ರಾಧಾಬಾಯಿ ಕಮಲಾಪುರ, ಧಾರವಾಡ

ದಿನದಿನಕ್ಕೂ ಮಕ್ಕಳಲ್ಲಿ ಕಿಡಿಗೇಡಿತನ, ಅವಿಧೇಯತೆ ಹೆಚ್ಚುತ್ತಲಿವೆ. ಇದು ಕುಟುಂಬಕ್ಕೂ ಒಳ್ಳೆಯದಲ್ಲ; ಸಮಾಜದ ಅಭ್ಯುದಯಕ್ಕೂ ಒಳ್ಳೆಯದಲ್ಲ. ಇದೊಂದು ಇಂದಿನ ಮಹಾಸಮಸ್ಯೆ. ಈ ಸಮಸ್ಯೆಯನ್ನು ಬಿಡಿಸಲು, ಹಿರಿಯರಾದವರೆಲ್ಲರೂ ಪ್ರಯತ್ನಿಸಬೇಕು.

ತಾಯಿ . ಮಗು

ಕಿಡಿಗೇಡಿ ಮತ್ತು ಅವಿಧೇಯ ಮಕ್ಕಳು, ಪ್ರತಿಯೊಂದು ಕುಟುಂಬದಲ್ಲಿಯೂ ತಾಯಿ-ತಂದೆಗಳಿಗೆ ಬಿಡಿಸಲಾಗದ ಸಮಸ್ಯೆಯಾಗಿರುವರು. ಮಕ್ಕಳು ಕಿಡಿಗೇಡಿಗಳೂ ಅವಿಧೇಯರೂ ಆಗಲಿಕ್ಕೆ ಹೆಚ್ಚಾಗಿ ಇಂದಿನ ನಮ್ಮ ವಿಭಕ್ತಕುಟುಂಬ ಪದ್ಧತಿಯೂ, ಮಧ್ಯಮ ತರಗತಿಯ ಕುಟುಂಬವ ಇಂದಿನ ಆರ್ಥಿಕ ಅನನುಕೂಲತೆಯೂ ಮುಖ್ಯಕಾರಣಗಳಾಗಿವೆ.

ಹೆಚ್ಚಾಗಿ ಇಂದಿನ ಪಟ್ಟಣವಾಸಿ ಜನರ ಕುಟುಂಬಗಳಲ್ಲಿ ತಂದೆ, ತಾಯಿ, ಮಕ್ಕಳು—ಇಷ್ಟೇ ಜನರಿರುವರು. ತಂದೆ ಕುಟುಂಬ ಪೋಷಣೆಗಾಗಿ ದುಡಿಯುವ ಕೆಲಸಕ್ಕಾಗಿಯೊ, ಗೆಳೆಯರೊಂದಿಗಿನ ಆಟ ಪಾಟಗಳಿಗಾಗಿಯೊ, ದಿನದ ಹೆಚ್ಚಿನ ವೇಳೆಯನ್ನು ಹೊರಗೇ ಕಳೆಯುವನು' ಮುಂಬಯಿಯಂತಹ ಮಹಾನಗರಗಳಲ್ಲಂತೂ ಮಕ್ಕಳು ತಂದೆಯನ್ನು ನೋಡುವುದು ರವಿವಾರದ ಬಿಡುವಿನ ದಿನ ಮಾತ್ರ. ಇನ್ನು ತಾಯಿ ! ಅವಳಿಗೆ ತೀರಲಾರದಷ್ಟು ಮನೆಗೆಲಸಗಳಿರುವುವು. ಅಲ್ಲದೆ ಬೆಳೆವ ಮಕ್ಕಳ ಕಡೆಗೆ ಲಕ್ಷ್ಯ ಕೊಡಬೇಕೆಂದರೂ ಕೊಡಲಿಕ್ಕೆ ಆಗದಂತೆ ಎಳೆಯ ಮಕ್ಕಳ ತಾಯಂದಿರಾಗಿರುವರು. ಆದುದರಿಂದ ಇಂತಹ ಕುಟುಂಬಗಳಲ್ಲಿ ಬೆಳೆಯುವ ಮಕ್ಕಳ ಕಡೆಗೆ ತಂದೆ-ತಾಯಿಗಳ ಮೇಲ್ನೋಟ, ಸಾಕಷ್ಟು ದೊರೆಯದೆ ಹೋಗುವುದು. ಆದುದರಿಂದಲೇ ಅವು ಯಾವುದೇ ಬಗೆಯ ನಿಯಮ-ನಿಯಂತ್ರಣಗಳಿಲ್ಲದೆ ಸ್ವೈರವಾಗಿ ಬೆಳೆಯತೊಡಗುವುವು. ಇಂತಹ ಹುಡುಗರು ಮನೆಯಲ್ಲಿ ಉಪದ್ರವಕಾರಿಗಳಾಗುವರು; ಇಷ್ಟೇ ಅಲ್ಲ, ನೆರೆಹೊರೆಯವರಿಗೂ ಉಪದ್ರವಕಾರಿಗಳಾಗಿ ಪರಿಣಮಿಸುವರು. ಹೀಗಾದರೆಂಬುದು ತಿಳಿದ ಮೇಲೆ, ಅಂತಹ ಮಕ್ಕಳು ತಾಯಿ-ತಂದೆಗಳಿಗೆ ಒಂದು ಸಮಸ್ಯೆಯಾಗಿ ಕಾಣುವರು. ಇದಕ್ಕೆ ಪ್ರತ್ಯಾಪಾಯವೆಂದು ತಾಯಿ-ತಂದೆಗಳು ಮಕ್ಕಳನ್ನು ಸಿಟ್ಟಿನಿಂದ ಬೈಯುವರು; ಬಡಿಯುವದು. ಅವರೊಂದಿಗೆ ಅಸಹಕಾರವೃತ್ತಿಯನ್ನು ಅವಲಂಬಿಸುವರು. ಇವಾವ ಉಪಾಯಗಳೂ ಕಾರ್ಯಕಾರಿಯಾಗದೆ, ಮಕ್ಕಳ ಕಿಡಿಗೇಡಿತನ, ಅವಿಧೇಯತೆಗಳು ಇನ್ನಿಷ್ಟು ಬೆಳೆಯತೊಡಗುವವು. ಆಗ ತಂದೆ-ತಾಯಿಗಳು ಕಂಗೆಟ್ಟು ಕೈಚೆಲ್ಲಿ ಬಿಡುವರು. ಇಂತಹ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ಅಲ್ಲಿಯೂ ಇವರ ಕಿಡಿಗೇಡಿತನದ ಕಾಟಗಳು ತಪ್ಪುವುದಿಲ್ಲ, ಶಾಲೆಯಲ್ಲಿ ಕರ್ತವ್ಯದಕ್ಷರಾದ ಗುರುಗಳು ಇದ್ದರೆ ಇಂತಹ ಕಿಡಿಗೇಡಿ ಮಕ್ಕಳ ಸುದೈವ. ಅವರಿಂದಲೇ ಇವರು ಸನ್ಮಾರ್ಗವನ್ನು ಹಿಡಿಯಬೇಕು. ಇನ್ನು ಉದಾಸೀನ ವೃತ್ತಿಯ ಗುರುಗಳಿದ್ದರೋ, ಈ ಮಕ್ಕಳನ್ನು ದೇವರೇ ದಾರಿಗೆ ಹಚ್ಚಬೇಕು.

ಹಿಂದಿನ ಕಾಲದ ಅವಿಭಕ್ತ ಕುಟುಂಬಗಳಲ್ಲಿ, ಮಕ್ಕಳು ಅವಿಧೇಯರೂ ಉಪದ್ರವಕಾರಿಗಳೂ ಆಗಿ ಪರಿಣಮಿಸುವುದಕ್ಕೆ ಅವಕಾಶವೆ ಇರುತ್ತಿರಲಿಲ್ಲ. ಪ್ರತಿಯೊಂದು ಕುಟುಂಬವಲ್ಲಿ ವಯಸ್ಸಾದ ಅಜ್ಜ ಅಜ್ಜಿಯರು ಇರುತ್ತಿದ್ದರು. ಸಾಮಾನ್ಯವಾಗಿ ಮಕ್ಕಳನ್ನು ಪಳಗಿಸುವ ಹೊಣೆ, ಈ ಮುದುಕ-ಮುದುಕಿಯರ ಮೇಲೆಯೇ ಇರುತ್ತಿದ್ದಿತು. ಅವರು ಮನೆಯ ಮಕ್ಕಳನ್ನೆಲ್ಲ ಮುಂದೆ ಕೂಡಿಸಿಕೊಂಡು ಆಟವಾಡಿಸುವರು. ಹಾಡು-ಕವಿತೆ-ಶ್ಲೋಕಗಳನ್ನು ಕಲಿಸುವರು. ಮಕ್ಕಳ ಮನಸ್ಸಿಗೆ ಹಿಡಿಯುವಂತಹ ಮನೋರಂಜಕ ನೀತಿಕಥೆಗಳನ್ನು ಹೇಳುವರು. ಯಾವನಾದರೂ ಹುಡುಗ ಸ್ವಲ್ಪ ದುಡುಕನೆಂದು ಗೊತ್ತಾಯಿತೊ, ಪರ್ಯಾಯಸಂದರ್ಭಗಳಿಂದ ಅಂತಹ ದುಡುಕತನ ಒಳ್ಳೆಯದಲ್ಲವೆಂಬುದನ್ನು ತಿಳುಹುವರು. ಅವರಲ್ಲಿಯೇ ವಿವೇಕಿಯಾಗಿರುವ ಹುಡುಗನ ಸದ್ಗುಣಗಳನ್ನು ಬಣ್ಣಿಸಿ ಹೊಗಳುವರು. ಇಂತಹ ಸದ್ಗುಣಗಳುಳ್ಳವರು ಮುಂದೆ ಸುಖದಿಂದ ಬಾಳುವರೆಂಬ ಸನಿಗನಸುಗಳನ್ನು ಅವರ ಮನದ ಮುಂದಿಡುವರು.

ಮಕ್ಕಳ ಮನೋಧರ್ಮಕ್ಕನುಗುಣವಾದ ಶಿಕ್ಷಣ, ಅವಿಭಕ್ತ ಕುಟುಂಬಗಳಲ್ಲಿಯ ಅಜ್ಜ-ಅಜ್ಜಿಯರಿಂದ, ಸಹಜವಾಗಿಯೆ ಅವರ ದೊರೆಯುತ್ತಿತ್ತು. ಇದರಿಂದಾಗಿ ಹುಡುಗಿಯಾಗಲಿ, ಹುಡುಗನಾಗಲಿ

ಅವಿವೇಕಿಯಾಗುವುದು ಅಪೂರ್ವವಾಗಿ ಇರುತ್ತಿದ್ದಿತು. ಎಂತಲೇ ಹಿಂದಿನ ಕಾಲದಲ್ಲಿ, ಮದುವೆಗೆ ಕನ್ಯೆಬೇಕಾದರೆ, ಮನೆತನದಲ್ಲಿ ಬೆಳೆದ ಕನ್ಯೆ ಇರಬೇಕೆಂದು ಅಪೇಕ್ಷಿಸುತ್ತಿದ್ದರು. ಕನ್ನೆಯನ್ನು ಕೊಡಬೇಕೆನ್ನುವವರೂ ಅಂತಹ ಮನೆತನವನ್ನು ನೋಡಿಕೊಡುತ್ತಿದ್ದರು. ಇಂದು ಕಾಲ ಬದಲಾಗಿದೆ. ಯಾವ ಕುಟುಂಬದಲ್ಲಿಯೂ ಅಜ್ಜ-ಅಜ್ಜಿಯರು ಸಿಕ್ಕುವುದಿಲ್ಲ. ಅಪೂರ್ವವಾಗಿ ಎಲ್ಲಿಯಾದರೂ ನೋಡಲು ಸಿಕ್ಕರೂ, ಅವರಿಗೆ ಕುಟುಂಬದಲ್ಲಿ ಹಿಂದಿನಂತಹ ಗೌರವಾದರದ ಸ್ಥಾನ-ಮಾನಗಳು ಇರುವುದಿಲ್ಲ. ಇಂತಹ ಕುಂಟುಂಬಗಳಲ್ಲಿಯ ಅತ್ತೆ-ಸೊಸೆಯರ ಜಗಳಾಟ-ಕಾದಾಟಗಳು, ಅಲ್ಲಿಯ ಮಕ್ಕಳ ಅವಿಧೇಯತನಕ್ಕೆ ಇನ್ನಿಷ್ಟು ಕಾರಣಗಳಾಗುವುವು.

ಇದೆಲ್ಲವೂ ಆಯಿತಲ್ಲ; ಅವಿಧೇಯರೂ ಉಪದ್ರವಕಾರಿಗಳೂ ಆಗಿ ಬೆಳೆದ ಮಕ್ಕಳನ್ನು ದಾರಿಗೆ ತರುವುದಕ್ಕಾಗಿ ತಂದೆ-ತಾಯಿಗಳು ಏನಾದರೂ ಉಪಾಯಗಳನ್ನು ಯೋಜಿಸಲೇಬೇಕು. ಬೈಗಳು, ಬಡಿತ, ದ್ವೇಷ, ಅಸಹಕಾರ– ಇವೇ ಉಪಾಯಗಳೆಂದು ಯೋಜಿಸತೊಡಗಿದರೆ, ಅಂತಹ ತಾಯಿ-ತಂದೆಗಳಿಗೆ ನಿರಾಶೆಯ ಫಲವೇ ದೊರಕುವುದು.

ಇಂದು ಚಿಕ್ಕಮಕ್ಕಳ ಮನಸ್ಸನ್ನು ಸಕಾಲದಲ್ಲಿಯೆ ಸರಿದಾರಿಯಿಂದ ರೂಪಿಸುವಂತಹ ಶಿಶುಪಾಠಶಾಲೆಗಳು ನಮ್ಮಲ್ಲಿ ಇಲ್ಲವೆಂದರೂ ಸಲ್ಲುವುದು. ಪಟ್ಟಣಗಳಲ್ಲಿ ಒಂದೋ, ಎರಡೋ ಇದ್ದರೂ, ಸರ್ವೇಸಾಮಾನ್ಯ ಕುಟುಂಬೀಯರಿಗೆ ಅವುಗಳಿಂದ ಪ್ರಯೋಜನ ದೊರೆಯುವಂತಿಲ್ಲ. ಆದುದರಿಂದ ತಾಯಿ-ತಂದೆಗಳೇ ಹೊಣೆಹೊತ್ತು, ತಮ್ಮ ಮಕ್ಕಳು ವಿಧೇಯರೂ ವಿವೇಕಿಗಳೂ ಆಗುವಂತೆ ಮಾಡಬೇಕು. ಮಕ್ಕಳ ವಿಷಯಕವಾಗಿ ಇದುವರೆಗೂ ತಾಳಿದ್ದ ಅಲಕ್ಷ್ಯ-ಔದಾಸೀನ್ಯ ಭಾವನೆಯನ್ನು ಹೊಡೆದೋಡಿಸಬೇಕು. ತಾಯಿ-ತಂದೆಗಳಲ್ಲದೆ ಮಕ್ಕಳ ಮನಸ್ಸು-ಹೃದಯಗಳನ್ನು ಇನ್ನಾರೂ ತಿದ್ದಲಾರರು. ಆದರಲ್ಲಿಯೂ ಬಹುಕಾಲ ಮಕ್ಕಳ ಬಳಿಯಲ್ಲಿಯೆ ಇರುವ ತಾಯಿಯ ಮೇಲೆ ಇವರ ಹೊಣೆಗಾರಿಕೆ ಹೆಚ್ಚಾಗಿ ಇದೆ.

ಹಾಗಾದರೆ ಅವಿಧೇಯ ಮಕ್ಕಳನ್ನು ವಿಧೇಯರನ್ನಾಗಿ ಮಾಡುವ ಬಗೆ ಹೇಗೆ ? ಅವರ ಉಪದ್ರವ ಸ್ವಭಾವವನ್ನು ಬಿಡಿಸುವುದು ಹೇಗೆ ? ಇದಕ್ಕಾಗಿ ನಾವು ಮೊದಲು ಮಕ್ಕಳ ಮನೋಧರ್ಮವನ್ನು ಅರಿತುಕೊಳ್ಳಬೇಕು.

ಮಕ್ಕಳು ಹೆಚ್ಚಾಗಿ ಅಪೇಕ್ಷಿಸುವುದು ಹಿರಿಯರ ಪ್ರೀತಿ-ಸಹಾನುಭೂತಿಗಳನ್ನು. ಅವು ತಮಗೆ ದೊರೆಯುತ್ತಿಲ್ಲವೆಂದು ತಿಳಿದಾಗ, ಅವುಗಳ ಮನಸ್ಸಿನಲ್ಲಿ ಒಂದು ಬಗೆಯ ಪ್ರತಿಕ್ರಿಯಾಭಾವ ನಿರ್ಮಾಣವಾಗುವುದು. ಈ ಪ್ರತಿಕ್ರಿಯಾಭಾವವೇ ಅವರನ್ನು ತುಂಟರನ್ನಾಗಿ ಮಾಡುವುದು; ಸ್ವೈರವೃತ್ತಿಯ ಕೆಡಿಗೇಡಿಗಳನ್ನಾಗಿ ಮಾಡುವುದು. ಆದುದರಿಂದ ತಾಯಿ-ತಂದೆಗಳಿಂದ ಯಾವಾಗಲೂ ಸ್ನೇಹ-ಸಹಾನುಭೂತಿಗಳು, ಅನೂನವೆನಿಸುವಂತೆ ಮಕ್ಕಳಿಗೆ ಸಿಕ್ಕುತ್ತಿರಬೇಕು. ತಂದೆ-ತಾಯಿಗಳು ಪರ್ಯಾಯವಾಗಿ ಮಕ್ಕಳ ಮನದೆದುರು ಒಳ್ಳೆಯ ಗುಣದ ಸುಪರಿಣಾಮದ ಚಿತ್ರಗಳನ್ನೂ ಕೆಟ್ಟಗುಣಗಳ ದುಷ್ಪರಿಣಾಮದ ಚಿತ್ರಗಳನ್ನೂ ಇರಿಸಬೇಕು. ಕೆಟ್ಟಗುಣಗಳು ತಾಯಿ-ತಂದೆಗಳ ಪ್ರೀತಿ-ಸಹಾನುಭೂತಿಗಳನ್ನು ಕಡಮೆಮಾಡುವುವೆಂಬುದನ್ನು, ನೆರೆಹೊರೆಯ ಹುಡುಗರ ಉದಾಹರಣೆಗಳಿಂದ, ಮಕ್ಕಳಿಗಾಗಿ ರಚಿತವಾದ ಸಾಹಿತ್ಯದಿಂದ ಅವರಿಗೆ ಮನವರಿಕೆಮಾಡಿಕೊಡಬೇಕು.

ಅಲ್ಲದೆ ಮಕ್ಕಳ ಅಭಿರುಚಿಯನ್ನು ತಿಳಿದುಕೊಂಡು, ಅವರಿಗೆ ಇಷ್ಟವೆನಿಸುವ ಕೆಲಸದಲ್ಲಿಯೊ, ಆಟಪಾಟಗಳಲ್ಲಿಯೊ, ಅವರ ಮನಸ್ಸು ರಂಜಿಸುವಂತೆ ಯೋಜನೆ ಮಾಡಬೇಕು. ಮನೆಯ ಕೈತೋಟಗಳಲ್ಲಿ ಅಲೆದಾಡಿಸಿ, ಅಲ್ಲಿಯ ಬೇರೆ ಬೇರೆ ಗಿಡಗಳ ಪರಿಚಯ–ಪ್ರಯೋಜನಗಳನ್ನು ಹೇಳಿಕೊಡಬೇಕು. ಸಾಧ್ಯವಿದ್ದ ಆಟದ ಉಪಕರಣಗಳನ್ನು ಒದಗಿಸಿಕೊಟ್ಟು, ಆಟದ ಕಡೆಗೆ ಅವರ ಒಲವು ಹೆಚ್ಚಾಗುವಂತೆ ನೋಡಿಕೊಳ್ಳಬೇಕು. ಸ್ವಚ್ಛತೆ, ಓರಣ, ಅಚ್ಚುಕಟ್ಟುತನ ಇವುಗಳಲ್ಲಿಯ ಸೊಗಸು ಎಂತಹದೆಂಬುದು ಮಕ್ಕಳಿಗೆ ಗೊತ್ತಾಗಬೇಕಾದರೆ, ತಾಯಿ-ತಂದೆಗಳು ಮೊದಲಿನಿಂದಲೂ ಅಂತಹ ವಾತಾವರಣದಲ್ಲಿ ಮಕ್ಕಳನ್ನು ಫಳಗಿಸಬೇಕು. ಮುಖ್ಯವಾಗಿ ಇವೆಲ್ಲವುಗಳ ಹಿಂದೆಯೂ ಮಕ್ಕಳಿಗೆ ತಾಯಿ-ತಂದೆಗಳ ಸ್ನೇಹ-ಸಹಾನುಭೂತಿಗಳು ಕಾಣುತ್ತಿರಬೇಕು.

ಮಕ್ಕಳ ಒಳ್ಳೆಯ ಕೆಲಸಗಳನ್ನು ಕಂಡು 'ಭಲೆ'ಎಂದು ತಾಯಿ-ತಂದೆಗಳು ಉತ್ಸಾಹದ ಮೆಟ್ಟಿಗೆ ತೋರಬೇಕು. ಏನಾದರೂ ತಪ್ಪು ಕೆಲಸ ನಡೆದರೆ, ಅವರನ್ನು ಶಿಕ್ಷಿಸದೆ, ಸವಿನುಡಿಗಳಿಂದಲೇ 'ಹೀಗಲ್ಲ ಹೀಗೆ' ಎಂದು ತಪ್ಪನ್ನೂ ತಪ್ಪಿನ ಪರಿಣಾಮಗಳನ್ನೂ ತಿಳುಹಬೇಕು. ಅವಿಧೇಯರೂ ಉಪದ್ರವಕಾರಿಗಳೂ ಆದ ಮಕ್ಕಳ ಸಮಸ್ಯೆಯನ್ನು ಬಿಡಿಸುವುದಕ್ಕೆ ಅವರ ಪಾಲಕರ ಸ್ನೇಹ-ಸಹಾನುಭೂತಿಗಳ ಮಾರ್ಗದರ್ಶನವೇ ಏಕೈಕ ಉಪಾಯ–ಎಂದು ನನ್ನ ಅಭಿಪ್ರಾಯ.

◀ ಪ್ರತಿಫಲ ▶

(ಐದು ದೃಶ್ಯಗಳ ಪೌರಾಣಿಕ ರೂಪಕ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

೩ನೆಯ ದೃಶ್ಯ

(ಆಶ್ರಮದ ದೃಶ್ಯ, ಶಾಲಿನಿ ಮರದಡಿ ಬಿಂಕಾಕ್ರಾಂತಳಾಗಿ ಕುಳಿತಿರುವಳು.)

ಶಾಲಿನಿ: ನನಗಂತೂ ಡಿಕ್ಕೇ ಶೋಚದಂತಾಗಿದೆ. ಹಟಮಾರಿತನ, ಮುಂಗೋಪಗಳು ಸ್ವಭಾವಸಹಜವಾಗಿರುವ ಆ ಶರ್ಮಿಷ್ಠೆ ನನ್ನ ಪ್ರಿಯಸಖಿ, ನನ್ನ ಪ್ರಿಯಬಂಧು! ಅವಳ ಅವನತಿ ನೋಡಿ ನನ್ನೆದೆ ಕುದಿಯುತ್ತಿದೆ. ಇತ್ತ ದೇವಯಾನಿಯನ್ನೂ ಅಕ್ಷೇಪಿಸುವಂತಿಲ್ಲ ಬೆಂಕಿಯನ್ನು ನಂದಿಸಬೇಕಾದ ಜಲ ತಾನೇ ಉರಿಯುಹತ್ತಿದರೆ ಗತಿಯೇನು? ಕ್ಷಣಮಾತ್ರವೇ ಪೈವೆತ್ತಂತಿದ್ದ ದೇವಯಾನಿ ಉಗ್ರಕಾಳಿಯಾಗಿರುವಾಗ ಏನು ಮಾಡಲು ಸಾಧ್ಯ? ಹಾಯ್ ನತದೃಷ್ಟೆ, ಶರ್ಮಿಷ್ಠೆ! ನಿನ್ನ ಈ ದುಷ್ಕಾರ್ಯ ತ್ರಿಕಾಲಜ್ಞರಾದ ಶುಕ್ರರಿಗೂ ತಿಳಿಯುವ ರಹಸ್ಯವೆಂದು ಬಗೆದೆಯಾ? ಅಯ್ಯೋ ಮಂದಭಾಗ್ಯೇ, ನಿನ್ನ ಬುದ್ಧಿಗೆ ಗ್ರಹಣ ಹಿಡಿದಿತ್ತೇ? (ಅತ್ತಣಿಂದ ನಳಿನಿ ಬರುವಳು) ಓಹೋ, ಇದೇನಿತ್ತ ಬಂದೆ ನಳಿನಾ? ಮುಖ ಕಳೆಗುಂದಿದೆ? ದುಕೂಲಾಭರಣಗಳನ್ನೆಲ್ಲ ಬಿಟ್ಟು ಸಾಮಾನ್ಯ ಸೀರೆ ಉಟ್ಟಿರುವೆಯಲ್ಲಾ? ವಸಂತೋತ್ಸವದ ಸಮಯದಲ್ಲಿ ಇದೇನೀ ದುಗುಡ? ಅರಮನೆಯಲ್ಲಿ ಏನಾಯಿತು? ಅದನ್ನಾದರೂ ಹೇಳು!

ನಳಿನಾ: (ತಗ್ಗಿಸಿದ ತಲೆ ಎತ್ತದೆ) ಶಾಲಿನಿ, ಹತಭಾಗ್ಯೆಯಾದ ನನ್ನನ್ನು ಕಂಡು ಗಿಡಮರಗಳು ಸಹ ಮೂದಲಿಸುತ್ತಿವೆ. ಅರಮನೆಯಲ್ಲಿ ನಿಂದೆಯ ನುಡಿಗಳನ್ನೂ ಚುಚ್ಚುಮಾತುಗಳನ್ನೂ ಕೇಳಲಾರದೆ ಇಲ್ಲಿಗೆ ಬಂದೆ. ನೀನು ಸಹ ಚುಚ್ಚುಮಾತುಗಳನ್ನಾಡುವೆಯಲ್ಲಾ!

ಶಾಲಿನಿ: ತಂಗಿ, ನಿಮ್ಮ ಪರಿತಾಪ ನನಗರ್ಥವಾಗಿದೆ ಒಂದೇ ದಿನದಲ್ಲಿ ನಿಮ್ಮ ಜಗತ್ತು ಬದಲಿಸಿದೆಯಲ್ಲವೇ? ನಿನ್ನಿನ ಆ ಅಹಂಕಾರ, ಆ ಠೀವಿ, ಆ ದುರ್ಮಾನವೆಲ್ಲಿ! ಈ ದುಃಖ, ಆರ್ತತೆ, ಪರಿತಾಪವೆಲ್ಲಿ? ಅರಮನೆಯಲ್ಲಿ ಏನೇನು ನಡೆಯಿತು, ಅದನ್ನಾದರೂ ಹೇಳು.

ನಳಿನಿ: ಸಿಟ್ಟಿನಭರದಲ್ಲಿ ನಿನ್ನೆ ಅಂತಹ ಕಾರ್ಯ ಮಾಡಿದೆವು ಶಾಲಿನಿ! ರಾತ್ರಿಯೆಲ್ಲಾ ನಾನು, ಶರ್ಮಿಷ್ಠೆ ಇಬ್ಬರೂ ಕಳವಳದಿಂದ ತಪಿಸಿದೆವು. ಒಂದು ಕ್ಷಣ ಕಣ್ಮುಚ್ಚಿ ನಿದ್ರಿಸಲಿಲ್ಲ. 'ಸ್ತ್ರೀಹತ್ಯೆ ತನ್ನ ತಲೆಗೆ ಕಟ್ಟಿತು' ಎಂದು ಶರ್ಮಿಷ್ಠೆ ಹಲುಬಿದಳು. 'ಆಚಾರ್ಯರು ಏನು ಮಾಡುವರೋ' ಎಂದು ನಡುಗಿದಳು. ಬೆಳಗಾಯಿತು. ವಸಂತೋತ್ಸವಕ್ಕಾಗಿ ಮಂಗಳವಾದ್ಯಗಳು ಘೋರ್ಗರೆಯುತ್ತಿದ್ದವು. ಮಹಾರಾಜರು ನಿಂದು ಮಡಿಯುಟ್ಟು ಆಚಾರ್ಯರ ಬರವನ್ನೇ ಎದುರು ನೋಡುತ್ತಿದ್ದರು. ಕಾವಲಿನಾಳು ಓಡೋಡುತ್ತ ಬಂದು ಶುಕ್ರಾಚಾರ್ಯರು ಪ್ರಳಯಕಾಲನಂತೆ ಬಹು ಸಿಟ್ಟಾಗಿ ಬರುತ್ತಿರುವರೆಂದು ತಿಳಿಸಿದ. ನನ್ನೆದೆ ಧಸಕ್ಕೆಂದಿತು. ಮಹಾರಾಜರ ಮುಖ ವಿವರ್ಣವಾಯಿತು. ಆಚಾರ್ಯರು ಬಿರುಬಿರನೆ ಬಂದರು. 'ಮಹಾರಾಜ, ನಿನ್ನೆನ್ನು ಕಡೆಯಬಾರಿ ಕಂಡು, ನಿನ್ನ ರಾಜ್ಯದಿಂದ ಹೊರಟು ಹೋಗುವ ವಿಷಯ ಹೇಳಿ ಹೋಗಲು ಬಂದೆ,' ಎಂದು ಗರ್ಜಿಸಿದಾಗ, ನಾನು ಬವಳಿಬಂದಂತೆ ಕುಸಿದೆ ಮಹಾರಾಜರು ಆಚಾರ್ಯರ ಕಾಲಿಗೆ ಬಿದ್ದು ಬಹಳ ಕೇಳಿಕೊಂಡನಂತರ, ಆಚಾರ್ಯರ ಕೋಪದ ಕಾವು ಸ್ವಲ್ಪ ತಗ್ಗಿತು. ದೇವಯಾನಿ ಶರ್ಮಿಷ್ಠೆಯಿಂದ ಅಪಮಾನಿತಳಾಗಿ, ಇನ್ನು ಇಲ್ಲಿರುವುದಿಲ್ಲೆಂದು ಹಟ ಹಿಡಿದಿರುವ ಕಾರಣ, ತಾವೂ ಅವಳೊಡನೆ ಹೊರಡಬೇಕಾಗಿದೆಯೆಂದರು. ರಾಜ-ರಾಣಿಯರು ಪರಿಪರಿಯಾಗಿ ಬೇಡಿಕೊಂಡ ನಂತರ, ಆಚಾರ್ಯರು ಗದ್ಗದಿತರಾಗಿ ಹೇಳಿದ ಮಾತುಗಳು ನನ್ನ ಕಿವಿಯಲ್ಲಿ ಇನ್ನೂ ಪ್ರತಿಧ್ವನಿಸುತ್ತಿವೆ: "ಮಹಾರಾಜ, ನಾನು ತಪಸ್ವಿ; ದೇವಯಾನಿಯೇ ಈ ಜಗತ್ತಿನೊಡನೆ ನನಗಿರುವ ಏಕೈಕ ಮೋಹದ ಕೊಂಡಿ; ಅವಳಿಚ್ಛೆಗೆ ವಿರುದ್ಧವಾಗಿ ನಾನೇನನ್ನೂ ಮಾಡಲಾರೆ; ಅವಳಿಲ್ಲಿ ಇರಲೊಪ್ಪಿದರೆ ನಾನೂ ಇರುವೆ" ಎಂದರು. ದೇವಯಾನಿಯನ್ನು ಸಮಾಧಾನಪಡಿಸಿ ಕರೆತರಲು ಬರಿಗಾಲಲ್ಲೇ ರಾಜ-ರಾಣಿಯರು ಪಸಂತೋದ್ಯಾನಕ್ಕೆ ಹೊರಟುಬಿಟ್ಟರು. ನಾನು ಓಡಿ ಹೋಗಿ ಶರ್ಮಿಷ್ಠೆಗೆ ಸುದ್ದಿ ತಿಳಿಸಿದೆ. "ಸವ್ಯ. ದೇವಯಾನಿ ಬದುಕಿರುವಳಲ್ಲಾ, ತನಗೆ ಸ್ತ್ರೀಹತ್ಯಾದೋಷ ತಪ್ಪಿತಲ್ಲಾ!" ಎಂದು ಅಕೆ ಹಿಗ್ಗಿದಳು. ಮುಂದಾಗುವ ಅನಾಹುತವನ್ನು ಊಹಿಸಲಿಲ್ಲ. ನೀನು ಉದ್ಯಾನದಲ್ಲಿದ್ದೆಯಲ್ಲಾ, ಅಲ್ಲೇನಾಯಿತು– ಸಖಿ.?

ಶಾಲಿನಿ: ನಾನೂ ರಾತ್ರಿಯೆಲ್ಲಾ ದೇವಯಾನಿಗೆ ಸಮಾಧಾನ ಹೇಳಿದೆ. ಆದರೆ ಅಪಮಾನದಗ್ಧಳಾದ ಅವಳು ಅನ್ನ-ನೀರು ಮುಟ್ಟಿಲಿಲ್ಲ; ಕಣ್ಣೆವೆ ಮುಚ್ಚಲಿಲ್ಲ; ಕುಳಿತೆಡೆಯಿಂದ ಮೇಲೇಳಲಿಲ್ಲ. ದೇವಯಾನಿ ಮನಬದಲಿಸಿರಬಹುದೇನೋ ಎಂದು ನೋಡಲು, ಬೆಳಗಾದೊಡನೆ ಆಚಾರ್ಯರು ಬಂದು, ಸದ್ವಿಚಾರವಿಲ್ಲದೆ ಕಂಗೆಟ್ಟಿದ್ದ ದೇವಯಾನಿಯನ್ನು ಕಂಡು ನಮ್ಮಲ್ಲ ಮರ್ಮಗಿದರು. ಮಹಾರಾಜರಿಗೆ ಹೇಳಿಬಂದು ಆಕ್ಷಣವೇ ದೇವಯಾನಿಯೊಡನೆ ಬೇರೆಡೆಗೆ ಹೊರಟುಬಿಡುವುದಾಗಿ ನಿಶ್ಚಯಿಸಿದರು. ಕಚನನ್ನು ಕೊಲ್ಲಲೆಳಸಿದ ಅಪರಾಧಿಗಳನ್ನು ಶಿಕ್ಷಿಸದೆ ಮಹಾರಾಜ ಸುಮ್ಮನಿಸಿದ್ದುದರಿಂದಲೇ ರಾಜಪುತ್ರಿಗೆ ಈ ಧೈರ್ಯ ಬಂದಿತೆಂದೂ, ಉಚ್ಛಿಷ್ಟಕ್ಕೆ ಕೈಯೊಡ್ಡುವ ಭಟ್ಟಂಗಿಯ ಮಗಳೆಂದು ಹಂಗಿಸಿಕೊಂಡು ತಾನು ಇನ್ನು ಕ್ಷಣವೂ ಜೀವಿಸಿರುವುದಿಲ್ಲವೆಂದೂ ದೇವಯಾನಿ ರೋದಿಸಿದಾಗ ಆಚಾರ್ಯರು ರೋಷಭೀಷಣರಾಗಿ, ತಿದಿಯೊತ್ತಿದಂತೆ ಉಸಿರುಬಿಡುತ್ತಾ ಅರಮನೆಯತ್ತ ಧಾವಿಸಿದರು.

ನಳಿನಿ: ಅಯ್ಯೋ, ಅನಿವೇಕಿಗಳಾದ ನಮ್ಮಿಂದ ಎಂತಹ ಪ್ರಮಾದವಾಯಿತು!

ಶಾಲಿನಿ: ಇನ್ನೂ ಕೇಳು. ರಾಜ-ರಾಣಿಯರಿಬ್ಬರೂ ದೇವಯಾನಿಯ ಪಾದಗಳನ್ನು ಹಿಡಿದು ವಿಧವಿಧವಾಗಿ ಪ್ರಾರ್ಥಿಸಿದರು. ಮಹಾರಾಜರಂತೂ ದೀನರಾಗಿ 'ರಾಜ್ಯವನ್ನೇ ನಿನಗೊಪ್ಪಿಸುವೆ,

ತಾಯೆ. ರಾಜ್ಯಶಾಸನವೆಲ್ಲಾ ನಿನ್ನ ಅಂಕಿತದಲ್ಲಿರಲಿ, ನಾನು ದಾಸನಂತೆ ನಿನ್ನಪ್ಪಣೆಯಂತೆ ನಡೆಯುವೆ' ಎಂದರು. ದೇವಯಾನಿ ಧಿಕ್ಕರಿಸಿದಳು. 'ನಿನ್ನ ನೆರಳೇ ನನಗೆ ಬೇಡ' ಎಂಬ ಒಂದೇ ಹಟಹಿಡಿದಳು. ಶರ್ಮಿಷ್ಠೆಯಿಂದಾದ ಅಪಮಾನವೇನೆಂದು ಮತ್ತೆ ಮತ್ತೆ ಕೇಳಿದಾಗ, ನಳಿನಿಯನ್ನೋ ಶರ್ಮಿಷ್ಠೆಯನ್ನೋ ಕೇಳಿಕೊಳ್ಳಿರೆಂದಳು. ಮಹಾರಾಣಿಯವರು ತತ್‌ಕ್ಷಣ ನಿನಗೆ ಹೇಳಿಕಳುಹಿದರು.

ನಳಿನಿ : ಹೌದು, ನಾನು ಶರ್ಮಿಷ್ಠೆ ಇಬ್ಬರೂ ಮುಂದೇನಾಗುವುದೋ ಎಂದು ಭೀತರಾಗಿ ಚಿಂತಿಸುತ್ತಿದ್ದೆವು. ದಾಸಿಯು ಬಂದು ಕರೆದೊಡನೆ ಶರ್ಮಿಷ್ಠೆಯ ಮುಖ ಬಳಚಿಕೊಂಡಿತು. 'ನಸ್ಸಿಂದ ನಿನಗೆಂತಹ ಕಷ್ಟ ಒದಗಿತು ಸಖಿ!' ಎನ್ನುತ್ತಾ ಪ್ರಜ್ಞೆ ತಪ್ಪಿದಳು. ದಾಸಿಯೊಡನೆ ನಾನು ಉದ್ಯಾನವನಕ್ಕೆ ಬಂದೆನಷ್ಟೇ! ಮಹಾರಾಜರ ಕ್ರೋಧತಪ್ತಮುಖನೋಡಿ ನನ್ನೆದೆ ನಡುಗಿತು. ಚಾಚೂ ಬಿಡದೆ ಎಲ್ಲವನ್ನೂ ಹೇಳಿದೆನಲ್ಲಾ–ಮಹಾರಾಣಿಯವರ ದೈನ್ಯನೋಡಿ ನನಗಲ್ಲಿ ನಿಲ್ಲಲಾಗಲಿಲ್ಲ. ಅರಮನೆಗೆ ಹೊರಟುಹೋದೆ. ಅನಂತರ ಏನಾಯಿತು, ಸಖಿ ?

ಶಾಲಿನಿ : ಎಂತಹ ಅಪಚಾರವಾಯ್ತೆಂದು ರಾಜ-ರಾಣಿಯರು ಸಂತಾಪದಿಂದ ಕುದಿದರು. ಮಹಾರಾಜರು ವ್ಯಗ್ರರಾಗಿ—'ಗುರುಸಿಂದೆ ಮಾಡಿದ ಆ ಪಾಪಿಷ್ಠೆ ನನ್ನ ಮಗಳಲ್ಲ—ಶತ್ರು. ಅವಳಿಗೆ ಯಾವ ಶಿಕ್ಷೆ ವಿಧಿಸಲಿ, ಗುರುಪುತ್ರಿ ? ಶಿರಚ್ಛೇದ ಮಾಡಿಸಲೇ, ಚಿತ್ರವಧೆಮಾಡಿಸಲೇ, ನಾಲಗೆ ಸೀಳಿಸಿ ಮೆಣಸು ತುಂಬಿಸಲೇ ? ಆಜ್ಞೆಮಾಡು ಗುರುಪುತ್ರಿ, ಈಕ್ಷಣವೇ ಅವಳಿಗೆ ಆ ಶಿಕ್ಷೆ ವಿಧಿಸುವೆ' ಎಂದು ಗುಡುಗಿದರು. ಮಹಾರಾಣಿಯವರು ಕಣ್ಣೀರು ತುಂಬಿಕೊಂಡು ಗದ್ಗದಿತರಾಗಿ—

'ಇಂತಹ ಕೊಲೆಪಾತಕಿಯನ್ನು ಹಡೆದ ನಾನು ಮಹಾಪಾಪಿ! ನನಗೂ ಶಿಕ್ಷೆ ವಿಧಿಸು ಗುರುಪುತ್ರಿ! ನನ್ನ ಮಗಳು ನಿನ್ನೆಗೇ ತೀರಿ ಹೋದಳು. ಇನ್ನು ನೀನೊಬ್ಬಳೇ ಮಗಳು. ನಮ್ಮನ್ನು ತೊರೆಯಬೇಡ' ಎಂದು ದೇವಯಾನಿಯ ಕಾಲಿಗೆ ಬಿದ್ದರು. ಮಹಾರಾಜರು ಪುನಃ ದೇವಯಾನಿಯ ಪಾದಗಳಿಗೆ ಅಡ್ಡಬಿದ್ದು, ಶರ್ಮಿಷ್ಠೆಗೆ ಬೇಕಾದ ಶಿಕ್ಷೆವಿಧಿಸಿ, ಆಶ್ರಮಕ್ಕೆ ಬರಬೇಕೆಂದೂ ಹಾಗೆ ಅಭಯಕೊಡುವವರೆಗೆ ತಾವು ಅವಳ ಪಾದಗಳನ್ನು ಬಿಡುವುದಿಲ್ಲವೆಂದೂ ಮಗುವಿನಂತೆ ಅತ್ತು ಬಿಟ್ಟರು. ನಳಿನಿ, ಅವರ ಆರ್ತತೆ ನೋಡಲಾರದೆ ನಾನೂ ಅತ್ತು ಬಿಟ್ಟೆ. ದೇವಯಾನಿಯ ಹೃದಯವು ಕರಗಿತು. 'ನನಗಾದ ಅಪಮಾನಕ್ಕೆ ನೀವು ಕಾರಣರಲ್ಲ. ಶರ್ಮಿಷ್ಠೆಗೆ ನಾನೆಂದೂ ಈವರೆಗೆ ಕೇಡು ಬಯಸಿಲ್ಲ. ಆದರೆ ಅಪಮಾನದ ಉರಿನೆನಪು ಶಲ್ಯದಂತೆ ಇರಿಯುತ್ತಿರುವಾಗ ನಾಹೇಗೆ ಬರಲಿ ?' ಎಂದಳು ದೇವಯಾನಿ.

ಆಗ ಮಹಾರಾಜರು ಗಂಭೀರವಾಗಿ—

'ಗುರುಪುತ್ರಿ, ಆ ಪಾತಕಿಯ ಮುಖಾವಲೋಕನದಿಂದ ನಮ್ಮ ಪುಣ್ಯ ಕ್ಷೀಣವಾಗುವುದು. ದಾಸಿಯೆಂದೂ ಊಳಿಗದವಳೆಂದೂ ನಿನ್ನನ್ನು ಹೆಂಗಿಸಿದ್ದಳಲ್ಲವೇ ? ಅವಳೇ ನಿನಗೆ ದಾಸಿಯಾಗಿ ನಿನ್ನ ಎಂಜಲಿಗೆ ಕೈಯೊಡ್ಡಿ ಬಾಳನ್ನು ಕಳೆಯಲಿ. ಆ ದುಷ್ಟೆಯನ್ನು ಆರಮನೆಯಿಂದ ಆಟ್ಟುತ್ತೇನೆ. ಇನ್ನೆಂದೆಂದಿಗೂ ಆ ಪಾಪಿಯ ಮುಖಾವಲೋಕನ ಮಾಡುವುದಿಲ್ಲ. ಇದು ನನ್ನ ಪ್ರತಿಜ್ಞೆ' ಎಂದರು. ಮಹಾರಾಣಿಯವರೂ ದನಿಗೂಡಿಸಿದರು.

ನಳಿನಿ : ಆಗ ದೇವಯಾನಿ ಶಾಂತಳಾದಳೇ ?

ಶಾಲಿನಿ: ದೇವಯಾನಿ ಆಗಲೂ ಅನುಮಾನಿಸುತ್ತಿದ್ದಳು. ಮಹಾರಾಜರು ಪುತ್ತೆ ದೃಢಸ್ವರದಲ್ಲಿ ಹೇಳಿದರು:— 'ಗುರುಪುತ್ರಿ, ನೀನು ನಮ್ಮ ಮೇಲೆ ಇನ್ನೂ ಕೃಪೆಮಾಡದಿದ್ದರೆ ನಿನ್ನೆದುರೇ ಅಗ್ನಿ ಸ್ಥಾಪಿಸಿ ಅಗ್ನಿಪ್ರವೇಶಮಾಡಿ ನಮ್ಮ ಪಾಪ ಕಳೆದುಕೊಳ್ಳುವೆವು. ಗುರುಕೃಪಾಬಾಹಿರನಾಗಿ ನಾನು ಬದುಕಲಿಚ್ಛಿಸುವುದಿಲ್ಲ" ಎಂದರು. ಮಹಾರಾಣಿಯವರು 'ಅಂತಹ ಕುಲಕಳಂಕಿನಿಯನ್ನು ಹಡೆದ ಪಾಪಿ ನಾನು ಮೊದಲು ಅಗ್ನಿಗಾಹುತಿಯಾಗುವೆನು. ನಮ್ಮ ರಾಜ್ಯದ ಸೇಲಾದರೂ ದಯೆತೋರಿ ರಕ್ಷಿಸು ಗುರುಪುತ್ರಿ!' ಎಂದು ಮುಂದೆ ಬಂದರು. ಆಗ ದೇವಯಾನಿ ಆಶ್ರಮಕ್ಕೆ ಬರಲೊಪ್ಪಿದಳು. ಈಗ ನಿತ್ಯಕರ್ಮ ನೂಡಲು ತೆರಳಿದ್ದಾಳೆ. ನೀನು ಆಶ್ರಮಕ್ಕೆ ಬಂದಕಾರಣವೇನು ?

ನಳಿನಿ : ಅಲ್ಲಿ ನಡೆದ ವಿಷಯ ಪೂರ್ತಿ ಹೇಳಲೇ ? ನಾನು ಉದ್ಯಾನವನದಿಂದ ನೇರವಾಗಿ ಶರ್ಮಿಷ್ಠೆಯ ಬಳಿಗೆ ಹೋಗಿ ವಿಷಯ ತಿಳಿಸಿದೆ. ಶರ್ಮಿಷ್ಠೆ ತನ್ನನ್ನೇ ಬೈದುಕೊಂಡು ತಲೆಗಟ್ಟಿಸಿಕೊಂಡಳು. ಹೆತ್ತ ತಂದೆ–ತಾಯಿಯರು ತನ್ನಿಂದಾಗಿ ಇಷ್ಟು ಪರಿತಾಪಪಡುವಂತಾಯ್ತಲ್ಲಾ—ಎಂದು ಹಲುಬಿದಳು. ಆ ದಾಸಿ ಬಂದು ಮಹಾರಾಜರು ಸಿಟ್ಟಾಗಿ ಬರುತ್ತಿರುವರೆಂದು ತಿಳಿಸಿದಳು. ಶರ್ಮಿಷ್ಠೆ ನನ್ನನ್ನು ತೆರೆಯ ಹಿಂದಕ್ಕೆ ಹೋಗೆಂದಳು. ಶಿಕ್ಷೆಯನ್ನು ತಾನೊಬ್ಬಳೇ ಅನುಭವಿಸುವೆನೆಂದಳು. ರೋಷಭೀಷಣರಾಗಿದ್ದ ಮಹಾರಾಜರು ಬಂದವರೇ ಶರ್ಮಿಷ್ಠೆಯನ್ನು ಜೆಂಡಿಸಂತೆ ಒದ್ದುಬಿಟ್ಟರು—ಎಲೆ ತೊತ್ತೇ, ತ್ರಿಲೋಕಪೂಜ್ಯರಾದ ಗುರುಗಳನ್ನು ಉಚ್ಛಿಷ್ಟಕ್ಕೆ ಕೈಯೊಡ್ಡುವರೆಂದು ಯಾವ ಬಾಯಲ್ಲಿ ಹೇಳಿದೆ ? ಏಳೇಳು ಜನ್ಮವೆತ್ತಿದರೂ ಈ ಗುರುನಿಂದೆಯ ಪಾಪ ಹೋಗದು ! ಇನ್ನು ನಿನ್ನ ಶೇಷಾಯುಷ್ಯವನ್ನು ಗುರುಪುತ್ರಿಯ ಸೇವೆಮಾಡಿ ಕಳೆ ! ಹಾಗಾದರೂ ನಿನ್ನ ಈ ಪಾಪದ ಮಾಲಿನ್ಯ ಕಳೆಯಲಿ– ಇದೇ ನನ್ನ ಆಜ್ಞೆ,—ಇದೇ ಕಡೆಯ ಮುಖದರ್ಶನ—ಎಂದು ಕಟುವಾಗಿ ಹೇಳಿದರು. ಈ ಶರ್ಮಿಷ್ಠೆಯೆಂದರೆ ಇಷ್ಟು ವಾತ್ಸಲ್ಯದಿಂದಿದ್ದ ಮಹಾರಾಜರು ಹಾಗೆ ಸಿಟ್ಟಾದಾಗ, ಅವಳು ಹೇಗೆ ಸಹಿಸಬೇಕು ? ಗಡಗಡ ನಡುಗಿಹೋದಳು.

ಶಾಲಿನಿ: ಇದೇ ವಿಧಿಲೀಲೆ! ವಸಂತೋತ್ಸವದ ಆರಂಭವು ಈ ರೀತಿಯಾಗಿ ನಡೆಯಬೇಕೇ! ಶರ್ಮಿಷ್ಠೆಗಾಗಿ ನನ್ನೆದೆ ಕುದಿಯುತ್ತಿದೆ. ಮುಂದೆ?

ನಳಿನಿ: ಮಹಾರಾಜರು ಹಿಂದೆಯೇ ರಾಣಿಯವರು ಬಂದರು. ಎಷ್ಟಾದರೂ ಹಡೆದೊಡಲು. ಶರ್ಮಿಷ್ಠೆಯ ದುರವಸ್ಥೆಗಾಗಿ ದುಃಖಿಸುತ್ತ, ಅವಳ ಮಡುಕೆಗಾಗಿ ಮರುಗುತ್ತಿರುವಾಗಲೇ ಮತ್ತೆ ಮಹಾ-

ರಾಜರು ಬಂದರು. ಶರ್ಮಿಷ್ಠೆ ತಾಯಕಾಲುಗಳನ್ನು ಕಣ್ಣೀರಿನಿಂದ ತೊಳೆಯುತ್ತಿದ್ದಳು. ಮಹಾರಾಜರು ಶರ್ಮಿಷ್ಠೆಯನ್ನು ಮತ್ತೆ ಒದ್ದು ರಾಣಿಯವರತ್ತ ತಿರುಗಿ ನಿಷ್ಠುರರಾಗಿ—

ರಾಜಮಹಿಷಿಯಾದ ನಿನ್ನಲ್ಲೂ ಈ ದುರ್ಬಲತೆಯೇ ? ಈ ಕಳಂಕಿನಿ ಇರ್ಮನೆಯಲ್ಲಿ ಇನ್ನು ಕ್ಷಣನಿದ್ದರೂ ನನ್ನ ಪುಣ್ಯಕ್ಷೀಣವಾಗುವುದು ! ಗುರುದ್ರೋಹಿಯಾದ ಇವಳ ಮುಖಾವಲೋಕನ ಮಹಾಪಾಪ. ನೀನು ವೀರಕ್ಷತ್ರಾಣಿ, ವೀರಪತ್ನಿ, ವೀರಮಾತೆ ! ಪತಿಯನ್ನು ಸುತರನನ್ನು ನಗುನಗುತ್ತ ಮೃತ್ಯುವನ್ನಪ್ಪಲು ರಣರಂಗಕ್ಕೆ ಕಳುಹಿಕೊಡಬೇಕಾದವಳು. ಈ ಅಲ್ಪತ್ಯಾಗಕ್ಕೆಷ್ಟು ಯೋಜನೆಯೇ ? ರಾಜ್ಯದ ಕ್ಷೇಮಕ್ಕಾಗಿ ಈ ಕುಲಘಾತಕಿಯನ್ನು ತೊರೆಯಬೇಕು. ನಿನ್ನ ಮೋಹವನ್ನು ಬಿಡು. ರಾಜಮಹಿಷಿಯಂತೆ ಕರ್ತವ್ಯಮಾಡು. ಇವಳ ವಸ್ತ್ರಾಭರಣಗಳನ್ನು ಕಳಚಿ ದಾಸಿಯ ಉಡಿಗೆ ತೊಡಿಸಿ ಗುರುಪುತ್ರಿಯ ಬಳಿಗೆ ಅಟ್ಟು. ಪುನಃ ನಾನಿಬ್ಬರೂ ಈ ಪಾಪಿಯ ಮುಖಾವಲೋಕನ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವುದು ನೆನಪಿರಲಿ " ವೆಂದು ದೃಢವಾಗಿ ಹೇಳಿದರು.

ಶಾಲಿನಿ: ಅಯ್ಯೋ, ಮೃದುಹೃದಯದ ಮಹಾರಾಣಿಯವರು ಎಷ್ಟು ಸಂಕುಪಟ್ಟರೋ !

ನಳಿನಿ: ರಾಣಿಯವರು ಕ್ಷಣ ಗಂಭೀರರಾದರು. ಅನಂತರ ಶರ್ಮಿಷ್ಠೆಯನ್ನು ಸ್ಥಿರದೃಷ್ಟಿಯಲ್ಲಿ ನೋಡಿ—

" ಇಂದಿಗೆ ನಮ್ಮ ಸಂಬಂಧ ಕಡಿಯಿತು. ನಿನಗೆ ನಾನಿನ್ನು ತಾಯಿಯಲ್ಲ. ಆ ಜಗಜ್ಜನನಿಯೇ ನಿನ್ನ ತಾಯಿ. ಗುರುಪುತ್ರಿಯನ್ನು ಪ್ರತ್ಯಕ್ಷ ದೈವವೆಂದು ಭಾವಿಸಿ, ಪತಿಯನ್ನನುಸರಿಸುವಂತೆ ಅನುಸರಿಸು. ಇದೇ ನಿನ್ನ ಹಿತವಾದ. ಈಗ ಕುಲಕ್ಕೆ ತಂದಿರುವ ಅಪಕೀರ್ತಿಯನ್ನು ಹಾಗಾದರೂ ಕಳೆ" ಎಂದು ಹೇಳಿ ಕಣ್ಣೀರು ತುಂಬಿಕೊಂಡು ಹೊರಟು ಹೋದರು.

ಶಾಲಿನಿ: ಸ್ವಯಂವರದಲ್ಲಿ ವರಿಸಿದಾತನಿಗೆ ಮಗಳನ್ನು ಧಾರೆಯೆರೆಯುವ ಭಾಗ್ಯವಷ್ಟು, ದಾಸ್ಯಕ್ಕೆ ಮೂಡುವಂತಾಯ್ತು ! ರಾಣಿಯವರಿಗೆಷ್ಟು ಪರಿತಾಪವಾಯಿತೋ !

ನಳಿನಿ: ದೇವಯಾನಿ ಅನ್ನನಿದ್ರೆಗಳಿಲ್ಲದೆ ಇದ್ದಳೆಂಬ ವಿಷಯ ತಿಳಿದು ಶರ್ಮಿಷ್ಠೆಗೆ ಶುದ್ಧೀಕರಣಕ್ಕಾಗಿ ಮೂರು ದಿನ ಅನ್ನ-ನಿದ್ರೆಗಳಿಲ್ಲದೆ ತಪಿಸುವಂತೆ ಮಹಾರಾಜರು ಆಜ್ಞೆ ಮಾಡಿದ್ದಾರೆ. ಗೌರೀನಿಲಯದಲ್ಲಿ ಶರ್ಮಿಷ್ಠೆಯಿರಬೇಕಂತೆ. ನನ್ನನ್ನೇ ಈ ಮೂರು ದಿನಗಳ ಮೇಲ್ವಿಚಾರಣೆಗೆ ನೇಮಿಸಿದ್ದಾರೆ. ಅರಮನೆಯಲ್ಲಿ ಎಲ್ಲರೂ ನನ್ನನ್ನು ಹಂಗಿಸುವವರೇ ಆದ್ದರಿಂದ, ಪೂಜೆಗೆ ಆಣೆಮಾಡೋಣವೆಂದು ಬಂದೆ. ಗೌರೀನಿಲಯವನ್ನು ತೋರುವೆಯಾ ?

ಶಾಲಿನಿ: ನಡೆ, ಶರ್ಮಿಷ್ಠೆ ಎಂತಹ ದುರವಸ್ಥೆ ತಂದುಕೊಂಡಳು! ಅವಳು ಇವನ್ನೆಲ್ಲಾ ಹೇಗೆ ಸಹಿಸುವಳೋ ಭಗವಂತನೇ ಬಲ್ಲ.

[ಅವರತ್ತ ಹೋದನೋಲೆ, ನಿರಾಭರಣೆಯಾಗಿ ತಲೆಗೆದರಿಕೊಂಡು ಆರ್ತಳಾಗಿರುವ ಶರ್ಮಿಷ್ಠೆ ಪ್ರವೇಶಿಸುವಳು.]

ಶರ್ಮಿಷ್ಠೆ: [ಆರ್ತಳಾಗಿ] ಗಿಡ-ಮರಗಳಿರಾ, ಪಶುಪಕ್ಷಿಗಳಿರಾ, ಬನ್ನಿರಿ—ಈ ಪಾಪಿ ಶರ್ಮಿಷ್ಠೆಯನ್ನು ಶಿಕ್ಷಿಸಿರಿ ! ಈ ಪಾಪಿಯ ಪಾಪ ಅಣುವಷ್ಟಾದರೂ ಕಡಮೆಯಾಗಲಿ. ಓ ಕ್ರಿಮಿಕೀಟಗಳಿರಾ, ಬನ್ನಿರಿ—ನಿಮಗಿಂತಲೂ ಕೀಳಾಗಿರುವ ಈ ಪಾತಕಿಯನ್ನು ಶಿಕ್ಷಿಸಿರಿ ! ಪಾಪದ ಭಾರ ಸ್ವಲ್ಪವಾದರೂ ತಗ್ಗಲಿ. [ಕೈ ನೋಡಿಕೊಳ್ಳುತ್ತಾ] ಎಲೈ ಜೇನ್ನೊಣವೇ ಕಚ್ಚು, ಇನ್ನೂ ಚೆನ್ನಾಗಿ ಕಚ್ಚು ! ನಿನ್ನನ್ನು ನಿವಾರಿಸಲೊಲ್ಲೆ. ನನ್ನ ಎದೆಯನ್ನು ದಹಿಸುತ್ತಿರುವ ಪಶ್ಚಾತ್ತಾಪದ ಅಗ್ನಿ ನಿನ್ನ ಕಡಿತದಿಂದ ಕೆಂಚಿತ್ತಾದರೂ ಕುಗ್ಗಲಿ! ಗುಲಾಬಿ ಮುಳ್ಳುಗಳೇ ನಾಟಿರಿ, ಇನ್ನೂ ಆಳವಾಗಿ ನಾಟಿರಿ ನನ್ನ ಘೋರಕೃತ್ಯದ ನೆನಪು ಸಾವಿರ ಸರಲುಗಳು ನಾಟಿದಂತೆ ನೋಯುತ್ತಿರುವಾಗ, ನಿಮ್ಮ ಶಿಕ್ಷೆ ಬಹು ಅಲ್ಪ. ಅಯ್ಯೋ, ಈ ಪಾಪಕಳಂಕದಿಂದ ಹೇಗೆ ಪಾರಾಗಲಿ? ಯಾರ ಮೊರೆ ಹೊಗಲಿ ? ಹೆಡೆದ ತಾಯಿ-ತಂದೆಯರಿಗೆ ಇಷ್ಟು ಸಂಕಟವಿತ್ತ ನನ್ನ ಬಾಳಿಗೆ ಧಿಕ್ಕಾರ, ಧಿಕ್ಕಾರ! ಇನ್ನೆಂದೆಂದೂ ನನ್ನ ಮುಖಾವಲೋಕನ ಮಾಡುವುದಿಲ್ಲವೆಂದು ಹೆಡೆದ ತಾಯಿ-ತಂದೆಯರೇ ಪರಿತ್ಯಜಿಸಿದರು. ನನ್ನಂತಹ ಹತಭಾಗ್ಯೆ, ಬೇರೆ ಯಾರಿದ್ದಾರೆ ? (ಬಿಕ್ಕುವಳು) ದುಃಖದಿಂದ ಎದೆ ಬಿರಿಯುತ್ತಿದ್ದರೂ ಪ್ರಾಣಪಕ್ಷಿ ಈ ದೇಹಪಂಜರವನ್ನು ಬಿಡದಲ್ಲಾ ! (ಕೆಳಗೆ ನೋಡಿ) ಈ ಪಾತಿಯಲ್ಲಿರುವ ನೀರಿನಲ್ಲೂ ನನ್ನ ಪಾಪಿ ಮುಖ ಅಣಕವಾಡುತ್ತಿದೆಯಲ್ಲ ! ನನ್ನ ಈ ಪಾಪಿಮುಖವನ್ನು ಹೇಗೆ ಜನರಿಗೆ ತೋರಲಿ? ಎಲ್ಲಿ ಅಡಗಿಕೊಳ್ಳಲಿ ? ಈ ಅವನತಿಯ ಸೇಡನ್ನು ಯಾರ ಮೇಲೆ ತೀರಿನಲಿ? (ಸುತ್ತಲೂ ನೋಡಿ ಕಾಣಿವಿಂದ) ಎಲೈ ಅಹಂಕಾರವೇ, ಮುಗಿಲೆತ್ತರವೇರಿಸಿ ನನ್ನನ್ನು ಕೆಡುಹಿದೆಯಲ್ಲವೇ? ಅಡಗು, ಅಡಗು, ಶರ್ಮಿಷ್ಠೆಯ ಪಾಲಿಗೆ ಎಂದೆಂದೂ ಇಲ್ಲದಂತೆ ಅಡಗು! (ಬೆಚ್ಚಿ) ಇದೇನು ನನ್ನ ವರ್ತನೆ? ನನ್ನ ಸರ್ವನಾಶಕ್ಕೆ ಕಾರಣವಾದ ಕ್ರೋಧಕ್ಕೆ ಮತ್ತೆ ವಶಳಾಗುತ್ತಿರುವೆನಲ್ಲಾ ! ಬೆಂಕಿಯಿಂದ ಬೆಂಕಿ ಹೇಗೆ ನಂದೀತು ? ಅಂತೇ ಕ್ರೋಧದಿಂದ ಅರಿಷಡ್ವರ್ಗಗಳನ್ನು ಗೆಲ್ಲಲಾಗ್ಗದೇ? ದೀನತೆಯನಾಶ್ರಯಿಸಿ ಗೆಲ್ಲಬೇಕು. ಕ್ರಿಮಿಕೀಟಗಳಿಗಿಂತ ಕೀಳು ನಾನು. ಪಾತಾಳಹ ತಳದಲ್ಲಿರುವ ಕೀಟಕ್ಕಿಂತ ನಿಕೃಷ್ಟೇ ನಾನು.ಎಲೈ ಅರಿಷಡ್ವರ್ಗಗಳೇ. ಪಾತಾಳದ ತಳದಡಿಯಲ್ಲಿ ಅಡಗಿಹೋಗಿರಿ, ಅಡಗಿ ಹೋಗಿರಿ. [ಶಾಲಿನಿ ಅತ್ತಣಿಂದ ಬರುವಳು ಶರ್ಮಿಷ್ಠೆ ಓಡಿಹೋಗಿ ಅವಳನ್ನು ಅಪ್ಪಿಕೊಳ್ಳುವಳು] ಅಕ್ಕಾ, ಶಾಲಿನಿ, ನನ್ನನ್ನು ಕ್ಷಮಿಸು, ನಿನ್ನನ್ನು ಎಷ್ಟೋ ರೀತಿ ಹಂಗಿಸಿ ಮಾತನಾಡಿದೆ. ನಿನ್ನ ಹಿತವಾದವನ್ನು ತಿರಸ್ಕರಿಸಿದೆ. ನನ್ನ ಅಪರಾಧವನ್ನು ಕ್ಷಮಿಸು, [ಬಿಕ್ಕುವಳು]

ಶಾಲಿನಿ: ತಂಗಿ, ನಿನ್ನ ದುರವಸ್ಥೆಯನ್ನು ನೆನೆದು ನನ್ನೆದೆ ಕುದಿಯುತ್ತಿದೆ. ಮರುಕ ಉಕ್ಕಿ ಬರುತ್ತಿದೆ. ನಿನಗಿತ್ತ ಶಿಕ್ಷೆಯನ್ನು ನಾನೇ ಸ್ವೀಕರಿಸಲೂ ಸಿದ್ಧಳಾಗಿರುವೆ. ನಿನ್ನ ಈ ಕ್ಲೇಶವನ್ನು ನೋಡಲಾರೆ ಸಖಿ! (ಕಣ್ಣೀರಿಡುವಳು).

ಶರ್ಮಿಷ್ಠೆ: ಅಕ್ಕಾ, ಇಂತಹ ಕರುಣೆಗೆ ಅಪಾತ್ರಳು ನಾನು ಎಲ್ಲರ ದ್ವೇಷ ತಿರಸ್ಕಾರಗಳೇ ನನಗೆ ಯೋಗ್ಯ. ಗುರುವಿಂದೆ ಮಾಡಿದ ಪರಮದ್ರೋಹಿ ನಾನು. ಆ ಪಾಪದ ಜ್ವಾಲೆ ನನ್ನನ್ನು ದಹಿಸುತ್ತಿದೆ

ಹೇಳಕ್ಕಾ, ಈಗೇನು ಮಾಡಲಿ ? ಹೇಗೆ ಜೀವ ಹಿಡಿದಿರಲಿ ? ಹೇಗೆ ಈ ಪಾಪವನ್ನು ಕಳೆದುಕೊಳ್ಳಲಿ ?

ಶಾಲಿನಿ: (ಅವಳ ಮೈದಡವಿ) ತಂಗಿ, ಇದೆಲ್ಲವೂ ದೈವಲೀಲೆ.

ಶರ್ಮಿಷ್ಠೆ: (ಉದ್ವೇಗದಿಂದ) ಹಾಂ, ದೈವಕ್ಕೆ ಹೇಗೆ ದೋಷಕೊಡಲಿ ? ಅರಿಷಡ್ವರ್ಗಗಳಿಗೆ ಆಳಾಗಿ ನನ್ನ ಬಾಳನ್ನೇ ಹಾಳು ಮಾಡಿಕೊಂಡೆ. ದೈವಕ್ಕೆ ಯಾವ ಬಾಯಲ್ಲಿ ದೋಷಕೊಡಲಿ ? ಕವಚವನ್ನೆಲ್ಲ ಮುಚ್ಚಿ ಕೊಠಡಿಯಲ್ಲಿ ಕೂತು, ಕಿರಣ ಬಂದು ಕತ್ತಲನ್ನು ಬೆಳಗಲಿಲ್ಲವೆಂದು ದೂರಿದರೆ, ದೋಷ ಯಾರದು ? ನನಗಾಗಿ ನಾನು ದುಃಖಿಸುವುದಿಲ್ಲ. ತಂದೆ-ತಾಯಿಯರಿಗೆ ನನ್ನಿಂದಾಗಿರುವ ಅಪಮಾನ, ನಮ್ಮ ಕುಲಕ್ಕೆ ತಟ್ಟಿದ ಅಪಕೀರ್ತಿ ಇವುಗಳಿಗಾಗಿ ತಪಿಸುತ್ತಿರುವೆ.

ಶಾಲಿನಿ: ಶಾಂತಳಾಗು ಶರ್ಮಿಷ್ಠಾ. ಆದುದಾಯಿತು. ಅದಕ್ಕಾಗಿ ಪರಿತಪಿಸಿ ಪ್ರಯೋಜನವಿಲ್ಲ. ಮುಂದೇನು ಮಾಡಬೇಕೆಂಬುದನ್ನು ಯೋಚಿಸು– ನಾನು ಪ್ರಾಜ್ಞೆಯಲ್ಲ; ಆದರೂ ನನಗೆ ತಿಳಿದ ನಾಲ್ಕು ಮಾತುಗಳನ್ನು ಹೇಳುವೆ. ಜಗದಂಬೆಯ ಆಣತಿಯಿಲ್ಲದೆ ಒಂದು ಹುಲ್ಲೆಸಳೂ ಅಲುಗಲಾರದು. ನಸ್ತು ಒಂದೇ ಆದರೂ ಪ್ರತಿಬಿಂಬ, ನೆರಳುಗಳು ಬೇರೆಬೇರೆಯಿರುವಂತೆ, ಅವಳೇ ಸರ್ವ, ಅವಳೇ ಅಸರ್ವ. ನಿನಗೆ ಈ ಅಸುರೀಸ್ವಭಾವವನ್ನು ಕೊಟ್ಟಿರುವಳೂ ಅವಳೇ. ಯಾವ ಕ್ರೋಧ, ಮದ, ಮಾತ್ಸರ್ಯಗಳು ಮಿತಿಮೀರಿ ನಿನ್ನ ಅಪನತಿಗೆ ಕಾರಣವಾದುವೋ, ಅವುಗಳಿಗೂ ಸಹ ಅವಳೇ ಆಧಾರ. ಸಖೀ, ನಿನ್ನ ಬಾಳಿನ ಈ ಮಹಾದುರಂತವನ್ನು ಮುಂದಿನ ಶುಭಕ್ಕೆ ನಾಂದಿಯನ್ನಾಗಿ ಮಾಡಿಕೋ ! ನಿನ್ನ ಹಳೆಯ ಸ್ವಭಾವವನ್ನು ಮೆಟ್ಟಿ ಮಾರ್ಪಡಿಸಿಕೊ ! ನಯ, ದಯೆ, ಶಮೆ, ದಮೆ, ದೀನತೆಗಳನ್ನು ಆಶ್ರಯಿಸು.

ಶರ್ಮಿಷ್ಠೆ: ಆಗಲಕ್ಕಾ, ಆಗಲಿ – ದೈವಕ್ಕೆ ಅನನ್ಯಶರಣಾಗುವೆ.

ಶಾಲಿನಿ. ತಂಗಿ, ನಿನಗೆ ಉಪದೇಶ ನೀಡಲು ನಾನು ಪ್ರಾಜ್ಞೆಯಲ್ಲ. ಆದರೆ ನಾನೂ ಜೀವನದಲ್ಲಿ ತುಂಬ ನೊಂದವಳು. ಆ ಒಂದು ಬಲದ ಮೇಲೆ ಹೇಳುತ್ತಿದ್ದೇನೆ. ಜೀವನವೆಂದರೆ ಏನೆಂದು ಭಾವಿಸಿರುವೆ ? ಇದೊಂದು ಮಹಾಯಾತ್ರೆ. ಈ 'ನಾನು' ಎಂಬುದು ನರಜನ್ಮಕ್ಕೆ ಬರುವ ಮೊದಲು ಜಡವಾಗಿ, ಅಣುವಾಗಿ, ಜಲವಾಗಿ, ಗಿಡ-ಮರಗಳಾಗಿ ಹುಳು-ಹುಪ್ಪಟೆ ಪಶು-ಪಕ್ಷಿಗಳಾಗಿ ಅನುಭವ ಪಡೆದಿದೆ. ಎಂಬತ್ತಾರು ಕೋಟಿ ಜನ್ಮಗಳ ಅನುಭವ ಪಡೆದು ಈ 'ನಾನು' ಎಂಬುದು ವಿಕಾಸವಾಗಿ ನರಜನ್ಮಕ್ಕೆ ಬಂದಿದೆ. ಮೃಗ ಸ್ವಭಾವವನ್ನು ಕಳೆದುಕೊಂಡು ದೈವೀಸ್ವಭಾವ ಪಡೆಯುವವರೆಗೂ ಜನನ – ಮರಣಗಳು ತಪ್ಪಿದ್ದಲ್ಲ. ಈ 'ನಾನು' ಎಂಬುದು ಪಕ್ವವಾಗಿ ನಭವಂತೆ ನಿಸ್ತರವಾಗಿ, ಭಗವಂತನಲ್ಲಿ ಐಕ್ಯವಾದಾಗಲೇ ಮುಕ್ತಿ! ತಂಗೀ, ಈ ನಮ್ಮ ಬಾಳು ಆತ್ಮನ ಮಹಾಯಾತ್ರೆಯ ಒಂದೊಂದು ಘಟ್ಟಮಾತ್ರ. ಬಾಳ್ವೆಯ ಗುರಿಯನ್ನು ತಿಳಿ. ಆಗ ಬಹಿರಂಗದ ಭೋಗ-ಭಾಗ್ಯಗಳಿಗೆ ನೀನು ಬೆಲೆ ಕೊಡುವುದಿಲ್ಲ. ಅಂತರಂಗದ ಸಂಪನ್ನತೆಯೇ ಉತ್ಕೃಷ್ಟ ಸಂಪತ್ತೆಂದು ತಿಳಿಯುವೆ. ನಿನ್ನ ಅಹಂಕಾರ ನಾಶವಾದರೆ ದಾಸ್ಯವೂ ನಿನಗೆ ಹಿತವಾಗುವುದು. ನಿನ್ನ ಉನ್ನತಿಗೆ ಕಾರಣವಾಗುವುದು. ನಿನ್ನ ಧೈರ್ಯ-ಸ್ಥೈರ್ಯಕ್ಕೆ ನಿನ್ನ ದುಃಸ್ಥಿತಿ ಸವಾಲು ಹಾರುತ್ತಿದೆ, ತಂಗೀ.

ಶಾಲಿನಿ:(ಕೈ ಜೋಡಿಸಿ) ಅಕ್ಕಾ, ನಿನ್ನ ಹಿತವಾದ ನನ್ನ ಹೃನ್ಮನಗಳನ್ನು ಬೆಳಗಿತು. ಇದೋ ಪ್ರತಿಜ್ಞೆಮಾಡಿ ಹೇಳುತ್ತೇನೆ– ಅಕ್ಕ ದೇವಯಾನಿಯ ಅಡಿಯಲ್ಲಿ ನನ್ನ ಅಹಂಕಾರವನ್ನು ಬಲಿಕೊಡುವೆ. ಅವಳನ್ನು ಕಾಯಾ ವಾಚಾ ಮನಸಾ ದ್ವೇಷಿಸೆ; ಅವಳೇನು ಮಾಡಿದರೂ ಕೋಪಿಸೆ. ಸದಾ ಅವಳ ಸುಖಕ್ಕಾಗಿ ಶ್ರಮಿಸುವೆ. ಅನನ್ಯ ಶರಣಾಗಿ ಆ ಮಹಾಮಾತೆಗೆ ಮೊರೆಹೋಗುವೆ. ಪರಿತ್ಯಕ್ತಳೂ ಅನಾಥೆಯೂ ಆದ ನನಗೆ ಆದಿಮಾತೆಯೊಬ್ಬಳೇ ಆಶ್ರಯ. ಅಕ್ಕಾ, ಗೌರೀನಿಲಯವೆಲ್ಲಿದೆ ತೋರು. ಮೂರು ದಿನ ನಿರ್ಜಲೋಪವಾಸ ಮಾಡಿ ಗುರುನಿಂದೆಯ ಮಹಾಪಾಪವನ್ನು ಕಳೆದುಕೊಂಡು ಜಗದಂಬೆಯನ್ನು ಪೂಜಿಸಲೂ ದೇವಯಾನಿಯನ್ನು ಸೇವಿಸಲೂ ಅರ್ಹತೆ ಪಡೆವೆನು.

ಶಾಲಿನಿ: ನಡೆ ತಂಗಿ, ನಳಿನಿ ಈ ವೇಳೆಗೆ ಗೌರೀನಿಲಯವನ್ನು ಶುಚಿಗೊಳಿಸಿರಬೇಕು. ಆ ಭಗವತಿಯೇ ನಿನಗೆ ಮುಂದೆ ದಾರಿ ತೋರಿದಿಕ್ಕಾಗಲಿ.

(ಅವರಿಬ್ಬರೂ ಹೋಗುವರು. ಆತ್ತಣಿಂದ ದೇವಯಾನಿಯ ಪ್ರವೇಶ. ಉತ್ತಮ ಉಡುಪು ಧರಿಸಿದ್ದಾಳೆ. ಮುಖದಲ್ಲಿ ಸಂತಾಪ, ದರ್ಪ ತುಂಬಿದೆ).

ದೇವ: ಆಹಾ ! ಅರ್ಧ ಶಾಂತವಾಯಿತು ನನ್ನ ಸೇಡಿನುರಿ. ಯಾಚಕಳೆಂದೂ ದಾಸಿಯೆಂದೂ ಜರೆದ ಆ ಗರ್ವಿಷ್ಠೆ, ಇಸ್ತು ನನ್ನ ತೊತ್ತಾಗಿ ಬಿದ್ದಿರಬೇಕು ! ಸರಿಯಾಗಿ ಬುದ್ಧಿಕಲಿಸುವೆ ಈ ತಲೆತಿರುಕಿಗೆ ! (ವಿಕಟನಾಗಿ ನಗುವಳು. ಶಾಲಿನಿ ಆತ್ತಣಿಂದ ಬರುವಳು).

ಶಾಲಿನಿ: ಸಖಿ, ನಿನ್ನ ಮಗುಡ ಹರಿಯುತೇ ? ಬಹು ಹರ್ಷದಿಂದ ನಗುತ್ತಿದ್ದೆಯಲ್ಲವೇ ? ನಿನ್ನ ವಯೆಯಿಂದಾಗಿ ಅಸುರರಾಜ್ಯಕ್ಕೊದಗಿದ ವಿಪತ್ತು ಪೂರವಾಯಿತು.

ದೇವ: (ಕೀವಿಯಿಂದ) ಶಾಲಿನಿ, ಈ ದೇವಯಾನಿ ಒಲಿದರೆ ನಾರಿ, ಮುನಿದರೆ ಮಾರಿ ! ಎಲ್ಲಿಗೆ ಹೋದಳು ಆ ಗರ್ವಿಷ್ಠೆ ? ನನ್ನನ್ನು ಹೀಗಳೆದು ತಾನು ರಾಜಪುತ್ರಿ, ರಾಜಮಹಿಷಿಯಾಗುವವಳು– ಎಂದು ಹೆಮ್ಮೆಯಿಂದ ಬೀಗಿದಳಲ್ಲವೇ ? ಕಚನ ಸುಡುನೆನಪನ್ನು ಕೆದಕಿ, ತನ್ನ ಪ್ರಣಯ ಎಂದೂ ಭಗ್ನವಾಗದೆಂದು ಜಂಬ ಮಾಡಿದ್ದಳಲ್ಲವೇ ? ಈಗೇನೆನ್ನುವಳು ಆ ಹತಭಾಗ್ಯೆ ? ದಾಸಿಯಾದವಳಿಗೆ ಪ್ರಣಯಕ್ಕೆ ಹಕ್ಕೇ ಇಲ್ಲವಲ್ಲಾ. ಅಹಹಾ ! ಸರಿಯಾದ ಶಿಕ್ಷೆಯಾಯಿತು ಅವಳಿಗೆ !

ಶಾಲಿನಿ:(ಕಳವಳದಿಂದ)ದೇವಯಾನಿ, ಈ ದಿನ ನಿನ್ನ ರೀತಿಯೇ ವಿಚಿತ್ರವಾಗಿದೆ. ಈ ಕರ್ಕಶ ನಗೆ, ಈ ಸಂತಾಪ– ಎಲ್ಲವೂ ಹೊಸದು.

ದೇವ: ಅಹುದು ಸಖಿ, ಕಾರಣವಿದೆ. ನಿನ್ನೊಡನೆ ಗುಟ್ಟೇಕೆ ? ನನ್ನನ್ನು ಬಾವಿಯಿಂದೆತ್ತಿ ಕಾಪಾಡಿದ ಮಹಾತ್ಮ ಯಾರೆಂದು ತಿಳಿದಿರುವೆ ?– ಯಯಾತಿ ಮಹಾರಾಜನೇ !

ಶಾಲಿನಿ: ಹೌದೇ ? ಬಹಳ ಸಂತೋಷ.

ದೇವ: ಶರ್ಮಿಷ್ಠೆ ಅವನ ರಾಣಿಯಾಗುವ ಕನಸು ಕಂಡಿದ್ದಳಲ್ಲನೇ ? ಸಖಿ, ನನ್ನ ಕೈಹಿಡಿದೆತ್ತಿದ ಅವನನ್ನೇ ವರಿಸಿ ನಾನು ಮಹಾರಾಣಿಯಾಗುವೆ. (ವಿಕಟವಾಗಿ ನಕ್ಕು) ಪ್ರತಿಕ್ಷಣವೂ ಮತ್ಸರದಿಂದ ಕುದಿಕುದಿದು ಆ ಗರ್ವಿಷ್ಠೆ ನರಳುವುದನ್ನು ನೋಡಿ ನಲಿಯುವೆ. (ಉದ್ರಿಕ್ತಳಾಗಿ) ಕಚನನ್ನು ಆಗಲಿಸಿ ನನ್ನ ಪ್ರಣಯ ಭಗ್ನಮಾಡಿದ ದ್ರೋಹಕ್ಕೆ ಆ ಪಾಪಿಗೆ ತಕ್ಕ ಶಿಕ್ಷೆ ವಿಧಿಸುವೆ !

ಶಾಲಿನಿ: (ಆರ್ತಳಾಗಿ) ಸಖಿ, ಕೈ ಮುಗಿದು ಬೇಡುವೆ, ಈ ದ್ವೇಷವನ್ನು ತೊರೆ! ನೀ ಮಹಾರಾಜ್ಞಿಯಾದರೆ ಬಹಳ ಸಂತೋಷವೇ, ಆದರೆ ಯಾವ ಅಸುರೀಸ್ವಭಾವ ಶರ್ಮಿಷ್ಠೆಯ ಪತನಕ್ಕೆ ಕಾರಣವಾಯಿತೋ ಆ ಸ್ವಭಾವ ನಿನಗಂಟಿರುವಂತಿದೆ. ಬೇಡ ಸಖಿ, ಇದು ತರವಲ್ಲ.

ದೇವ: ಸಖಿ, ದ್ವೇಷಸಾಧನೆಯಲ್ಲಿ, ಪ್ರತೀಕಾರದಲ್ಲಿ ಯಾವುದೋ ಆನಂದನಿದೆ. ಅದನ್ನು ಹೊಸದಾಗಿ ಅನುಭವಿಸುತ್ತಿದ್ದೇನೆ. ಶರ್ಮಿಷ್ಠೆಯ ಮತ್ತತೆಯನ್ನು ಈಗ ಭೂಮಿಸಬಲ್ಲೆ.

ಶಾಲಿನಿ: ಅದ್ದರಿಂದಲೇ ಅವಳನ್ನು ಕ್ಷಮಿಸಿ, ಅವಳ ಮೇಲಿನ ದ್ವೇಷವನ್ನು ದೂರ ಮಾಡೆಂದು ಬೇಡುತ್ತಿರುವೆ. ಹೊಸ ಮದ್ಯದಂತೆ ಈ ದ್ವೇಷವೂ ತಲೆಗೆ ಅಮಲೇರಿಸುತ್ತದೆ. ಅಮಲಿನಲ್ಲಿ ಮಾಡಿದ ಕಾರ್ಯಕ್ಕೆ ಅನಂತರ ಪಶ್ಚಾತ್ತಾಪ ಪಡಬೇಕಾಗುತ್ತದೆ.

ದೇವ: ಅವಳ ಸ್ವಯಂವರವಾಗಲಿವ್ವ ಮುಹೂರ್ತದಲ್ಲೆ ನನ್ನೇ ವಿವಾಹವೂ ನೆರವೇರಬೇಕು. ನನ್ನನ್ನೇ ಮಗಳೆಂದು ಭಾವಿಸುವುದಾಗಿ ರಾಜದಂಪತಿಗಳು ಪ್ರತಿಜ್ಞೆ ಮಾಡಿರುವರಲ್ಲವೇ ? ಪರೀಕ್ಷೆಯಾಗಿ ಹೋಗಲಿ–ಶರ್ಮಿಷ್ಠೆಗೆ ನೂಡುತ್ತಿದ್ದಂತೆ ನಿರ್ಮಲಚಿತ್ತದಿಂದ ವೈಭವದಿಂದ ಲಗ್ನಮಾಡುವರೋ ಅಥವಾ ಶರ್ಮಿಷ್ಠೆಗಾಗಿ ಮರುಗುತ್ತ ನನ್ನನ್ನು ಅಸಡ್ಡೆ ಮಾಡುವರೋ—ಎಂಬುದು.

ಶಾಲಿನಿ: ಕ್ಷತ್ರಿಯಸ್ವಭಾವ ನಿನಗೆ ತಿಳಿಯದೇ ಸಖಿ ? ಕತ್ತಿಯಲಗಿನ ಮೇಲೆ ನಡೆದಂತೆ ಅವರ ಜೀವನ ! ಈ ಕ್ಷಣ ಇಂದ್ರಭೋಗ, ಮರುಕ್ಷಣ ಶರಶಯ್ಯೆಯಾಗಬಹುದು. ಪಿತ, ಪತಿ, ಸುತ, ಸೋದರರನ್ನು ನಸುನಗುತ್ತಲೇ ರಣನಾರಿಯೆಡೆಗೆ ಕಳುಹಿಸುತ್ತಾರೆ. ರಾಜದಂಪತಿಗಳು ರಾಜ್ಯದ ಕ್ಷೇಮಕ್ಕಾಗಿ ಎಲ್ಲವನ್ನೂ ತ್ಯಾಗಮಾಡಲು ಸಿದ್ಧರಾಗಿದ್ದಾರೆ. ಶರ್ಮಿಷ್ಠೆಯನ್ನು ಮನಃಪೂರ್ತಿ ತ್ಯಾಗ ಮಾಡುವುದು ಅವರಿಗೆ ಅಸಾಧ್ಯವಲ್ಲ.

ದೇವ: (ವಿಕಟವಾಗಿ ನಕ್ಕು) ರಾಜಧರ್ಮದ ಮರ್ಮವನ್ನೆಲ್ಲ ಅರಿತಿರುವೆನೆಂದು ಬೀಗುತ್ತಿದ್ದ ಆ ಗರ್ವಿಷ್ಠೆಯು ಸಕಲ ತ್ಯಾಗಗಳಿಗೂ ಸಿದ್ಧಳಾಗಿರುವಳಲ್ಲನೇ ?

(ಅತ್ತಣಿಂದ ಶುಕ್ರಾಚಾರ್ಯರು ಪ್ರವೇಶಿಸುವರು. ಜರಿಯ ಸಂಜೆಯುಟ್ಟು ಉತ್ತರೀಯವನ್ನು ಧರಿಸಿದ್ದಾರೆ. ಕೊರಳಲ್ಲಿ ಯಜ್ಞೋಪವೀತ. ಸ್ವಲ್ಪ ಸ್ಥೂಲವಾದರೂ ತೇಜಸ್ವೀ ವ್ಯಕ್ತಿತ್ವ. ಶಾಲಿನಿ ಅವರಿಗೆ ಗೌರವದಿಂದ ತಲೆಬಾಗಿ ಸರಿದುಹೋಗುವಳು.)

ಶುಕ್ರ: (ವಾತ್ಸಲ್ಯದಿಂದ) ಮಗಳೇ, ನೀನು ಶಾಂತಳಾದೆಯಾ? ನಿನ್ನ ದುಗುಡ ತೊಲಗಿತೇನಮ್ಮಾ ?

ದೇವ: (ತಲೆಬಾಗಿ) ತಾತ, ನಿಮ್ಮ ಆಶೀರ್ವಾದ ಸದಾ ನನಗೆ ಕಾವಲಾಗಿರುವಾಗ, ನನಗೇಕೆ ದುಗುಡ ? ನನ್ನ ಅಪಮಾನದ ಉರಿ ಶಾಂತವಾಯಿತು. ಆದರೂ ನನ್ನ ಎದೆಯಲ್ಲೊಂದು ಕೊರಗಿದೆ; ನಿಮ್ಮಿಂದ ಅದು ಪೂರ್ಣವಾಗಬೇಕು. ಪಿತೃದೇವಾ, ನೀವು ನನಗೊಂದು ವರವನ್ನು ಕರುಣಿಸಬೇಕು.

ಶುಕ್ರ: (ಅವಳ ಮುಡಿನೇವರಿಸಿ) ಹೇಳು, ಮಗಳೆ! ನಿನಗಾಗಿ ಏನು ಮಾಡಲಿಕ್ಕೂ ನಾನು ಸಿದ್ಧನಿದ್ದೇನೆ. ನನ್ನ ಬಲ, ತೇಜ ತಪಸ್ಸು ಸರ್ವವೂ ನಿನ್ನದೇ! ಏನು ಕೇಳು, ನನ್ನ ಮುದ್ದುಕಂದ! ನೀನು ಮೊದಲಿನಂತೆ ಉಲ್ಲಾಸದಿಂದ ಉಲಿಯುವಂತಾಗಲು ಏನು ಬೇಕಾದರೂ ಕೊಡುತ್ತೇನೆ ಕೇಳು, ನಿನ್ನ ಅಪೇಕ್ಷೆಯೇ ನನಗೆ ಆಜ್ಞೆ.

ದೇವ: (ಲಜ್ಜೆಯಿಂದ) ಪಿತೃದೇವ, ನಿನ್ನೆ ಆ ಮೃತ್ಯುಕೂಪದಿಂದ ನನ್ನನ್ನು ಕೈಹಿಡಿದು ಮೇಲೆತ್ತಿ ಕಾಪಾಡಿದಾತ ನನ್ನ ಪ್ರಾಣಪತಿ. ಆತನನ್ನು ನೀವು ನನಗೆ ವರವಾಗಿ ಕರುಣಿಸಬೇಕು.

ಶುಕ್ರ: ಕುಲ–ವಯೋರೂಪುಗಳಲ್ಲಿ ನಿನಗನುರೂಪನಾದರೆ ಆಗಲಿ! ವಯೋರೂಪುಗಳಲ್ಲಿ ನಿನಗೊಪ್ಪಿಗೆಯಾಯಿತೇ? ಕುಲವಾವುದು?

ದೇವ: ನಿಮ್ಮನ್ನು ಕಾಣುವಂತೆ ನಾನು ಒತ್ತಾಯ ಮಾಡಿದರೂ ಅವನು ಹೆದರಿದ. ನಿಮ್ಮ ಅಪ್ಪಣೆಯಿಲ್ಲದೆ ಕೈಹಿಡಿದೆತ್ತಿ ಅಪಚಾರ ಮಾಡಿರುವ ಕಾರಣ, ನೀವು ಕೋಪಿಸಬಹುದೆಂದು ಹೆದರಿದ.

ಶುಕ್ರ: (ನಕ್ಕು)ಭದ್ರೇ, ಭೃಗುವಂಶಜನಾದ ನನಗೆ ಕೀಳ್ಪೆರ್ಕೋಪನೆಂಬುದು ಪ್ರತೀತಿಯಾದರೂ, ಯುಕ್ತಾಯುಕ್ತತೆಯನ್ನರಿಯದವರಲ್ಲ ನಾವು. ಆಪತ್ಕಾಲದಲ್ಲಿ ಕೈಹಿಡಿದೆತ್ತಿದ್ದು ಅಪಚಾರವಾಗಲಾರದು. ಅವನ ಮೇಲೇಕೆ ಕೋಪಿಸಿಕೊಳ್ಳಲಿ ? ಅವನಿಗೆ ಯೋಗ್ಯ ಉಪಚಾರ ಮಾಡಿ, ವರ ಕೊಡುತ್ತಿದ್ದೆ. ಅವನಾರು ಹೇಳು !

ದೇವ: ಆತ ಮತ್ತಾರೂ ಅಲ್ಲ; ಚಂದ್ರವಂಶಜ ಯಯಾತಿ ಮಹಾರಾಜ.

[ಶುಕ್ರರ ಮುಖ ಕಳೆಗುಂದುವುದು]

ಶುಕ್ರ: ಮಗಳೇ, ರೂಪ-ಗುಣ ಶೀಲಗಳಲ್ಲಿ ಅವನು ನಿನಗನುರೂಪನಾದರೂ ಅವನು ಕ್ಷತ್ರಿಯಕುಲಜ. ಧರ್ಮಸೂಕ್ಷ್ಮ ತಿಳಿದ ನೀನೇ ಯೋಚಿಸು. ಉತ್ತಮವರ್ಣದ ಕನ್ಯೆ, ತನಗಿಂತ ಕೀಳುವರ್ಣದ ಪುರುಷನನ್ನು ವರಿಸುವುದು ಸಲ್ಲದ್ದು. ಧರ್ಮಸಮ್ಮತವಲ್ಲದ ಈ ಕಾರ್ಯಕ್ಕೆ ಹೇಗೆ ಸಮ್ಮತಿ ಕೊಡಲಮ್ಮಾ ?

ದೇವ: ತಾತ, ನನ್ನ ನಿರ್ಧಾರಕ್ಕೆ ದೇವಸಮ್ಮತಿಯಿದೆ. ದೈವಕೃಪೆಯೇ ಯಯಾತಿ ಮಹಾರಾಜನ ರೂಪದಲ್ಲಿ ಬಂದು ನನ್ನ ಪಾಣಿಗ್ರಹಣ ಮಾಡಿದಂತಾಗಿದೆ. ಸಾಮಾನ್ಯ ನಿಯಮಕ್ಕೆ ನನ್ನ ವಿವಾಹ ಹೊರತಾಗಬೇಕಾದುದು ಅನಿವಾರ್ಯ. ಯಾವ ಬ್ರಾಹ್ಮಣ ಕುಮಾರನೂ ನನ್ನನ್ನು ವರಿಸದಿರಲೆಂದು ಕಚ ಅಭಿಶಾಪವಿತ್ತಿದ್ದಾನೆ. ನನ್ನ ವಿವಾಹ ಅನ್ಯ ವರ್ಣದವನೊಂದಿಗೆ ನಡೆಯಬೇಕು. ಯಯಾತಿ ಮಹಾರಾಜನಿಗಿಂತ ಉತ್ತಮ ವರ ನನಗೆಲ್ಲಿ ದೊರೆತಾನು? ಮನಸಾ ನಾನವನನ್ನು ವರಿಸಿದ್ದೇನೆ. ಅವನ ಹೊರತು ಉಳಿದವರೆಲ್ಲಾ ನಿಮಗೆ ಸಮಾನರು!

ಶುಕ್ರ: ಏನು, ಕಚ ನಿನಗೆ ಅಭಿಶಾಪವಿತ್ತನೇ? ಕಾರಣ?

ದೇವ: (ಮುಂಡಿಯೂರಿ ಕುಳಿತು) ನನ್ನನ್ನು ಕ್ಷಮಿಸಿ ಪಿತೃದೇವ! ಕಚನ ಮೇಲಿದ್ದ ನನ್ನ ಅನುರಾಗದಾಳವನ್ನು ನಾನೇ ತಿಳಿದಿರಲಿಲ್ಲ. ಬಾಲಿಕಾಭಾವದಿಂದ ಅದು ಕೇವಲ ಸ್ನೇಹವೆಂದುಕೊಂಡಿದ್ದೆ. ಕಚ ಹೊರಡುವ ವೇಳೆಯಲ್ಲಿ ನನ್ನೊಲವನ್ನು ನಿವೇದಿಸಿದೆ. ಅವನೊಪ್ಪದೆ ಧಿಕ್ಕರಿಸಿ ಕಾಮುಕಳೆಂದು ನನ್ನನ್ನು ಹೇಗಳಿದ. ನನ್ನ ಪ್ರೇಮವನ್ನು ಹೀಗೆ ತಿರಸ್ಕರಿಸಿದವನಲ್ಲಾ ಎಂಬ ಸಿಟ್ಟಿನಿಂದ, ಸಂಜೀವಿನಿ ವಿದ್ಯೆ ನಿನಗೆ ಫಲಿಸದಿರಲೆಂದೆ. ಅವನು ನನಗೆ ಪ್ರತಿಶಾಪವಿತ್ತ.

ಶುಕ್ರ: ಮಗಳೇ, ತಪ್ಪುಮಾಡಿದಿ. ಆಗಲೇ ಕಚನೊಲವನ್ನು ಬಯಸುತ್ತಿರುವೆನೆಂದು ಏಕೆ ಹೇಳಲಿಲ್ಲ?

ದೇವ: ಅಪರಾಧವಾಯಿತು, ಕ್ಷಮಿಸಿ ತಂದೆ. ಬ್ರಹ್ಮಚರ್ಚೆಯಲ್ಲಿದ್ದ ವಿದ್ಯಾರ್ಥಿ ಕಚನ ಮನಸ್ಸನ್ನು ಚಂಚಲಗೊಳಿಸಬಾರದೆಂದು, ನಾನೆಂದೂ ಅವನೊಡನೆ ಒಲುಮೆಯ ವಿಷಯವನ್ನೆತ್ತಿರಲಿಲ್ಲ. ಅವನು ಹೊರಟುನಿಂತಾಗ ಅವನ ಮನವನ್ನರಿತು ನಿಮ್ಮೊಡನೆ ಹೇಳಬೇಕೆಂದಿದ್ದೆ. ಮನವಿಲ್ಲದವನನ್ನು ಬಲುಮೆಯಿಂದ ವಿವಾಹವಾಗಿ ನಿನು ಪ್ರಯೋಜನ?

ಶುಕ್ರ: ಯಯಾತಿಗೆ ನಿನ್ನ ಮೇಲೆ ಮನಸ್ಸಾಗಿದೆಯೇ? ಬ್ರಾಹ್ಮಣಕನ್ಯೆಯನ್ನು ವಿವಾಹವಾಗಲು ಒಪ್ಪುವನೇ?

ದೇವ: ನಿಮ್ಮ ಅನುಮತಿ ದೊರೆತರೆ ಒಪ್ಪುವರು. ಮನಸಿದ್ದರೂ ಬ್ರಾಹ್ಮಣ ಕನ್ಯೆಯಿಂದೇ ಒಲುಕುತ್ತಿದ್ದರು.

ಶುಕ್ರ: ಆಗಲಿ, ಮಗಳೇ. ನಿನ್ನ ಸುಖವೇ ನನ್ನ ಗುರಿ. ಅವನಿಗೆ ಹೇಳಿಕಳುಹಿಸುವೆ.

ದೇವ: ಪಿತೃದೇವತೆ, ನಿಮ್ಮಂತಹ ತಂದೆ ಇರುವಾಗ ನನಗಾವ ಕೊರಗು? ಹೂಗಳನ್ನು ಬಿಡಿಸಿ, ಹಾರ ಕಟ್ಟಬೇಕು, ಹೋಗಲೇ? (ಹೋಗುವಳು.)

ಶುಕ್ರ: (ವ್ಯಸನದಿಂದ ಅತ್ತಿತ್ತ ಸುತ್ತುತ್ತಾ) ಅಹಾ, ಹೆಣ್ಣುಮಕ್ಕಳನ್ನು ಹೆತ್ತವರ ಪಾಡೇ ಇಷ್ಟಲ್ಲವೇ? ನನ್ನ ಕಣ್ಮುಂದಿನ ಕಂದಮ್ಮ ಈ ದೇವಯಾನಿ! ಇನ್ನೂ ಮುಗ್ಧ ಬಾಲಿಕೆಯೆಂದೇ ನನ ಭಾವನೆಯಿತ್ತು. ಅವಳು ಪ್ರಬುದ್ಧೆಯಾಗಿ ಜೊತೆಗಾರನಿಗಾಗಿ ಹಂಬಲಿಸುತ್ತಿರಬಹುದೆಂಬುದು ನನಗೆ ತೋರದೆ ಹೋಯಿತಲ್ಲಾ! ಅವಳೊಲವು ಕಚನತ್ತ ಹರಿದಿದ್ದಿತಂತೆ. ನನಗದರ ಅರಿವೇ ಆಗಲಿಲ್ಲ! ಈಗ ಯಯಾತಿ ಮಹಾರಾಜನನ್ನು ಮನಸಾವರಿಸಿದ್ದಾಳೆ. ಸಾಮಾನ್ಯ ನಿಯಮಕ್ಕೆ ಹೊರತಾದರೂ ಈ ವಿವಾಹವನ್ನು ನನ್ನ ತಪೋಬಲದಿಂದ ದೇವಸಮ್ಮತನಾಗಿ ಮಾಡುವೆ. ಯಯಾತಿ ಬೇರೆಲ್ಲ ರೀತಿಯಲ್ಲೂ ಯೋಗ್ಯ ವರ. ಆದರೂ ದೇವಯಾನಿಯನ್ನು ಕ್ಷಣಕಾಣದಿದ್ದರೆ ಕಳವಳಿಸುತ್ತಿದ್ದ ನಾನು, ಅವಳ ಅಗಲಿಕೆಯನ್ನು ಹೇಗೆ ಸಹಿಸಲಿ? ಹಾಯ್ ಮಗು ದೇವಯಾನಿ, ನಿನ್ನನ್ನು ಕಳುಹಬೇಕೆಂಬ ಯೋಚನೆಯೇ ಇಷ್ಟು ಅಸಹನೀಯ ವೇದನೆಯನ್ನು ಕೊಡುತ್ತಿರುವುದಲ್ಲಾ. ಕರುಳಲ್ಲಿ ಕೆಂಡ ಕಲಸಿದಂತೆ ಸಂಕಟವಾಗುವುದಲ್ಲಾ? ಈ ಸಂಕಟದ ಮಧ್ಯೆಯೂ ಸಂತಸದ ವಿಷಯವೆಂದರೆ ಯೋಗ್ಯವರನನ್ನು ಆಯ್ಕೆಮಾಡಿರುವೆಯೆಂಬುದೇ. ಮತ್ತೆ ನಿನ್ನ ಸುಖ ಸಂತೋಷಕ್ಕಾಗಿ ಆ ನನ್ನ ಸಂಕಟವನ್ನು ಅಡಗಿಸಿಕೊಳ್ಳುವೆ. ನಿನ್ನ ಕಲ್ಯಾಣಕ್ಕಾಗಿ ಸಿದ್ಧತೆ ಮಾಡುವೆ.

[ತೆರೆ ಬೀಳುವುದು]

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಗಡಿಯಾರ, ಚಾಳೀಸು, ರೇಡಿಯೋ, ಗ್ರಾಮೋಫೋನ್

ರಿಪೇರಿ ಮಾಡುವವರು; ಮಾರಾಟ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!!

ಧಾರವಾಡದಲ್ಲಿ

ಹಲವ್ರ ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು,

ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಿಗಿ**

ಸುಭಾಸ ರೋಡ್, ಧಾರವಾಡ

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ನಂಬಿದರೆ ನಂಬಿ, ಬಿಟ್ಟರೆ ಬಿಡಿ' ಕಥೆಯ ವಿಮರ್ಶೆಗಳು ೬ ಜನರಿಂದ ಬಂದಿವೆ. ಇನ್ನೊಂದು ಕತೆ 'ಪ್ರತೀಕ್ಷೆ' ಎಂಬುದನ್ನು ಕುರಿತ ವಿಮರ್ಶೆ ಒಬ್ಬರಿಂದ ಮಾತ್ರ ಬಂದಿದೆ. 'ಪ್ರತೀಕ್ಷೆ'ಯಂತಹ ನವ್ಯ ಕಥೆಯ ತಂತ್ರದ ಪರಿಚಯ ನಮ್ಮ ಜನರಿಗೆ ಇನ್ನೂ ಸಾಕಷ್ಟು ಆಗಿಲ್ಲವೆಂಬುದು ನಿಜ. ಆದರೆ ಕಾಲಪ್ರವಾಹ ಇನ್ನೂ ಎಂತೆಂತಹ ತಂತ್ರವೈಚಿತ್ರ್ಯಗಳನ್ನು [illegible] ತಂದು ಇರಿಸುವುದೋ ಏನೊ ! ಎಲ್ಲದರ ಹುರುಳು-ತಿರುಳುಗಳನ್ನೂ ಅರಿತುಕೊಳ್ಳಲು ನಮ್ಮ ತರುಣವಾಚಕಲೋಕ ಸ್ಥಿರವಾಗಿರಬೇಕು. ಯಾವ ತಂತ್ರಕ್ಕೂ ಅಸಂಬದ್ಧವಾಗಿ ಉಳಿಯಬಾರದು.

'ನಂಬಿದರೆ ನಂಬಿ, ಬಿಟ್ಟರೆ ಬಿಡಿ' ಕಥೆಯ ವಿಮರ್ಶಕರು

೧ ಶ್ರೀ. ಕೆ. ವಿಶ್ವನಾಥ, ಕೋಯಮುತ್ತೂರು. ೨ ಶ್ರೀ. ಕಳೆಯತ್ತೋಡಿ ನರಸಿಂಹಭಟ್ಟ, ಬಿ. ಇ. ಎಂ. ಸ್ಕೂಲ್, ಕಾಸರಗೋಡು. ೩ ಶ್ರೀ. ರಾಘವೇಂದ್ರ ಪಾಂಡುರಂಗಿ, ಧಾರವಾಡ. ೪ ಶ್ರೀ. ಎನ್. ಎನ್. ನರಗುಂದ ಬಿ. ಎ. (ಆನರ್ಸ್), ಬಾಗಿಲುಕೋಟೆ. ೫ ಶ್ರೀ. ಬಿ. ಏಕನಾಥರಾವ್, ಬೇಕ್‌ರೋಡ, ಕಾಸರಗೋಡು. ೬ ಶ್ರೀ. ಬಾಲಕೃಷ್ಣ ದೇ. ಹೆಗಡೆ, ದೊಡ್ಮನೆ, ಕರ್ನಾಟಕ ಕಾಲೇಜ್, ಧಾರವಾಡ.

ಪ್ರತಿಫಲದಂತೆ ಎಲ್ಲ ವಿಮರ್ಶೆಗಳನ್ನು ಸಂಪಾದಕ ಸಮಿತಿಯವರೆ, ನೋಡಿ ತಮ್ಮ ನಿರ್ಣಯವನ್ನು ಹೀಗೆ ಕೊಟ್ಟಿದ್ದಾರೆ :

'ನಂಬಿದರೆ ನಂಬಿ, ಬಿಟ್ಟರೆ ಬಿಡಿ' ಕತೆಯನ್ನು ಕುರಿತು ಬಂದ ವಿಮರ್ಶಾಲೇಖನಗಳಲ್ಲಿ **ಶ್ರೀ. ಕಳೆಯತ್ತೋಡಿ ನರಸಿಂಹ ಭಟ್ಟರದು** ಉತ್ತಮವಾಗಿದೆ. ಶ್ರೀ. ಬಾಲಕೃಷ್ಣ ದೇ. ಹೆಗಡೆ, ಶ್ರೀ. ರಾಘವೇಂದ್ರ ಪಾಂಡುರಂಗಿ ಮತ್ತು ಶ್ರೀ. ಬಿ. ಏಕನಾಥರಾವ್ ಅವರ ವಿಮರ್ಶೆಗಳು ಚೆನ್ನಾಗಿವೆ. ನಿಕ್ಕುವು ಸಾಮಾನ್ಯವಾಗಿವೆ.

'ಪ್ರತೀಕ್ಷೆ' ಕಥೆಯನ್ನು ಕುರಿತು **ಶ್ರೀ. ಬಿ. ಆರ್. ನಾಯುಲಿ** ಅವರೊಬ್ಬರಿಂದಲೇ ವಿಮರ್ಶೆ ಬಂದಿದ್ದು ಅತ್ಯುತ್ತಮವಾಗಿದೆ.

ಮುಂದಿನ ತಿಂಗಳ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾಗಿರುವ **'ಗಿರಿಕಾ'** ಎಂಬ ಅನುವಾದಿತ ಕಥೆಯನ್ನಾಗಲಿ, 'ಸೋಲೋ ಗೆಲವೋ ?' ಎಂಬ ನವ್ಯಕಥೆಯನ್ನಾಗಲಿ ವಿಮರ್ಶಿಸಿ ಲೇಖನಗಳನ್ನು ಕಳುಹಬೇಕು.

—ಸಂಪಾದಕರು

'ನಂಬಿದರೆ ನಂಬಿ ಬಿಟ್ಟರೆ ಬಿಡಿ'

(ಸಣ್ಣಕತೆಯ ವಿಮರ್ಶೆ)

ಕಳಿಯತ್ತೋಡಿ ನರಸಿಂಹಭಟ್ಟ, ಬಿ. ಇ. ಎಂ. ಹೈಸ್ಕೂಲ್

ಕಾಸರಗೋಡು

ಮನುಷ್ಯನ ಸಂತೋಷದ ಎಲ್ಲೆಮೀರಿದಾಗ, ಥಕ್ಕನೆ ಒಂದು ಸುದ್ದಿಯನ್ನು ಕೇಳಿದಾಗ ಇಲ್ಲವೆ ಆತ್ಯಾಶ್ಚರ್ಯ ಪರವಶನಾದಾಗ ಅವನ ಹೃದಯದ ಬಡಿತ ಅಧಿಕವಾಗುವುದು. ಕೆಲವು ವೇಳೆ ಹೃದಯ ಸ್ಪಂದನವೂ ನಿಂತುಹೋಗುತ್ತದೆ. ಇಂತಹ ಪರಿಣಾಮಕಾರಿಯಾದ ಅಕಸ್ಮಿಕ ಘಟನೆಯೊಂದು ಈ ಕತೆಯಲ್ಲಿ ಕಾಣುವುದು.

ಇದೊಂದು ಸಮಸ್ಯಾತ್ಮಕ ಕತೆ—ಮನೋಧರ್ಮವನ್ನರುಹುವ ಸುರುಚಿರಕತೆ. ಕತೆಯ ಆದಿಯಲ್ಲಿಯೆ ವೈಚಿತ್ರ್ಯ-ಆಶ್ಚರ್ಯಗಳ ಬೀಜ ಬಿತ್ತಲ್ಪಟ್ಟು, ಕೊನೆಗದು ಹೂಬಿಟ್ಟು, ಫಲವೀಯುವವನ್ನೆ ವಾಚಕರಲ್ಲಿ ಕಾಣುವರು. ಲೇಖಕರು ಒಂದು ಸನ್ನಿವೇಶವನ್ನು ಮುಖಜ್ಜಿಯವರಿಂದ ಕೇಳಿ ತಿಳಿದು, ಅದನ್ನು ವಾಚಕರಿಗೆ ಹೇಳುವ ರೀತಿಯಲ್ಲಿ ಈ ಕತೆಯನ್ನು ರಸಿಕವ್ಯಂವಕ್ಕೆತ್ತಿದ್ದಾರೆ.

ಕಥಾನಾಯಕನಾಗಿ ವಾಚಕರಲ್ಲಿ ಆಶ್ಚರ್ಯವನ್ನುಂಟುಮಾಡಿದ ವ್ಯಕ್ತಿಯೇ ಅಕಿಂಚನನಾದ ಬೀರು.ಮೋನು ತದ್ಯಾರ್ಯ. ಜೋಂಕೆಂ—ಕಥೆಯ ಉಪನಾಯಕ—ಅತನ ಮಗ. ಬೀರುವೇನೋ ಬಡವನಾಗಿ ಕಲ್ಪಿತನಿರುವನು. ಆದರೆ. ಕೆಲವು ಆಧುನಿಕ ಲೇಖಕರಂತೆ—ದೀನ ಬಂಧುಗಳೆಂದು ಮೆರೆಸುವರ ಮನಪೆಚ್ಚಿಸಲು ಹಾಗೂ ಸ್ವಶ್ಲೇಷಕ್ಕಾಗಿ—ಲೇಖಕರು ಬಡವನ ವಿಷಯವನ್ನೆತ್ತಿಲ್ಲ- ಬದಲಾಗಿ ಒಂದು ಸ್ವಾರಸ್ಯನಿರೂಪಣಾರ್ಥವಾಗಿ.

ದೀನನಾದ ಬೀರುವು ದಿನಾಲೂ ಸಮುದ್ರದ ಬದಿಯಲ್ಲಿ ಗಾಳಕಾಕಿ ಮೀನುಹಿಡಿಯುತ್ತಿದ್ದನು. ಇಲ್ಲಿ ಲೇಖಕರ—ಬಡವರಿಗೆ ದೋಣಿ. ಬಲೆಯುವುದಿಲ್ಲವಾದ್ದರಿಂದ ಇವನಿಗೆ ದೋಣಿಯಿಲ್ಲವೆಂಬ—ಮಾತು ಔಸ್ತ್ಯವೇ ಆಗಿದೆ. ಬೀರು 'ಕಾಂಗ ಜೊ' (ಎಡಿ)ಗಳನ್ನೂ ಹಿಡಿಯುತ್ತಿದ್ದನು. ಹಿಡಿದ ಮೀನನ್ನು ಬಾಜಾರಿಗೊಯ್ದು ಮಾರುತ್ತಿದ್ದನು.

ಅಂದು ಹಬ್ಬದ ಮುನ್ನಾದಿನ. ಬೀರುವಿಗೂ ಹಬ್ಬಕ್ಕೆ ಗಮ್ಮತ್ತು ಮಾಡಬೇಕೆಂಬ ಲಾಲಸೆ. ಇನ್ನೊಂದು ಪಾವು ಸಿಕ್ಕಿದರೆ ಅವನಿಗೆ ಐದು ಸೇರಾಗುತ್ತಿತ್ತು. ಅದಕ್ಕಾಗಿ ಪ್ರಯತ್ನಿಸುತ್ತಿದ್ದ. ಆಗ ಒಂದು ಬಲೆಯಲ್ಲಿ ಒಂದು ಮೂಟೆಯನ್ನು ಕಂಡು ಅದನ್ನು ಹಿಡಿಯಹೋದ. ಅದು ಒಳಕ್ಕೆ ಹೋದರೂ ಒಳಕ್ಕೆ ಕೈಹಾಕಿದ—ಆಶೆಯಿಂದ. ಆಗ ಸ್ವಾಣೆ ಅವನ ಕೈಯನ್ನು ಕಚ್ಚಿತು. ಆದರೂ ಎಡಿಯ ಕಚ್ಚುವಿಕೆಗಿಂತ ಸುಖವಿತ್ತು. ಅನಂತರ ಬಿಲವನ್ನು ಅಗೆದೇ ಅದನ್ನು ಹಿಡಿಯಲೆಂದು, ಮನೆಗೆಹೋದನು. ಅಲ್ಲಿ ಮಗ ಜೋಂಕೆಂ ಅದನ್ನು ಹೆಣ ತರಲೆಂದೆಂದು, ಸಿಕ್ಕಿದ್ದಷ್ಟನ್ನು ಮಾರಲು ಬಜಾರಿಗೆ ಹೋದ.

ಜೋಂಕೆಂ ಹೋಗಿ ಅಗೆದು ನೋಡಲು ಅದು ಕಾಂಗ್‌ಜೋ ಆಗಿರಲಿಲ್ಲ. ಬದಲಾಗಿ ವಿಷಸರ್ಪ. ಈ ವಿಷಯ ಓದುವಾಗ ವಾಚಕರ ಮನ ಚಿಂತಾಗ್ರಸ್ತವಾಗುವುದು. ರೋಮಕೂಪಗಳಿಂದ ಸ್ವೇದವು ಸ್ರವಿಸುವುದು. ಭವಿಷ್ಯವಾರ್ತೆಯ ಕುತೂಹಲ ಎಲ್ಲರಲ್ಲೂ ಮೂಡುವುದು. ಜೋಂಕೆಂ ಮನೆಗೆ ಓಡಿ, ಈ ವಾರ್ತೆಯನ್ನು ತಾಯಿಗರುಹಲು, ಆಕೆ ಅದರಿಂದ ದಷ್ಟನಾದ ಭರ್ತೃವಿನ ಸ್ಥಿತಿಯನ್ನರಿಯಲೆಂದು ಮಗನನ್ನು ಬಜಾರಿಗೆ ಕಳುಹಿದಳು. ಅಂಗಡಿಯ ಸಮೀಪ ಕುಳಿತಿದ್ದ ತಂದೆಯನ್ನು ಸಮೀಪಿಸಿ ಜೋಂಕೆಂ—"ಆಪ್ಪಾ ನಿನ್ನನ್ನು ಕಚ್ಚಿದ್ದು ಘಟಸರ್ಪ. ನೀನೇನು ಇನ್ನೂ ಸುಖದಿಂದಿರುವೆ" ಎಂದನು. ಆಗ ಅವರೆಗೆ ಶಾಂತನಾಗಿದ್ದ ಬೀರುವಿನ ಸ್ಥಿತಿಯನ್ನು ಲೇಖಕರು ಚೆನ್ನಾಗಿ ವರ್ಣಿಸಿದ್ದಾರೆ. ಅತನ ರಕ್ತ ಬಿಸಿಯಾಗಿ, ತಲೆತಿರುಗಿ, ಕಚ್ಚಿದಾಗ ಹೋಗದ ಪ್ರಾಣಪಕ್ಷಿಯು ಒಮ್ಮೆಲೇ ಹಾರಿಹೋಯಿತು—ಇದಿಷ್ಟು ಕಥಾಸಾರ.

ಮೊದಲೆಂದಂತೆ ಇದೊಂದು ವಿಚಿತ್ರಕತೆ. ಕುತೂಹಲೋತ್ಪಾದಕ ಕತೆ. ಕತೆಯ ಆದಿಯಲ್ಲೇ ವೈಚಿತ್ರ್ಯ-ಕೌತೂಹಲ ಪ್ರವಾಹ ಪ್ರವಹಿಸುತ್ತಿದ್ದು, ಕೊನೆಯು ಆಶ್ಚರ್ಯದ ಸಿಂಧುವಿನಲ್ಲಿ ಒಂದಾಗಿದೆ. ಲೇಖಕರ ದಯೆ, ವೈಸ್ಯ ಬಡವರ ಪ್ರೀತಿಗಳು ಕಥಾವಸ್ತುವಿನ ರಂಗವರದಲ್ಲಿ ತಾಂಡವವಾಡುತ್ತಿವೆ. ಕಥೆಯ ಶಿರೋನಾಮವಾದರೊ, ನೃಪೇಂದ್ರನ ಮುಕುಟದಂತೆ ರಾರಾಜಿಸುತ್ತಿದೆ. ಕಥೆಗೆ ಅನ್ವರ್ಥವಾಗಿದೆ. ಎಂತಹವನ ಮನವನ್ನೂ ತನ್ನೆಡೆಗೆ ಸೆಳೆದುಬಿಡುವಂತಹ ಆಕರ್ಷಣೆಯನ್ನಾಂತು ಪರಿಶೋಭಿಸುತ್ತಲಿದೆ. ಅದನ್ನು ಓದುವಾಗಲೇ ವಾಚಕನು ಕತೆಯಲ್ಲೇನೋ ಸ್ವಾರಸ್ಯ ಇಲ್ಲವೆ ವೈಚಿತ್ರ್ಯವಿದೆಯೆಂದು ನೆನೆದು, ಕತೆಯನ್ನು ಕುತೂಹಲದಿಂದ ಓದುವನು. ಕೊನೆಗವನ ಅಭಿಪ್ರಾಯವು ಸರಿಯಾಗುವುದು.

ಬಡವನ ಚಿತ್ರಣವು ಹಿತವೂ, ಮಿತವೂ ಆಗಿ ಕಲ್ಪಿತವಾಗಿದೆ. ಎಂತಹ ದರಿದ್ರನೂ ಹಬ್ಬದ ದಿನ ಸಂತುಷ್ಟನಾಗಲು ಪ್ರಯತ್ನಿಸುತ್ತಾನೆ ಎಂಬುದಕ್ಕೆ ಈ ಕತೆಯೇ ನಿದರ್ಶನವು. ಕತೆಯಲ್ಲಿ ಬಡವನಾದ ಬೀರುವು ರೈಲಿನಲ್ಲಿ ಪೇಟೆಗೆ ಹೋಗುತ್ತಿದ್ದನು—ಎಂದು ಒಂದು ಮಾತಿದೆ. ಆದರೆ ಹೆಚ್ಚಾಗಿ ಅವನಂತಹ ಬಡವ್ಯಾಪಾರಿಗಳು ಕಾಲ್ನಡೆಯಿಂದಲೇ ಸಂಚರಿಸುವರು. ರೈಲಿಗೆ ಹಣ ಖರ್ಚು ಮಾಡಿದರೆ ಕುಟುಂಬವನ್ನೆಂತು ಸಾಕಿಯಾನು? ಆದ್ದರಿಂದ ಇದು ಕಿಂಚಿತ್ ಅಸಂಭವನಿಸಿದೆ. ಆದರೆ ಅದ್ಯತನ ಪರಿಸ್ಥಿತಿಯಲ್ಲಿ—ಆತ್ಮಸುಖಕ್ಕೆ ಕುಟುಂಬಸುಖಕ್ಕಿಂತಧಿಕ ಪ್ರಾಧಾನ್ಯವಿರುವ ನಿಮಿತ್ತ—ಇದು ಸರಿಯೆಂಬುದನ್ನು ವಾಚಕರು ಮರೆಯಬಾರದು.

ನವ್ಯಲೇಖಕರಂತೆ ಇವರೂ ಒಂದು ವ್ಯಕ್ತಿಯನ್ನು—ಟೊಪ್ಪಿ ಸಣ್ಣದು, ದೇಹ ದೊಡ್ಡದು, ಕಾಲು ಗಿಡ್ಡದ್ದು, ತಲೆ ಮುಂಗನ ಮೊಳೆಯಂತೆ ಎಂಬಿತ್ಯಾದಿ ವಿಷಯಗಳಿಂದ ವಿವರಿಸುವವರಿರುವರು. ಅವರಲ್ಲಿ ಅದು ಮಿತನಾಗಿದ್ದರಿಂದ ಹಿತವೇ ಸರಿ. ಕೆಲವೆಡೆ ವರ್ಣನೆಗಳು ಸ್ತುತ್ಯವೇ. ಉದಾ : ಬೀರುವಿನ ಸಾವಿನಕಾಲ.

ಕಥೆಯಿದು ನಿಜವಾಗಿಯೂ ಕುತೂಹಲವನ್ನು ಕೆರಳಿಸುವುದಿದ್ದು ಜನರಲ್ಲಿ ವಿಚಾರಕ್ರಾಂತಿಯನ್ನು ತಂದೊಡ್ಡುವುದು. ಓದಿ ಮುಗಿದ ಮೇಲೂ ವಾಚಕರು ಕೆಲಸಮಯದ ವರೆಗೆ ಕಥೆಯನ್ನೇ ಚಿಂತಿಸುವರು. ಇದೊಂದು ಸಮಸ್ಯಾತ್ಮಕ ಕಥೆ. ಅದಾವುದಾ ಸಮಸ್ಯೆ ?—ಬೀರುವಿಗೆ ಹಾವು ಕಚ್ಚಿದಾಗಲೇ ಪ್ರಾಣ ಹೋಗದೆ, ತುಂಬಾ ಸಮಯದನಂತರ ವೇಕೆ ಹೋಯಿತು—ಎಂದು. ಕಥಾವಾಚಕರಲ್ಲಿ ಈ ಕುರಿತಾಲೋಚಿಸದವರು ವಿರಳ. ಅವರ ಪರಿಹಾರ ?—ಒಬ್ಬೊಬ್ಬರದು ಒಂದೊಂದಭಿಪ್ರಾಯ—ಕೆಲವರು ಲೇಖಕರಂತೆ—ಅವನಿಗೆ ಕಚ್ಚಿದ್ದು ಹಾವಲ್ಲ. ಷಾಕಿನಿಂದ ಸತ್ತನೆಂದೂ — ಅಭಿಪ್ರಾಯ ಪಡುವರು. ಆದರೆ ಮುಖರ್ಜಿಯವರು ಹಾವೇ ಕಚ್ಚಿದ್ದೆಂದು ಸಾಬೀತು ಮಾಡಿದ್ದಾರೆ. ಆದ್ದರಿಂದಲೇ ಇವರ ಹೆಸರು " ನಂಬಿದರೆ.....ಬಿಡಿ " ಎಂದಾಯಿತು. ನನ್ನ ಅಭಿಪ್ರಾಯ—ಮನುಷ್ಯನ ರಕ್ತದ ಸಹಜ ಗುಣದಂತೆ—ಕಚ್ಚಿದ ಭಾಗದ ರಕ್ತ ಹೆಪ್ಪುಗಟ್ಟಿ, ಅನಂತರ ಷಾಕ್ ಆಘಾತವಾದಾಗ ರಕ್ತವು ಕಾವೇರಿ, ಪ್ರವಾಹವಧಿಕವಾಗಿ, ವಿಷ ಪಸರಿಸಿ ಸತ್ತನೆಂದು.

ಕತೆಯ ಶೈಲಿಯು ಗ್ರಾಮ್ಯವಾದರೂ, ವ್ಯಾಕರಣವು ತಪ್ಪಿಲ್ಲ. ಆದರೆ ಚಂದ್ರನಿಗೆ ಕಲೆಯಿರುವಂತೆ ಈ ಕತೆಯಲ್ಲೂ ಕೆಲಪರಿಗೆ ನ್ಯೂನತೆ ತೋರಿಬರುವುದು. ಅದೇ ಬಂಗಾಲೀ—ಮುಖರ್ಜಿಕ—ಕನ್ನಡಗಳ ಸಮ್ಮಿಲಿತವಾದ ಭಾಷಾವಿಚಾರ. ಆದರೆ ಕೊಂಚ ಕಷ್ಟ ಪಟ್ಟರೆ ಕಥೆಯೇನೋ ಅರ್ಥವಾಗದಂತಿಲ್ಲ. ಇದೊಂದು ನವ್ಯವಿಧಾನ. ನಮ್ಮ ಜನಾಂಗವು ನವ್ಯತೆಯನ್ನಭ್ಯಸಿಸಬೇಕೆಂದೇ ಇದರ ಧ್ಯೇಯ.

ವಚನೈಕದಲ್ಲಿ ನಿರ್ವಚಿಸುವುದಿದ್ದರೆ ಇದೊಂದು ಸರ್ವಾಂಗ ಸುಂದರವಾದ ಕಥೆ; ಸಮಾಜದಲ್ಲಿ ಸಂಭವನೀಯ ವಿಚಾರಗಳಿಂದಲೇ ತುಂಬಿ ನಿಂತಿದೆ. ಸಮಾಜಬಿಂಬದ ವಿಷಯ ಪ್ರತಿಬಿಂಬವು ಈ ಕಥಾದರ್ಪಣದಲ್ಲಿ ಪ್ರತಿಬಿಂಬಿಸಿದೆ.

ಶ್ರೀ. ಅಶ್ವತ್ಥನಾರಾಯಣರ ಪ್ರಯತ್ನವು ಸ್ತುತ್ಯವೆ. ಆದ್ದರಿಂದ ಈ ಕಥೆಗೆ ತುಂಬಿದೆಯ ಸ್ವಾಗತವಲ್ಲದೆ, ಮುಂದೆಯೂ ಇಂತಹ ಕಥಾಕುಮುದಿನಿಗಳು ಸಾಹಿತ್ಯದ ಚಂದ್ರಪ್ರಕಾಶದಲ್ಲಿ ಅರಳಲಿ; ಅರಳಿ ಜನಪ್ರಿಯವಾಗಲಿ—ಎಂದು ಆಶಿಸುವೆ, ಹಾರೈಸುವೆ; ಪ್ರೋತ್ಸಾಹಿಸುವೆ.

" ಕಥೈವ ಸೃಷ್ಟಾಸ್ಥಿಃ ಸಾಹಿತ್ಯ ಶಾರದಾಯಾಃ ।
ಅತಏವ ವರ್ಧಯತು ಕಥಾ ಜನಪ್ರಿಯಾ ।"

[೧೪೬ ನೆಯ ಪುಟ ನೋಡಿರಿ]

ಚಂದ್ರಶೇಖರ ಕಂಬಾರರ ಇನ್ನೊಂದು ಕೃತಿ!

"ಬೆಂಬತ್ತಿದ ಕಣ್ಣು"

(ನವೀನ ತಂತ್ರದ ಐದು ಏಕಾಂಕ ನಾಟಕಗಳು)

ಸ್ನೇಹ ಪ್ರಕಾಶನ, ಶಮನೇವಾಡಿ

ನೂತನ ಕಥಾಸಂಕಲನ ! ರಸಿಕರಿಗೆ ರಸದೂಟ !!

ವಿಮಾನ ಪರಿಚಾರಿಕೆ

ಪುಟ: ಕ್ರೌನ್ ೧೨೫. ಬೆಲೆ: ೧ = ೫೦.

ಕತೆಗಾರ:

ಚಿದಂಬರಾನಂದ

ನೀರದ ಪ್ರಕಾಶನ,

ಸಾಧನಕೇರಿ, ಧಾರವಾಡ

ಸಾದರ ಸ್ವೀಕಾರ

೪೩ **ಶ್ರೀಧರ ಸಂದೇಶ** (ಕನ್ನಡ ಧಾರ್ಮಿಕ ಮಾಸಪತ್ರಿಕೆ) ಸಂಪಾದಕರು ಶ್ರೀ. ಜಿ. ಕೆ. ಕೇಳಕರ, 'ಕುಸುಮಕುಂಜ' ಗಾಂಧೀ-ಚೌಕು, ಧಾರವಾಡ. ಡಿ. ೧ಕ್ಕೆ ೨೪ ಪುಟಗಳ ಸಂಚಿಕೆ. ವಾರ್ಷಿಕ ಚಂದಾ ೩.೭೫.

ಶ್ರೀಸಮರ್ಥ ರಾಮದಾಸ ಸ್ವಾಮಿಗಳವರ ಪಂಥ-ಪರಂಪರೆಯವರಾದ ವದ್ದಳ್ಳಿಯ ಶ್ರೀ. ಶ್ರೀಧರಸ್ವಾಮಿಗಳವರ ಧರ್ಮಸಂದೇಶದ ಪ್ರಕಟನೆಗೆಂದು ಈ ಮಾಸಪತ್ರಿಕೆಯು, ಧಾರವಾಡದಲ್ಲಿ ಹೊಸತಾಗಿ ಹೊರಡುತ್ತಲಿದೆ. ಧರ್ಮದಲ್ಲಿ ಶ್ರದ್ಧೆಯಿರುವವರು ಈ ಪತ್ರಿಕೆಯನ್ನು ಅವಶ್ಯವಾಗಿ ತರಿಸಿಕೊಳ್ಳಬೇಕು.

೪೪ **ಬಾಳಗೆಳತಿ** (ಶೃಂಗಾರಕವನ ಸಂಕಲನ) ಬರೆದವರು ಶ್ರೀಮಾನ್ ಅಮ್ಮೆಂಬಳ ಶಂಕರನಾರಾಯಣ ನಾವಡರು. ಪ್ರಕಾಶಕರು ಸಾಹಿತ್ಯಾಂಜಲಿ ಗ್ರಂಥಮಾಲಾ, ಕೋಟೆಕಾರು (ದ. ಕ.). ಕ್ರೌ. ಅ. ೭೬ ಪುಟಗಳು; ಬೆಲೆ ೦೦.೭೫.

೪೫ **ಉಪನಿಷತ್ತಿನ ಸಣ್ಣಕತೆಗಳು** (ಕಥಾಸಂಕಲನ) ಬರೆದವರು ಶ್ರೀ. ಅಮ್ಮೆಂಬಳ ಶಂಕರನಾರಾಯಣ ನಾವಡರು. ಪ್ರಕಾಶಕರು, ಸಾಹಿತ್ಯಾಂಜಲಿ ಗ್ರಂಥಮಾಲಾ, 'ಆನಂದಾಶ್ರಮ' ಕೋಟೆಕಾರು (ದ. ಕ.). ಕ್ರೌ. ಅ. ೩೨ ಪುಟಗಳು; ಬೆಲೆ ೦೦.೫೦. (ಕೇಂದ್ರ ಸರಕಾರದಿಂದ ಬಾಲಸಾಹಿತ್ಯದ ಬಗೆಗಿರುವ ಬಹುಮಾನಪಡೆದ ಪುಸ್ತಕ ವಿದು.)

೪೬ **ನವರತ್ನ** (ಸಾಹಿತ್ಯಸಂಪುಟ). ಸಂಪಾದಕರು ಶ್ರೀಮಾನ್ ಬಿ. ಎಚ್. ಶ್ರೀಧರ ಎಂ. ಎ. ಕುಮಟ. ಪ್ರಕಾಶಕರು ಸುಲಭ ಸಾಹಿತ್ಯ ಪ್ರಕಾಶನ, ಕುಮಟ ಕ್ರೌ. ಅ. ೨೧೪ ಪುಟಗಳು; ಬೆಲೆ ೩.೫೦.

೪೭ **ಕನ್ನಡಿಗ** (ವಾರಪತ್ರಿಕೆಯ ದೀಪಾವಳಿ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಎಚ್. ಎ. ಮೋದಿ, 'ನಿಶ್ವಭಾರತಿ' ಪ್ರಕಟನಾಲಯ, ಹುಬ್ಬಳ್ಳಿ. ಕ್ರೌ. ೧ಕ್ಕೆ ೫೬ ಪುಟಗಳು; ಬೆಲೆ ೧೦ ಆಣೆ.

ಬೇರೆ ಬೇರೆ ಸಾಹಿತ್ಯವಿಭಾಗದ ಮೇಲಾಟಗಳನ್ನು ಏರ್ಪಡಿಸಿ, ಮೇಲಾಟದಲ್ಲಿ ಬಹುಮಾನ ಪಡೆದ ಲೇಖಕರ ಕಥೆ, ಕವನ, ಪ್ರಬಂಧ, ರೂಪಕಗಳೆಲ್ಲ ಇದರಲ್ಲಿ ಪ್ರಕಟವಾಗಿವೆ. ಅಲ್ಲದೆ ಮೇಲಾಟದ ವಿಶದವಾದ ವರದಿಯೂ ಇದರಲ್ಲಿ ಬಂದಿದೆ. ಅಚ್ಚುಕಟ್ಟಾದ ಸಂಚಿಕೆ. ಎಲ್ಲರೂ ಓದಿ ಆನಂದಿಸುವಂತಿದೆ. ಸಂಪಾದಕರು ವಹಿಸಿದ ಪರಿಶ್ರಮವು ಅಭಿನಂದನೀಯ.

೪೮ **ಬಾನುಲಿ** (ಕವನ ಸಂಕಲನ) ಲೇಖಕರು ಶ್ರೀ. ಚಂದ್ರಶೇಖರ ಪಾಟೀಲ, ಸ್ನಾತಕೋತ್ತರ ಇಂಗ್ಲೀಷ್ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಕ್ರೌ. ಅ. ೬೦ ಪುಟಗಳು; ಬೆಲೆ ಸಾಮಾನ್ಯ ಪ್ರತಿಗೆ ೧.೦೦; ಉತ್ತಮಪ್ರತಿಗೆ ೧.೫೦.

೪೯ **ಜೀವನಸಂಗ್ರಾಮ** (ಸಾಮಾಜಿಕ ಕಾದಂಬರಿ) ಲೇಖಕರು ಶ್ರೀ .ಕೆ. ರಾಮಕೃಷ್ಣಭಟ್ಟರು. ಪ್ರಕಾಶಕರು ಜನತಾ ಪ್ರಕಾಶನ, ವಿಟ್ಲ. ಕ್ರೌ. ಅ. ೯೦ ಪುಟಗಳು; ಬೆಲೆ ೧.೭೫.

ಇದೊಂದು ಕೌಟುಂಬಿಕ ಕಾದಂಬರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಹವ್ಯಕ ಬ್ರಾಹ್ಮಣರ ಜೀವನವನ್ನು ಚೆನ್ನಾಗಿ ಚಿತ್ರಿಸಿ ತೋರಿಸುತ್ತದೆ. ಪಾತ್ರಗಳೂ ಆ ಸಮಾಜದ ಸಂಸ್ಕೃತಿ–ಸ್ವಭಾವಗಳನ್ನೊಳಗೊಂಡು ಚೆನ್ನಾಗಿ ಅರಳಿನಿಂತಿವೆ. ಒಮ್ಮೆ ಓದಬೇಕಾದ ಕಾದಂಬರಿಯಿದು.

೫೦ **ದೇವರ ಸ್ತೋತ್ರಗಳು** (ಸಂಕಲನ) ಸಂಪಾದಕರು ಶ್ರೀ. ಕೋಟ ವಾಸುದೇವ ಕಾರಂತ ಎಂ. ಎ., ಎಂ. ಐ. ಇ. ಮಂಗಳೂರು. ಪ್ರಕಾಶಕರು ಬ್ರಾಹ್ಮಣಸೇವಾ ಪುಸ್ತಕಮಾಲೆ, ನೆಹರು ಎವಿನ್ಯು ಕ್ರಾಸ್‌ರೋಡ್, ಮಂಗಳೂರು ೩. ಪುಟ್ಟ ಪುಟಗಳು ೩೨. ೧೫೫ ಪ್ರತಿಗಳಿಗೆ ೧ ರೂ. ಕೊಟ್ಟು ತರಿಸಿಕೊಂಡು, ಜನರಲ್ಲಿ ಹಂಚಬೇಕೆಂದು ಪ್ರಕಾಶಕರ ಅಪೇಕ್ಷೆ.

೫೧ **ಗಾಯತ್ರಿ ಮಾಹಾತ್ಮ್ಯ** (ವಿವೇಚನಾತ್ಮಕ ಕಿರುಹೊತ್ತಗೆ) ಲೇಖಕರು ಶ್ರೀ. ಕೋಟ ವಾಸುದೇವ ಕಾರಂತರು ಎಂ. ಎ , ಎಂ. ಐ. ಇ. ಮಂಗಳೂರು. ಕ್ರೌ. ಅ. ೨೪ ಪುಟಗಳು; ಬೆಲೆ ೨೦ ಪ್ರತಿಗಳಿಗೆ ೨.೫೦.

೫೨ **ಬ್ರಾಹ್ಮಣರು ಏನು ಓದಬೇಕು ?** (ವಿವೇಚನಾತ್ಮಕ ಕಿರುಹೊತ್ತಗೆ) ಇದನ್ನೂ ಶ್ರೀ. ವಾಸುದೇವ ಕಾರಂತರೇ ಬರೆದಿರುವರು. ಕ್ರೌ ಅ. ೪೦ ಪುಟಗಳು. ೨೦ ಪ್ರತಿಗಳ ಬೆಲೆ ೩.೦೦.

ಮೇಲಿನ ಎರಡೂ ಪುಸ್ತಕಗಳನ್ನು ಬ್ರಾಹ್ಮಣಸೇವಾ ಪುಸ್ತಕ ಮಾಲೆ, ಮಂಗಳೂರು—ಅವರೇ ಪ್ರಚಾರದ ಉದ್ದೇಶದಿಂದ ಪ್ರಕಟಿಸಿದ್ದಾರೆ.

೫೩ **ಯಾರು ಹೊಣೆ** (ಕಥಾಸಂಕಲನದ ೨ನೆಯ ಆವೃತ್ತಿ) ಲೇಖಕರು ಮತ್ತು ಪ್ರಕಾಶಕರು ಶ್ರೀ. ಬಿ. ಆರ್. ವಾಡಪ್ಪಿ, ಯಾತಗಿರಿ ಜಾಳ, ಕಲ್ಲ—ಧಾನವಾಡ. ಕ್ರೌ. ಅ. ೬೦ ಪುಟಗಳು; ಬೆಲೆ ೧.೦೦.

ಕಥೆಯೆದು ನಿಜವಾಗಿಯೂ ಕುತೂಹಲವನ್ನು ಕೆರಳಿಸುವುದಿದ್ದು ಜನರಲ್ಲಿ ವಿಚಾರಕ್ರಾಂತಿಯನ್ನು ತಂದೊಡ್ಡುವುದು. ಓದಿ ಮುಗಿದ ಮೇಲೂ ವಾಚಕರು ಕೆಲಸಮಯದ ವರೆಗೆ ಕಥೆಯನ್ನೇ ಚಿಂತಿಸುವರು. ಇದೊಂದು ಸಮಸ್ಯಾತ್ಮಕ ಕಥೆ. ಅದಾವುದಾ ಸಮಸ್ಯೆ ?—ಬೀರುವಿಗೆ ಹಾವು ಕಚ್ಚಿದಾಗಲೇ ಪ್ರಾಣ ಹೋಗದೆ, ತುಂಬಾ ಸಮಯದನಂತರ ವೇಕೆ ಹೋಯಿತು—ಎಂದು. ಕಥಾವಾಚಕರಲ್ಲಿ ಈ ಕುರಿತಾಲೋಚಿಸದವರು ವಿರಳ. ಅದರ ಪರಿಹಾರ ?—ಒಬ್ಬೊಬ್ಬರದು ಒಂದೊಂದಭಿಪ್ರಾಯ—ಕೆಲವರು ಲೇಖಕರಂತೆ—ಅವನಿಗೆ ಕಚ್ಚಿದ್ದು ಹಾವಲ್ಲ. ಷಾಕಿನಿಂದ ಸತ್ತನೆಂದೂ — ಅಭಿಪ್ರಾಯ ವಡುವರು. ಆದರೆ ಮುಖರ್ಜಿಯವರು ಹಾನೇ ಕಚ್ಚಿದ್ದೆಂದು ಸಾಬೀತು ಮಾಡಿದ್ದಾರೆ. ಆದ್ದರಿಂದಲೇ ಇದರ ಹೆಸರು "ನಂಬಿದರೆ.....ಬಿಡಿ" ಎಂದಾಯಿತು. ನನ್ನ ಅಭಿಪ್ರಾಯ—ಮನುಷ್ಯನ ರಕ್ತದ ಸಹಜ ಗುಣದಂತೆ—ಕಚ್ಚಿದ ಭಾಗದ ರಕ್ತ ಹೆಪ್ಪುಗಟ್ಟಿ, ಅನಂತರ ಷಾಕ್ ಆವಂತಾದಾಗ ರಕ್ತವು ಕಾನೇರಿ, ಪ್ರವಾಹವಧಿಕವಾಗಿ, ವಿಷ ಪಸರಿಸಿ ಸತ್ತನೆಂದು.

ಕತೆಯ ಶೈಲಿಯು ಗ್ರಾಮ್ಯವಾದುದೂ, ವ್ಯಾಕರಣವು ತಪ್ಪಿಲ್ಲ. ಆದರೆ ಚಂದ್ರನಿಗೆ ಕಲೆಯಿರುವಂತೆ ಈ ಕತೆಯಲ್ಲೂ ಕೆಲವರಿಗೆ ನ್ಯೂನತೆ ತೋರಿಬರುವುದು. ಆದೇ ಬಂಗಾಲೀ—ಮುಖರ್ಜಿಕ—ಕನ್ನಡಗಳ ಸಮ್ಮಿಲಿತವಾದ ಭಾಷಾವಿಚಾರ. ಆದರೆ ಕೊಂಚ ಕಷ್ಟ ಪಟ್ಟರೆ ಕಥೆಯೇನೋ ಅರ್ಥವಾಗದಂತಿಲ್ಲ. ಇದೊಂದು ನವ್ಯವಿಧಾನ. ನಮ್ಮ ಜನಾಂಗವು ನವ್ಯತೆಯನ್ನಭ್ಯಸಿಸಬೇಕೆಂದೇ ಇದರ ಧ್ಯೇಯ.

ವಚನೈಕದಲ್ಲಿ ನಿರ್ವಚಿಸುವುದಿದ್ದರೆ ಇದೊಂದು ಸರ್ವಾಂಗ ಸುಂದರವಾದ ಕಥೆ; ಸಮಾಜದಲ್ಲಿ ಸಂಭವನೀಯ ವಿಚಾರಗಳಿಂದಲೇ ತುಂಬಿ ನಿಂತಿದೆ. ಸಮಾಜಬಿಂಬದ ವಿಷಯ ಪ್ರತಿಬಿಂಬವು ಈ ಕಥಾದರ್ಪಣದಲ್ಲಿ ಪ್ರತಿಬಿಂಬಿಸಿದೆ.

ಶ್ರೀ. ಅಶ್ವತ್ಥನಾರಾಯಣರ ಶ್ರಮವು ಸ್ತುತ್ಯವೆ. ಆದ್ದರಿಂದ ಈ ಕಥೆಗೆ ತುಂಬೆದೆಯ ಸ್ವಾಗತವಲ್ಲದೆ, ಮುಂದೆಯೂ ಇಂತಹ ಕಥಾಕುಮುದಿನಿಗಳು ಸಾಹಿತ್ಯದ ಚಂದ್ರಪ್ರಕಾಶದಲ್ಲಿ ಅರಳಲಿ; ಅರಳಿ ಜನಪ್ರಿಯವಾಗಲಿ—ಎಂದು ಆಶಿಸುವೆ, ಹಾರೈಸುವೆ; ಪ್ರೋತ್ಸಾಹಿಸುವೆ.

"ಕಥೈವ ಪೃಷ್ಠಾಸ್ಥಿಃ ಸಾಹಿತ್ಯ ಶಾರದಾಯಾಃ ।
ಅತಏವ ವರ್ಧಯತು ಕಥಾ ಜನಪ್ರಿಯಾ ।"

[ಬಲಗಡೆ ನೋಡಿರಿ]

ಚಂದ್ರಶೇಖರ ಕಂಬಾರರ ಇನ್ನೊಂದು ಕೃತಿ!

"ಬೆಂಬತ್ತಿದ ಕಣ್ಣು"

(ನವೀನ ತಂತ್ರದ ಐದು ಏಕಾಂಕ ನಾಟಕಗಳು)

ಸ್ನೇಹ ಪ್ರಕಾಶನ, ಶಮನೇವಾಡಿ

ನೂತನ ಕಥಾಸಂಕಲನ ! ರಸಿಕರಿಗೆ ರಸದೂಟ !!

ವಿಮಾನ ಪರಿಚಾರಿಕೆ

ಪುಟ: ಕ್ರಾನ್ ೧೨೫. ಬೆಲೆ: ೧ = ೫೦.

ಕತೆಗಾರ:

ಚಿದಂಬರಾನಂದ

ನೀರದ ಪ್ರಕಾಶನ,

ಸಾಧನಕೇರಿ, ಧಾರವಾಡ

ಸಾದರ ಸ್ವೀಕಾರ

೪೩ ಶ್ರೀಧರ ಸಂದೇಶ (ಕನ್ನಡ ಧಾರ್ಮಿಕ ಮಾಸಪತ್ರಿಕೆ) ಸಂಪಾದಕರು ಶ್ರೀ. ಜಿ. ಕೆ. ಕೇಳಕರ, 'ಕುಸುಮಕುಂಜ' ಗಾಂಧೀ-ಚೌಕು, ಧಾರವಾಡ. ಡೆ. ೧ಗಿದ ೨೪ ಪುಟಗಳ ಸಂಚಿಕೆ. ವಾರ್ಷಿಕ ಚಂದಾ ರೂ.೨೫.

ಶ್ರೀಸಮರ್ಥ ರಾಮದಾಸ ಸ್ವಾಮಿಗಳವರ ಪಂಥ-ಪರಂಪರೆಯವರಾದ ವದ್ದಳ್ಳಿಯ ಶ್ರೀ. ಶ್ರೀಧರಸ್ವಾಮಿಗಳವರ ಧರ್ಮಸಂದೇಶದ ಪ್ರಕಟನೆಗೆಂದು ಈ ಮಾಸಪತ್ರಿಕೆಯು, ಧಾರವಾಡದಲ್ಲಿ ಹೊಸತಾಗಿ ಹೊರಡುತ್ತಲಿದೆ. ಧರ್ಮದಲ್ಲಿ ಶ್ರದ್ಧೆಯಿರುವವರು ಈ ಪತ್ರಿಕೆಯನ್ನು ಅವಶ್ಯವಾಗಿ ತರಿಸಿಕೊಳ್ಳಬೇಕು.

೪೪ ಬಾಳಗೆಳತಿ (ಶೃಂಗಾರಕವನ ಸಂಕಲನ) ಬರೆದವರು ಶ್ರೀಮಾನ್ ಅಮ್ಮೆಂಬಳ ಶಂಕರನಾರಾಯಣ ನಾವಡರು. ಪ್ರಕಾಶಕರು ಸಾಹಿತ್ಯಾಂಜಲಿ ಗ್ರಂಥಮಾಲಾ, ಕೋಟೆಕಾರು (ದ. ಕ.). ಕ್ರೌ. ಅ. ೬೬ ಪುಟಗಳು; ಬೆಲೆ ೦೦.೭೫.

೪೫ ಉಪನಿಷತ್ತಿನ ಸಣ್ಣಕತೆಗಳು (ಕಥಾಸಂಕಲನ) ಬರೆದವರು ಶ್ರೀ. ಅಮ್ಮೆಂಬಳ ಶಂಕರನಾರಾಯಣ ನಾವಡರು. ಪ್ರಕಾಶಕರು, ಸಾಹಿತ್ಯಾಂಜಲಿ ಗ್ರಂಥಮಾಲಾ, 'ಆನಂದಾಶ್ರಮ' ಕೋಟೆಕಾರು (ದ. ಕ.). ಕ್ರೌ. ಅ. ೩೨ ಪುಟಗಳು; ಬೆಲೆ ೦೦.೫೦. (ಕೇಂದ್ರ ಸರಕಾರದಿಂದ ಬಾಲಸಾಹಿತ್ಯದ ಬಗೆಗಿರುವ-ಬಹುಮಾನಪಡೆದ ಪುಸ್ತಕ ನಿಮು.)

೪೬ ನವರತ್ನ (ಸಾಹಿತ್ಯಸಂಪುಟ). ಸಂಪಾದಕರು ಶ್ರೀಮಾನ್ ಬಿ. ಎಚ್. ಶ್ರೀಧರ ಎಂ. ಎ. ಕುಮಟ. ಪ್ರಕಾಶಕರು ಸುಲಭ ಸಾಹಿತ್ಯ ಪ್ರಕಾಶನ, ಕುಮಟ ಕ್ರೌ. ಅ. ೨೧೮ ಪುಟಗಳು; ಬೆಲೆ ೨.೫೦.

೪೭ ಕನ್ನಡಿಗ (ವಾರಪತ್ರಿಕೆಯ ದೀಪಾವಳಿ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಎಚ್. ಎ. ಮೋದಿ, 'ನಿವೃಭಾರತಿ' ಪ್ರಕಟನಾಲಯ, ಹುಬ್ಬಳ್ಳಿ. ಕ್ರೌ. ೧ಗಿದ ೫೬ ಪುಟಗಳು; ಬೆಲೆ ೧೦ ಆಣೆ.

ಬೇರೆ ಬೇರೆ ಸಾಹಿತ್ಯವಿಭಾಗದ ಸ್ಪರ್ಧೆಗಳನ್ನು ಏರ್ಪಡಿಸಿ, ಸ್ಪರ್ಧೆಯಲ್ಲಿ ಬಹುಮಾನ ಪಡೆದ ಲೇಖಕರ ಕಥೆ, ಕವನ, ಪ್ರಬಂಧ, ರೂಪಕಗಳೆಲ್ಲ ಇದರಲ್ಲಿ ಪ್ರಕಟವಾಗಿವೆ. ಅಲ್ಲದೆ ಮೇಲಾಟದ ವಿಶದವಾದ ವರದಿಯೂ ಇದರಲ್ಲಿ ಬಂದಿದೆ. ಅಚ್ಚುಕಟ್ಟಾದ ಸಂಚಿಕೆ. ಎಲ್ಲರೂ ಓದಿ ಆನಂದಿಸುವಂತಿದೆ. ಸಂಪಾದಕರು ವಹಿಸಿದ ಪರಿಶ್ರಮವು ಅಭಿನಂದನೀಯ.

೪೮ ಬಾನುಲಿ (ಕವನ ಸಂಕಲನ) ಲೇಖಕರು ಶ್ರೀ. ಚಂದ್ರಶೇಖರ ಪಾಟೀಲ, ಸ್ನಾತಕೋತ್ತರ ಇಂಗ್ಲೀಷ್ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಕ್ರೌ. ಅ. ೮೦ ಪುಟಗಳು; ಬೆಲೆ ಸಾಮಾನ್ಯ ಪ್ರತಿಗೆ ೧.೦೦; ಉತ್ತಮಪ್ರತಿಗೆ ೧.೫೦.

೪೯ ಜೀವನಸಂಗ್ರಾಮ (ಸಾಮಾಜಿಕ ಕಾದಂಬರಿ) ಲೇಖಕರು ಶ್ರೀ. ಕೆ. ರಾಮಕೃಷ್ಣಭಟ್ಟರು. ಪ್ರಕಾಶಕರು ಜನತಾ ಪ್ರಕಾಶನ, ವಿಟ್ಲ. ಕ್ರೌ. ಅ. ೯೦ ಪುಟಗಳು; ಬೆಲೆ ೧.೨೫.

ಇದೊಂದು ಕೌಟುಂಬಿಕ ಕಾದಂಬರಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಹವ್ಯಕ ಬ್ರಾಹ್ಮಣರ ಜೀವನವನ್ನು ಚೆನ್ನಾಗಿ ಚಿತ್ರಿಸಿ ತೋರಿಸುತ್ತದೆ. ಪಾತ್ರಗಳೂ ಆ ಸಮಾಜದ ಸಂಸ್ಕೃತಿ-ಸ್ವಭಾವಗಳನ್ನೊಳಗೊಂಡು ಚೆನ್ನಾಗಿ ಅರಳಿನಿಂತಿವೆ. ಒಮ್ಮೆ ಓದಬೇಕಾದ ಕಾದಂಬರಿಯಿದು.

೫೦ ದೇವರ ಸ್ತೋತ್ರಗಳು (ಸಂಕಲನ) ಸಂಪಾದಕರು ಶ್ರೀ. ಕೋಟ ವಾಸುದೇವ ಕಾರಂತ ಎಂ. ಎ., ಎಂ. ಐ. ಇ. ಮಂಗಳೂರು. ಪ್ರಕಾಶಕರು ಬ್ರಾಹ್ಮಣಸೇವಾ ಪುಸ್ತಕಮಾಲೆ, ನೆಹರು ಎವಿನ್ಯು ಕ್ರಾಸ್‌ರೋಡ್, ಮಂಗಳೂರು ೩. ಪುಟ್ಟ ಪುಟಗಳು ೩೨. ೧೫ ಪ್ರತಿಗಳಿಗೆ ೧ ರೂ. ಕೊಟ್ಟು ತರಿಸಿಕೊಂಡು, ಜನರಲ್ಲಿ ಹಂಚಬೇಕೆಂದು ಪ್ರಕಾಶಕರ ಅಪೇಕ್ಷೆ.

೫೧ ಗಾಯತ್ರಿ ಮಾಹಾತ್ಮ್ಯ (ವಿವೇಚನಾತ್ಮಕ ಕಿರುಹೊತ್ತಗೆ) ಲೇಖಕರು ಶ್ರೀ. ಕೋಟ ವಾಸುದೇವ ಕಾರಂತರು ಎಂ. ಎ., ಎಂ. ಐ. ಇ. ಮಂಗಳೂರು. ಕ್ರೌ. ಅ. ೨೪ ಪುಟಗಳು; ಬೆಲೆ ೨೦ ಪ್ರತಿಗಳಿಗೆ ೨.೫೦.

೫೨ ಬ್ರಾಹ್ಮಣರು ಏನು ಓದಬೇಕು? (ವಿವೇಚನಾತ್ಮಕ ಕಿರುಹೊತ್ತಗೆ) ಇದನ್ನೂ ಶ್ರೀ. ವಾಸುದೇವ ಕಾರಂತರೇ ಬರೆದಿರುವರು. ಕ್ರೌ ಅ. ೪೦ ಪುಟಗಳು. ೨೦ ಪ್ರತಿಗಳ ಬೆಲೆ ೩.೦೦.

ಮೇಲಿನ ಎರಡೂ ಪುಸ್ತಕಗಳನ್ನು ಬ್ರಾಹ್ಮಣಸೇವಾ ಪುಸ್ತಕಮಾಲೆ, ಮಂಗಳೂರು—ಅವರೇ ಪ್ರಚಾರದ ಉದ್ದೇಶದಿಂದ ಪ್ರಕಟಿಸಿದ್ದಾರೆ.

೫೩ ಯಾರು ಹೊಣೆ (ಕಥಾಸಂಕಲನದ ೨ನೆಯ ಆವೃತ್ತಿ) ಲೇಖಕರು ಮತ್ತು ಪ್ರಕಾಶಕರು ಶ್ರೀ. ಬಿ. ಆರ್. ವಾಡಪ್ಪಿ, ಯಾತಗಿರಿ ಜಾಳ, ಶೆಲ್ಲೆ—ಧಾರವಾಡ. ಕ್ರೌ. ಅ. ೬೦ ಪುಟಗಳು; ಬೆಲೆ ೧.೦೦.

ಶರತ್‌ಪ್ರಕಾಶನ ಮಂದಿರ, ಶಹಾಪುರ (ಬೆಳಗಾಂವ)

'ಆನಂದಕಂದ'ರ ಐತಿಹಾಸಿಕ ಕಾದಂಬರಿಯ ನಾಲ್ಕನೆಯ ಆವೃತ್ತಿ

ರಾಜಯೋಗಿ

ಹೊಸಕಾಲಕ್ಕೆ ತಕ್ಕ

ಮುದ್ರಣ-ಬಂಧನಗಳ ಬೆಡಗಿನೊಂದಿಗೆ ಇದೀಗ ಬೆಳಕಿಗೆ ಬಂದಿದೆ.

ಐತಿಹಾಸಿಕ ಕಾದಂಬರಿಯೆಂದರೆ, ಆ ಕಾಲದ ಜನಜೀವನದ ತದ್ರೂಪ ಚಿತ್ರಣವಾಗಿರಬೇಕು. ವಾಚಕರಿಗೆ ತಾವು ಐತಿಹಾಸಿಕ ಕಾಲದಲ್ಲಿಯೇ ಇದ್ದೇನೆ, ಘಟನೆ ನಡೆವ ಪ್ರದೇಶದಲ್ಲಿಯೆ ಇದ್ದೇನೆ—ಎನಿಸಬೇಕು. ಪಾತ್ರ ಗಳು ಐತಿಹಾಸಿಕವಾದರೂ, ಅಂದಿನ ಕಾಲದ ಜೀವನವನ್ನು ಜೀವಂತ ವ್ಯಕ್ತಿಗಳಾಗಿ ವ್ಯವಹರಿಸಿ ತೋರಿಸಬೇಕು.

'ರಾಜಯೋಗಿ' ಕಾದಂಬರಿಯಲ್ಲಿ ಇವೆಲ್ಲ ಗುಣಗಳೂ ಇವೆ.

ಎಂತಲೇ ಇದು ಹುಟ್ಟಿ ೨೫ ವರ್ಷಗಳಾದರೂ, ವಾಚಕರಿಗೆ ಹೊಸ ಹೊಸದೇ ಎನಿಸುತ್ತದೆ.

ಪ್ರತಿಯೊಂದು ವಾಚನಮಂದಿರದಲ್ಲಿಯೂ ಇರಲೇಬೇಕಾದ ಕಾದಂಬರಿಯಿದು.

ಕ್ರೌ. ಅ. ೧೪೦ ಪುಟಗಳು. **ಬೆಲೆ : ೨ ರೂ. ೨೫ ನಯೇಪೈಸೆ**

ನಮ್ಮ ಮುಂದಿರುವ ಬೇರೆ ಪ್ರಕಟಣೆಗಳು

ಮಗಳ ಮದುವೆ
(ಸಾಮಾಜಿಕ ಕಾದಂಬರಿ)
ಕ್ರೌ. ಅ. ೩೫೦ ಪುಟ * ಬೆಲೆ : ೪ ರೂ.

ಕಾರಹುಣ್ಣಿವೆ
(ಕವನಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೨ ರೂ.

ಬೆಳವಡಿ ಮಲ್ಲಮ್ಮ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೫೦

ಬೆಂದ ಹೃದಯ
(ರೂಪಕ ಸಂಕಲನ)
ಕ್ರೌ. ಅ. ೧೨೫ ಪುಟ * ಬೆಲೆ : ೧.೨೫

ನಲ್ವಾಡುಗಳು
(ಪ್ರೀತಿ ಗೀತ ಸಂಕಲನ)
ಕ್ರೌ. ಅ. ೭೨ ಪುಟ ● ಬೆಲೆ : ೧.೨೫

'ಆನಂದಕಂದ'ರ ಯಾವ ಪುಸ್ತಕಗಳು ಬೇಕಾದರೂ ನಮಗೆ ಬರೆಯಿರಿ!

ಶರತ್‌ಪ್ರಕಾಶನ ಮಂದಿರ, ಕಚೇರಿಗಲ್ಲಿ, ಶಹಾಪುರ (ಬೆಳಗಾಂವ)

Printed by Basavaraj Horadi at Lalita Mudranalaya, Dharwar &
Published for the Propritors Jayanti Publications by K. S. Betgeri at Jayanti Office, Dharwar.